ಶನಿವಾರ, ಅಕ್ಟೋಬರ್ 14, 2023 | ₹ 7.00

# ಪ್ರಜಾವಾಣಿ

ಒಳ ಪುಟಗಳು

‘ಹಿಂದುತ್ವ’ಕ್ಕೆ ಪ್ರತಿಯಾಗಿ ವಿರೋಧ ಪಕ್ಷಗಳ ಜಾತಿ ಗಣತಿ ಅಸ್ತ್ರ 11



24 ಗಂಟೆಯೊಳಗೆ ಗಾಜಾ ತೊರೆಯಿರಿ: ಇಸ್ರೇಲ್ 11


## ಮಧುಮೇಹಿಗಳಿಗೊಂದು ಸಿಹಿ ಸುದ್ದಿ!

AMRITH NONI

ಮಧುಮೇಹಿಗಳ ಮೇಲೆ ನಡೆಸಿದ ಹ್ಯೂಮನ್ ಟ್ರಯಲ್‌ನಲ್ಲಿ ಅಮೃತ್ ನೋನಿ ಡಿ-ಪ್ಲಸ್ ಬಳಕೆಯಿಂದ ಯಶಸ್ವಿ ಫಲಿತಾಂಶ

ಅಮೃತ್‌ನೋನಿ ಡಿ-ಪ್ಲಸ್

CLINICALLY PROVEN



ಭಾರತ ಸರ್ಕಾರದಿಂದ ಪರವಾನಗಿ ಪಡೆದ (CTRI Reg) ಸಂಶೋಧನಾ ಕೇಂದ್ರವಾದ ಸಿಂಕ್ರೆಟಿಕ್ ಕ್ಲಿನಿಕಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ರವರು ಮಧುಮೇಹಿಗಳ ಮೇಲೆ ನಡೆಸಿದ ಹ್ಯೂಮನ್ ಟ್ರಯಲ್‌ನಲ್ಲಿ ಅಮೃತ್‌ನೋನಿ ಡಿ-ಪ್ಲಸ್ ಬಳಸಿದವರಲ್ಲಿ ಶೇ. 100 ರಷ್ಟು ಫಲಿತಾಂಶ ಹೊರಬಂದಿದ್ದು ಯಾವುದೇ ಅಡ್ಡ ಪರಿಣಾಮವಿಲ್ಲದೆ ಗಣನೀಯ ಪ್ರಮಾಣದಲ್ಲಿ ಮಧುಮೇಹವನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದೆ ಎಂದು ಸಾಬೀತಾಗಿದೆ.

ಆರೋಗ್ಯದ ಭರವಸೆ ಅಮೃತ್‌ನೋನಿ

MANUFACTURED BY: ValYou Products Pvt Ltd. Marketed by Om Sree Marketing Solutions Pvt. Ltd.

**ಎಲ್ಲಾ ಆಯುರ್ವೇದಿಕ್ ಹಾಗೂ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯ!**

**For Doctor Consultation: +91 95136 13362**

www.amrithnoni.com


## ವಿಶ್ವಕಪ್ ಕ್ರಿಕೆಟ್ ಭಾರತ–ಪಾಕ್ ಹಣಾಹಣಿ ಇಂದು



ರೋಹಿತ್ ಶರ್ಮಾ



ಬಾಬರ್ ಆಜಂ

ಅಹಮದಾಬಾದ್: ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಏಕದಿನ ಪಂದ್ಯದಲ್ಲಿ ಪಾಕಿಸ್ತಾನವನ್ನು ಎದುರಿಸಲಿದೆ.

ಏಕದಿನ ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಉಭಯ ತಂಡಗಳು ಮುಖಾಮುಖಿಯಾದ ಏಳು ಸಲವೂ ಭಾರತವೇ ಜಯ ಸಾಧಿಸಿದೆ. ಅಜೇಯ ಓಟವನ್ನು ಮುಂದುವರಿಸುವತ್ತ ಈ ಬಾರಿಯೂ ಚಿತ್ತ ನೆಟ್ಟಿದೆ. ಮೊದಲ ಗೆಲುವಿನ ಸವಿಯುಣ್ಣುವ ಆತ್ಮವಿಶ್ವಾಸದಲ್ಲಿ ಬಾಬರ್ ಆಜಂ ನಾಯಕತ್ವ ಪಾಕ್ ಕೂಡ ಇದೆ. 13

## ಮತ್ತೆ 21 ತಾಲ್ಲೂಕು ಬರಪೀಡಿತ

ಬೆಂಗಳೂರು: ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 21 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ ಆದೇಶ ಹೊರಡಿಸಿದೆ. ಇದರಲ್ಲಿ 17 ತೀವ್ರ ಬರಪೀಡಿತ ತಾಲ್ಲೂಕುಗಳು ಹಾಗೂ 4 ಸಾಧಾರಣ ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಲಾಗಿದೆ.

**ಯಾವ ತಾಲ್ಲೂಕುಗಳು?:** ಚಾಮರಾಜನಗರ, ಕೆ.ಆರ್. ನಗರ, ಅಣ್ಣಿಗೇರಿ, ಆಲೂರು, ಹಾಸನ, ಯಳಂದೂರು, ಬೆಳಗಾವಿ, ಖಾನಾಪುರ, ಮುಂಡರಗಿ, ಬ್ಯಾಡಗಿ, ಹಾನಗಲ್, ಶಿಗ್ಗಾಂವಿ, ಕಲಘಟಗಿ, ಅಳ್ನಾವರ, ಅರಸೀಕೆರೆ, ಮೂಡಿಗೆರೆ, ತರೀಕೆರೆ, ಪೊನ್ನಂಪೇಟೆ, ಹೆಬ್ರಿ, ಸಿದ್ದಾಪುರ ಮತ್ತು ದಾಂಡೇಲಿ. ಒಟ್ಟು 236 ತಾಲ್ಲೂಕುಗಳ ಪೈಕಿ 216 ತಾಲ್ಲೂಕುಗಳು ಬರಪೀಡಿತ ಪಟ್ಟಿಗೆ ಸೇರಿದಂತಾಗಿದೆ.


AMRITA VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956
BENGALURU CAMPUS

Come. Become



**THE ACHIEVEMENT IS THEIRS. BUT THE PRIDE IS OURS TOO.**

**Convocation Day** for the Class of 2023

24th CONVOCATION

on 14th October, 2023 at 10 AM

2023 | 5700 DEGREES AWARDED

amrita.edu

656 students from the disciplines of Engineering, Computing & Management will be conferred their degree.



CHIEF GUEST



**Dr. S. Somanath**
Secretary, Department of Space
Chairman, Space Commission
Chariman, ISRO

GUEST OF HONOR



**Shri Arvind Vaishnav**
Head of Philips Innovation Center
Bengaluru

nirf GOVT OF INDIA | 7TH RANKED UNIVERSITY IN INDIA 2023 | No.1 IN INDIA THE IMPACT RANKINGS 2023 | NAAC A++ ACCREDITED | CATEGORY 1 GRADED AUTONOMY UGC, GOVT. OF INDIA

AMARAVATI | AMRITAPURI | BENGALURU | CHENNAI | COIMBATORE | FARIDABAD | KOCHI | MYSURU | NAGERCOIL*

*Awaiting approval

## ಸಮಸ್ಯೆಯನ್ನು ರೈತರಿಗೆ ಮನವರಿಕೆ ಮಾಡಿ: ಸಿದ್ದರಾಮಯ್ಯ ತಾಕೀತು

# 3 ಪಾಳಿಯಲ್ಲಿ 5 ಗಂಟೆ ವಿದ್ಯುತ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರೈತರಿಗೆ ಪ್ರತಿ ದಿನ ಮೂರು ಪಾಳಿಗಳಲ್ಲಿ ಕನಿಷ್ಠ ಐದು ಗಂಟೆ ನಿರಂತರ ವಿದ್ಯುತ್ ಪೂರೈಕೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಇಂಧನ ಇಲಾಖೆಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿಯಿಂದಾಗಿ ವಿದ್ಯುತ್ ಬೇಡಿಕೆ ಗಣನೀಯವಾಗಿ ಹೆಚ್ಚಾಗಿದೆ. ರೈತರಿಗೆ ಆದ್ಯತೆ ಮೇರೆಗೆ ವಿದ್ಯುತ್ ಪೂರೈಕೆ ಮಾಡಬೇಕು. ಲೋಡ್ ಶೆಡ್ಡಿಂಗ್ ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಅವರು ವಿವಿಧ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ರೈತರಿಗೆ ಯಾವ ವೇಳೆ ಎಷ್ಟು ವಿದ್ಯುತ್ ಅಗತ್ಯವಿದೆ ಎನ್ನುವುದನ್ನು ಸರಿಯಾಗಿ ಅರ್ಥ ಮಾಡಿಕೊಂಡು ಪೂರೈಕೆಯಾಗುತ್ತಿರುವ ವಿದ್ಯುತ್ ಪ್ರಮಾಣದಲ್ಲಿ ಅವರ ಅಗತ್ಯ ವೇಳೆಯಲ್ಲಿ ಸರಬರಾಜು ಮಾಡಬೇಕು ಎಂದು ಸಲಹೆ ನೀಡಿದರು.

ಲಭ್ಯವಿರುವ ವಿದ್ಯುತ್ತಿನ ದಕ್ಷ ಹಂಚಿಕೆಯೂ ಅತಿಮುಖ್ಯ. ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರು ಈ ಕುರಿತು ಹೆಚ್ಚಿನ ನಿಗಾವಹಿಸಿ ರೈತರಿಗೆ ತೊಂದರೆ ಆಗದಂತೆ ಕ್ರಮವಹಿಸಬೇಕು. ಎಲ್ಲ ಮುಖ್ಯ ಎಂಜಿನಿಯರುಗಳನ್ನು ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ನಿರಂತರ ಐದು ಗಂಟೆ ವಿದ್ಯುತ್ ಪೂರೈಕೆ ಆಗುವಂತೆ ಅವರು ನಿಗಾವಹಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು. ಅಲ್ಲದೇ, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಇವತ್ತಿನ ಸಭೆಯ ತೀರ್ಮಾನಗಳು ಪಾಲನೆ ಆಗುತ್ತಿವೆ ಎಂಬುದನ್ನು ಖಾತರಿ ಪಡಿಸಬೇಕು ಎಂದೂ ಸಿದ್ದರಾಮಯ್ಯ ಹೇಳಿದರು.

ಕಬ್ಬಿನ ಬೆಳೆಗೆ ನೀರು ಹಾಯಿಸಲು ಕೆಲವು ಜಿಲ್ಲೆಗಳಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಕಬ್ಬಿನ ಕಟಾವು, ಅರೆಯುವಿಕೆ ಪ್ರಾರಂಭವಾದ ಕೂಡಲೇ ಬೇಡಿಕೆ ಇಳಿಕೆಯಾಗಲಿದ್ದು, ಕಬ್ಬು ಅರೆಯುವಿಕೆಯೊಂದಿಗೆ ಕೋ-ಜನರೇಶನ್‌ನಿಂದ ವಿದ್ಯುತ್ ಲಭ್ಯವಾಗುತ್ತದೆ ಎಂದು ಅಧಿಕಾರಿಗಳು ಸಭೆಗೆ ವಿವರಿಸಿದರು.

**ಅಧಿಕಾರಿಗಳಿಗೆ ತರಾಟೆ:** ರೈತರಿಗೆ ವಿದ್ಯುತ್ ಕೊರತೆ ಆಗದಂತೆ ತುರ್ತು ಸಂದರ್ಭದಲ್ಲಿ ಅಗತ್ಯವಾದ ಯೋಜನೆ ಮತ್ತು ಸಿದ್ಧತೆಗಳನ್ನು ಏಕೆ ಮಾಡಿಕೊಂಡಿಲ್ಲ ಎಂದು ಸಿದ್ದರಾಮಯ್ಯ ಇಂಧನ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಿದ್ಯುತ್ ಪೂರೈಕೆಗಾಗಿ ಹಲವು ಜಿಲ್ಲೆಗಳಲ್ಲಿ ನಡೆಯುತ್ತಿರುವ ರೈತರ ಪ್ರತಿಭಟನೆಗಳನ್ನು ಪ್ರಸ್ತಾಪಿಸಿದ ಅವರು, 'ವಿದ್ಯುತ್ ಅನ್ನು ವೈಜ್ಞಾನಿಕವಾಗಿ ಸರಬರಾಜು ಮಾಡಲು ಕ್ರಮವಹಿಸಬೇಕು. ಮೊದಲೇ ಹೀಗೆ ಮಾಡಿದ್ದರೆ ವಿದ್ಯುತ್ ಕೊರತೆ ನಡುವೆಯೂ ರೈತರಿಗೆ ಸಮಸ್ಯೆ ಆಗುತ್ತಿರಲಿಲ್ಲ. ಕಚೇರಿಯಲ್ಲೇ ಕುಳಿತರೆ ಸಮಸ್ಯೆ ಬಗೆಹರಿಯುವುದಿಲ್ಲ. ಮುಖ್ಯ ಎಂಜಿನಿಯರ್‌ಗಳು ಫೀಲ್ಡ್‌ಗೆ ಹೋಗಬೇಕು. ಪರಿಸ್ಥಿತಿಯನ್ನು ರೈತರಿಗೆ ಮನವರಿಕೆ ಮಾಡಿಸಿ, ಸಮಸ್ಯೆಗಳನ್ನು ಆಲಿಸಬೇಕು' ಎಂದು ಹೇಳಿದರು.

'ವಿದ್ಯುತ್ ಕಳ್ಳತನ ಮತ್ತು ವಿದ್ಯುತ್ ಸೋರಿಕೆ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ವಿಚಕ್ಷಣಾ ದಳದಲ್ಲಿ ಎಷ್ಟು ಎಸ್‌ಪಿಗಳು ಇದ್ದೀರಿ? ಏನು ಮಾಡುತ್ತಿದ್ದೀರಿ? ಇವರು ಎಷ್ಟು ವಿದ್ಯುತ್ ಕಳ್ಳತನ ಪತ್ತೆ ಹಚ್ಚಿದ್ದಾರೆ ಎನ್ನುವುದನ್ನು ನಿಗಾವಹಿಸಿ ಕ್ರಿಯಾಶೀಲರಾಗಿ ಕೆಲಸ ಮಾಡಲು ಸೂಚನೆ ನೀಡಿ' ಎಂದರು.

### ಉ.ಪ್ರ, ಪಂಜಾಬ್‌ನಿಂದ ವಿದ್ಯುತ್

ಭಾರತೀಯ ವಿದ್ಯುತ್ ವಿನಿಮಯ ಯೋಜನೆ ಅಡಿ ನವೆಂಬರ್‌ನಿಂದ ಉತ್ತರ ಪ್ರದೇಶದಿಂದ 300 ಮೆ.ವಾ, ಪಂಜಾಬ್‌ನಿಂದ 600 ಮೆ.ವಾ ವಿದ್ಯುತ್ ಪಡೆಯಲಾಗುವುದು ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಕೆಇಆರ್‌ಸಿ ಅನುಮೋದನೆಯೊಂದಿಗೆ 1,500 ಮೆ.ವಾ ಅಲ್ಪಾವಧಿ ವಿದ್ಯುತ್ ಖರೀದಿಗೆ ಕ್ರಮ ಕೈಗೊಳ್ಳಲಾಗುವುದು ಎಂದೂ ಅಧಿಕಾರಿಗಳು ವಿವರಿಸಿದರು.

ರಾಜ್ಯದಲ್ಲಿನ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಪಡೆಯಲು ರಾಷ್ಟ್ರೀಯ ವಿಪತ್ತಿನಡಿ ವಿದ್ಯುತ್ ಕಾಯ್ದೆಯ ಸೆಕ್ಷನ್ 11 ಅನ್ನು ಜಾರಿ ಮಾಡಲಾಗಿದೆ. ಆ ಮೂಲಕ ವಿದ್ಯುತ್ ಕೊರತೆಯನ್ನು ನಿವಾರಿಸಲಾಗುವುದು ಎಂದರು.

ಶೇ 13ರಷ್ಟು ವಿದ್ಯುತ್ ವಿತರಣೆಯಲ್ಲಿ ನಷ್ಟವಾಗುತ್ತಿದೆ. ಗೃಹ ಜ್ಯೋತಿಯಿಂದ ವಿದ್ಯುತ್ ಕಳವು ಕಡಿಮೆಯಾಗಿದೆ ಎಂದು ಹೇಳಿದರು.

**ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಆಗದಂತೆ ನೋಡಿಕೊಳ್ಳಲು ಸರ್ಕಾರವು ಬೇರೆ ರಾಜ್ಯಗಳೊಂದಿಗೆ ಮತ್ತು ಖಾಸಗಿ ಕಂಪನಿಗಳ ಜೊತೆ ಮಾತುಕತೆ ನಡೆಸಬೇಕು**

**ರಮೇಶ್ ಚಂದ್ರ ಲಹೋಟಿ,** ಎಫ್‌ಕೆಸಿಸಿಐ ಅಧ್ಯಕ್ಷ

**ಹೊರಗಿನಿಂದ ಹೆಚ್ಚಿನ ಬೆಲೆಗೆ ವಿದ್ಯುತ್ ಖರೀದಿಸಿದರೆ, ಆಗ ಸರ್ಕಾರವು ಬೆಲೆಯಲ್ಲಿಯೂ ಹೊಂದಾಣಿಕೆ ಮಾಡಬೇಕು. ಇಲ್ಲವಾದರೆ ಕೈಗಾರಿಕೆಗಳಿಗೆ ಹೊರೆಯಾಗಲಿದೆ. ಎಲ್ಲ ಕೈಗಾರಿಕೆಗಳಿಗೂ ಅದನ್ನು ಭರಿಸುವ ಸಾಮರ್ಥ್ಯ ಇಲ್ಲ**

**ಸುರೇಶ್ ಎನ್. ಸಾಗರ್,** ಕಾಸಿಯಾ ಅಧ್ಯಕ್ಷ

## ಅನ್ಯ ರಾಜ್ಯಗಳಿಂದ ಖರೀದಿಗೆ ಯತ್ನ: ಜಾರ್ಜ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕದಲ್ಲಿ ಉಂಟಾಗಿರುವ ವಿದ್ಯುತ್ ಅಭಾವವನ್ನು ಸರಿಪಡಿಸಲು ಉತ್ತರ ಪ್ರದೇಶ ಸೇರಿದಂತೆ ಅನ್ಯ ರಾಜ್ಯಗಳಿಂದ ವಿದ್ಯುತ್ ಖರೀದಿಗೆ ಪ್ರಯತ್ನಿಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮಳೆ ಅಭಾವದಿಂದ ವಿದ್ಯುತ್ ಸಮಸ್ಯೆ ಸೃಷ್ಟಿಯಾಗಿದೆ. 1500 ಮೆಗಾವಾಟ್‌ನಷ್ಟು ಕೊರತೆಯಾಗಿದೆ. ಜನರು ಅಥವಾ ರೈತರು ಪ್ರತಿಭಟನೆ ಮಾಡುವುದಾದರೆ ಬಿಜೆಪಿ ಕಚೇರಿ ಮುಂದೆ ಹೋಗಿ ಪ್ರತಿಭಟಿಸಲಿ. ಇಂದಿನ ಬಿಕ್ಕಟ್ಟಿಗೆ ಬಿಜೆಪಿಯೇ ಕಾರಣ' ಎಂದು ದೂರಿದರು.

ಜಾರ್ಜ್ ಕಾಣೆಯಾಗಿದ್ದಾರೆ ಎಂಬ ಬಿಜೆಪಿಯ ಆರೋಪಕ್ಕೆ ತಿರುಗೇಟು ನೀಡಿದ ಅವರು, 'ಜಾರ್ಜ್ ಕಾಣೆಯಾಗಿಲ್ಲ. ದೆಹಲಿಗೆ ಬಂದು ಇಂಧನ ಸಚಿವರನ್ನು ಹಾಗೂ ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಿ ಕೇಂದ್ರ ಗ್ರಿಡ್‌ನಿಂದ ಹೆಚ್ಚುವರಿ ವಿದ್ಯುತ್ ಒದಗಿಸುವಂತೆ ಒತ್ತಡ ಹೇರಿದ್ದೇನೆ' ಎಂದರು. ನಾನು ಬಿಜೆಪಿ ಕಚೇರಿಗೆ ಹೋಗಿ ಕುಳಿತುಕೊಳ್ಳಬೇಕಾ ಅಥವಾ ಬೊಮ್ಮಾಯಿ ಮನೆಗೆ ಹೋಗಿ ಕುಳಿತುಕೊಳ್ಳಬೇಕಾ ಎಂದು ಪ್ರಶ್ನಿಸಿದರು.

'ಒಂದೇ ದಿನದಲ್ಲಿ ಕೊರತೆ ನೀಗಿಸಲು ಸಾಧ್ಯವಿಲ್ಲ. ವಿದ್ಯುತ್ ಉಪಕೇಂದ್ರಗಳಲ್ಲಿ ಸೌರಶಕ್ತಿ ಅಳವಡಿಕೆಗೆ ಕ್ರಮ ವಹಿಸಲಾಗುತ್ತಿದೆ. 1200 ಮೆಗಾವಾಟ್ ಸೌರ ಇಂಧನ ಉತ್ಪಾದನೆಗೆ ಟೆಂಡರ್ ಕರೆಯಲಾಗಿದೆ. ಸೌರ ಘಟಕಗಳನ್ನು ನಿರ್ಮಿಸಲು ಸರ್ಕಾರಿ ಭೂಮಿಯನ್ನು ಸಹ ಕೇಳಿದ್ದೇವೆ. ಗುತ್ತಿಗೆಗೆ ಭೂಮಿ ನೀಡುವಂತೆ ರೈತರಿಗೆ ಮನವಿ ಮಾಡಿದ್ದೇವೆ' ಎಂದರು.

ವಿದ್ಯುತ್ ಪೂರೈಕೆ ಮಾಡುವಂತೆ ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೂ ಮನವಿ ಮಾಡಿದ್ದೇವೆ ಎಂದರು.



**ಅಂತಿಮ ಸ್ಪರ್ಶ** ವಿಜಯದಶಮಿ (ದಸರಾ) ಅಂಗವಾಗಿ ಪ್ರತಿಷ್ಠಾಪಿಸುವ ದುರ್ಗಾದೇವಿಯ ಮಣ್ಣಿನ ಮೂರ್ತಿಗೆ ಬೆಂಗಳೂರಿನ ಕಾಕ್ಸ್‌ಟೌನ್ ಶೆಡ್‌ನಲ್ಲಿ ಶುಕ್ರವಾರ ಪಶ್ಚಿಮ ಬಂಗಾಳದ ಕಲಾವಿದರೊಬ್ಬರು ಅಂತಿಮ ಸ್ಪರ್ಶ ನೀಡಿದರು –ಪ್ರಜಾವಾಣಿ ಚಿತ್ರ/ ರಂಜು ಪಿ.

## 'ಅರ್ಚಕರು ಮೃತಪಟ್ಟರೆ ₹ 2 ಲಕ್ಷ ಪರಿಹಾರ'

**ಬೆಂಗಳೂರು:** ಮುಜರಾಯಿ ಇಲಾಖೆಯ ವ್ಯಾಪ್ತಿಯ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುವ ಅರ್ಚಕರು, ನೌಕರರು ಮೃತಪಟ್ಟರೆ ಅವರ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ ನೀಡಲಾಗುವುದು ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ರಾಜ್ಯ ಧಾರ್ಮಿಕ ಪರಿಷತ್ತಿನ ಪ್ರಥಮ ಸಭೆಯನ್ನು ಶುಕ್ರವಾರ ನಡೆಸಿದ ಬಳಿಕ ಸುದ್ದಿಗಾರರಿಗೆ ಅವರು ಮಾಹಿತಿ ನೀಡಿದರು.

ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಅರ್ಚಕರು ಮತ್ತು ನೌಕರರಿಗೆ ಆರೋಗ್ಯ ಕಾರ್ಡ್ ವಿತರಿಸಲಾಗುವುದು. ನೋಂದಣಿ ಶುಲ್ಕವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಲಾಗುವುದು. ವರ್ಷಕ್ಕೆ 1200 ಅರ್ಚಕ, ನೌಕರರನ್ನು ಕಾಶಿ, ಗಯಾ ಯಾತ್ರೆಗೆ ಉಚಿತವಾಗಿ ಕಳುಹಿಸಲಾಗುವುದು ಎಂದರು.

**ಶೈಕ್ಷಣಿಕ ಪ್ರೋತ್ಸಾಹ ಧನ:** ಅರ್ಚಕರು, ನೌಕರರ ಮಕ್ಕಳಿಗೆ ಪಿಯುಸಿ, ಐಟಿಐ, ಜೆಒಸಿ, ಡಿಪ್ಲೊಮಾ ಮಾಡುವವರಿಗೆ ₹ 5 ಸಾವಿರ, ಪದವಿಗೆ ₹ 7 ಸಾವಿರ, ಸ್ನಾತಕೋತ್ತರ ಪದವಿಗೆ ₹ 15 ಸಾವಿರ, ಆಯುರ್ವೇದ, ಹೋಮಿಯೋಪತಿ ಪದವಿ, ತಾಂತ್ರಿಕ ಶಿಕ್ಷಣಕ್ಕೆ ₹ 25 ಸಾವಿರ, ವೈದ್ಯಕೀಯ, ದಂತ ಶಿಕ್ಷಣಕ್ಕೆ ₹ 50 ಸಾವಿರ ನೀಡಲಾಗುವುದು. ವಿದೇಶದಲ್ಲಿ ವ್ಯಾಸಂಗ ಮಾಡುವವರಿಗೆ ಒಂದು ಬಾರಿ ₹ 1 ಲಕ್ಷ ನೀಡಲಾಗುವುದು ಎಂದು ವಿವರಿಸಿದರು.

ಕೋಲಾರ ಜಿಲ್ಲೆಯ ಶಿವಾರಪಟ್ಟಣದಲ್ಲಿ ಶಿಲ್ಪಕಲಾ ತರಬೇತಿ ಕೇಂದ್ರ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

## ಕಾವೇರಿ: ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ತೀರ್ಮಾನ

# 31ರವರೆಗೆ ದಿನವೂ 3 ಸಾವಿರ ಕ್ಯೂಸೆಕ್ ನೀರು ಹರಿಸಲು ಆದೇಶ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕರ್ನಾಟಕವು ತಮಿಳುನಾಡಿಗೆ ಅಕ್ಟೋಬರ್ 31ರವರೆಗೆ ಪ್ರತಿದಿನ 3 ಸಾವಿರ ಕ್ಯೂಸೆಕ್ ಕಾವೇರಿ ನೀರನ್ನು ಹರಿಸಬೇಕೆಂಬ ಕಾವೇರಿ ನೀರು ನಿಯಂತ್ರಣ ಸಮಿತಿಯ ಶಿಫಾರಸನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಶುಕ್ರವಾರ ಎತ್ತಿ ಹಿಡಿದಿದೆ.

ಪ್ರಾಧಿಕಾರದ ಅಧ್ಯಕ್ಷ ಸೌಮಿತ್ರ ಕುಮಾರ್ ಹಲ್ದಾರ್ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ ಸಭೆಯಲ್ಲಿ ಉಭಯ ರಾಜ್ಯಗಳ ಉನ್ನತ ಅಧಿಕಾರಿಗಳು ಭಾಗಿಯಾಗಿದ್ದರು. ನೀರು ಹರಿಸಲು ಸಾಧ್ಯವಿಲ್ಲ ಎಂಬ ಕರ್ನಾಟಕದ ಅಧಿಕಾರಿಗಳ ಮಾತಿಗೆ ಪ್ರಾಧಿಕಾರ ಬೆಲೆ ನೀಡಲಿಲ್ಲ. ಪ್ರಾಧಿಕಾರದ ಆದೇಶದ ವಿರುದ್ಧ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಕರ್ನಾಟಕ ತೀರ್ಮಾನಿಸಿದೆ.

ಸಭೆಯಲ್ಲಿ ಮಾತನಾಡಿದ ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್, 'ಸಂಕಷ್ಟ ಅಂಶ ಪರಿಗಣಿಸಿದರೆ ತಮಿಳುನಾಡಿನಲ್ಲಿ ಕುರುವೈ ಹಾಗೂ ಸಾಂಬಾ ಬೆಳೆಗೆ ಬೇಕಿರುವುದಕ್ಕಿಂತ ಹೆಚ್ಚು ನೀರು ಇದೆ. ಜತೆಗೆ, ತಮಿಳುನಾಡು ಅನುಕೂಲಕರ ಸ್ಥಿತಿಯಲ್ಲಿದೆ. ಈಶಾನ್ಯ ಮುಂಗಾರು ಸಾಮಾನ್ಯವಾಗಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಇದರಿಂದ, ಲಾಭ ಆಗುವುದು ತಮಿಳುನಾಡಿಗೆ. ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ ಶೇ 58ರಷ್ಟು ಮಾತ್ರ ನೀರಿದೆ. ಈಗಿನ ಸನ್ನಿವೇಶದಲ್ಲಿ ತಮಿಳುನಾಡಿಗೆ ನೀರು ಹರಿಸುವುದು ಅಸಾಧ್ಯ. ಸಮಿತಿಯ ಶಿಫಾರಸನ್ನು ತಿರಸ್ಕರಿಸಬೇಕು' ಎಂದು ಮನವಿ ಮಾಡಿದರು.

ಕರ್ನಾಟಕವು ಅಕ್ಟೋಬರ್ 31ರ ವರೆಗೆ ಒಟ್ಟು 20.75 ಟಿಎಂಸಿ ಅಡಿಯಷ್ಟು ನೀರು ಹರಿಸಬೇಕು ಎಂದು ತಮಿಳುನಾಡು ಪಟ್ಟು ಹಿಡಿಯಿತು. ಸಂಕಷ್ಟದ ಸೂತ್ರ ಲೆಕ್ಕ ಹಾಕಿದರೂ ಕರ್ನಾಟಕ ಕಡಿಮೆ ನೀರು ಬಿಟ್ಟಿದೆ. 16 ಟಿಎಂಸಿ ಅಡಿಯಷ್ಟು ಬ್ಯಾಕ್‌ಲಾಗ್ ನೀರನ್ನು ಕೂಡಲೇ ಹರಿಸಬೇಕು ಎಂದು ಒತ್ತಾಯಿಸಿತು. ಎರಡೂ ರಾಜ್ಯಗಳ ಅಧಿಕಾರಿಗಳ ವಾದಗಳನ್ನು ಆಲಿಸಿದ ಬಳಿಕ ಪ್ರಾಧಿಕಾರವು ಸಮಿತಿಯ ಶಿಫಾರಸನ್ನು ಎತ್ತಿ ಹಿಡಿಯಿತು.

### ಒಂದೇ ಕೇಂದ್ರದಲ್ಲಿ ನಡೆಯುತ್ತಿರುವ ಎರಡು ಅಂಗನವಾಡಿ

# ಇಕ್ಕಟ್ಟಾದ ಸ್ಥಳದಲ್ಲಿ 56 ಮಕ್ಕಳ ಪಾಠ, ನಿದ್ದೆ

• ಸಿ.ಶಿವಾನಂದ

**ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ):** 'ಇಕ್ಕಟ್ಟಾಗಿರುವ ಸ್ಥಳದಲ್ಲೇ 56 ಚಿಣ್ಣರು ಕೂರಬೇಕು, ಮಲಗಬೇಕು. ಊಟ, ಪಾಠ ಕೂಡಾ'. ಇದು ತಾಲ್ಲೂಕಿನ ವಲ್ಲಭಾಪುರ ಗ್ರಾಮದ ಅಂಗನವಾಡಿ ಕೇಂದ್ರದ ದುಸ್ಥಿತಿ.

ಅಂಗನವಾಡಿಯ ಪೂರ್ವ ಪ್ರಾಥಮಿಕ ಶಿಕ್ಷಣದ ಉದ್ದೇಶವೇ ಇಲ್ಲಿ ಮರೀಚಿಕೆಯಾಗಿದೆ. ಎರಡೂವರೆ ವರ್ಷಗಳಿಂದ ಎರಡು ಕೇಂದ್ರಗಳ ಮಕ್ಕಳು ಒಂದೇ ಕೇಂದ್ರದಲ್ಲಿದ್ದಾರೆ. ಹಿಂದೆ ಇದ್ದ ಕಾರ್ಯಕರ್ತೆ ನಿವೃತ್ತರಾಗಿದ್ದು, ಎರಡನೇ ಕೇಂದ್ರದ ಕಾರ್ಯಕರ್ತೆ ಎರಡನ್ನೂ ನಿಭಾಯಿಸುತ್ತಾರೆ.

ಕೇಂದ್ರದಲ್ಲಿ ಸಮರ್ಪಕ ವಿದ್ಯುತ್ ಸಂಪರ್ಕ ಇಲ್ಲ, ಫ್ಯಾನ್ ಇದ್ದರೂ ಕಾರ್ಯನಿರ್ವಹಿಸುತ್ತಿಲ್ಲ. ಬಿಸಿಲಿನ ಝಳಕ್ಕೆ ಮಕ್ಕಳು ನಲುಗಿದ್ದಾರೆ. ನೀರಿನ ತೊಟ್ಟಿ ಇದ್ದರೂ ಉಪಯೋಗವಿಲ್ಲ. ನರೇಗಾ ಯೋಜನೆಯಲ್ಲಿ ಅಭಿವೃದ್ಧಿಪಡಿಸಿದ್ದ ಕೈತೋಟ ನೀರಿಲ್ಲದೇ ಒಣಗಿದೆ.



ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವಲ್ಲಭಾಪುರದಲ್ಲಿರುವ ಎರಡು ಅಂಗನವಾಡಿ ಕೇಂದ್ರಗಳ ಮಕ್ಕಳು ಒಂದೇ ಕೇಂದ್ರದಲ್ಲಿ ಮಲಗಿರುವುದು

ಅಂದಾಜು ₹ 15 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಕಟ್ಟಡ ಉದ್ಘಾಟನೆಗೊಂಡರೂ ಒಂದು ದಿನವೂ ಅಲ್ಲಿರುವ ಕೇಂದ್ರದತ್ತ ಮಕ್ಕಳು ಸುಳಿದಿಲ್ಲ. ಸದ್ಯ ಅದು ಉಗ್ರಾಣದಂತಾಗಿದೆ. ಕಾರ್ಯಕರ್ತೆಯರ ನೇಮಕ ವಿಳಂಬದಿಂದಾಗಿ ಎರಡೂ ಕೇಂದ್ರಗಳ ಮಕ್ಕಳು ಒಂದೇ ಕಡೆ ಇರಬೇಕಿದೆ.

'ಸ್ಥಳಾಭಾವದಿಂದಾಗಿ ಎರಡೂ ಕೇಂದ್ರಗಳ ಮಕ್ಕಳಿಗೆ ಅಕ್ಷರಾಭ್ಯಾಸ, ಪಠ್ಯೇತರ ಚಟುವಟಿಕೆ ಮಾಡಿಸಲು ತೊಂದರೆ ಆಗುತ್ತಿದೆ, ಬೆಳಿಗ್ಗೆಯಿಂದ ಮಧ್ಯಾಹ್ನ 4 ಗಂಟೆಯವರೆಗೂ ಕೇಂದ್ರ ನಡೆಸಬೇಕಿದೆ' ಎಂದು ಅಂಗನವಾಡಿ ಕೇಂದ್ರ-2ರ ಕಾರ್ಯಕರ್ತೆ ಗೀತಾ ಹೇಳಿದರು.

ತಾಲ್ಲೂಕಿನಲ್ಲಿ ಒಟ್ಟು 243 ಅಂಗನವಾಡಿ ಕೇಂದ್ರಗಳಿವೆ. 226 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿವೆ. ಪಟ್ಟಣದ ಎರಡು ಅಂಗನವಾಡಿ ಕೇಂದ್ರಗಳಲ್ಲಿ ವಿದ್ಯುತ್ ಸಂಪರ್ಕವೇ ಇಲ್ಲ.

'ತಾಲ್ಲೂಕಿನಲ್ಲಿ 7 ಜನ ಕಾರ್ಯಕರ್ತೆಯರು, 12 ಜನ ಸಹಾಯಕಿಯರ ಹುದ್ದೆಗಳ ಭರ್ತಿಗೆ ಅರ್ಜಿ ಕರೆಯಲಾಗಿದ್ದು ಶೀಘ್ರವೇ ಭರ್ತಿ ಮಾಡಲಾಗುವುದು' ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದರು.

**ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯ ಎಲ್ಲ ಪ್ರಕ್ರಿಯೆಗಳು ಪೂರ್ಣಗೊಂಡಿವೆ. 15 ದಿನಗಳಲ್ಲಿ ನೂತನ ಕಾರ್ಯಕರ್ತೆಯರು ಕೆಲಸ ನಿರ್ವಹಿಸಲಿದ್ದಾರೆ**

**ಸುದೀಪ್ ಕುಮಾರ್,** ಶಿಶು ಅಭಿವೃದ್ಧಿ ಯೋಜನಾಧಿಕಾರಿ, ಹಗರಿಬೊಮ್ಮನಹಳ್ಳಿ.

ಶನಿವಾರ, ಅಕ್ಟೋಬರ್ 14, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 285 | ಪುಟ 24
www.prajavani.net
prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ನಮ್ಮ ನಮ್ಮ ಖುಷಿಯ ಮಾದರಿಗಳನ್ನು ನಾವೇ ಹುಡುಕಿಕೊಳ್ಳಬೇಕು



ಪ್ರಜಾವಾಣಿ@75 ಹೊಸ ಸ್ಪಂದನ, ಹೊಸ ನುಡಿಗಟ್ಟು ಕದಲಿದ ಯಥಾಸ್ಥಿತಿ ವಾದ

ಕಲುಷಿತ ನೀರು; ಇಬ್ಬರ ಸಾವು 10

ಪೊಲೀಸ್ ಭದ್ರತೆಯಲ್ಲಿ ಮಹಿಷ ದಸರಾ 10

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 66,283 | 19,751 | ₹59,700 (ಬೆಂಗಳೂರು) | ₹70,700 (ಬೆಂಗಳೂರು) | 83.30 |

ಬೆಂಗಳೂರು, ಹೈದರಾಬಾದ್‌ನಲ್ಲಿ ಶೋಧ • ಗುತ್ತಿಗೆದಾರನ ಮಗನ ಮನೆಯಲ್ಲಿ ₹20 ಕೋಟಿ

# ಐಟಿ ದಾಳಿ: ₹42 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದ ಎರಡು ಗುತ್ತಿಗೆ ಕಂಪನಿಗಳು ಹಾಗೂ ಗುತ್ತಿಗೆದಾರರಿಗೆ ಸಂಬಂಧಪಟ್ಟ 45ಕ್ಕೂ ಹೆಚ್ಚು ಸ್ಥಳಗಳ ಮೇಲೆ ಆದಾಯ ತೆರಿಗೆ (ಐಟಿ) ಅಧಿಕಾರಿಗಳು ದಾಳಿ ಮಾಡಿದ್ದು, ಒಟ್ಟು ₹42 ಕೋಟಿ ನಗದು ಜಪ್ತಿ ಮಾಡಿದ್ದಾರೆ.

ರಾಜ್ಯದ ಎರಡು ಗುತ್ತಿಗೆ ಕಂಪನಿಗಳು ಹಾಗೂ 10ಕ್ಕೂ ಹೆಚ್ಚು ಗುತ್ತಿಗೆದಾರರಿಗೆ ಸಂಬಂಧಪಟ್ಟ ಸ್ಥಳಗಳ ಮೇಲೆ ಗುರುವಾರ ಬೆಳಿಗ್ಗೆ ದಾಳಿ ಮಾಡಿದ್ದ ಅಧಿಕಾರಿಗಳು, ಶುಕ್ರವಾರ ರಾತ್ರಿಯೂ ಶೋಧ ಮುಂದುವರಿಸಿದರು. ತೆರಿಗೆ ವಂಚನೆ ಆರೋಪದಡಿ ಈ ಶೋಧ ನಡೆದಿದೆ.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಅಂಬಿಕಾಪತಿ ಮನೆ ಹಾಗೂ ಕುಟುಂಬಸ್ಥರ ಮನೆಗಳಲ್ಲಿ ಐಟಿ ಅಧಿಕಾರಿಗಳು ಶೋಧ ನಡೆಸಿದ್ದು, ಅಂಬಿಕಾಪತಿ ಮಗ ಪ್ರದೀಪ್ ಮನೆಯಲ್ಲಿ ₹20 ಕೋಟಿ ನಗದು ಜಪ್ತಿ ಮಾಡಿದ್ದಾರೆ.

ರಾಜ್ಯದ ಹಲವು ಸರ್ಕಾರಿ ಕಾಮಗಾರಿಗಳನ್ನು ಗುತ್ತಿಗೆ ಪಡೆದಿರುವ ಕಂಪನಿಗೆ ಸಂಬಂಧಪಟ್ಟ ಹೈದರಾಬಾದ್‌ನ ಸ್ಥಳದಲ್ಲೂ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಈ ಸ್ಥಳದಲ್ಲಿ ₹15 ಕೋಟಿನಗದು ಪತ್ತೆ ಆಗಿರುವುದಾಗಿ ಗೊತ್ತಾಗಿದೆ.

‘ಗುರುವಾರ ಬೆಳಿಗ್ಗೆಯಿಂದ ಶುಕ್ರವಾರ ರಾತ್ರಿಯವರೆಗೆ ಅಂಬಿಕಾಪತಿ ಮಗ ಪ್ರದೀಪ್ ಮನೆಯಲ್ಲಿ ₹20 ಕೋಟಿ, ಹೈದರಾಬಾದ್‌ನಲ್ಲಿ ₹15 ಕೋಟಿ ದೊರೆತಿದೆ’ ಎಂದು ಮೂಲಗಳು ಹೇಳಿವೆ.



ಬಿಬಿಎಂಪಿ ಗುತ್ತಿಗೆದಾರ ಅಂಬಿಕಾಪತಿ ಅವರ ಮಗ ಪ್ರದೀಪ್ ಮನೆಯಲ್ಲಿ ಪತ್ತೆಯಾದ ರಟ್ಟಿನ ಪೆಟ್ಟಿಗೆಗಳಲ್ಲಿದ್ದ ₹ 20 ಕೋಟಿ ನಗದು

10ನೇ ಪುಟ ನೋಡಿ

## ರಾಜಕೀಯ ಪ್ರೇರಿತ ದಾಳಿ: ಡಿಕೆಶಿ

ಕರ್ನಾಟಕದಲ್ಲಷ್ಟೇ ಅಲ್ಲ, ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ಇತರೆ ರಾಜ್ಯಗಳಲ್ಲೂ ರಾಜಕೀಯ ಪ್ರೇರಿತ ದಾಳಿಗಳು ನಡೆಯುತ್ತಿವೆ. ಐದು ರಾಜ್ಯಗಳ ಚುನಾವಣೆಗೆ ಕರ್ನಾಟಕದಿಂದ ಹಣ ಕಳಿಸಲಾಗುತ್ತಿದೆ ಎಂಬ ಆರೋಪ ಸತ್ಯವಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

## ‘ಹಣದ ಹಿಂದೆ ಬೆಂಗಳೂರು ನಗದು ಅಭಿವೃದ್ಧಿ ಇಲಾಖೆಯ ಕರಾಮತ್ತು’

ಆದಾಯ ತೆರಿಗೆ ಇಲಾಖೆ ಬಿಬಿಎಂಪಿ ಗುತ್ತಿಗೆದಾರನ ಮಗನ ಮನೆಯಲ್ಲಿ ವಶಪಡಿಸಿಕೊಂಡಿರುವ ₹42 ಕೋಟಿ ಸಂಗ್ರಹದ ಹಿಂದೆ ‘ಬೆಂಗಳೂರು ನಗದು ಅಭಿವೃದ್ಧಿ ಇಲಾಖೆ’ಯ ಕೈ ಕರಾಮತ್ತು ಇದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಹಣ ತೆಲಂಗಾಣ ಚುನಾವಣೆಗೆ ಕಳುಹಿಸಲು ಸಂಗ್ರಹಿಸಿದ್ದು ಎನ್ನುವ ಮಾಹಿತಿ ಇದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆ ಪಕ್ಷದ ಹೈಕಮಾಂಡ್‌ಗೆ ಹಬ್ಬ. ಐದು ರಾಜ್ಯ ಚುನಾವಣೆ ಘೋಷಣೆ ಆಗಿದ್ದೇ ತಡ, ಇತರೆ ರಾಜ್ಯಗಳ ಚುನಾವಣಾ ಖರ್ಚಿಗೆ ಬೇಕಾದ ಹಣವನ್ನು ಹೈಕಮಾಂಡ್‌ಗೆ ನೀಡಲು ಕಾಂಗ್ರೆಸ್ ರಾಜ್ಯ ಘಟಕ ಸಂಗ್ರಹ ಮಾಡುತ್ತಿದೆ. ಐಟಿ ದಾಳಿಯಿಂದ ಗುಟ್ಟು ರಟ್ಟಾಗಿದೆ. ಕಾಂಗ್ರೆಸ್ ಪರ್ಸೆಂಟೇಜ್ ವ್ಯವಹಾರವೂ ಸಾಬೀತಾಗಿದೆ ಎಂದು ದೂರಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ




ಇಸ್ರೇಲ್‌ನಿಂದ ವಿಶೇಷ ವಿಮಾನದಲ್ಲಿ ಬಂದ ಭಾರತೀಯರು

# ಐವರು ಕನ್ನಡಿಗರು ತಾಯ್ನಾಡಿಗೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೇಂದ್ರ ಸರ್ಕಾರದ ಆಪರೇಷನ್ ಅಜಯ್ ಕಾರ್ಯಾಚರಣೆಯ ಭಾಗವಾಗಿ ಸುಮಾರು 200 ಭಾರತೀಯರು ಶುಕ್ರವಾರ ತಾಯ್ನಾಡಿಗೆ ಮರಳಿದರು.

ಇಸ್ರೇಲ್‌ನಿಂದ ವಿಶೇಷ ವಿಮಾನದಲ್ಲಿ ಬಂದ ಭಾರತೀಯರನ್ನು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಸ್ವಾಗತಿಸಿದರು. ಐವರು ಕನ್ನಡಿಗರು ಸಹ ವಿಶೇಷ ವಿಮಾನದಲ್ಲಿ ಇದ್ದರು. ಕನ್ನಡಿಗರನ್ನು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರು ಬರ ಮಾಡಿಕೊಂಡರು. ಬಳಿಕ ಮಾತನಾಡಿದ ಅವರು, ‘ಇಸ್ರೇಲ್‌ನಲ್ಲಿ ಸುಮಾರು 4 ಸಾವಿರ ಕನ್ನಡಿಗರು ಇದ್ದಾರೆ ಎಂದು ಅಂದಾಜಿಸಲಾಗಿದೆ. ಎಷ್ಟು ಜನರು ತಾಯ್ನಾಡಿಗೆ ಮರಳುತ್ತಾರೆ ಎಂಬುದು ಗೊತ್ತಿಲ್ಲ. ಈಗ ಬಂದವರು ಸುರಕ್ಷಿತ ವಲಯದಲ್ಲಿ ಇದ್ದರು. ಅವರಿಗೆ ಭಯ ಆತಂಕ ಇರಲಿಲ್ಲ. ಮಾನಸಿಕವಾಗಿ ಸ್ವಲ್ಪ ಕುಗ್ಗಿದ್ದರು’ ಎಂದರು.

## ಎರಡನೇ ತಂಡ ಇಂದು ದೆಹಲಿಗೆ

**ಜೆರುಸಲೇಂ (ಪಿಟಿಐ):** ಇಸ್ರೇಲ್‌ನಿಂದ ಮತ್ತಷ್ಟು ಭಾರತೀಯರನ್ನು ಶುಕ್ರವಾರ ಎರಡನೇ ತಂಡದಲ್ಲಿ ತೆರವುಗೊಳಿಸಲಾಗಿದೆ ಎಂದು ಟೆಲ್ ಅವೀವ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಹೇಳಿದೆ.

ಸ್ವದೇಶಕ್ಕೆ ಮರಳಲು ಬಯಸುವ ಭಾರತೀಯರನ್ನು ಕರೆತರಲು ಭಾರತವು ಗುರುವಾರ ‘ಆಪರೇಷನ್ ಅಜಯ್’ ಕಾರ್ಯಾಚರಣೆ ಆರಂಭಿಸಿತ್ತು. ಶುಕ್ರವಾರ ವಿಶೇಷ ವಿಮಾನದಲ್ಲಿ ತೆರಳಿದ ಭಾರತದ ಪ್ರಜೆಗಳ ಬಗ್ಗೆ ಇ-ಮೇಲ್‌ನಲ್ಲಿ ಮಾಹಿತಿ ನೀಡಲಾಗಿದೆ. ನೋಂದಣಿ ಮಾಡಿರುವ ಇತರರಿಗೂ ಮುಂದಿನ ವಿಮಾನಗಳಲ್ಲಿ ಅವಕಾಶ ಕಲ್ಪಿಸಲಾಗುವುದು’ ಎಂದು ರಾಯಭಾರ ಕಚೇರಿ ‘ಎಕ್ಸ್’ನಲ್ಲಿ ಪ್ರಕಟಿಸಿದೆ.






## ಸುಧಾ, ಮಯೂರ ಓದಿ


### ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು–560048. ದೂರವಾಣಿ: 080–2852 4133 E-mail: info@gpl.in, Web: www.gpl.in CIN : L23209KA1977PLC043357

**ಅಂಚೆ ಮತದಾನದ ಸೂಚನೆ**

ಈ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014, ನಿಯಂತ್ರಣ 44 ರ ನಿಯಮ 22 ರೊಂದಿಗೆ ಓದಲಾದ ಕಂಪನಿಗಳ ಕಾಯಿದೆ, 2013 (ದ ಕಾಯಿದೆ) ಸೆಕ್ಷನ್ 108 ಮತ್ತು ವಿಭಾಗ 110 ರ ಅನುಸಾರವಾಗಿ **ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್** (ಕಂಪನಿ) ಸದಸ್ಯರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಮಾಡುವ ಜವಾಬ್ದಾರಿಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 (ಪಟ್ಟಿ ಮಾಡುವ ನಿಯಮಗಳು), ಸಾಮಾನ್ಯ ಸುತ್ತೋಲೆ ನಂ. 11/2022 ದಿನಾಂಕ 28ನೇ ಡಿಸೆಂಬರ್, 2022 ಈ ಸಂಬಂಧವಾಗಿ ಹೊರಡಿಸಲಾದ ಹಿಂದಿನ ಸಾಮಾನ್ಯ ಸುತ್ತೋಲೆಗಳೊಂದಿಗೆ ಓದಲಾಗಿದೆ, ಅಂದರೆ. 14/2020 ದಿನಾಂಕ 8ನೇ ಏಪ್ರಿಲ್, 2020, 17/2020 ದಿನಾಂಕ 13ನೇ ಏಪ್ರಿಲ್, 2020, 22/2020 ದಿನಾಂಕ 15ನೇ ಜೂನ್, 2020, 33/2020 ದಿನಾಂಕ 28ನೇ ಸೆಪ್ಟೆಂಬರ್, 2020, 39/2020 ದಿನಾಂಕ 31ನೇ ಡಿಸೆಂಬರ್, 2020, 10/2021 ದಿನಾಂಕ 23ನೇ ಜೂನ್, 2021, 20/2021 ದಿನಾಂಕ 8ನೇ ಡಿಸೆಂಬರ್, 2021 ಮತ್ತು 3/2022 ದಿನಾಂಕ 5ನೇ ಮೇ, 2022, 10/2022 ಮತ್ತು 11/2022 ಎರಡೂ ದಿನಾಂಕ 28ನೇ ಡಿಸೆಂಬರ್, 2022 (ಒಟ್ಟಾರೆಯಾಗಿ "MCA ಸುತ್ತೋಲೆಗಳು" ಮಾನದಂಡಗಳ ಮೇಲೆ ಉಲ್ಲೇಖಿಸಲಾಗಿದೆ), ಸಾಮಾನ್ಯ ಸಭೆ, ಮತ್ತು ಕಾಯಿದೆಯ ಇತರ ಅನ್ವಯವಾಗುವ ನಿಬಂಧನೆಗಳು, ನಿಯಮಗಳು ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ಸುತ್ತೋಲೆಗಳು, ಕಂಪನಿಯು ಸದಸ್ಯರ ಒಪ್ಪಿಗೆಯನ್ನು ಕೋರುತ್ತದೆ, **ಅಕ್ಟೋಬರ್ 13, 2023** ರ ಅಂಚೆ ಮತಪತ್ರದಲ್ಲಿ ಸೂಚಿಸಲಾದ ವ್ಯವಹಾರದ ಐಟಂಗೆ (ಪೋಸ್ಟಲ್ ಬ್ಯಾಲೆಟ್ ನೋಟೀಸ್) ಅಂದರೆ ರಿಮೋಟ್ ಇ–ವೋಟಿಂಗ್ ಸೌಲಭ್ಯದ ಮೂಲಕ ಎಲೆಕ್ಟ್ರಾನಿಕ್ ವಿಧಾನದಿಂದ ಮಾತ್ರ ಮತದಾನ ಮಾಡುವುದು. ಕಂಪನಿಯು ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯಗಳನ್ನು ಒದಗಿಸಲು CDSL ನ ಸೇವೆಗಳನ್ನು ತೊಡಗಿಸಿಕೊಂಡಿದೆ, ಅವರು ತಮ್ಮ ಮತವನ್ನು ವಿದ್ಯುನ್ಮಾನವಾಗಿ ಮತ್ತು ಸುರಕ್ಷಿತ ರೀತಿಯಲ್ಲಿ ಚಲಾಯಿಸಲು ಅನುವು ಮಾಡಿಕೊಡುತ್ತದೆ.

ನ್ಯಾಶನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ನಿಂದ ಸ್ವೀಕರಿಸಿದಂತೆ, ಕಂಪನಿಯು ನಿರ್ವಹಿಸುವ ಸದಸ್ಯರ ನೋಂದಣಿ / ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡಿರುವ ಸದಸ್ಯರಿಗೆ ನೋಟೀಸ್ ಅನ್ನು ಎಲೆಕ್ಟ್ರಾನಿಕ್ ಮೋಡ್ ಮೂಲಕ ಕಳುಹಿಸಲಾಗುತ್ತದೆ. (ಡಿಪಾಸಿಟರಿಗಳು) ಶುಕ್ರವಾರ, ಅಕ್ಟೋಬರ್ 6, 2023 ರಂತೆ ಮತ್ತು ಅವರ ಇ–ಮೇಲ್ ಐಡಿಗಳನ್ನು ಕಂಪನಿ / ಠೇವಣಿಗಳೊಂದಿಗೆ ನೋಂದಾಯಿಸಲಾಗಿದೆ. ತಮ್ಮ ಇ–ಮೇಲ್ ಐಡಿಗಳನ್ನು ನೋಂದಾಯಿಸದ ಸದಸ್ಯರಿಗೆ, ದಯವಿಟ್ಟು ಸೂಚನೆಯಲ್ಲಿ ಸೂಚಿಸಲಾದ ಸೂಚನೆಗಳನ್ನು ಅನುಸರಿಸಿ.

ಈ ನಿಟ್ಟಿನಲ್ಲಿ, ಇ–ವೋಟಿಂಗ್ ಸಿಸ್ಟಂನಲ್ಲಿ ಕಂಪನಿಯು ಮೇಲೆ ತಿಳಿಸಿದ ನಿರ್ಣಯದ ಮೇಲೆ ರಿಮೋಟ್ ಇ–ವೋಟಿಂಗ್‌ನಲ್ಲಿ ನಿಮ್ಮ ಭಾಗವಹಿಸುವಿಕೆಗಾಗಿ ನಿಮ್ಮ ಡಿಮ್ಯಾಟ್ ಖಾತೆ / ಫೋಲಿಯೋ ಸಂಖ್ಯೆಯನ್ನು ಕಂಪನಿಯು ನೋಂದಾಯಿಸಿದೆ.

ಈ ಸೂಚನೆಯ ಮೂಲಕ ಕಂಪನಿಯ ಸದಸ್ಯರ ವಿಶೇಷ ನಿರ್ಣಯದ ಮೂಲಕ ಅನುಮೋದನೆಯನ್ನು ಕೋರಲಾಗಿದೆ:

**ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ಕಾರ್ಯನಿರ್ವಾಹಕ–ಅಲ್ಲದ ಸ್ವತಂತ್ರ ನಿರ್ದೇಶಕರಾಗಿ ಶ್ರೀ ರಾಜೇಶ್ ಪಾರಿಖ್ (DIN: 08258755) ರ ಮರು–ನೇಮಕವನ್ನು ಪರಿಗಣಿಸಲಾಗುವುದು**

ರಿಮೋಟ್ ಇ–ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ:

| | |
|---|---|
| ಇ–ಮತದಾನದ ಆರಂಭ | ಶನಿವಾರ, ಅಕ್ಟೋಬರ್ 14, 2023 ಬೆಳಿಗ್ಗೆ 9:00 ಗಂಟೆಗೆ |
| ಇ–ಮತದಾನದ ಅಂತ್ಯ | ಭಾನುವಾರ, ನವೆಂಬರ್ 12, 2023 ಸಂಜೆ 5:00 ಗಂಟೆಗೆ |

ಸಂಜೆ 5.00 ಗಂಟೆಯ ನಂತರ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯ ಮೂಲಕ ಸದಸ್ಯರು ತಮ್ಮ ಒಪ್ಪಿಗೆ (FOR) ಅಥವಾ ಅಸಮ್ಮತಿಯನ್ನು (ವಿರುದ್ಧ) ದಾಖಲಿಸಲು ವಿನಂತಿಸಲಾಗಿದೆ. (IST) ರಂದು (**ನವೆಂಬರ್ 12, 2023**). ರಿಮೋಟ್ ಇ–ವೋಟಿಂಗ್ ಅನ್ನು ಸಿಡಿಎಸ್‌ಎಲ್ ತಕ್ಷಣವೇ ನಿರ್ಬಂಧಿಸುತ್ತದೆ ಮತ್ತು ಹೇಳಿದ ದಿನಾಂಕ ಮತ್ತು ಸಮಯವನ್ನು ಮೀರಿ ಅನುಮತಿಸುವುದಿಲ್ಲ. ಈ ಅವಧಿಯಲ್ಲಿ, ಕಟ್–ಆಫ್ ದಿನಾಂಕದಂದು (**ಅಕ್ಟೋಬರ್ 6, 2023**) ಭೌತಿಕ ಅಥವಾ ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ತಮ್ಮ ಮತವನ್ನು ವಿದ್ಯುನ್ಮಾನವಾಗಿ ಚಲಾಯಿಸುತ್ತಾರೆ. ಮತದಾನದ ಹಕ್ಕುಗಳನ್ನು ಕಟ್–ಆಫ್ ದಿನಾಂಕದಂದು ಸದಸ್ಯರ (ಗಳ) ಹೆಸರಿನಲ್ಲಿ ನೋಂದಾಯಿಸಲಾದ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಸಹ ಲೆಕ್ಕ ಹಾಕಲಾಗುತ್ತದೆ. ಒಮ್ಮೆ ನಿರ್ಣಯದ ಮೇಲಿನ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಸದಸ್ಯರಿಗೆ ಅನುಮತಿಸಲಾಗುವುದಿಲ್ಲ.

ಕಂಪನಿಯ ನಿರ್ದೇಶಕರ ಮಂಡಳಿಯು ಅಂಚೆ ಮತಪತ್ರ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಸ್ಕ್ರೂಟಿನೈಸರ್ ಆಗಿ ಕಾರ್ಯನಿರ್ವಹಿಸಲು ಕಂಪನಿ ಕಾರ್ಯದರ್ಶಿಯನ್ನಾಗಿ ಶ್ರೀ ಜೆ.ಜೆ ಗಾಂಧಿ (FCS No./COP.No.: 2515) ಇವರನ್ನು ನೇಮಿಸಿದೆ.

ಕಂಪನಿಯ ವೆಬ್‌ಸೈಟ್ www.gpl.in ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ನ ವೆಬ್‌ಸೈಟ್‌ಗಳಲ್ಲಿ ಅಂದರೆ www.bseindia.com ನಲ್ಲಿ BSE ಲಿಮಿಟೆಡ್‌ನಲ್ಲಿ ಅಂಚೆ ಮತಪತ್ರ ನೋಟೀಸ್ ಲಭ್ಯವಿರುತ್ತದೆ ಎಂಬುದನ್ನು ಸದಸ್ಯರು ದಯವಿಟ್ಟು ಗಮನಿಸಬಹುದು.

ಅಂಚೆ ಮತಪತ್ರದ ಮೂಲಕ ಮತದಾನದ ಫಲಿತಾಂಶವನ್ನು ಕಂಪನಿಯ ನೋಂದಾಯಿತ ಕಛೇರಿಯಲ್ಲಿ 14ನೇ ನವೆಂಬರ್, 2023 ಮಂಗಳವಾರ ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gpl.in ನಲ್ಲಿ ಲಭ್ಯವಿರುತ್ತದೆ.

**ಇಮೇಲ್ ವಿಳಾಸಗಳನ್ನು ರಜಿಸ್ಟರ್/ಅಪ್ಡೇಟ್ ಮಾಡಿಕೊಳ್ಳುವ ವಿಧಾನ:**

ಡಿಮ್ಯಾಟ್‌ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳು ತಮ್ಮ ಇ–ಮೇಲ್ ಐ.ಡಿ ಮತ್ತು ಮೊಬೈಲ್ ನಂಬರ್‌ಅನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಮೂಲಕ ಡಿಪಾಸಿಟರಿಸ್‌ನೊಂದಿಗೆ ನೊಂದಾಯಿಸಿಕೊಳ್ಳಬೇಕು. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಕಂಪನಿಯ ರಿಜಿಸ್ಟ್ರಾರ್‌ಗಳು ಮತ್ತು ಷೇರುವರ್ಗಾವಣೆ ("ಆರ್‌ಟಿಏ") ಏಜಂಟ್‌ರಾದ ಬಿಗ್‌ಶೇರ್ ಸರ್ವೀಸೆಸ್ ಪ್ರೈವೇಟ್ ಲಿಮಿಟೆಡ್, ವಿಳಾಸ: ಕಛೇರಿ ಸಂಖ್ಯೆ. ಎಸ್6–2, 6ನೇ ಮಹಡಿ, ಪಿನಾಕಲ್ ಬ್ಯುಸಿನೆಸ್ ಪಾರ್ಕ್, ಮುಂದಿನ ಅಹುರಾ ಸೆಂಟರ್, ಮಹಾಕಾಳಿ ಕೇವ್ ರಸ್ತೆ, ಅಂಧೇರಿ(ಇ), ಮುಂಬೈ – 400093 ಭಾರತ, ದೂರವಾಣಿ ಸಂಖ್ಯೆ: 022–62638236, ಇ–ಮೇಲ್ ಐಡಿ : investor@bigshareonline.com, ವೆಬ್‌ಸೈಟ್: www.bigshareonline.com ರೊಂದಿಗೆ ನವೀಕರಿಸಲು ಫಾರ್ಮ್ ಆ– ಐಎಸ್‌ಆರ್–1 ಅನ್ನು ಸಲ್ಲಿಸಲು ವಿನಂತಿಸಲಾಗಿದೆ.

ಇನ್ನೂವರೆಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರುಗಳು, ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳಲು ಈ ಕೆಳಗಿನ ಹಂತಗಳನ್ನು ಅನುಸರಿಸಿ, ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಪಡೆದುಕೊಳ್ಳಬಹುದು ಹಾಗೂ ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಗಾಗಿ ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಕೂಡ ಪಡೆದುಕೊಳ್ಳಬಹುದು:

1. ಈ ಲಿಂಕ್‌ಗೆ ಭೇಟಿ ಕೊಡಿ : https://www.bigshareonline.com/InvestorRegistration.aspx 2. ಕಂಪನಿಯ ಹೆಸರನ್ನು ಆಯ್ಕೆ ಮಾಡಿರಿ – **ಗುಜರಾತ್ ಪೆಟ್ರೋಸಿಂಥೀಸ್ ಲಿಮಿಟೆಡ್** 3. ಫೋಲಿಯೊ ನಂ./ಡಿಪಿ/ಒಟ್ ಐಡಿ ನಮೂದಿಸಿರಿ 4. ಪ್ಯಾನ್ ನಂಬರ್ ನಮೂದಿಸಿರಿ 5. ಷೇರುದಾರರ ಹೆಸರು ನಮೂದಿಸಿರಿ 6. ಇಮೇಲ್ ಐಡಿ ನಮೂದಿಸಿರಿ 7. ಮೊಬೈಲ್ ನಂಬರ್ ನಮೂದಿಸಿರಿ 8. ಒಟಿಪಿ ಸಲ್ಲಿಸಿ 9. ತದನಂತರ ಸಿಸ್ಟಮ್‌ನಿಂದ ನಿಮ್ಮ ಇ–ಮೇಲ್ ವಿಳಾಸ ಖಚಿತಗೊಂಡು ಎಜಿಎಂ ಪ್ರಕಟಣೆ ರವಾನೆಗೊಳ್ಳುತ್ತದೆ. 10. ಇ–ಮೇಲ್ ವಿಳಾಸ ನೊಂದಾಯಿಸಿಕೊಳ್ಳುವ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವಿಚಾರಣೆಗಳು/ಅನಾನುಕೂಲತೆಗಳು ಇದ್ದಲ್ಲಿ, ಅಂತಹ ಸದಸ್ಯರು investor@bigshareonline.com ವಿಳಾಸಕ್ಕೆ ಬರೆಯಬಹುದು.

ಇ–ಮೇಲ್ ವಿಳಾಸಗಳ ಶಾಶ್ವತ ನೊಂದಣಿಗಾಗಿ, ಡಿಮ್ಯಾಟ್ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ಡೆಪಾಸಿಟರಿ ಪಾರ್ಟಿಸಿಪೆಂಟ್ (ಡಿಪಿ) ಇವರಲ್ಲಿ ಅಪ್ಡೇಟ್ ಮಾಡಿಕೊಳ್ಳಬೇಕು ಮತ್ತು ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಸದಸ್ಯರು ರಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜಂಟ್ ಇವರೊಂದಿಗೆ ಅಪ್ಡೇಟ್ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಸದಾ ಅತ್ಯುತ್ತಮ ಸೇವೆಗಳ ಭರವಸೆಯನ್ನು ನಾವು ನೀಡುತ್ತೇವೆ.

**ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ**
**ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ**
ಸಹಿ/– ಉರ್ಮಿ. ಎನ್. ಪ್ರಸಾದ್
**ಜಂಟಿ ವ್ಯವಸ್ಥಾಪಕ ನಿರ್ದೇಶಕ ಡಿ.ಐ.ಎನ್ : 00319482**

ದಿನಾಂಕ: 13ನೇ ಅಕ್ಟೋಬರ್, 2023
ಸ್ಥಳ : ಮುಂಬೈ


ವಿಶ್ವ ಮೊಟ್ಟೆ ದಿನಾಚರಣೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಶ್ವಾಸನೆ

# ‘ಕೋಳಿ ಸಾಕಣೆ ಉದ್ಯಮಕ್ಕೆ ಬೆಂಬಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಏರಿಳಿತದ ಮಾರುಕಟ್ಟೆಗಿಂತ ಸ್ಥಿರ ಮಾರುಕಟ್ಟೆ ಇದ್ದರೆ ಒಳ್ಳೆಯದು. ಈ ನಿಟ್ಟಿನಲ್ಲಿ ಸರ್ಕಾರವು ಕೋಳಿ ಮೊಟ್ಟೆ ಮತ್ತು ಮಾಂಸ ಮಾರಾಟಗಾರರ ಬೆಂಬಲಕ್ಕೆ ನಿಲ್ಲಲಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ನಗರದಲ್ಲಿ ಶುಕ್ರವಾರ ನಡೆದ ವಿಶ್ವ ಮೊಟ್ಟೆ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಣ್ಣ ವದಂತಿ ಬಂದರೂ ಕೋಳಿ ಮಾರುಕಟ್ಟೆ, ಮೊಟ್ಟೆ ಮಾರುಕಟ್ಟೆ ಕುಸಿದು ಹೋಗುತ್ತದೆ. ಇದರಿಂದ ಕೋಳಿ ಸಾಕಣೆ ಮಾಡುವವರು, ಕೋಳಿ ಮಾಂಸ, ಮೊಟ್ಟೆ ಮಾರಾಟಗಾರರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ.

‘ಸಹಕಾರ ಕುಕ್ಕುಟ ಮಹಾಮಂಡಳಿಯ ಸಮಸ್ಯೆ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ನಡೆಸೋಣ. ಮಹಾಮಂಡಳಿಯನ್ನು ಪುನಶ್ಚೇತನಗೊಳಿಸಲು ಏನು ಮಾಡಬೇಕು ಎಂಬುದರ ಬಗ್ಗೆ ಚಿಂತನೆ ನಡೆಸೋಣ’ ಎಂದರು.

ಎಂಬಿಬಿಎಸ್ ವೈದ್ಯರಿಗಿಂತ ಪಶುವೈದ್ಯರಿಗೆ ಬೇಡಿಕೆ ಹೆಚ್ಚಿದೆ. ಪಶು ವೈದ್ಯಕೀಯ ಕಾಲೇಜುಗಳನ್ನು ಹೆಚ್ಚು ಮಾಡಬೇಕಾದ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ಅಧ್ಯಕ್ಷ ಡಿ.ಕೆ. ಕಾಂತರಾಜು ಮಾತನಾಡಿ, ‘ರಾಜ್ಯದಲ್ಲಿ ದಿನಕ್ಕೆ 2 ಕೋಟಿ ಮೊಟ್ಟೆ ಉತ್ಪಾದನೆಯಾಗುತ್ತದೆ. ಅಂಗನವಾಡಿಗಳಿಗೆ ಮಹಾಮಂಡಳಿಯೇ ಮೊಟ್ಟೆ ಪೂರೈಕೆ ಮಾಡುತ್ತಿದೆ. ಮೊಟ್ಟೆ ವಿತರಣೆಗೆ ಸರ್ಕಾರ ನೀಡುವ ₹ 2.5 ಕೋಟಿ ಕೇವಲ ವೇತನಕ್ಕೆ ಸರಿಯಾಗುತ್ತಿದೆ. ಕುಕ್ಕುಟ ಮಹಾಮಂಡಳಿಯನ್ನು ಕರ್ನಾಟಕದ ಹಾಲು ಒಕ್ಕೂಟದ ತರಹ ಬೆಳೆಸಬೇಕು. ಮಹಾಮಂಡಳಿಯನ್ನು ಪುನಶ್ಚೇತನಗೊಳಿಸಲು ಮತ್ತು ಕೋಳಿ ಸಾಕಣೆ ಮಾಡುವ ರೈತರನ್ನು ಪ್ರೋತ್ಸಾಹಿಸಲು ಸರ್ಕಾರ ಯೋಜನೆ ರೂಪಿಸಬೇಕು’ ಎಂದು ಆಗ್ರಹಿಸಿದರು.

ವಿಧಾನ ಪರಿಷತ್ ಸದಸ್ಯ ಸಿ.ನಾರಾಯಣ ಸ್ವಾಮಿ, ಪಶುವೈದ್ಯಕೀಯ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವ ವಿದ್ಯಾಲಯದ ಕುಲಪತಿ ಕೆ.ಸಿ ವೀರಣ್ಣ, ಮಹಾಮಂಡಳಿ ಉಪಾಧ್ಯಕ್ಷ ಜಿ.ಟಿ.ಹರೀಶ್, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಆಯುಕ್ತ ಪ್ರಭುಲಿಂಗ ಕವಳಿಕಟ್ಟಿ, ನಿರ್ದೇಶಕ ಮಂಜುನಾಥ ಎಸ್. ಪಾಳೇಗಾರ್ ಇದ್ದರು.




ಕೋಳಿ ಮತ್ತು ಮೊಟ್ಟೆ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎಸ್. ಚಿಕ್ಕಮಾದು, ಡಿ. ಕೇಶವಗೌಡ (ಹಾಸನ), ಕೆ.ಸಿ. ಜಯರಾಂ (ಹಾಸನ), ಸಿ.ಎಸ್. ಶಿವಮೂರ್ತಿಯಪ್ಪ (ದಾವಣಗೆರೆ), ಎಚ್.ಎಸ್. ನಾಗೇಶ್ ಹಲಸೂರು (ಚನ್ನಪಟ್ಟಣ) ಅವರನ್ನು ವಿಶ್ವ ಮೊಟ್ಟೆ ದಿನಾಚರಣೆಯಲ್ಲಿ ಸನ್ಮಾನಿಸಲಾಯಿತು. –ಪ್ರಜಾವಾಣಿ ಚಿತ್ರ

### ‘ಕೋಳಿ ಫಾರ್ಮ್ ನನ್ನ ಮೊದಲ ಉದ್ಯಮ’

‘ನನ್ನ ಬದುಕಿನ ಮೊದಲ ವ್ಯವಹಾರವೇ ಕೋಳಿ ಫಾರ್ಮ್ ಆಗಿತ್ತು. ಪಿಯುಸಿ ಓದುತ್ತಿದ್ದಾಗ ಇಲ್ಲೇ ಕೋಳಿ ಫಾರ್ಮ್ ಬಗ್ಗೆ ತರಬೇತಿ ಪಡೆದಿದ್ದೆ. ಸುಂಕದ ಕಟ್ಟೆಯಲ್ಲಿ ಜಮೀನು ಇತ್ತು. ಮುಂದೆ ಬ್ಯಾಂಕ್‌ನಿಂದ ಸಾಲ ಪಡೆದು ಕೋಳಿ ಫಾರ್ಮ್ ಮಾಡುವ ಮೂಲಕ ವ್ಯವಹಾರ ಕ್ಷೇತ್ರಕ್ಕೆ ಕಾಲಿರಿಸಿದೆ. ಆದರೆ, ನಷ್ಟವಾಗಿ ಕೋಳಿ ಫಾರ್ಮ್ ಮುಚ್ಚಿದೆ’ ಎಂದು ಡಿ.ಕೆ. ಶಿವಕುಮಾರ್ ನೆನಪು ಮಾಡಿಕೊಂಡರು.


### ಕೇಂದ್ರಿಯ ಆಯುರ್ವೇದಕ ವಿಜ್ಞಾನಗಳ ಸಂಶೋಧನಾ ಪರಿಷತ್

ಆಯುಷ್ ಸಚಿವಾಲಯ, ಭಾರತ ಸರ್ಕಾರ
ಜವಾಹರ ಲಾಲ್ ನೆಹರು ಭಾರತೀಯ ಚಿಕಿತ್ಸಾ ಮತ್ತು ಹೋಮಿಯೋಪತಿ ಸಂಶೋಧನಾ ಭವನ, 61–65, ಇನ್‌ಸ್ಟಿಟ್ಯೂಷನಲ್ ಏರಿಯಾ, ‘ಡಿ’ ಬ್ಲಾಕ್ ಎದುರು, ಜನಕಪುರಿ, ನವದೆಹಲಿ–110058
ಗ್ರಾಮ್: “ಆಯುಷ್” ಫ್ಯಾಕ್ಸ್: 28520748
ಇಪಿಬಿಎಕ್ಸ್: 28525852, 28520501, 28522524, 28525831, 28525862, 28525883, 28525897.

**ಗವಾಕ್ಷಿ ಜಾಹೀರಾತು ಸಂ. 06/2023**

ಕೇಂದ್ರಿಯ ಆಯುರ್ವೇದಕ ವಿಜ್ಞಾನಗಳ ಸಂಶೋಧನಾ ಪರಿಷತ್ ಇಲ್ಲಿನ ಒಂದು ಅಕೌಂಟಂಟ್ ಹುದ್ದೆಯನ್ನು ವೇತನ ಹಂತ–7 ರಲ್ಲಿ ಡೆಪ್ಯೂಟೇಶನ್ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳಲು, ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ ತಲುಪುವಂತೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇನ್ನಿತರ ವಿವರಗಳು ಮತ್ತು ನಿಗದಿತ ಅರ್ಜಿ ನಮೂನೆಯನ್ನು ಪರಿಷತ್ತಿನ www.ccras.nic.in ವೆಬ್‌ಸೈಟ್‌ನಿಂದ ಡೌನಲೋಡ್ ಮಾಡಿಕೊಳ್ಳಬಹುದು.

ಆಡಳಿತಾಧಿಕಾರಿ (ನೇಮಕಾತಿ)
ಕೇಂಆವಿಸಂಪ, ನವದೆಹಲಿ

CBC 17216/12/0025/2324


## ದಸರಾ: 20ರಿಂದ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದಸರಾ ಪ್ರಯುಕ್ತ ಅ.20ರಿಂದ 24ರವರೆಗೆ ಮೈಸೂರು–ಬೆಂಗಳೂರು ಮತ್ತು ಅ.24ರಂದು ಮೈಸೂರು–ಚಾಮರಾಜನಗರ ನಡುವೆ ವಿಶೇಷ ರೈಲು ಸಂಚಾರ ನಡೆಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಅ.20ರಂದು ರಾತ್ರಿ 11.15ಕ್ಕೆ ಮೈಸೂರಿನಿಂದ ವಿಶೇಷ ರೈಲು ಹೊರಡಲಿದೆ. ರಾತ್ರಿ 2.30ಕ್ಕೆ ಬೆಂಗಳೂರು ತಲುಪಲಿದೆ. ಬೆಳಿಗ್ಗೆ 3ಕ್ಕೆ ಬೆಂಗಳೂರಿನಿಂದ ವಾಪಸ್ ಹೊರಡಲಿದೆ. ಬೆಳಿಗ್ಗೆ 6.15ಕ್ಕೆ ಮೈಸೂರು ತಲುಪಲಿದೆ. ಅ.24ರವರೆಗೆ ಪ್ರತಿದಿನ ಈ ಟ್ರಿಪ್‌ಗಳು ಇರಲಿವೆ.

## ಸಹಾಯಕ ಪ್ರಾಧ್ಯಾಪಕರ ನೇಮಕಾತಿ: ಆದೇಶ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ತ್ವರಿತವಾಗಿ ನೇಮಕಾತಿ ಆದೇಶ ನೀಡಲು ಕ್ರಮಕೈಗೊಳ್ಳುವಂತೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕೆಇಎ ಸರ್ಕಾರಕ್ಕೆ ಸಲ್ಲಿಸಿದೆ. ನೇಮಕಾತಿಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆಯ ಹಂತದಲ್ಲಿವೆ. ಬೇರೆ ಯಾವ ಪ್ರಕರಣಗಳೂ ಬಾಕಿ ಉಳಿದಿಲ್ಲ. ಹಾಗಾಗಿ, ನಿಯಮಾನುಸಾರ ನೇಮಕಾತಿ ಆದೇಶ ಹೊರಡಿಸುವಂತೆ ಸಲಹೆ ನೀಡಿದ್ದಾರೆ.

## ಎಚ್.ಕುಸುಮಾ ಕೆಪಿಸಿಸಿ ವಕ್ತಾರೆ

ಪ್ರಜಾವಾಣಿ ವಾರ್ತೆ



**ರಾಜರಾಜೇಶ್ವರಿನಗರ:** ಎಚ್.ಕುಸುಮಾ ಅವರನ್ನು ಕೆಪಿಸಿಸಿ ವಕ್ತಾರ ರನ್ನಾಗಿ ನೇಮಿಸಲಾಗಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕುಸುಮಾ ಅವರು ರಾಜರಾಜೇಶ್ವರಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು.

## ನಾಲ್ಕು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇದೇ 16 ಹಾಗೂ 17ರಂದು 2 ದಿನ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.







ಪೀಳಿಗೆಯಿಂದ ಬಂದಿರುವ ಕುಸುರಿ ಕಲೆಗಳಿಂದ ಮತ್ತು ಅನಾದಿಯಿಂದ ಸಾಗಿಬಂದಿರುವ ಸಮೃದ್ಧ ಆಭರಣಗಳಿಂದ ಪ್ರೇರಿತವಾದ, ಧರೋಹರ್ ನಮ್ಮ ಶ್ರೀಮಂತ ಪರಂಪರೆಯ ಆಳದೆಡೆಗೆ ಮ್ಯಾಜಿಕಲ್ ಪಯಣ.
ಈ ದೀಪಾವಳಿಗೆ, ಬನ್ನಿ, ನಿಮಗಾಗಿ ಸಂಪ್ರಾದಾಯಿಕವಾಗಿ ಸಿದ್ಧಪಡಿಸಿರುವ ಆಕರ್ಷಕ ಪರಂಪರೆಯ ಆಭರಣಗಳ ಖಜಾನೆಯ ಮೋಡಿಗೆ ಒಳಗಾಗಿ-ಇದು ಪರಂಪರೆಯ ಪಾಲಕರಾಗಿರುವ ನಿಮಗಾಗಿಯೇ.

ನಿಮ್ಮ ಮನಮೋಹಿಸಬಲ್ಲ ಕುಸುರಿಗಳಿಂದ ಅಲಂಕೃತರಾಗಿ. ಪರಂಪರೆಯ ಅನುಭಾವಕ್ಕೆ ಮನಸೋತು ಪುಳಕಗೊಳ್ಳಿ.

TANISHQ
presents
# Dharohar
*Modern Heirlooms*

**20%** ವರೆಗೆ ಕಡಿತ*
ಚಿನ್ನದ ಆಭರಣಗಳ ತಯಾರಿಕಾ ಶುಲ್ಕಗಳ ಮತ್ತು ವಜ್ರಾಭರಣದ ಮೌಲ್ಯದ ಮೇಲೆ

ಯಾವುದೇ ಜ್ಯುವೆಲ್ಲರ್‌ನಿಂದ ಖರೀದಿಸಿದ ಚಿನ್ನದ ಆಭರಣಗಳ ಮೇಲೆ
**100%***
ವಿನಿಮಯ ಮೌಲ್ಯವನ್ನು ಪಡೆಯಿರಿ



**To locate your nearest store and know more on 6366920017. | *Conditions apply, For T&C visit our website | Offer starts 15th Oct**

HDFC BANK
FESTIVE TREATS
₹5000 Instant Discount on HDFC Bank Credit Cards.
Validity: 14th to 19th October 2023, Valid on Min. swipe of ₹1,00,000 on Diamond Jewelery & Solitaire Jewelery.

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at** Whitefield. Tel:080-22633335; KR Puram: Subhash Nagar, Batarahalli. Tel: 9611730802, RR Nagar-BEML Layout. Tel: 080-47574666, **Relocated to new premises at** Malleswaram-Sampige Road. Tel: 9164326100 & Yelahanka: Opp. to The Galleria Mall. Tel: 080-43364336; **Mysore:** No.2927, Bangalore-Nilgiri Road, Near Suburban Bus Stand. Tel: 821-4280074; **Tumkur:** ADR Complex. Tel: 816-4041666; Relocated to No.3, (Old No.18), 9th Main, Diagonally Opposite to Pai Viceroy's hotel, Jayanagar 3rd Block, Jayanagar. Tel: 9886333665

ಸಸ್ಯ ಪ್ರಭೇದಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳು, ಪರಿಸರ ಪ್ರೇಮಿಗಳಿಗೆ ವೇದಿಕೆ

# ಲಾಲ್‌ಬಾಗ್‌ನಲ್ಲಿ 'ಮಿನಿ ಪಶ್ಚಿಮಘಟ್ಟ'

● ಖಲೀಲಅಹ್ಮದ ಶೇಖ



ಲಾಲ್‌ಬಾಗ್‌ನಲ್ಲಿ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟದ ವಿವಿಧ ಸಸ್ಯ ಪ್ರಭೇದಗಳ 450ಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ —ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

**ಬೆಂಗಳೂರು:** ವಿವಿಧ ಬಗೆಯ ಸಸ್ಯಗಳ ತಾಣವಾಗಿರುವ ಲಾಲ್‌ಬಾಗ್‌ನಲ್ಲಿ ಕೆಲವೇ ವರ್ಷಗಳಲ್ಲಿ ಪಶ್ಚಿಮ ಘಟ್ಟದ ಮಾದರಿಯೊಂದು ತಲೆ ಎತ್ತಲಿದೆ.

ಲಾಲ್‌ಬಾಗ್‌ನ ಬಂಡೆ ಹಿಂಭಾಗದಲ್ಲಿರುವ ಆರು ಎಕರೆ ಪ್ರದೇಶದಲ್ಲಿ ಪಶ್ಚಿಮ ಘಟ್ಟದ ಕಿರು ಮಾದರಿ ಸೃಷ್ಟಿಯಾಗುತ್ತಿದೆ. ತೋಟಗಾರಿಕೆ ಇಲಾಖೆ ಸಿಬ್ಬಂದಿ ಈಗಾಗಲೇ ಪಶ್ಚಿಮ ಘಟ್ಟದ 132 ಸಸ್ಯ ಪ್ರಭೇದಗಳ 450ಕ್ಕೂ ಹೆಚ್ಚು ಸಸಿಗಳನ್ನು ಅಲ್ಲಿ ನೆಟ್ಟಿದ್ದಾರೆ. ಮುಂದಿನ ದಿನಗಳಲ್ಲಿ ಲಾಲ್‌ಬಾಗ್‌ಗೆ ಭೇಟಿ ನೀಡುವವರಿಗೆ, ಪಶ್ಚಿಮ ಘಟ್ಟದ ಅಪರೂಪದ ಸಸ್ಯ ವೈವಿಧ್ಯವನ್ನು ಕಣ್ತುಂಬಿಕೊಳ್ಳುವ ಅವಕಾಶ ಸಿಗಲಿದೆ. ಮಾತ್ರವಲ್ಲ, ವಿದ್ಯಾರ್ಥಿಗಳಿಗೆ, ಪರಿಸರಪ್ರಿಯರಿಗೆ, ಸಸ್ಯಶಾಸ್ತ್ರಜ್ಞರಿಗೆ ಇದೊಂದು ಅಧ್ಯಯನದ ತಾಣವೂ ಆಗಲಿದೆ.

ಪ್ರಜಾವಾಣಿ ವಿಶೇಷ

ಲಾಲ್‌ಬಾಗ್‌ನಲ್ಲಿ ಆಗಸ್ಟ್ 1ರಂದು ಒಂದು ಪ್ರಭೇದದ ಮೂರು ಸಸಿಗಳನ್ನು ನೆಡಲಾಗಿದ್ದು ಈಗ ಅವು 4 ರಿಂದ 5 ಅಡಿ ಎತ್ತರಕ್ಕೆ ಬೆಳೆದಿವೆ.

**ಅಳಿವಿನಂಚಿನ ಪ್ರಭೇದಗಳು:** 'ರಾಜ್ಯದ ಎಂಟು ಜಿಲ್ಲೆಗಳಲ್ಲಿ 596 ಕಿ.ಮೀ. ಉದ್ದಕ್ಕೆ ವ್ಯಾಪಿಸಿರುವ ಪಶ್ಚಿಮ ಘಟ್ಟದ ಒಡಲಲ್ಲಿ 5,900 ಸಸ್ಯ ಪ್ರಭೇಧಗಳಿವೆ. ಇವುಗಳಲ್ಲಿ ಅಳಿವಿನಂಚಿನಲ್ಲಿರುವ 567 ಸಸ್ಯ ಪ್ರಭೇದಗಳನ್ನು ಗುರುತಿಸಲಾಗಿದೆ. ಅಂಥ ಸಸ್ಯಗಳನ್ನು ಲಾಲ್‌ಬಾಗ್‌ನಲ್ಲಿ ಬೆಳೆಸುವ ಮೂಲಕ ಅವುಗಳ ಸಂರಕ್ಷಣೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ತಿಳಿಸಿದರು.

'ಎರಡು ವರ್ಷಗಳಿಂದ ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿರುವ ಉಡುಪಿ, ಶಿರಸಿ, ಸಿದ್ದಾಪುರ, ಬಿಳಿಗಿರಿರಂಗನ ಬೆಟ್ಟದ ಭಾಗಗಳ ಸಸ್ಯವಿಜ್ಞಾನಿಗಳು, ಅರಣ್ಯ ಅನ್ವೇಷಕರು, ಸಂಶೋಧನಾ ಕೇಂದ್ರ ಮತ್ತು ನರ್ಸರಿಯವರನ್ನು ಸಂಪರ್ಕಿಸಿ 132 ಪ್ರಭೇದದ ಸಸ್ಯಗಳನ್ನು ಸಂಗ್ರಹಿಸಲಾಗಿದೆ. ಇವುಗಳ ಪೈಕಿ 39 ಪ್ರಭೇದಗಳು ಅಳಿವಿನಂಚಿನಲ್ಲಿವೆ' ಎಂದು ಜೀವವೈವಿಧ್ಯ ಶಾಸ್ತ್ರಜ್ಞ ಕೆ.ಆರ್. ಕೇಶವಮೂರ್ತಿ ಮಾಹಿತಿ ನೀಡಿದರು.

**ಕೃತಕ ವಾತಾವರಣ ಸೃಷ್ಟಿ:** ಪಶ್ಚಿಮ ಘಟ್ಟದ ಅರಣ್ಯ ಮಾದರಿ ಸೃಷ್ಟಿಗಾಗಿ ಲಾಲ್‌ಬಾಗ್ ಉದ್ಯಾನದಲ್ಲಿ ಜೀವವೈವಿಧ್ಯ ಶಾಸ್ತ್ರಜ್ಞ ಕೆ.ಆರ್. ಕೇಶವಮೂರ್ತಿ ಅವರ ಮಾರ್ಗದರ್ಶನದಲ್ಲಿ ಕೃತಕವಾಗಿ ಪಶ್ಚಿಮಘಟ್ಟದ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ಸಸ್ಯಗಳ ಬೆಳವಣಿಗೆಗೆ ಅಗತ್ಯವಿರುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕ ಕೊಳವೆಬಾವಿ ಕೊರೆಸಲಾಗಿದೆ. ಜೊತೆಗೆ,'ರೇನ್‌ಗನ್' ಅಳವಡಿಸಲಾಗಿದೆ. ಕೊಳವೆಬಾವಿ ನೀರನ್ನು ಬಳಸಿಕೊಂಡು ರೇನ್ ಗನ್‌ಗಳ ಮೂಲಕ ಸಸ್ಯಗಳಿಗೆ ದಿನವಿಡೀ ಸಣ್ಣ ಪ್ರಮಾಣದಲ್ಲಿ ನೀರುಣಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಕುಸುಮಾ ವಿವರಿಸಿದರು.

'ಪಶ್ಚಿಮ ಘಟ್ಟದ ಮಾದರಿಯಿರುವ ಸ್ಥಳ ಸಂರಕ್ಷಿತ ಪ್ರದೇಶವಾಗಿದೆ. ಇಲ್ಲಿ ಸಸ್ಯಗಳ ಜೊತೆ ಜತೆಗೆ ಪ್ರಾಣಿ ಹಾಗೂ ಪಕ್ಷಿಗಳ ಸಂಕುಲವೂ ಹೆಚ್ಚಾಗಲಿದ್ದು, ಜೀವವೈವಿಧ್ಯವೂ ವೃದ್ಧಿಯಾಗಲಿದೆ' ಎಂಬ ವಿಶ್ವಾಸ ವ್ಯಕ್ತಪಡಿಸಿದರು.

**ಪಶ್ಚಿಮಘಟ್ಟಗಳ ಸಸ್ಯಗಳು ಸೇರಿದಂತೆ ಅಳಿವಿನಂಚಿನ ಸಸ್ಯ ಪ್ರಭೇದಗಳನ್ನ ಲಾಲ್‌ಬಾಗ್‌ನಲ್ಲಿ ನೆಟ್ಟು ಸಂರಕ್ಷಣೆ ಮಾಡುವುದರ ಮೂಲಕ ಅದನ್ನು ಬೇರೆಡೆಗೆ ವಿಸ್ತರಿಸಲಾಗುವುದು**
**ಕುಸುಮಾ,** ಲಾಲ್‌ಬಾಗ್ ಉಪನಿರ್ದೇಶಕಿ

### ಅಂಕಿ–ಅಂಶ

- **240** ಎಕರೆ — ಲಾಲ್‌ಬಾಗ್ ಉದ್ಯಾನದ ವಿಸ್ತೀರ್ಣ
- **132** — ಲಾಲ್‌ಬಾಗ್‌ನಲ್ಲಿ ನೆಟ್ಟಿರುವ ಪಶ್ಚಿಮಘಟ್ಟದ ಸಸ್ಯಪ್ರಭೇದಗಳು
- **450** — ನೆಡಲಾಗಿರುವ ಸಸಿಗಳು
- **₹12** ಲಕ್ಷ — ಒಟ್ಟು ಯೋಜನಾ ವೆಚ್ಚ
- **2,350** — ಲಾಲ್‌ಬಾಗ್‌ನಲ್ಲಿರುವ ವಿವಿಧ ದೇಶ–ವಿದೇಶಗಳ ಸಸ್ಯಪ್ರಭೇದಗಳು
- **6** ಸಾವಿರ — ಲಾಲ್‌ಬಾಗ್‌ನಲ್ಲಿರುವ ಒಟ್ಟು ಮರಗಳ ಸಂಖ್ಯೆ

### ಅಳಿವಿನಂಚಿನ ಪ್ರಭೇದಗಳು (ಆರ್.ಇ.ಟಿ)

- ಗುರಿಗೆ ಮರ (ಬ್ರೈಡೀಲಿಯ ರೆಟ್ಯೂಸ)
- ಹೆಬ್ಬಿದಿರು (ಬ್ಯಾಮ್ಬೂಸಾ ಅರುಂಡಿನೇಸಿಯ)
- ಮುಳ್ಳು ಮುತ್ತಲ (ಅಫನಾಮಿಕ್ಸಿಸ್ ಪಾಲಿಸ್ಟಾಕ್ಯ)
- ಒಳ್ಳೆಕುಡಿ (ಮೆಮೆಸಿಲಾನ್ ಎಡ್ಯೂಲ್)
- ಗೌರಿ ಮರ (ಮೊನೋನ್ ಫ್ರಾಗ್ರನ್ಸ್)
- ತಗಸೆ ಮಡ್ಡಿ (ಮೊರಿಂಡ ಸಿಟ್ರಿಫೋಲಿಯ)
- ಉಲುಗೇರು (ನೋತೋಪೀಜಿಯ ಬೆಡ್ಡೋಮಿಯೈ)
- ಹೆಜ್ಜೆವರಕಲು (ಒಲಿಯಾ ಡೈಯಾಯ್ಕ)
- ಪುತ್ರಂಜೀವ (ಪುತ್ರಂಜೀವ ರಾಕ್ಸಬುರ್ಗಿ)
- ಸಾಲು ದೂಪದ ಮರ (ವಟೇರಿಯ ಇಂಡಿಕ)
- ಜಿಮ್ಮಿ ಮರ (ಕ್ರಾನ್ತೋರ್ಥ್ಯೆಲಮ್ ರೆಟ್ಸ)




**ಶ್ರಮಿಕ ಜೀವನ** ನಗರದ ಓಕಳೀಪುರದ ಬಳಿ ರೈಲ್ವೆ ಹಳಿ ಕೆಳಗೆ ಇರುವ ಹಳೆಯ ರೈಲ್ವೆ ಆರ್.ಸಿ.ಸಿ ಸ್ಲೀಪರ್‌ಗಳನ್ನು ತೆಗೆದು ಹೊಸ ರೈಲ್ವೆ ಆರ್.ಸಿ.ಸಿ ಸ್ಲೀಪರ್‌ಗಳನ್ನು ಅಳವಡಿಸುವ ಕೆಲಸ ಮಾಡುತ್ತಿರುವ ಕಾರ್ಮಿಕರು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

## ಕೆಐಎಡಿಬಿಗೆ ₹4,248 ಕೋಟಿ ಬಾಕಿ

### ನಾಲ್ಕು ತಿಂಗಳಲ್ಲಿ ಬಾಕಿ ವಸೂಲಿ ಮಾಡಿ: ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೈಗಾರಿಕೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ನಿವೇಶನ ಪಡೆದಿರುವ ಉದ್ಯಮಿದಾರರು ₹4,248 ಕೋಟಿ ಬಾಕಿ ಉಳಿಸಿಕೊಂಡಿದ್ದು, ಮುಂದಿನ ನಾಲ್ಕು ತಿಂಗಳಿನಲ್ಲಿ ಅವರಿಂದ ವಸೂಲು ಮಾಡಬೇಕು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಶುಕ್ರವಾರ ಕೆಐಎಡಿಬಿಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ವಸೂಲು ಮಾಡಲು ವಿಫಲರಾದರೆ ಮಂಡಳಿಯ ಕಾರ್ಯದರ್ಶಿ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದೂ ಎಚ್ಚರಿಸಿದರು.

ಕೆಐಎಡಿಬಿಯಿಂದ ಹಂಚಿಕೆ ಮಾಡಲಾದ ನಿವೇಶನಗಳನ್ನು ಎಷ್ಟೋ ಜನ ಹಾಗೆಯೇ ಇಟ್ಟುಕೊಂಡಿದ್ದಾರೆ. ಉದ್ಯಮ ಸ್ಥಾಪಿಸಿ ತಮ್ಮ ಹೆಸರಿಗೆ ನಿವೇಶನ ಮಾಡಿಸಿಕೊಳ್ಳುವ ಕೊನೆ ಹಂತದಲ್ಲಿ ಇರುವವರು ₹2,100 ಕೋಟಿ ಬಾಕಿ ಉಳಿಸಿಕೊಂಡಿದ್ದಾರೆ. ಇಂಥವರ ವಿರುದ್ಧ ನಾಲ್ಕು ತಿಂಗಳಲ್ಲಿ ಕಠಿಣ ಕ್ರಮ ಜರುಗಿಸಿ ಬಾಕಿ ಹಣ ವಸೂಲಿ ಮಾಡಲೇಬೇಕು. ಕಾನೂನು ಕ್ರಮ ಕೈಗೊಳ್ಳುವ ಜತೆಗೆ ನಿವೇಶನ ಮಂಜೂರಾತಿಯನ್ನೇ ರದ್ದುಪಡಿಸಬೇಕಾದ ಕಠಿಣ ನಿರ್ಧಾರ ಕೈಗೊಳ್ಳಬೇಕು ಎಂದು ಅವರು ವಿವರಿಸಿದರು.

ಕೆಐಎಡಿಬಿ ಆರಂಭದಿಂದಲೇ ಇಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿತ್ತು. ಆಗ ಈ ಪರಿಸ್ಥಿತಿ ಸೃಷ್ಟಿಯಾಗುತ್ತಿರಲಿಲ್ಲ ಎಂದರು.

ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕೆಐಎಡಿಬಿ ಸಿಇಒ ಮಹೇಶ್, ಸಚಿವರ ತಾಂತ್ರಿಕ ಸಲಹೆಗಾರ ಅರವಿಂದ ಗಲಗಲಿ ಸಭೆಯಲ್ಲಿ ಉಪಸ್ಥಿತರಿದ್ದರು.

**ಸಾಮಾನ್ಯ ವರ್ಗದವರಿಂದ ₹2,825 ಕೋಟಿ ಬಾಕಿ:** ಸಾಮಾನ್ಯ ವರ್ಗದವರಿಗೆ ಮಂಜೂರು ಮಾಡಿರುವ 5,932 ಕೈಗಾರಿಕಾ ಘಟಕಗಳಿಂದ 2,825 ಕೋಟಿ ಬಾಕಿ ಬರಬೇಕಿದೆ ಎಂದು ಪಾಟೀಲರು ಹೇಳಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಮಂಜೂರು ಮಾಡಲಾದ ನಿವೇಶನಗಳಿಂದ 741 ಕೋಟಿ ಬಾಕಿ ಉಳಿದಿದೆ. ಇದರ ಜತೆಗೆ ಈ ಸಮುದಾಯದವರಿಗೆ ನೀಡುವ ಸಹಾಯಧನದ ಬಾಬ್ತಿನಲ್ಲಿ 680 ಕೋಟಿ ಇದೆ ಎಂದರು.

### ಸುದ್ದಿ 2 ನಿಮಿಷ

## 'ಸಿ.ಎಂ, ಡಿಸಿಎಂ ನೈತಿಕ ಹೊಣೆ ಹೊರಲಿ: ಬಿಜೆಪಿ

**ಬೆಂಗಳೂರು:** ಗುತ್ತಿಗೆದಾರರಿಗೆ ಸರ್ಕಾರ ಬಿಡುಗಡೆ ಮಾಡಿರುವ ₹650 ಕೋಟಿ ಹಣದಲ್ಲಿ ಬಂದಿರುವ ಕಮಿಷನ್ ಹಣವೇ ₹42 ಕೋಟಿ. ಅದು ಆದಾಯ ತೆರಿಗೆ ಇಲಾಖೆ ದಾಳಿ ವೇಳೆ ಸಿಕ್ಕಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಆರೋಪಿಸಿದರು.

ಈ ಹಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಈ ಹಣ, ಅದರ ಹಿಂದಿನ ಉದ್ದೇಶದ ಕುರಿತು ಸಂಪೂರ್ಣ ತನಿಖೆ ನಡೆಸಬೇಕು ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಇದು ಕಾಂಗ್ರೆಸ್‌ನ ಹಣವೆನ್ನಲು ಬಿಜೆಪಿಯವರ ಬಳಿ ಏನು ಸಾಕ್ಷ್ಯವಿದೆ ಎಂದು ಸಚಿವ ಎಂ.ಬಿ.ಪಾಟೀಲರು ಪ್ರಶ್ನೆ ಮಾಡಿದ್ದಾರೆ, ಗುತ್ತಿಗೆದಾರರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿ ಒಪ್ಪಂದ ಆದ ಬಳಿಕವೇ ₹650 ಕೋಟಿ ಬಿಡುಗಡೆಯಾಗಿದೆ' ಎಂದು ಅವರು ಹೇಳಿದರು.

'ಈ ಹಣವನ್ನು ತೆಲಂಗಾಣ ಚುನಾವಣೆಗೋಸ್ಕರವೇ ಸಂಗ್ರಹಿಸಿದ್ದು ಎಂಬ ಮಾತು ರಾಜಕೀಯ ವಲಯದಲ್ಲಿದೆ ಎಂದ ಅವರು, 'ಇದು ನಮ್ಮ ಹಣವಲ್ಲ ಎಂದು ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಇದು ನಿಮ್ಮದೇ ಹಣ ಎಂದು ಬಿಜೆಪಿ ಹೇಳುತ್ತದೆ' ಎಂದು ರವಿಕುಮಾರ್ ಹೇಳಿದರು.

## ಸ್ವಾಭಿಮಾನಿ ಹೋರಾಟಕ್ಕೆ ಚನ್ನಮ್ಮ, ಟಿಪ್ಪು ಸ್ಫೂರ್ತಿ:ಸಿ.ಎಂ



**ಬೆಂಗಳೂರು:** ಸ್ವಾಭಿಮಾನಿ ಹೋರಾಟಕ್ಕೆ ಕಿತ್ತೂರು ರಾಣಿ ಚನ್ನಮ್ಮ, ಟಿಪ್ಪು ಸುಲ್ತಾನ್ ಸ್ಫೂರ್ತಿಯಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಳಗಾವಿ ಜಿಲ್ಲಾಡಳಿತ ಆಯೋಜಿಸಿದ್ದ ಚನ್ನಮ್ಮನ ಕಿತ್ತೂರು ಉತ್ಸವದ ಜ್ಯೋತಿ ಯಾತ್ರೆಗೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಕಿತ್ತೂರು ಚನ್ನಮ್ಮ ತನ್ನ ಸಣ್ಣ ಸೈನ್ಯದಿಂದಲೇ ಬ್ರಿಟಿಷರ ಬೃಹತ್ ಸೈನ್ಯಕ್ಕೆ ಸಡ್ಡು ಹೊಡೆದಿದ್ದರು. ಅವರ ಧೈರ್ಯ ಮತ್ತು ಆದರ್ಶ ಇಂದಿನ ಯುವ ಸಮೂಹ ತಲುಪಬೇಕು. ಅದಕ್ಕಾಗಿಯೇ ಮುಖ್ಯಮಂತ್ರಿಯಾದ ಮೊದಲ ಅವಧಿಯಲ್ಲೇ ಕಿತ್ತೂರು ಉತ್ಸವ ಹಾಗೂ ಜಯಂತ್ಯುತ್ಸವ ಆರಂಭಿಸಿದೆ' ಎಂದರು. ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ, ಧಾರವಾಡ ಗ್ರಾಮೀಣ ಶಾಸಕ ವಿನಯ್ ಕುಲಕರ್ಣಿ, ಬೈಲಹೊಂಗಲ ಶಾಸಕ ಮಹಂತೇಶ ಕೌಜಲಗಿ ಉಪಸ್ಥಿತರಿದ್ದರು.

### ಸಂಕ್ಷಿಪ್ತ ಸುದ್ದಿ

## ಪಿಎಂ ವಿಶ್ವಕರ್ಮ: 3 ದಿನಗಳ ಉಚಿತ ನೋಂದಣಿ

**ನೆಲಮಂಗಲ:** ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು ಜನಸಾಮಾನ್ಯರ ಮನೆಬಾಗಿಲಿಗೆ ತಲುಪಿಸಲು ಸಿಎಸ್‌ಸಿ ಕೇಂದ್ರಗಳು ಶ್ರಮಿಸುತ್ತಿವೆ ಎಂದು ಸಾಮಾನ್ಯ ಸೇವಾ ಕೇಂದ್ರ(ಸಿಎಸ್‌ಇ) ರಾಜ್ಯ ವ್ಯವಸ್ಥಾಪಕ ಶೈಲೇಂದರ್ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಿಎಸ್‌ಸಿ ವಿಎಲ್‌ಇ (ವಿಲೇಜ್ ಲೆವೆಲ್ ಎಂಟರ್‌ಪ್ರನರ್) ಟ್ರಸ್ಟ್ ಉದ್ಘಾಟನಾ ಸಮಾರಂಭದ ಅಂಗವಾಗಿ ಮೂರು ದಿನಗಳು ಆಯೋಜಿಸಿರುವ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಹಾಗೂ ಇ-ಶ್ರಮ್ ಯೋಜನೆಯ ಉಚಿತ ನೊಂದಣಿ ಕಾರ್ಯವನ್ನು ಉದ್ಘಾಟಿಸಿ ಮಾತನಾಡಿದರು.

ದೇಶದಾದ್ಯಂತ ಸುಮಾರು 4 ಲಕ್ಷಕ್ಕೂ ಹೆಚ್ಚು ಸಿಎಸ್‌ಇ ಕೇಂದ್ರಗಳಿವೆ. ಗ್ರಾಮೀಣ ಭಾಗದ ಜನರಿಗೆ ಸರ್ಕಾರಿ ಮತ್ತು ಉದ್ಯಮ ಸೇವೆಗಳನ್ನು ಒದಗಿಸಲು ನೆರವಾಗುತ್ತಿವೆ. ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆಯಡಿ 25ಕ್ಕೂ ಹೆಚ್ಚು ಕುಶಲಕರ್ಮಿ ಸಮುದಾಯಕ್ಕೆ ಉಚಿತ ಕೌಶಲ ತರಬೇತಿ ನೀಡಿ 3 ಲಕ್ಷಕ್ಕೂ ಅಧಿಕ ಸಾಲ ಸೌಲಭ್ಯವನ್ನು ನೀಡಲಾಗುತ್ತದೆ. ದೇಶದಾದ್ಯಂತ ನೋಂದಣಿ ಕಾರ್ಯದಲ್ಲಿ ರಾಜ್ಯ 3ನೇ ಸ್ಥಾನದಲ್ಲಿದೆ. 50 ಸಾವಿರಕ್ಕೂ ಹೆಚ್ಚು ನೋಂದಣಿ ಮಾಡಲಾಗಿದೆ ಎಂದರು.

ತಾಲ್ಲೂಕು ಕಾರ್ಮಿಕ ನಿರೀಕ್ಷಕ ಧನಪಾಲ್ ನಾಯಕ್, ಟ್ರಸ್ಟ್‌ನ ಗೌರವಾಧ್ಯಕ್ಷ ಆರ್.ಉಮಾಶಂಕರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿಎಸ್‌ಸಿ ಜಿಲ್ಲಾ ವ್ಯವಸ್ಥಾಪಕ ಮೃತ್ಯುಂಜಯ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಹನುಮಂತರಾಜು, ಸೌಮ್ಯ, ಶೈಲಜಾ, ರತ್ನಮ್ಮ, ಟ್ರಸ್ಟ್‌ನ ಉಪಾಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ತ್ರಿವಿಕ್ರಂ, ಕಾರ್ಯದರ್ಶಿ ಬಿ.ಎಸ್.ರಾಘವೇಂದ್ರಾಚಾರ್, ಜಂಟಿ ಕಾರ್ಯದರ್ಶಿ ಬಿ.ಎನ್.ಪ್ರದೀಪ್, ಡಿ.ಆರ್.ಅಭಿಷೇಕ್ ಇದ್ದರು.

## 'ಶಿಕ್ಷಣ ಆಯೋಗ: ರಾಜ್ಯದವರೇ ಅಧ್ಯಕ್ಷರಾಗಲಿ'

**ಬೆಂಗಳೂರು:** ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ರಾಜ್ಯ ಸರ್ಕಾರವು ಶಿಕ್ಷಣ ನೀತಿ ಆಯೋಗವನ್ನು ರಚಿಸಿರುವುದು ಸ್ವಾಗತಾರ್ಹ. ಈ ಆಯೋಗಕ್ಕೆ ರಾಜ್ಯದವರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕು ಎಂದು ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ (ಎಐಎಸ್‌ಎಫ್) ಆಗ್ರಹಿಸಿದೆ.

ರಾಜ್ಯ ಶಿಕ್ಷಣ ನೀತಿ ಆಯೋಗಕ್ಕೆ ರಾಜ್ಯದವರೇ ಅಧ್ಯಕ್ಷರಾಗಬೇಕು. ಹೊರ ರಾಜ್ಯದ ಚಿಂತಕರನ್ನು ಸಲಹೆಗಾರರನ್ನಾಗಿ ನೇಮಿಸಿಕೊಳ್ಳಬಹುದು. ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿರುವ ಮಹಿಳೆಯರು, ಶಿಕ್ಷಕರು, ವಿದ್ಯಾರ್ಥಿ ಸಂಘಟನೆಗಳು ಪ್ರತಿನಿಧಿಗಳನ್ನು ಸಮಿತಿಯ ಸದಸ್ಯರನ್ನಾಗಿ ಮಾಡಬೇಕು ಎಂದು ಎಐಎಸ್‌ಎಫ್ ರಾಜ್ಯಾಧ್ಯಕ್ಷ ವೀಣಾನಾಯ್ಕ ಎಲ್. ವೈ., ಕಾರ್ಯದರ್ಶಿ ಲವ ಹಳ್ಳಿಕಾರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

## 'ಪರಿಸರ ಸೂಕ್ಷ್ಮ ವಲಯ: ರೈತರಿಗೆ ತೊಂದರೆ ಇಲ್ಲ'

**ಬೆಂಗಳೂರು:** ರಾಜ್ಯದ ಆರು ವನ್ಯಜೀವಿಧಾಮ ಮತ್ತು ರಾಷ್ಟ್ರೀಯ ಉದ್ಯಾನಗಳ ವ್ಯಾಪ್ತಿಯಲ್ಲಿ ಕನಿಷ್ಠ 1 ಕಿ.ಮೀ ಪರಿಸರ ಸೂಕ್ಷ್ಮ ವಲಯ ಘೋಷಣೆಯಿಂದ ಸ್ಥಳೀಯರಿಗಾಗಲೀ, ರೈತರಿಗಾಗಲೀ ಯಾವುದೇ ತೊಂದರೆ ಆಗುವುದಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಪರಿಸರ ಸೂಕ್ಷ್ಮ ವಲಯ ಘೋಷಣೆ ಸಂಬಂಧ ಸಂಪುಟ ಉಪಸಮಿತಿ ಕೈಗೊಂಡ ನಿರ್ಣಯದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಆತಂಕ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಸಚಿವರು ಈ ಸ್ಪಷ್ಟನೆ ನೀಡಿದ್ದಾರೆ.

ರಾಜ್ಯ ಸರ್ಕಾರ ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಜೀವಿ ಧಾಮಗಳನ್ನು ಪರಿಸರ ಸೂಕ್ಷ್ಮ ವಲಯವೆಂದು ಘೋಷಿಸಬೇಕು ಎಂದು ಸುಪ್ರೀಂಕೋರ್ಟ್ ರಿಟ್ ಅರ್ಜಿ ಸಂಖ್ಯೆ 202/195 ಗೋದವರ್ಮನ್–ಭಾರತ ಸರ್ಕಾರ ಪ್ರಕರಣದಲ್ಲಿ 3.06.2022 ರಂದು ಸ್ಪಷ್ಟ ನಿರ್ದೇಶನ ನೀಡಿದೆ ಎಂದಿದ್ದಾರೆ.

## ಮರ್ಯಾದೆಗೇಡು ಹತ್ಯೆ: ಖಂಡನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇವನಹಳ್ಳಿಯ ಬಿದಲೂರು ಗ್ರಾಮದಲ್ಲಿ ಅನ್ಯ ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ ಕಾರಣಕ್ಕಾಗಿ 20 ವರ್ಷದ ಮಗಳನ್ನು ತಂದೆಯೇ ಕತ್ತು ಸೀಳಿ ಹತ್ಯೆ ಮಾಡಿರುವ ಅಮಾನವೀಯ ಘಟನೆಯನ್ನು ಎಐಎಂಎಸ್‌ಎಸ್ (ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ) ಖಂಡಿಸಿದೆ.

ಕುಟುಂಬದ ಮರ್ಯಾದೆ ಉಳಿಸಿಕೊಳ್ಳುವುದಕ್ಕಾಗಿ ನಡೆಯುವ ಇಂಥ ಹೀನ ಕೃತ್ಯಗಳು ಆತಂಕ ಹುಟ್ಟಿಸುತ್ತವೆ. ಇವು ಸಮಾಜದಲ್ಲಿ ಬೇರೂರಿರುವ ಜಾತಿ-ಪದ್ಧತಿಗೆ, ಪ್ರಜಾತಂತ್ರ ವಿರೋಧಿ ಧೋರಣೆಗೆ ಕನ್ನಡಿ ಹಿಡಿದಂತಿವೆ ಎಂದು ಸಂಘಟನೆ ಅಭಿಪ್ರಾಯಪಟ್ಟಿದೆ.

ಈ ಕೃತ್ಯ ಎಸಗಿದ ಆರೋಪಿಗೆ ಶಿಕ್ಷೆ ನೀಡಬೇಕು. ಜಾತಿ ಪದ್ಧತಿಯನ್ನು ಕೊನೆಗಾಣಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಂಥ ಹೇಯ ಕೃತ್ಯವನ್ನು ಖಂಡಿಸಿ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಾಂಸ್ಕೃತಿಕ ಹೋರಾಟದಲ್ಲಿ ನಾಡಿನ ಜನತೆ ಪಾಲ್ಗೊಳ್ಳಬೇಕು ಎಂದು ಸಂಘಟನೆ ಕರೆ ನೀಡಿದೆ.

## 16, 18ರಂದು ವಿದ್ಯುತ್ ವ್ಯತ್ಯಯ

**ಬೆಂಗಳೂರು:** ನಗರದ ವಿವಿಧ ಪ್ರದೇಶಗಳಲ್ಲಿ ಇದೇ 16 ಹಾಗೂ 18ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

16ರಂದು ಕೆಂಪಮ್ಮ ಲೇಔಟ್, ಹುಳಿಮಾವು, ಬೇಗೂರು ಕ್ಲಾಸಿಕ್ ಲೇಔಟ್, ಅಕ್ಷಯನಗರ, ಯಲೇನಹಳ್ಳಿ, ನ್ಯಾನಪ್ಪನಹಳ್ಳಿ, ವಿಶ್ವಪ್ರಿಯ ಲೇಔಟ್, ಕಾಳೇನ ಅಗ್ರಹಾರ, ಬೇಗೂರು ಅರಕೆರೆ, ಸಾಮ್ರಾಟ್ ಲೇಔಟ್, ಬಿಟಿಎಸ್ ಲೇಔಟ್, ಬಿಟಿಎಂ–4ನೇ ಹಂತ, ಡಿಎಚ್‌ಸಿ ಹಳ್ಳಿ, ಅನುಗ್ರಹ ಲೇಔಟ್, ವಿ.ಬಿ.ಲೇಔಟ್, ಕುಟ್ಟಿಯಪ್ಪ ಗಾರ್ಡನ್, ರಾಘವೇಂದ್ರ ಕಾಲೊನಿ, ಎಸ್‌ಬಿಐ ಲೇಔಟ್, ರೋಟರಿ ನಗರ, ಜಿ.ಬಿ.ಪಾಳ್ಯ, ಕೂಡ್ಲು, ಕೆಎಸ್‌ಆರ್‌ಪಿ 9ನೇ ಬೆಟಾಲಿಯನ್, ಟ್ರಾಪಿಕಲ್ ಪ್ಯಾರಡೈಸ್, ರಿಲಯಬಲ್ ವುಡ್ಸ್, ವಾಸ್ತು ಲೇಔಟ್, ಮಾರುತಿ, ಬೂತಹಳ್ಳಿ ರಸ್ತೆ, ಮಾರುತಿ, ಬೂದಹಳ್ಳಿ ರಸ್ತೆ, ಸಲಾಪುರಿ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

18ರಂದು ಹೊಸೂರು ಮುಖ್ಯರಸ್ತೆ, ಬಂಡೆಪಾಳ್ಯ, ಸಿಂಗಸಂದ್ರ, ಜಿ.ಬಿ.ಪಾಳ್ಯ, ಕೂಡ್ಲುಗೇಟ್, ಎಇಸಿಎಸ್ ಲೇಔಟ್ 'ಎ' ಹಾಗೂ 'ಬಿ' ಬ್ಲಾಕ್, ಹೊಂಗಸಂದ್ರ, ಓಂಶಕ್ತಿ ಲೇಔಟ್, ಬೊಮ್ಮನಹಳ್ಳಿ, ಬೊಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಚಿಕ್ಕ ಬೇಗೂರು ಗೇಟ್, ಬಿಟಿಆರ್ ಉದ್ಯಾನ, ಮುನೇಶ್ವರ ಲೇಔಟ್, ಹರಳುಕುಂಟೆ, ಹೊಸಪಾಳ್ಯ, ಯೆಳ್ಳುಕುಂಟೆಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

### ಪುಣೆ ರೇಸ್

#### ಪಿಸ್ಸಾರೊ ಗೆಲ್ಲುವ ನಿರೀಕ್ಷೆ

**ಸುರೇಶ್ ಮಹೀಂದ್ರ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಪಿಸ್ಸಾರೊ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:**

1ನೇ ರೇಸ್: ಮಿಸ್ ಅಮೇರಿಕನ್ ಪೀ 7, ಲಾರ್ಡ್ ಅಂಡ್ ಮಾಸ್ಟರ್ 2, ಮಿಸ್ಟಿ 8
2ನೇ ರೇಸ್: ಮೊಮೆಂಟ್ ಆಫ್ ಮ್ಯಾಡ್‌ನೆಸ್ 2, ಡೌಸಬೆಲ್ 5, ಸ್ಲಾಮ್ ಡಂಕ್ 11
3ನೇ ರೇಸ್: ಡ್ಯಾಶ್ 1, ಫೀಲ್ಡ್ ಆಫ್ ಡ್ರೀಮ್ಸ್ 7, ಎಸ್ಕೊನಿಡೊ 6
4ನೇ ರೇಸ್: ಕಾರ್ಡೆಲಿಯಾ 9, ಕಿಂಜಾಲ್ 7, ಸ್ಮೈಲ್ಸ್ ಆಫ್ ಫಾರ್ಚೂನ್ 4
5ನೇ ರೇಸ್: ಕೊಯೆನಿಗ್ 2, ಮೂನ್‌ಲೈಟ್ ಕಿಸ್ 6, ಇಂಪಲ್ಸಿವ್ 5
6ನೇ ರೇಸ್: ಪಿಸ್ಸಾರೊ 1, ಟೈಮೂರ್ 2

**ಉತ್ತಮ ಬೆಟ್: ಮಿಸ್ ಅಮೇರಿಕನ್ ಪೀ**

| ಜಾಕ್‌ಪಾಟ್ | ಟ್ರಿಬಲ್ |
|---|---|
| 2,3,4,5,6 | 3,4,5 |

## ಸರ್ಕಾರದಿಂದ ಅನುದಾನ ವಾಪಸ್ ಶಾಸಕ ಮುನಿರಾಜು ಆರೋಪ

ಪ್ರಜಾವಾಣಿ ವಾರ್ತೆ

**ಪೀಣ್ಯ ದಾಸರಹಳ್ಳಿ:** 'ಬೆಂಗಳೂರಿನಲ್ಲಿ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಕ್ಕೆ ಸರ್ಕಾರವು ₹500 ಕೋಟಿ ಅನುದಾನ ನೀಡಿ ದಾಸರಹಳ್ಳಿ ಕ್ಷೇತ್ರಕ್ಕೆ ಅನುದಾನ ಹಂಚಿಕೆ ಮಾಡದೇ ಮೋಸ ಮಾಡಿದೆ' ಎಂದು ಶಾಸಕ ಎಸ್. ಮುನಿರಾಜು ಆಕ್ರೋಶ ವ್ಯಕ್ತಪಡಿಸಿದರು.

ಭುವನೇಶ್ವರಿ ನಗರದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಬಳಿಕ ಅವರು ಮಾತನಾಡಿದರು.

'ಹಿಂದಿನ ಸರ್ಕಾರ ನೀಡಿದ್ದ ₹ 25 ಕೋಟಿ ಅನುದಾನವನ್ನೂ ವಾಪಸ್ ಪಡೆಯಲಾಗಿದೆ. ಇದು ಒಳ್ಳೆಯ ನಡೆಯಲ್ಲ' ಎಂದು ಹೇಳಿದರು.

'ಸರ್ಕಾರ ದ್ವೇಷದ ರಾಜಕಾರಣ ಮಾಡದೆ ಅಭಿವೃದ್ಧಿ ದೃಷ್ಟಿಯಿಂದ ಅನುದಾನ ನೀಡಬೇಕು. ಈ ವಿಚಾರವಾಗಿ ಬಿಬಿಎಂಪಿ ಆಯುಕ್ತರು ಮತ್ತು ಡಿ.ಕೆ. ಶಿವಕುಮಾರ್ ಅವರಿಗೂ ಪತ್ರ ಬರೆದಿದ್ದೇನೆ. ಅವರು ಕೂಡ ನನ್ನ ಕ್ಷೇತ್ರಕ್ಕೆ ಅರ್ಧ ದಿನ ಬಂದು ಇಲ್ಲಿನ ರಸ್ತೆಗಳು, ಚರಂಡಿ, ಬೀದಿ ದೀಪ, ಉದ್ಯಾನ ಅವ್ಯವಸ್ಥೆ, ಕುಡಿಯುವ ನೀರಿನ ಸಮಸ್ಯೆ ನೋಡಲಿ. ಆಗಲಾದರೂ ಅನುದಾನ ನೀಡಲಿ' ಎಂದು ವಿನಂತಿಸಿದರು.



ದಾಸರಹಳ್ಳಿಯ ಭುವನೇಶ್ವರಿ ನಗರದಲ್ಲಿ ಶಾಸಕ ಎಸ್.ಮುನಿರಾಜು ಅವರು ರಸ್ತೆ ಕಾಮಗಾರಿಗೆ ಚಾಲನೆ ನೀಡಿದ ಬಳಿಕ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು

'ಈ ಭಾಗದಲ್ಲಿ ಬಡವರು ಮತ್ತು ಮಧ್ಯಮ ವರ್ಗದವರು ವಾಸ ಮಾಡುತ್ತಿದ್ದಾರೆ. ಪೀಣ್ಯ ಅತಿದೊಡ್ಡ ಕೈಗಾರಿಕಾ ಪ್ರದೇಶವಾದ್ದರಿಂದ ಸಾವಿರಾರು ಕೋಟಿ ತೆರಿಗೆ ಸಂಗ್ರಹವಾಗುತ್ತದೆ. ಇಡೀ ಬೆಂಗಳೂರಿನಲ್ಲಿ ಶೇ 78ರಷ್ಟು ತೆರಿಗೆ ಸಂಗ್ರಹವಾಗಿರುವುದು ದಾಸರಹಳ್ಳಿ ಕ್ಷೇತ್ರದಿಂದ. ತಾರತಮ್ಯ ಮಾಡದೆ ಅನುದಾನ ನೀಡಿ' ಎಂದು ಮನವಿ ಮಾಡಿದರು.

ದುಂಬಿ–ಕೀಟಗಳ ಸಂರಕ್ಷಣೆಗಾಗಿ ಕೀಟ ತಾಣ

## ವಿಶಿಷ್ಟ 'ಇನ್‌ಸೆಕ್ಟ್ ಕೆಫೆ' ಅನಾವರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಿಸರ್ಗದ ಆಹಾರ ಸರಪಳಿಯಲ್ಲಿ ಪ್ರಮುಖ ಪಾತ್ರವಹಿಸುವ ದುಂಬಿ–ಕೀಟಗಳ ಸಂರಕ್ಷಣೆಗಾಗಿ 'ಇನ್‌ಸೆಕ್ಟ್ ಕೆಫೆ' ಎಂಬ ವಿಶಿಷ್ಟ ಕೀಟ ತಾಣವೊಂದನ್ನು ಸಸ್ಯಕಾಶಿ ಲಾಲ್‌ಬಾಗ್‌ನಲ್ಲಿ ಅನಾವರಣಗೊಳಿಸಲಾಗಿದೆ.

ವಿಭಿನ್ನ ಇಂಡಿಯಾ ಫೌಂಡೇಷನ್‌ನ 'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ'(ಸಿಎಸ್‌ಆರ್) ಅಡಿಯಲ್ಲಿ, ತೋಟಗಾರಿಕಾ ಇಲಾಖೆ ಸಹಯೋಗದಲ್ಲಿ ಲಾಲ್‌ಬಾಗ್‌ನ ಬ್ಯಾಂಡ್ ಸ್ಟ್ಯಾಂಡ್ ಬಳಿ ಸ್ಥಾಪಿಸಿರುವ 'ಇನ್‌ಸೆಕ್ಟ್ ಕೆಫೆ'ಯನ್ನು ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್.ರಮೇಶ್ ಶುಕ್ರವಾರ ಉದ್ಘಾಟಿಸಿದರು.

ಮರದ ಫ್ರೇಮ್‌ಗಳಿಂದ ಸಣ್ಣ ಮನೆಯಾಕಾರದಲ್ಲಿ 'ಕೆಫೆ' ವಿನ್ಯಾಸಗೊಳಿಸಲಾಗಿದೆ. ಇದನ್ನು ಹಲವು ವಿಭಾಗಗಳಾಗಿ ವರ್ಗೀಕರಿಸಿ, ಪ್ರತಿ ವಿಭಾಗದಲ್ಲಿ ಸಣ್ಣ, ಮಧ್ಯಮ ಮರದ ತುಂಡುಗಳು, ಒಣ ಹುಲ್ಲು, ವಿವಿಧ ರೀತಿಯ ಸಸ್ಯಗಳ ಕಟ್ಟಿಗೆಗಳನ್ನು ಜೋಡಿಸಲಾಗಿದೆ. ಇದು ಎಲ್ಲಾ ಬಗೆಯ ಕೀಟ, ದುಂಬಿಗಳು ನೆಲೆಸಲು ಪೂರಕ ತಾಣವಾಗಿದೆ. ಕೀಟಗಳು ಇಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ ಮತ್ತು ಬೆಳವಣಿಗೆ ಹೊಂದುತ್ತವೆ.



ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ 'ಇನ್‌ಸೆಕ್ಟ್ ಕೆಫೆ' ಉದ್ಘಾಟಿಸಿದರು. (ಎಡದಿಂದ) ವಿಭಿನ್ನ ಇಂಡಿಯಾ ಫೌಂಡೇಷನ್ ಸಿಇಒ ಡೇವಿಡ್ ಕುಮಾರ್, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ.ಜಗದೀಶ್ ಇದ್ದಾರೆ

ಮೂರು ಸಾವಿರಕ್ಕೂ ಹೆಚ್ಚು ಸಸ್ಯ ಪ್ರಭೇದಗಳಿರುವ ಲಾಲ್‌ಬಾಗ್‌ನಲ್ಲಿ ಕಾರ್ಪೆಂಟರ್ ಬೀ, ಬಿಂಬಲ್ ಬೀ ನಂತಹ ಪ್ರಮುಖ ಪ್ರಭೇದದ ಕೀಟಗಳಿವೆ. ಜೊತೆಗೆ, ಗೂಡು ಕಟ್ಟಿ ಜೇನು ಸಂಗ್ರಹಿಸುವ ದುಂಬಿಗಳೂ ಇವೆ. ಇವೆಲ್ಲ ಕಡಿಮೆ ಸಂಖ್ಯೆಯಲ್ಲಿವೆ. ಆದರೆ ಗೂಡು ಕಟ್ಟದೇ, ಒಣ ಮರವನ್ನು ಕೊರೆದು ತೂತು ಮಾಡಿ ಅಲ್ಲೇ ಬದುಕುವಂತಹ ದುಂಬಿಗಳು ಸಹಸ್ರಾರು ಸಂಖ್ಯೆಯಲ್ಲಿವೆ. ಇಂಥವುಗಳಿಗೆ 'ಇನ್‌ಸೆಕ್ಟ್ ಕೆಫೆ' ಉತ್ತಮ ಆಶ್ರಯ ತಾಣವಾಗುತ್ತದೆ ಎಂಬುದು ಇಲಾಖೆ ಅಧಿಕಾರಿಗಳ ಅಭಿಪ್ರಾಯ.

ಸದ್ಯಕ್ಕೆ ಆರಂಭಿಕವಾಗಿ ಒಂದು 'ಕೆಫೆ' ಸ್ಥಾಪಿಸಲಾಗಿದೆ. ಮುಂದೆ ಇದೇ ರೀತಿ ಸಾರ್ವಜನಿಕ ಸಹಭಾಗಿತ್ವದಡಿ, ಲಾಲ್‌ಬಾಗ್, ಕಬ್ಬನ್ ಉದ್ಯಾನವನ, ನಂದಿ ಗಿರಿಧಾಮ, ಕೃಷ್ಣರಾಜೇಂದ್ರ ಗಿರಿಧಾಮ ಮತ್ತು ರಾಜ್ಯದಾದ್ಯಂತ ಎಲ್ಲಾ ಹೊಸ ಸಸ್ಯಶಾಸ್ತ್ರೀಯ ತೋಟಗಳಲ್ಲಿ 50 ಕ್ಕೂ ಹೆಚ್ಚು 'ಇನ್‌ಸೆಕ್ಟ್ ಕೆಫೆ'ಗಳನ್ನು ಸ್ಥಾಪಿಸಲು ಚಿಂತನೆ ನಡೆಸಲಾಗಿದೆ ಎಂದು ತೋಟಗಾರಿಕೆ ಜಂಟಿ ನಿರ್ದೇಶಕ ಡಾ. ಎಂ.ಜಗದೀಶ್ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ವಿಭಿನ್ನ ಇಂಡಿಯಾ ಫೌಂಡೇಷನ್‌ನ ಕಾರ್ಯನಿರ್ವಾಹಕ ಅಧಿಕಾರಿ ಡೇವಿಡ್ ಕುಮಾರ್, ತೋಟಗಾರಿಕೆ ಇಲಾಖೆಯ ಅಧಿಕಾರಿಗಳಾದ ನಂದಾ, ಚೇತನ್, ಕೃಷ್ಣಮೂರ್ತಿ ಇದ್ದರು.

### ನಗರದಲ್ಲಿ ಇಂದು

**ಧಮ್ಮ ದೀಕ್ಷಾ ಮಹೋತ್ಸವ–ರಾಜ್ಯ ಬೌದ್ಧ ಯುವ ಸಮ್ಮೇಳನ: ಸಾನ್ನಿಧ್ಯ:** ವಿನಯರಕ್ಖಿತ ಮಹಾಥೆರೋ, ದಮ್ಮಾನಂದ ಮಹಾಥೆರೋ, ಉದ್ಘಾಟನೆ: ಸುಭಾಷ್ ಭರಣಿ, ಪುಷ್ಪಾರ್ಚನೆ: ಎಚ್. ಸಿದ್ದಯ್ಯ, ಧರ್ಮದೀಕ್ಷಾ ಸಮಾವೇಶ ಉದ್ಘಾಟನೆ: ಸತೀಶ್ ಜಾರಕಿಹೊಳಿ, ಅಧ್ಯಕ್ಷತೆ: ವೆಂಕಟಸ್ವಾಮಿ, ಪ್ರಾಸ್ತಾವಿಕ: ಹ.ರಾ. ಮಹೇಶ್, ಸಂವಿಧಾನ ಪೀಠಿಕೆ ಓದು: ಬಾಬುರಾವ್ ಮುಡುಬಿ, ಸಾಕೆ ಶಾಮು, ಆಯೋಜನೆ: ಭಾರತೀಯ ಬೌದ್ಧ ಮಹಾಸಭಾ, ಕರ್ನಾಟಕ ಬೌದ್ಧ ಮಹಾಸಭಾ, ನಾಗಸೇನ ಬುದ್ಧವಿಹಾರ, ಸಮತಾ ಸೈನಿಕ ದಳ, ಸ್ಥಳ: ನಾಗಸೇನಾ ಬುದ್ಧವಿಹಾರ, ಸದಾಶಿವನಗರ, ಬೆಳಿಗ್ಗೆ 10

**ಕನ್ನಡ ನಾಡು ನುಡಿಯ, ಭವ್ಯ ಪರಂಪರೆಯ ಕರ್ನಾಟಕ ದರ್ಶನ:** ಉಪನ್ಯಾಸ: ವಾಸುದೇವ ಶಾನುಭಾಗ, ಸನ್ಮಾನ: ಬಿ.ವಿ. ಸತ್ಯನಾರಾಯಣ ರಾವ್, ನಾರಾಯಣ ಕೆ. ಶಾನುಭಾಗ, ಭರತನಾಟ್ಯ: ನೇಹಾ ಹೆಗಡೆ, ಅಧ್ಯಕ್ಷತೆ: ಶಾ.ಮಂ. ಕೃಷ್ಣರಾಯ, ಆಯೋಜನೆ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘ, ಸ್ಥಳ: ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

**ಸಣ್ಣ ಹಿಡುವಳಿ ಬೇಸಾಯಕ್ಕೆ ಭವಿಷ್ಯವಿದೆಯೇ–ಚರ್ಚೆ:** ಸೀಮಾ ಪುರುಷೋತ್ತಮ್–ಶೀತಲ್ ಪಾಟೀಲ್ ಅವರಿಂದ 'ಅಗ್ರೇರಿಯನ್ ಚೇಂಜ್ ಆ್ಯಂಡ್ ಅರ್ಬನೈಸೇಷನ್ ಇನ್ ಸದರ್ನ್ ಇಂಡಿಯಾ' ಕೃತಿ ಕುರಿತು ಪ್ರಸ್ತುತಿ. ಅಧ್ಯಕ್ಷತೆ: ಎಂ.ಕೆ. ರಮೇಶ್, ಆಯೋಜನೆ: ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರಿಸರ್ಚ್ ಆ್ಯಂಡ್ ಆ್ಯಕ್ಷನ್ (ಇಕ್ರಾ), ಸ್ಥಳ: ಗಾಂಧಿಭವನದ ಕಸ್ತೂರಬಾ ಸಭಾಂಗಣ, ಬೆಳಿಗ್ಗೆ 10.30

**ವೀಣಾ ಭಟ್ ಅವರ 'ಹಸ್ತಾಭಿನಯ' ಕೃತಿ ಬಿಡುಗಡೆ:** ಅತಿಥಿಗಳು: ಮಾಳವಿಕಾ ಅವಿನಾಶ್, ಸುನೀಲ್ ಶಂಕರ್, ಸ್ಥಳ: ಕಪ್ಪಣ್ಣ ಅಂಗಳ, ಟಿಎಂಸಿ ಲೇಔಟ್, ಜೆ.ಪಿ. ನಗರ, ಬೆಳಿಗ್ಗೆ 10.30

**ಸಂತಾನ ಫಲವಂತಿಕೆ ಮತ್ತು ಸಂಶೋಧನಾ ಕೇಂದ್ರ ಉದ್ಘಾಟನೆ:** ಅತಿಥಿಗಳು: ದಿನೇಶ್ ಗುಂಡೂರಾವ್, ರಿಜ್ವಾನ್ ಅರ್ಷದ್, ಎನ್.ಎ.ಹ್ಯಾರಿಸ್, ಆಯೋಜನೆ ಮತ್ತು ಸ್ಥಳ: ಸಂತಾನ್ ಫರ್ಟಿಲಿಟಿ ಆ್ಯಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಹಸನಾಥ್ ಕಾಲೇಜು ಬಳಿ, ಡಿಕನ್ಸನ್ ರಸ್ತೆ, ಸಂಜೆ 4.30

**ಬಾಳ ಚಿತ್ರಗಳ ಕುಲುಮೆ ಮತ್ತು ಇತರ ಪುಸ್ತಕಗಳ ಬಗ್ಗೆ ರಹಮತ್ ತರೀಕೆರೆ ಅವರೊಂದಿಗೆ ಸಂವಾದ:** ಸ್ಥಳ: ಆಕೃತಿ ಪುಸ್ತಕ, ರಾಜಾಜಿನಗರ, ಸಂಜೆ 5

**ಮೃಣಾಲ್ ಸೇನ್ ಶತಮಾನೋತ್ಸವ ಅಂಗವಾಗಿ 'ಅಕಾಲೇರ್ ಶಂಧಾನೆ:** ಬರ ಅಂದ್ರೆ ಎಲ್ಲರಿಗೂ ಇಷ್ಟ' ವೆಬಿನಾರ್ ಉಪನ್ಯಾಸ: ಸಂವಾದ ನಿರ್ವಹಣೆ: ಕೆ.ಫಣಿರಾಜ್, ಉಪನ್ಯಾಸ: ಬಿ.ಸುರೇಶ್, ಆಯೋಜನೆ: ಸಮುದಾಯ ಕರ್ನಾಟಕ, ಸಮಯ ಸಂಜೆ 5.30

**'ಲಗ್ನಾ ಪಿಶ್ಶೆ' ಕೊಂಕಣಿ ಸಂಗೀತ,** ಆಯೋಜನೆ: ಅಮ್ಮಿ ರಂಗಕರ್ಮಿ, ಮುಂಬೈ, ಸ್ಥಳ: ಮಲ್ಲೇಶ್ವರದ ಕಾಶಿಮಠ ಸಭಾಂಗಣ, ಸಂಜೆ 6



ರಕ್ಷಾ ಕಾರ್ತಿಕ್ ಮತ್ತು ಶಿಷ್ಯವೃಂದದ ಭರತನಾಟ್ಯ

**ಮಹಾರಾಜ ಸ್ವಾತಿ ತಿರುನಾಳ್ ಅವರಿಗೆ ನೃತ್ಯ ನಮನ:** ಆಚಾರ್ಯ ರಕ್ಷಾ ಕಾರ್ತಿಕ್ ಮತ್ತು ಶಿಷ್ಯವೃಂದ, ಅತಿಥಿಗಳು: ಪ್ರೊ. ಎಸ್. ಸಡಗೋಪನ್, ಅನೂರು ಅನಂತಕೃಷ್ಣ ಶರ್ಮಾ, ಜ್ಯೋತಿ ರಘುರಾಮ್, ಆಯೋಜನೆ: ನಟನಾ ಇನ್‌ಸ್ಟಿಟ್ಯೂಟ್ ಆಫ್ ಡಾನ್ಸ್, ಸ್ಥಳ: ಕನ್ನಡ ಭವನ, ಸಂಪಂಗಿರಾಮ ನಗರ, ಸಂಜೆ 5

**ಶಾರದಾ ಮಹಾಭಿಷೇಕ ಮತ್ತು ಶರನ್ನವರಾತ್ರಿ ಮಹೋತ್ಸವದಲ್ಲಿ ದ್ವಂದ್ವ ನಾಗಸ್ವರ:** ನಡೆಸಿಕೊಡುವವರು: ಕೆ.ಎಸ್. ಮೋಹನ್ ಮತ್ತು ಎನ್. ಸುಬ್ರಮಣಿ ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಸಂಜೆ 7

### ತಿಪ್ಪಗೊಂಡನಹಳ್ಳಿ ಜಲಾಶಯದ ಒಳಹರಿವಿನಲ್ಲಿ ಒಳಚರಂಡಿಗಿಂತ ಕೈಗಾರಿಕೆ ತ್ಯಾಜ್ಯವೇ ಹೆಚ್ಚು

# ನಗರವಾಸಿಗಳಿಗೆ ಕುಡಿಯಲು 'ಕಪ್ಪು ನೀರು'!

• ಆರ್. ಮಂಜುನಾಥ್

**ಬೆಂಗಳೂರು:** ತಿಪ್ಪಗೊಂಡನಹಳ್ಳಿ ಜಲಾಶಯದಿಂದ 11 ವರ್ಷಗಳ ನಂತರ ರಾಜಧಾನಿಗೆ ಪೂರೈಸಲು ಯೋಜಿಸಿರುವ ಕುಡಿಯುವ ನೀರು ಬಳಕೆಗೆ ಯೋಗ್ಯವಾಗಿಲ್ಲ. ಗಾಢ ಕಪ್ಪು ನೀರು ಜಲಾಶಯಕ್ಕೆ ಹರಿಯುತ್ತಿದ್ದು, ಎಂತಹದೇ ಸಂಸ್ಕರಣಾ ವಿಧಾನದಿಂದ ಅದನ್ನು ಶುದ್ಧಗೊಳಿಸಲು ಸಾಧ್ಯವಿಲ್ಲದಷ್ಟು ನೀರು ಕಲುಷಿತವಾಗಿದೆ.

ಟಿ.ಜಿ.ಹಳ್ಳಿ ಜಲಾನಯನ ಪ್ರದೇಶದಲ್ಲಿ ಬಫರ್ ವಲಯದ ಜೊತೆಗೆ ನದಿ ಕಾಲುವೆಯನ್ನೇ ಒತ್ತುವರಿ ಮಾಡಿಕೊಂಡಿರುವ ಕೈಗಾರಿಕೆಗಳು, ರಾಸಾಯನಿಕಯುಕ್ತ ತ್ಯಾಜ್ಯವನ್ನು ನದಿಗೆ ಹರಿಸುತ್ತಿವೆ. ಹೀಗಾಗಿ ಟಿ.ಜಿ.ಹಳ್ಳಿ ಜಲಾಶಯದ ನೀರು ಯಾವ ಬಳಕೆಗೂ ಯೋಗ್ಯವಲ್ಲ (ಇ– ವರ್ಗ) ಎಂದು ಪ್ರಯೋಗಾಲಯದ ಫಲಿತಾಂಶಗಳೊಂದಿಗೆ ಅರಣ್ಯ ಇಲಾಖೆಯ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) 2015ರಲ್ಲಿ ವರದಿ ನೀಡಿದೆ.

ಈ ವರದಿಯ ನಂತರವೂ ಕೈಗಾರಿಕೆ ಹಾಗೂ ವಾಣಿಜ್ಯ–ವಸತಿ ಪ್ರದೇಶಗಳು ಬಫರ್ ವಲಯ ಹಾಗೂ ಅಕ್ಕಪಕ್ಕ ಅತಿಹೆಚ್ಚಾಗಿವೆ. ಇದರಿಂದ 'ಗಾಢ ಕಪ್ಪು ನೀರಿನ ಹರಿವನ್ನು' ಇಂದಿಗೂ ಹೆಸರಘಟ್ಟ– ತಿಪ್ಪಗೊಂಡನಹಳ್ಳಿ ಜಲಾಶಯದ ನಡುವೆ ಕಾಣಬಹುದು. ಇಂತಹ ನೀರನ್ನು ಹೈಟೆಕ್ ತಂತ್ರಜ್ಞಾನದಿಂದ ಸಂಸ್ಕರಿಸಿ, ₹300 ಕೋಟಿ ವೆಚ್ಚ ಮಾಡಿ ನಗರಕ್ಕೆ ಕುಡಿಯುವ ನೀರಾಗಿ ಸರಬರಾಜು ಮಾಡಲು ಬಿಡಬ್ಲ್ಯುಎಸ್‌ಎಸ್‌ಬಿ ಕಾಮಗಾರಿ ನಡೆಸುತ್ತಿದೆ.

ಪೀಣ್ಯದಿಂದ ದಾಸನಪುರ ಕೈಗಾರಿಕೆ ಮತ್ತು ನಗರೀಕರಣ ಪ್ರದೇಶಗಳಿಂದ ಒಳಚರಂಡಿ ನೀರು, ರಾಸಾಯನಿಕ ತ್ಯಾಜ್ಯ ನೇರವಾಗಿ ನದಿ ಹರಿವಿನಲ್ಲಿ ಸೇರಿಕೊಳ್ಳುತ್ತಿದೆ. ಈ ಭಾಗದಲ್ಲಿ ಅಂತರ್ಜಲ ಕೂಡ ಕಲುಷಿತಗೊಂಡಿದೆ. ಘನತ್ಯಾಜ್ಯದೊಂದಿಗೆ ಗ್ರಾನೈಟ್ ಸ್ಲರಿ, ಗಾರ್ಮೆಂಟ್ ಡೈ ಸೇರಿದಂತೆ ಅನಧಿಕೃತ ಡೈಯಿಂಗ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಸಣ್ಣ ಕೈಗಾರಿಕೆಗಳ ತ್ಯಾಜ್ಯ ನದಿಪಾತ್ರಕ್ಕೆ ನೇರವಾಗಿ ಸೇರುತ್ತಿದೆ.

ಮಾನವನ ದೇಹಕ್ಕೆ ಅತಿಹೆಚ್ಚು ಹಾನಿಕಾರಕವಾದ ಕೋಲಿಫಾರ್ಮ್ ಬ್ಯಾಕ್ಟೀರಿಯಾ ಈ ಹರಿವಿನಲ್ಲಿ ಹೆಚ್ಚಿದೆ. 100 ಎಂ.ಎಲ್‌ಗೆ ಶೂನ್ಯವಿರಬೇಕಾದ ಕೋಲಿಫಾರ್ಮ್ ಅಂಶ, ಇಲ್ಲಿ 50 ಎಂಪಿಎನ್ ಇದೆ. ಹೀಗೆ ಎಲ್ಲ ರೀತಿಯಿಂದಲೂ ಕಲುಷಿತಗೊಂಡಿರುವ ನೀರನ್ನು ಅದೆಷ್ಟೇ ಸಂಸ್ಕರಿಸಿದರೂ, ಕುಡಿಯಲು ಯೋಗ್ಯವಾಗಿಸಲು ಸಾಧ್ಯವಿಲ್ಲ ಎಂಬುದು ತಜ್ಞರ ಅಭಿಪ್ರಾಯ.

ನೀರಿನ ಗುಣಮಟ್ಟಕ್ಕೆ ಸಂಬಂಧಿಸಿದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ 2023ರ ಆಗಸ್ಟ್‌ನಲ್ಲಿ ವರದಿ ಬಿಡುಗಡೆ ಮಾಡಿದ್ದು, ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಬಹುತೇಕ ಕೆರೆಗಳಲ್ಲಿನ ನೀರು ಇ–ವರ್ಗ ಎಂದು ತಿಳಿಸಲಾಗಿದೆ. ಅಂದರೆ, ಈ ನೀರು ಯಾವ ಬಳಕೆಗೂ ಯೋಗ್ಯವಲ್ಲ. ಈ ನೀರು ಅರ್ಕಾವತಿ ನದಿ ಮೂಲಕ ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಸೇರುತ್ತಿದೆ.



ಪೀಣ್ಯ ಸಮೀಪದ ಕರಿಹೋಬನಹಳ್ಳಿ ಕೆರೆಯಿಂದ ಹರಿಯುತ್ತಿರುವ ರಾಸಾಯನಿಕಯುಕ್ತ ನೀರು

### ನದಿಯಲ್ಲಿ ನೀರಿನ ಕೊರತೆಗೆ ಕಾರಣ





- ಜಲಮೂಲಗಳು ಹಾಗೂ ಅವುಗಳ ಕಾಲುವೆಗಳ ಒತ್ತುವರಿ
- ನದಿಗಳ ಎರಡು ಮತ್ತು ಮೂರನೇ ಕ್ರಮದ ಕಾಲುವೆಗಳನ್ನು ಮುಚ್ಚಿ, ಭೂಬಳಕೆಯನ್ನೇ ಬದಲಿಸಲಾಗಿದೆ.
- ನದಿ ಅಚ್ಚುಕಟ್ಟು ಪ್ರದೇಶವನ್ನು ಕೈಗಾರಿಕೆಗಳು ಒತ್ತುವರಿ ಮಾಡಿಕೊಂಡಿರುವುದರಿಂದ, ಮೇಲ್ಮೈ ನೀರು ಹಾಗೂ ಅಂತರ್ಜಲ ಕಡಿಮೆಯಾಗಿದೆ.
- ವಸತಿ ಮತ್ತು ಕೃಷಿ ಚಟುವಟಿಕೆಗಳಿಗೆ ಅಂತರ್ಜಲವನ್ನು ಅತಿಯಾಗಿ ದುರ್ಬಳಕೆ ಮಾಡಿಕೊಳ್ಳಲಾಗಿದೆ.
- ಕೆರೆ ಸರಣಿಯನ್ನು ಕಾಯ್ದುಕೊಳ್ಳದೆ ನೀರಿನ ಲಭ್ಯತೆ ಕಡಿಮೆಯಾಗಿದೆ.

ಪ್ರಜಾವಾಣಿ ವಿಶೇಷ

### ಭೂಬಳಕೆ ಬದಲು

- ವಲಯ– 3 ಮತ್ತು ವಲಯ– 4ರಲ್ಲಿರುವ ಹಳ್ಳಿಗಳಲ್ಲಿ ಅತಿಯಾದ ನಿರ್ಮಾಣ ಚಟುವಟಿಕೆಗಳು ನಡೆದಿದ್ದು, ಕಟ್ಟಡ, ಬಡಾವಣೆ, ಗೋದಾಮು ಇತ್ಯಾದಿಗಳಿವೆ
- ವಲಯ 1, 3 ಮತ್ತು 4ರಲ್ಲಿ ಕೃಷಿ ಪ್ರದೇಶ– ಬಡಾವಣೆ, ರಸ್ತೆ, ಕ್ವಾರಿ, ದಾಸ್ತಾನು ಕಟ್ಟಡಗಳಾಗಿ ಬದಲಾಗಿದೆ.
- ವಲಯ– 3ರಲ್ಲಿ ಗಣನೀಯವಾಗಿ ನಗರೀಕರಣದ ಚಟುವಟಿಕೆಗಳು ನಡೆದಿದ್ದು, ಅರ್ಕಾವತಿ ನದಿ ಪಾತ್ರದಲ್ಲಿ ಬಡಾವಣೆ, ಗೋದಾಮು, ಮನೆಗಳು, ವಾಣಿಜ್ಯ ಕಟ್ಟಡಗಳು, ಕೈಗಾರಿಕೆಗಳು ನಿರ್ಮಾಣವಾಗಿವೆ.
- ಅರ್ಕಾವತಿ ನದಿ ಪಾತ್ರದಲ್ಲಿರುವ ರಾಷ್ಟ್ರೀಯ ಹೆದ್ದಾರಿ–4 ಹಾಗೂ ಕುಮುದ್ವತಿ ನದಿ ಪಾತ್ರದ ಎನ್‌ಎಚ್– 48ರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಗ್ರಾಮೀಣ ಭಂಡಾರ ಯೋಜನೆಯಡಿ ದೊಡ್ಡ ಸಂಖ್ಯೆಯಲ್ಲಿ ಗೋದಾಮುಗಳು ನಿರ್ಮಾಣಗೊಂಡಿವೆ.



ಅರ್ಕಾವತಿ ನದಿ ಮೂಲಕ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿಯುತ್ತಿರುವ 'ಗಾಢ ಕಪ್ಪು ನೀರು'

### ನದಿಗೆ ಯಾವ ಗ್ರಾಮದಿಂದ ತ್ಯಾಜ್ಯ?

| | |
|---|---|
| ಆಲೂರು, ಹೆಗ್ಗಡೆದೇವನಪುರ, ಮಾಕಳಿ, ಮಾದನಾಯಕನಹಳ್ಳಿ, ಕದರನಹಳ್ಳಿ, ಗೌಡಹಳ್ಳಿ, ಕಮ್ಮಸಂದ್ರ, ಬೆಟ್ಟಹಳ್ಳಿ, ಕಿತ್ತನಹಳ್ಳಿ, ಗಟ್ಟಿಸಿದ್ದನಹಳ್ಳಿ, ಗಿಡ್ಡೇನಹಳ್ಳಿ: **ಒಳಚರಂಡಿ ನೀರು** | |
| ಹಾರೋಕ್ಯಾತನಹಳ್ಳಿ, ರಾವೋತ್ತನಹಳ್ಳಿ, ಗಂಗೇನಹಳ್ಳಿ: **ನೊರೆಯುಕ್ತ ಒಳಚರಂಡಿ ನೀರು** | |
| ವರ್ತೂರು | ತಾವರೆಕೆರೆ, ಸೊಂಡೆಕೊಪ್ಪ ಗ್ರಾಮಗಳ ಮುಖ್ಯರಸ್ತೆ ಸುತ್ತಮುತ್ತಲಿನಿಂದ ಘನತ್ಯಾಜ್ಯ, ಕೋಳಿ ತ್ಯಾಜ್ಯದ ಒಳಚರಂಡಿ ನೀರು |
| ನಾಗಸಂದ್ರ | ಕೃಷಿ ಚಟುವಟಿಕೆಯ ತ್ಯಾಜ್ಯಯುಕ್ತ ಒಳಚರಂಡಿ ನೀರು |
| ಜೋಗೇರಹಳ್ಳಿ | ಒತ್ತುವರಿಯಾಗಿರುವ ಭೂಮಿಯಲ್ಲಿನ ತೋಟಗಾರಿಕೆ ಬೆಳೆ, ಕೃಷಿ ತ್ಯಾಜ್ಯದ ಒಳಚರಂಡಿ ನೀರು |
| ದೊಡ್ಡಕರೇನಹಳ್ಳಿ | ಘನತ್ಯಾಜ್ಯ, ಹತ್ತಿ, ಇಂಜೆಕ್ಷನ್ ಬಾಟಲ್, ಸಿರಿಂಜ್ ಹಾಗೂ ಅದರ ಪ್ಯಾಕೇಜ್‌ಗಳು ಸೇರಿದಂತೆ ವೈದ್ಯ ತ್ಯಾಜ್ಯಗಳು ನದಿಗೆ ಸೇರುತ್ತಿವೆ |

### 'ಬಫರ್ ಕಡಿಮೆ: ನನ್ನ ಗಮನಕ್ಕೇ ಬಂದಿಲ್ಲ'

'ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಬಫರ್ ವಲಯವನ್ನು ಕಡಿಮೆ ಮಾಡಿರುವ ಆದೇಶ ನನ್ನ ಗಮನಕ್ಕೇ ಬಂದಿಲ್ಲ' ಎಂದು 2019ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಅಂದು ಉಪ ಮುಖ್ಯಮಂತ್ರಿ ಹಾಗೂ ಬೆಂಗಳೂರು ಅಭಿವೃದ್ಧಿ ಸಚಿವರಾಗಿದ್ದ ಜಿ. ಪರಮೇಶ್ವರ, ಅರಣ್ಯ ಸಚಿವರಾಗಿದ್ದ ಸತೀಶ ಜಾರಕಿಹೊಳಿ ಅವರು ಬಫರ್ ವಲಯವನ್ನು ಕಡಿಮೆ ಮಾಡಿ, ಆದೇಶ ಹೊರಡಿಸಲು ಕಾರಣರಾಗಿದ್ದಾರೆ. ಅಂತಹ ಎಷ್ಟೋ ಕಡತಗಳಿಗೆ ನನಗೆ ಗೊತ್ತಿಲ್ಲದೇ ಅನುಮೋದನೆ ನೀಡಿರಬಹುದು ಸಚಿವ ಸಂಪುಟ ಅಥವಾ ಬೇರೆ ಸಭೆಯಲ್ಲಿ ಅಂತಹ ಯಾವುದೇ ಟಿಪ್ಪಣಿಗೂ ನಾನು ಸಹಿ ಹಾಕಿಲ್ಲ. ಅದರಲ್ಲಿ ನನ್ನ ಪಾತ್ರವಿಲ್ಲ' ಎಂದು ಅವರು ಹೇಳಿದರು.

ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದಲ್ಲಿ ಬಫರ್ ವಲಯವನ್ನು 1 ಕಿ.ಮೀನಿಂದ 500 ಮೀಟರ್‌ಗೆ ಇಳಿಸಿ 2019ರ ಜುಲೈ 20ರಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿತ್ತು.



### ನಿಗದಿಯಾಗಿರುವುದನ್ನು ಉಳಿಸುತ್ತಾರಾ?



ಟಿ.ಜಿ.ಹಳ್ಳಿ ಜಲಾನಯನ ಪ್ರದೇಶದಲ್ಲಿ ಬಫರ್ ವಲಯ 2003ರಲ್ಲಿ ನಿಗದಿಯಾಗಿದ್ದನ್ನು ಯಾರೂ ಪಾಲಿಸಲಿಲ್ಲ. ಅನಧಿಕೃತ ನಿರ್ಮಾಣಗಳೇ ಹೆಚ್ಚು. 2019ರಲ್ಲಿ ಬಫರ್ ವಲಯ ಕಡಿಮೆ ಮಾಡಿ ಆದೇಶಿಸಿದ್ದು ಅದನ್ನಾದರೂ ಉಳಿಸುತ್ತಾರಾ ಎಂಬುದೇ ಪ್ರಶ್ನೆ. ನಿಗದಿಯಾಗಿರುವ ಬಫರ್ ವಲಯದಲ್ಲಿ ಯಾವುದೇ ನಿರ್ಮಾಣ ಚಟುವಟಿಕೆಗಳು ನಡೆಯಬಾರದು ಎಂಬ ಆದೇಶವಿದೆ. ಬಫರ್ ವಲಯ ಕಡಿಮೆ ಆದೇಶ ಅನುಷ್ಠಾನಗೊಳಿಸಿದರೆ ಕೈಗಾರಿಕೆ, ವಾಣಿಜ್ಯ ಪ್ರದೇಶಗಳು ಅಧಿಕೃತವಾಗಿ ಹೆಚ್ಚಾಗುತ್ತವೆ. ಕಲ್ಮಶ ಇನ್ನಷ್ಟು ಅಧಿಕವಾಗಿ ಹರಿಯುತ್ತದೆ.

**ನಿರ್ಮಲ ಗೌಡ,** ಸಹ ಸಂಸ್ಥಾಪಕಿ, *paani.earth*

### ಜನರಿಗೆ 'ಸ್ಲೋ–ಪಾಯಿಸನ್'!



ಕೈಗಾರಿಕೆ ತ್ಯಾಜ್ಯವನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಾಗುವುದಿಲ್ಲ. ಇಂಥ ನೀರೇ ಹರಿಯುತ್ತಿರುವ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಕುಡಿಯುವ ನೀರನ್ನು ಜನಕ್ಕೆ ನೀಡಿದರೆ ಅದು 'ಸ್ಲೋ–ಪಾಯಿಸನ್' ನಂತಾಗುತ್ತದೆ. ಪೀಣ್ಯ ಕೈಗಾರಿಕೆ ಪ್ರದೇಶಗಳಲ್ಲಿ ಎಲ್ಲ ರೀತಿಯ 'ಅಪಾಯಕಾರಿ ಕೈಗಾರಿಕೆಗಳಿದ್ದು', ಅವೆಲ್ಲವುದರ ರಾಸಾಯನಿಕ ತ್ಯಾಜ್ಯ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಸೇರುತ್ತಿದೆ. ಕರಿಹೋಬನ ಹಳ್ಳಿ ಕೆರೆ ಹೆಸರಿಗೆ ತಕ್ಕಂತೆ ಕಪ್ಪು ನೀರಿನ ಗುಂಡಿಯಾಗಿದೆ. ಅದು ತುಂಬಿ ಅರ್ಕಾವತಿ ನದಿ ಸೇರುತ್ತಿದೆ. ಈ ಬಗ್ಗೆ ವರ್ಷಗಳಿಂದ ದೂರು ನೀಡಿದರೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಯಾರೂ ಕ್ರಮಕೈಗೊಂಡಿಲ್ಲ.

**ಗೌಡಯ್ಯ,** ಪರಿಸರ ಕಾರ್ಯಕರ್ತ

## ಭಾರತೀಯ ವಿದ್ಯಾಭವನ: 15ರಿಂದ ಬೊಂಬೆಗಳ 'ರಾಮಾಯಣ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಾಡಹಬ್ಬ ದಸರಾ ಉತ್ಸವದ ಅಂಗವಾಗಿ ಇಲ್ಲಿನ ಭಾರತೀಯ ವಿದ್ಯಾಭವನದ ಕೆಆರ್‌ಜಿ ಸಭಾಂಗಣದಲ್ಲಿ ಇದೇ 15ರಿಂದ 24ರವರೆಗೆ ಬೊಂಬೆಗಳ ಮೂಲಕ ರಾಮಾಯಣದ ಕತೆ ಪ್ರಸ್ತುತಪಡಿಸಲಾಗುತ್ತಿದೆ.

15ರಂದು ಭಾನುವಾರ ಬೆಳಿಗ್ಗೆ 11ಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ 'ಬೊಂಬೆ ಹಬ್ಬ'ವನ್ನು ಉದ್ಘಾಟಿಸುವರು. ಪ್ರತಿ ದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರ ವರೆಗೆ ಹಾಗೂ ಮಧ್ಯಾಹ್ನ 3ರಿಂದ ಸಂಜೆ 5.30ರ ವರೆಗೆ ರಾಮಾಯಣ ಕಥನ ನಿರೂಪಣೆಯ ಬೊಂಬೆಗಳ ಪ್ರದರ್ಶನ ವಿರುತ್ತದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

'ವಿದ್ಯಾಭವನದಲ್ಲಿ ಪ್ರತಿ ವರ್ಷ ನವರಾತ್ರಿ ಅಂಗವಾಗಿ ಪುರಾಣಗಳು, ಐತಿಹಾಸಿಕ ಘಟನೆಗಳು, ಗ್ರಾಮೀಣ ಪರಿಸರ, ಶಿಕ್ಷಣಕ್ರಮ ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಬೊಂಬೆಗಳ ಪ್ರದರ್ಶನವನ್ನು ಏರ್ಪಡಿಸಲಾಗುತ್ತಿದೆ. ಈ ವರ್ಷ ರಾಮಾಯಣ ಮಹಾಕಾವ್ಯ ಕಥನವನ್ನು ಬೊಂಬೆಗಳ ಮೂಲಕ ನಿರೂಪಿಸುವ ಕೆಲಸವನ್ನು ಮಾಡುತ್ತಿದೆ' ಎನ್ನುತ್ತಾರೆ ಬೊಂಬೆಹಬ್ಬದ ನೇತೃತ್ವ ವಹಿಸಿಕೊಂಡಿರುವ ಭಾರತೀಯ ವಿದ್ಯಾಭವನದ ಸೀತಾ ರಾಮಚಂದ್ರ. ಮಧುಲಿಕಾ ಶ್ರೀವತ್ಸ ಅವರು ದಕ್ಷಿಣ ಭಾರತದ ಬೊಂಬೆಗಳನ್ನು ಸಂಗ್ರಹಿಸಿ ರಾಮಾಯಣ ಕಥನವನ್ನು ನಿರೂಪಿಸುತ್ತಿದ್ದಾರೆ.

'ಸುಮಾರು 500 ವಿವಿಧ ಬಗೆಯ ಆಕೃತಿಗಳ ಬೊಂಬೆಗಳು ಪ್ರದರ್ಶನದಲ್ಲಿದ್ದು, ರಾಮಾಯಣದ ಸೂಕ್ಷ್ಮ ಸಂಗತಿಗಳನ್ನು ತೆರೆದಿಡುತ್ತವೆ. ಜೇಡಿಮಣ್ಣು, ಮರ, ಅರಳೆ, ಬಟ್ಟೆ, ಕಾಗದ ಮುಂತಾದ ಪಾರಂಪರಿಕ ವಸ್ತುಗಳಿಂದ ರೂಪುಗೊಂಡಿರುವ ಈ ಬೊಂಬೆಗಳು, ಗತಕಾಲದ ಐತಿಹಾಸಿಕ ವಿವರಗಳು, ಸಮಕಾಲೀನ ಬದುಕಿಗೆ ಬೇಕಾದ ಮೌಲ್ಯ ಬಿಂಬಿಸಲಿವೆ' ಎಂದು ಭವನದ ನಿರ್ದೇಶಕ ಎಚ್.ಎನ್. ಸುರೇಶ್ ಮಾಹಿತಿ ನೀಡಿದ್ದಾರೆ.

ಬೊಂಬೆಗಳ ಪ್ರದರ್ಶನದ ಜತೆಗೆ ಭವನದ ಅಧ್ಯಕ್ಷರಾದ ಕೆ.ಜಿ. ರಾಘವನ್ ಅವರು ರಾಮಾಯಣದಲ್ಲಿ ಬರುವ ಋಷಿಗಳ ಕುರಿತು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ.

## ಶರಣರ ವಿರುದ್ಧದ ಪ್ರಕರಣ: 3ನೇ ಆರೋಪಿಗೆ ಜಾಮೀನು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧದ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಪ್ರಕರಣದ ಮೂರನೇ ಆರೋಪಿ ಪರಮಶಿವಯ್ಯಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಜಾಮೀನು ಕೋರಿ ಪರಮಶಿವಯ್ಯ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದೆ.

'ಅರ್ಜಿದಾರರು ₹ 2 ಲಕ್ಷ ಮೌಲ್ಯದ ಬಾಂಡ್, ಇಬ್ಬರ ಭದ್ರತೆ ನೀಡಬೇಕು. ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು' ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

'ಎಸ್ ಜೆ ಎಂ ವಿದ್ಯಾಪೀಠದ ಕಾರ್ಯದರ್ಶಿಯಾಗಿದ್ದ ಪರಮಶಿವಯ್ಯ, ಬಾಲಕಿಯರ ಮೇಲೆ ಶರಣರು ಅತ್ಯಾಚಾರ ನಡೆಸಲು ಕುಮ್ಮಕ್ಕು ನೀಡಿದ್ದಾರೆ' ಎಂಬ ಆರೋಪ ಎದುರಿಸುತ್ತಿದ್ದಾರೆ. ಈ ಕ್ರಿಮಿನಲ್ ಪ್ರಕರಣದಲ್ಲಿ 2022ರ ಅಕ್ಟೋಬರ್ 29ರಿಂದ ನ್ಯಾಯಾಂಗ ಬಂಧನದಲ್ಲಿದ್ದರು. ಅರ್ಜಿದಾರರ ಪರ ಕೆ.ಬಿ.ಕೆ.ಸ್ವಾಮಿ ವಾದ ಮಂಡಿಸಿದ್ದರು.

**ಪ್ರಕರಣವೇನು?:** ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆ–2012, ಭಾರತೀಯ ದಂಡ ಸಂಹಿತೆ–1860, ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ-1988, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ.

'ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ್ದರು. ಈ ಪ್ರಕರಣದಲ್ಲಿ ಪೊಲೀಸರು ಶರಣರನ್ನು 2022ರ ಸೆಪ್ಟೆಂಬರ್ 1ರಂದು ಚಿತ್ರದುರ್ಗದ ಬೃಹನ್ಮಠದಲ್ಲಿ ಬಂಧಿಸಿದ್ದು ಅಂದಿನಿಂದಲೂ ಜೈಲಿನಲ್ಲಿದ್ದಾರೆ.

# ಶಾಲಾ ಬಸ್ ಡಿಕ್ಕಿ– ವೃದ್ಧ ಸಾವು

### ಪಾನಮತ್ತ ಚಾಲನೆ ಆರೋಪ: ಶಾಲೆ ಆಡಳಿತ ಮಂಡಳಿಗೆ ಪೊಲೀಸರ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಶಾಲಾ ಬಸ್ ಡಿಕ್ಕಿ ಹೊಡೆದು ಆಂಜಿನಪ್ಪ (60) ಎಂಬುವವರು ಮೃತಪಟ್ಟಿದ್ದು, ಈ ಸಂಬಂಧ ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ದೊಡ್ಡ ಬಾಣಸವಾಡಿ ನಿವಾಸಿ ಆಂಜಿನಪ್ಪ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಬಸ್ ಡಿಕ್ಕಿಯಾಗಿ ಈ ಅವಘಡ ಸಂಭವಿಸಿದೆ. ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಬಸ್ ಚಾಲಕ ಸುಭಾಷ್‌ನನ್ನು ಬಂಧಿಸಲಾಗಿದೆ' ಎಂದು ಬಾಣಸವಾಡಿ ಸಂಚಾರ ಪೊಲೀಸರು ಹೇಳಿದರು.

'ಆರೋಪಿ ಸುಭಾಷ್, ಹಲವು ವರ್ಷಗಳಿಂದ ಶಾಲೆಯೊಂದರ ಬಸ್ ಚಾಲನೆ ಮಾಡುತ್ತಿದ್ದ. ಅ.10ರಂದು ಬೆಳಿಗ್ಗೆ ಪಾನಮತ್ತನಾಗಿದ್ದ ಈತ, 20ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಬಸ್‌ನಲ್ಲಿ ಕೂರಿಸಿಕೊಂಡು ಶಾಲೆಯತ್ತ ಹೊರಟಿದ್ದ. ಇದೇ ಸಂದರ್ಭದಲ್ಲಿ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ.'

'ನಿಯಂತ್ರಣ ತಪ್ಪಿದ್ದ ಬಸ್, ರಸ್ತೆಯಲ್ಲಿ ಹೋಗುತ್ತಿದ್ದ ಮಹಿಳೆಯೊಬ್ಬರಿಗೆ ಡಿಕ್ಕಿ ಹೊಡೆದಿತ್ತು. ನಂತರ, ಪಾದಚಾರಿ ಮಾರ್ಗದಲ್ಲಿ ಹೋಗುತ್ತಿದ್ದ ಆಂಜಿನಪ್ಪ ಅವರಿಗೂ ಡಿಕ್ಕಿ ಹೊಡೆದಿತ್ತು. ಗಾಯಗೊಂಡಿದ್ದ ಮಹಿಳೆ ಹಾಗೂ ಆಂಜಿನಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅ.11ರಂದು ಆಂಜಿನಪ್ಪ ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

### ಶಾಲೆಗೆ ನೋಟಿಸ್

'ಚಾಲಕ ಸುಭಾಷ್, ಮದ್ಯ ಕುಡಿದು ಬಸ್ ಚಲಾಯಿಸುತ್ತಿದ್ದ. ವೈದ್ಯಕೀಯ ತಪಾಸಣೆ ಮಾಡಿಸಿದಾಗ, ಮದ್ಯದ ಅಂಶ ಪತ್ತೆಯಾಗಿದೆ. ಈ ಬಗ್ಗೆ ಸ್ಪಷ್ಟನೆ ಕೋರಿ ಶಾಲೆ ಆಡಳಿತ ಮಂಡಳಿಗೆ ನೋಟಿಸ್ ನೀಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಸ್‌ನಲ್ಲಿ 20ಕ್ಕೂ ಹೆಚ್ಚು ಮಕ್ಕಳಿದ್ದರು. ಬಸ್ ಉರುಳಿ ಬಿದ್ದಿದ್ದರೆ, ಹೆಚ್ಚು ಅನಾಹುತವಾಗುವ ಸಾಧ್ಯತೆ ಇತ್ತು. ಇದೇ ಕಾರಣಕ್ಕೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಶಾಲೆಯಲ್ಲಿ ಎಷ್ಟು ವಾಹನಗಳಿವೆ? ಚಾಲಕರ ವರ್ತನೆ ಹೇಗಿದೆ? ಎಂಬುದು ಸೇರಿದಂತೆ ಸಮಗ್ರ ಮಾಹಿತಿ ಕೋರಿ ನೋಟಿಸ್ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಈ ರೀತಿ ಆಗದಂತೆ ಎಚ್ಚರಿಕೆಯನ್ನೂ ನೀಡಲಾಗಿದೆ' ಎಂದು ತಿಳಿಸಿದರು.

### ಅಪರಾಧ ಸುದ್ದಿ

### ವ್ಯಕ್ತಿ ಆತ್ಮಹತ್ಯೆ

**ಬೆಂಗಳೂರು:** ರಾಜರಾಜೇಶ್ವರಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಉದ್ಯಾನದಲ್ಲಿ ವ್ಯಕ್ತಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹೆಜ್ಜಾಲದ ನಿವಾಸಿ ಮುನಿಯಪ್ಪ(45) ಆತ್ಮಹತ್ಯೆ ಮಾಡಿಕೊಂಡವರು.

'ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ ಮುನಿಯಪ್ಪ ಅವರು ವಿಪರೀತ ಮದ್ಯ ವ್ಯಸನಿಯಾಗಿದ್ದರು. ಮನೆಯಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನೂ ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ ಮದ್ಯ ಸೇವನೆ ಮಾಡುತ್ತಿದ್ದರು. ಕೆಲವು ದಿನಗಳ ಹಿಂದೆ ಕುಟುಂಬ ತೊರೆದು ಆರ್.ಆರ್.ನಗರ ಕಡೆ ಬಂದಿದ್ದ ಮುನಿಯಪ್ಪ ಅವರು ಮದ್ಯದ ಅಮಲಿನಲ್ಲಿ ಎಲ್ಲೆಂದರಲ್ಲಿ ಓಡಾಟ ನಡೆಸುತ್ತಿದ್ದರು. ಉದ್ಯಾನದ ಖಾಲಿ ಸ್ಥಳದಲ್ಲೇ ಮಲಗುತ್ತಿದ್ದರು'.

'ಗುರುವಾರ ರಾತ್ರಿ ಆರ್.ಆರ್.ನಗರದ ನೀರು ಶುದ್ಧೀಕರಣ ಘಟಕದ ಬಳಿಯ ಸಿದ್ದಲಿಂಗಯ್ಯ ಉದ್ಯಾನದ ಒಳಗಿನ ಕುಟೀರದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಾರಣ ತಿಳಿದುಬಂದಿಲ್ಲ. ಶುಕ್ರವಾರ ಬೆಳಿಗ್ಗೆ ವಾಯುವಿಹಾರಕ್ಕೆ ಬಂದ ಸಾರ್ವಜನಿಕರು ನೋಡಿ ಮಾಹಿತಿ ನೀಡಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

## ಶಾಸಕ ರೇವಣ್ಣ ಪರ ವಕಾಲತ್ತು ಸಲ್ಲಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚುನಾವಣಾ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ಹೊಳೆನರಸೀಪುರ ಶಾಸಕ ಎಚ್.ಡಿ.ರೇವಣ್ಣ ಮತ್ತು ಹಾಸನ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ನೋಟಿಸ್ ಜಾರಿಯಾಗಿದ್ದ ಹಿನ್ನೆಲೆಯಲ್ಲಿ ಅವರ ಪರ ವಕೀಲರು ಶುಕ್ರವಾರ ಹೈಕೋರ್ಟ್‌ಗೆ ವಕಾಲತ್ತು ಸಲ್ಲಿಸಿದರು.

ಚುನಾವಣಾ ಅಕ್ರಮ ಎಸಗಿದ್ದ ಹಾಸನ ಲೋಕಸಭಾ ಕ್ಷೇತ್ರದ ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆಯನ್ನು ಅನೂರ್ಜಿಗೊಳಿಸಿ ಹೈಕೋರ್ಟ್ 2023ರ ಸೆ. 1ರಂದು ತೀರ್ಪು ನೀಡಿತ್ತು. ಈ ಸಂಬಂಧ ಪ್ರಜ್ವಲ್ ರೇವಣ್ಣ ಮತ್ತು ಎಚ್.ಡಿ. ರೇವಣ್ಣ ವಿರುದ್ಧ ಜನಪ್ರತಿನಿಧಿಗಳ ಕಾಯ್ದೆ-1950ರ ಕಲಂ 99(1)(ಎ)(2) ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲು 2023ರ ಸೆಪ್ಟೆಂಬರ್ 13ರಂದು ಷೋಕಾಸ್ ನೋಟಿಸ್ ಜಾರಿಗೊಳಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ರೇವಣ್ಣ ಮತ್ತು ಅವರ ಪುತ್ರ ಪ್ರಜ್ವಲ್ ಪರ ವಕೀಲ ಎ.ವಿನಿಶಾಂತ್ ನ್ಯಾಯಪೀಠ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಹಾಜರಾಗಿ ವಕಾಲತ್ತು ಮತ್ತು ಮೆಮೊ ಸಲ್ಲಿಸಿದರು. ಮೆಮೊ ದಾಖಲಿಸಿಕೊಂಡ ನ್ಯಾಯಪೀಠ, 'ಸುಪ್ರಿಂ ಕೋರ್ಟ್‌ನಿಂದ ಆದೇಶ ಪ್ರಕಟವಾದ ಮೇಲೆ ಪ್ರಕರಣವನ್ನು ವಿಚಾರಣೆಗೆ ನಿಗದಿಪಡಿಸಬೇಕು' ಎಂದು ರಿಜಿಸ್ಟ್ರಿಗೆ ಸೂಚಿಸಿ ವಿಚಾರಣೆ ಮುಂದೂಡಿತು.

## ಆತ್ಮಾಹುತಿ ದಾಳಿ: 17 ಸಾವು

**ಕಾಬೂಲ್** (ಎಪಿ): ಅಫ್ಘಾನಿಸ್ತಾನದ ಉತ್ತರ ಭಾಗದಲ್ಲಿನ ಶಿಯಾ ಪಂಗಡದವರ ಮಸೀದಿಯಲ್ಲಿ ಶುಕ್ರವಾರ ಪ್ರಾರ್ಥನೆ ವೇಳೆ ಆತ್ಮಾಹುತಿ ಬಾಂಬ್ ದಾಳಿಕೋರ ದಾಳಿ ನಡೆಸಿದ್ದು, 17 ಜನರು ಸಾವನ್ನಪ್ಪಿದ್ದಾರೆ. ಹಲವು ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸ್ ವಕ್ತಾರರು ತಿಳಿಸಿದ್ದಾರೆ.

ಬಾಗ್ಲಾನ್ ಪ್ರಾಂತ್ಯದ ರಾಜಧಾನಿ ಪೋಲ್-ಇ-ಖೋಮ್ರಿ ನಗರದ ಇಮಾಮ್ ಜಮಾನ್ ಮಸೀದಿಯಲ್ಲಿ ನೂರಾರು ಜನರು ಪ್ರಾರ್ಥನೆಗೆ ಸೇರಿದ್ದಾಗ, ಮಧ್ಯಾಹ್ನ ಆತ್ಮಾಹುತಿ ಬಾಂಬ್ ದಾಳಿ ನಡೆದಿದೆ ಎಂದು ಪೊಲೀಸ್ ವಕ್ತಾರ ಶೇರ್ ಅಹ್ಮದ್ ಬೊರ್ಹಾನಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ದಾಳಿಯ ಹೊಣೆಯನ್ನು ತಕ್ಷಣಕ್ಕೆ ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ.

## ಬೆಂಕಿ ಅವಘಡ: ಅನಾಹುತ ತಪ್ಪಿಸಿದ ರೈಲ್ವೆ ಸಿಬ್ಬಂದಿ

**ಮಾಲೂರು (ಕೋಲಾರ):** ಮಾಲೂರು ರೈಲ್ವೆ ನಿಲ್ದಾಣದಲ್ಲಿನ ವಿದ್ಯುತ್ ಮಾರ್ಗದಲ್ಲಿ ಗುರುವಾರ ರಾತ್ರಿ 9ರ ಸುಮಾರಿಗೆ ಶಾರ್ಟ್ ಸರ್ಕಿಟ್‌ನಿಂದಾಗಿ ಬೆಂಗಳೂರು–ಮಾರಿಕುಪ್ಪಂ ರೈಲು ಬೋಗಿ ಛಾವಣಿ ಮೇಲೆ ಬೆಂಕಿ ಕಾಣಿಸಿಕೊಂಡು ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ರೈಲು ಮಾಲೂರು ನಿಲ್ದಾಣಕ್ಕೆ ಬರುತ್ತಿದ್ದಂತೆ ವಿದ್ಯುತ್ ತಂತಿಯಲ್ಲಿ ಬೆಂಕಿಯ ಕಿಡಿಗಳು ಕಾಣಿಸಿಕೊಂಡವು. ರೈಲಿನಲ್ಲಿದ್ದ 500ಕ್ಕೂ ಹೆಚ್ಚು ಜನರನ್ನು ಕೆಳಗಿಳಿಸಿ, ಅನಾಹುತ ತಪ್ಪಿಸಲಾಯಿತು.

## 1 ಕೆ.ಜಿ ಚಿನ್ನ ದರೋಡೆ: ಆರೋಪಿ ವಶಕ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಬ್ಯಾಡರಹಳ್ಳಿಯ ದೊಡ್ಡ ಗೊಲ್ಲರಹಟ್ಟಿಯಲ್ಲಿರುವ 'ವಿನಾಯಕ್ ಜ್ಯುವೆಲರ್ಸ್' ಮಳಿಗೆಯ ಮಾಲೀಕರಿಗೆ ಗುಂಡು ಹೊಡೆದು 1 ಕೆ.ಜಿ ಚಿನ್ನಾಭರಣ ದೋಚಿರುವ ಪ್ರಕರಣದ ಆರೋಪಿ ಹುಸೇನ್‌ನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಅ. 12ರಂದು ಬೆಳಿಗ್ಗೆ ಮಳಿಗೆಗೆ ನುಗ್ಗಿದ್ದ ನಾಲ್ವರು ದುಷ್ಕರ್ಮಿಗಳು, ಮಾಲೀಕ ಮನೋಜ್ ಲೋಹರ್ ತೊಡೆಗೆ ಗುಂಡು ಹಾರಿಸಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಗಳಿಗಾಗಿ ಶೋಧ ಆರಂಭಿಸಿದ್ದರು.

'ನಾಲ್ವರು ಆರೋಪಿಗಳು ಮಳಿಗೆಗೆ ನುಗ್ಗಿದ್ದ ದೃಶ್ಯ, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆ ಆಗಿತ್ತು. ಇದೇ ಸುಳಿವು ಆಧರಿಸಿ ಹುಸೇನ್‌ನನ್ನು ವಶಕ್ಕೆ ಪಡೆಯಲಾಗಿದೆ. ಈತನ ಜೊತೆ ಕೃತ್ಯದಲ್ಲಿ ಭಾಗಿಯಾಗಿದ್ದ ಶಿವ, ಸಿಕಂದರ್ ಹಾಗೂ ವಿಕಾಸ್ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೈದರಾಬಾದ್‌ನ ಹುಸೇನ್, ಪ್ರಕರಣವೊಂದರಲ್ಲಿ ಜೈಲು ಸೇರಿದ್ದ. ಅಲ್ಲಿಯೇ ಈತನಿಂದ ಶಿವ ಹಾಗೂ ಇತರರು ಪರಿಚಯವಾಗಿದ್ದರು. ಎಲ್ಲರೂ ಸೇರಿ ದರೋಡೆಗೆ ಸಂಚು ರೂಪಿಸಿದ್ದರು.'

'ಕೃತ್ಯದ ನಂತರ ಸ್ಥಳದಿಂದ ಪರಾರಿಯಾಗಿದ್ದ ನಾಲ್ವರು, ಚಿನ್ನಾಭರಣ ಹಂಚಿಕೊಂಡಿದ್ದರು. ಬಳಿಕ, ಎಲ್ಲರೂ ಪ್ರತ್ಯೇಕವಾಗಿ ಅವರವರ ಸ್ಥಳಗಳಿಗೆ ಹೊರಟು ಹೋಗಿದ್ದರು. ಆರೋಪಿ ಹುಸೇನ್, ಹೈದರಾಬಾದ್‌ಗೆ ಹೋಗಲು ವಿಮಾನ ನಿಲ್ದಾಣದತ್ತ ಹೊರಟಿದ್ದ. ಈ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೆ, ಮಾರ್ಗಮಧ್ಯೆಯೇ ಈತನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಮಹಿಳೆಗೆ ನಿಂದನೆ: ಕ್ಯಾಬ್ ಚಾಲಕ ಸೆರೆ

**ಬೆಂಗಳೂರು:** ಓಲಾ ಕ್ಯಾಬ್ ಬುಕ್ಕಿಂಗ್ ರದ್ದುಗೊಳಿಸಿದ್ದಕ್ಕೆ ಕುಪಿತಗೊಂಡ ಮಹಿಳೆಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಅಶ್ಲೀಲ ಸಂದೇಶ ಕಳುಹಿಸಿದ್ದ ಚಾಲಕನನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಸಲೂರು ನಿವಾಸಿ ದಿನೇಶ್ ಬಂಧಿತ ಆರೋಪಿ.

'ಶಾಲೆಯಲ್ಲಿ ಪೋಷಕರ ಸಭೆ ಮುಕ್ತಾಯವಾದ ಬಳಿಕ ಪುತ್ರಿಯೊಂದಿಗೆ ಮನೆಗೆ ತೆರಳಲು ಮಹಿಳೆ ಕ್ಯಾಬ್ ಬುಕ್ ಮಾಡಿದ್ದರು. ಕ್ಯಾಬ್ ಬರುವುದು ತಡವಾಗಿದ್ದಕ್ಕೆ ಬುಕ್ಕಿಂಗ್ ರದ್ದುಗೊಳಿಸಿದ್ದರು. ಆಟೊದಲ್ಲಿ ಮನೆಗೆ ತೆರಳಿದ್ದರು. ಇದರಿಂದ ಕುಪಿತಗೊಂಡಿದ್ದ ಚಾಲಕ ಮಹಿಳೆಗೆ ಕರೆ ಮಾಡಿ ನಿಂದಿಸಿದ್ದ. ಅಶ್ಲೀಲ ಸಂದೇಶ ಕಳುಹಿಸಿ ಹಣ ಕೊಡುವಂತೆ ಪೀಡಿಸಿದ್ದ' ಎಂದು ಪೊಲೀಸರು ಹೇಳಿದರು.




ಎಸ್‌ಜೆಬಿಐಟಿ ಮತ್ತು ಎಸ್‌ಜೆಪಿ ಸ್ಯಾಪ್ ಕಾಲೇಜಿನ ಪದವಿ ಪ್ರದಾನ ಕಾರ್ಯಕ್ರಮದಲ್ಲಿ 800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

## 'ಸ್ವಾತಂತ್ರ್ಯ ಕೇವಲ ಹಕ್ಕಲ್ಲ'

ಪ್ರಜಾವಾಣಿ ವಾರ್ತೆ

**ಕೆಂಗೇರಿ:** ಸ್ವಾತಂತ್ರ್ಯವೆಂಬುದು ಕೇವಲ ಹಕ್ಕಲ್ಲ. ಅದೊಂದು ಗುರುತರ ಜವಾಬ್ದಾರಿ. ಸ್ವಾತಂತ್ರ್ಯವನ್ನು ದುರ್ಬಳಕೆ ಮಾಡಿಕೊಂಡರೆ, ಅದರಿಂದ ಒದಗಬಹುದಾದ ದುಷ್ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ ಎಂದು ಆದಿ ಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ ಎಚ್ಚರಿಸಿದರು.

ಕೆಂಗೇರಿ ಬಳಿಯ ಎಸ್‌ಜೆಬಿಐಟಿ ಮತ್ತು ಎಸ್‌ಜೆಪಿ ಸ್ಯಾಪ್ ಕಾಲೇಜಿನ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮಾತು ಅತ್ಯಂತ ಬಲಿಷ್ಠ ಹಾಗೂ ಅಮೂಲ್ಯ ಸಂವಹನ ಮಾಧ್ಯಮ. ನಾವು ಆಡುವ ಮಾತು ಸೃಷ್ಟಿಸಬಹುದಾದ ಅಪಾಯ ಹಾಗೂ ದುಷ್ಪರಿಣಾಮಗಳನ್ನು ಅರಿತು ಮಿತವಾಗಿ, ಸಮಯೋಚಿತವಾಗಿ ಮಾತನಾಡಬೇಕು' ಎಂದು ಹೇಳಿದರು.

'ವೈದ್ಯಕೀಯ ಕ್ಷೇತ್ರ ಸೇವಾ ವಲಯದ ಹಿರಿಮೆ ಕಳೆದುಕೊಂಡು ಔದ್ಯಮಿಕ ಕ್ಷೇತ್ರವಾಗುತ್ತಿದೆ' ಎಂದು ಕರ್ನಾಟಕ ಹೋಮಿಯೋಪತಿ ಮಂಡಳಿ ಅಧ್ಯಕ್ಷ ಬಿ.ಟಿ.ರುದ್ರೇಶ್ ಬೇಸರ ವ್ಯಕ್ತಪಡಿಸಿದರು.

ಏರೋಸ್ಪೇಸ್ ಮತ್ತು ವಾಯುಯಾನ ಕೌಶಲ ಮಂಡಳಿ ನಿರ್ದೇಶಕ ಜಿ.ಶ್ರೀಕಾಂತ ಶರ್ಮಾ, ನಟ ರಮೇಶ್ ಅರವಿಂದ್ ಮಾತನಾಡಿದರು. 800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಬಿಜಿಎಸ್- ಎಸ್‌ಜೆಬಿ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ, ಪ್ರಾಂಶುಪಾಲ ಮಹೇಂದ್ರ ಪ್ರಶಾಂತ್, ಚಂದ್ರಶೇಖರ್ ಇದ್ದರು.

ಪ್ರಜಾವಾಣಿ

ನವವರ್ಣ

ನವರಾತ್ರಿ ಸಡಗರದ 9 ವರ್ಣಗಳು

ಈ ನವರಾತ್ರಿಯ ಅಂಗವಾಗಿ ದಿನಕ್ಕೊಂದು ಬಣ್ಣದ ಸೀರೆಯುಟ್ಟು ಸಂಭ್ರಮಿಸುವ ಚಿತ್ರಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಿ ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ಕಾಣಿಸಿಕೊಳ್ಳುವ ಸದವಕಾಶವನ್ನು ಪಡೆದುಕೊಳ್ಳಿ.

| | | |
|---|---|---|
| ಭಾನುವಾರ | 15 ಅಕ್ಟೋಬರ್ | ಹಳದಿ |
| ಸೋಮವಾರ | 16 ಅಕ್ಟೋಬರ್ | ಬಿಳಿ |
| ಮಂಗಳವಾರ | 17 ಅಕ್ಟೋಬರ್ | ಕೆಂಪು |
| ಬುಧವಾರ | 18 ಅಕ್ಟೋಬರ್ | ನೀಲಿ |
| ಗುರುವಾರ | 19 ಅಕ್ಟೋಬರ್ | ಕೇಸರಿ |
| ಶುಕ್ರವಾರ | 20 ಅಕ್ಟೋಬರ್ | ಹಸಿರು |
| ಶನಿವಾರ | 21 ಅಕ್ಟೋಬರ್ | ಬೂದು |
| ಭಾನುವಾರ | 22 ಅಕ್ಟೋಬರ್ | ಗುಲಾಬಿ |
| ಸೋಮವಾರ | 23 ಅಕ್ಟೋಬರ್ | ನೇರಳೆ |

ನಿಮ್ಮ ಪ್ರವೇಶಗಳನ್ನು: +91 7338018541 ಕಳುಹಿಸಿ
ಅಥವಾ ನಮಗೆ ಇಮೇಲ್ ಮಾಡಿ: pv@prajavani.co.in

ಸಹಭಾಗಿತ್ವದಲ್ಲಿ

THE Jewellery SHOW 03, 04 & 05 NOVEMBER 2023 FRIDAY, SATURDAY, SUNDAY BENGALURU PALACE
SSP ಇಂಗು
ದಿ ಚೆನ್ನೈ ಸಿಲ್ಕ್ಸ್
ಶ್ರೀ ಕುಮರನ್ ತಂಗಮಾಳಿಗೈ ಜ್ಯುವೆಲ್ಲರ್ಸ್



# ನಮ್ಮ ಖುಷಿ ನಮ್ಮ ಹಕ್ಕು...

ಸುಕೃತ ಎಸ್.

‘ಗಂಡನಿಗೆ ಬಿಸಿ ಬಿಸಿ ಚಪಾತಿ (ಪುಲ್ಕೆ) ಮಾಡಿ ಕೊಡುವುದು ನನಗೆ ಖುಷಿ ಕೊಡುತ್ತದೆ. ನನ್ನ ತವರು ಮನೆಯಲ್ಲಿ ನನ್ನ ಅಮ್ಮನೂ ನನ್ನ ಅಪ್ಪನಿಗೆ ಬಿಸಿ ಬಿಸಿ ಚಪಾತಿ ಮಾಡಿಕೊಡುತ್ತಾಳೆ. ನನ್ನ ಅಜ್ಜಿ ಕೂಡ ಹೀಗೆ ಮಾಡುತ್ತಿದ್ದಳು. ನಮ್ಮಲ್ಲಿ ಇದು ಹೀಗೆಯೇ ನಡೆಯುವುದು’

‘ಇದು ಹೀಗೆಯೇ ನಡೆಯುವುದು ಎಂದರೆ ಅದು ಸರಿ ಇದೆ ಅಂತಲೇ’

‘ಯಾವುದು ಸರಿ, ಯಾವುದು ತಪ್ಪು ಅಂತ ನೀನು ಹೇಳುತ್ತೀಯಾ ಈಗ. ಗಂಡನ ಸೇವೆ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ’

‘ಹೌದು. ನಾನು ಇದನ್ನು ಒಪ್ಪುತ್ತೇನೆ. ಸೇವೆ ಮಾಡುವುದು ಪುಣ್ಯದ ಕೆಲಸವೇ ಸರಿ. ಆದರೆ, ಸೇವೆಯು ಒಂದೇ ಕಡೆಯಿಂದ ಆಗುತ್ತಿದ್ದರೆ, ಅದನ್ನು ಸೇವೆ ಎನ್ನುವುದಿಲ್ಲ; ಗುಲಾಮಗಿರಿ ಎನ್ನುತ್ತಾರೆ’

ಮೊದಲೇ ಹೇಳಿಬಿಡುತ್ತೇನೆ. ಇದು ಸಿನಿಮಾವೊಂದರ ಸಂಭಾಷಣೆ. ಆದರೆ, ಈ ಸಂಭಾಷಣೆಯ ರಚನೆಯನ್ನು ಗಮನಿಸಿದರೆ ಯಾರು ಯಾರಿಗೆ ಹೇಳಿದರು, ಯಾಕಾಗಿ ಹೇಳಿದರು, ಯಾವ ಸಂದರ್ಭದಲ್ಲಿ ಈ ಸಂಭಾಷಣೆ ನಡೆಯಿತು... ಬಹುಶಃ ಹೀಗೆ ಯಾವ ಪ್ರಶ್ನೆಯನ್ನು ಹಾಕಿಕೊಳ್ಳದೆಯೂ ನಮಗೆ ವಿಷಯ ಅರ್ಥವಾಗಿ ಬಿಡುತ್ತದೆ. ಆದರೂ ಹೇಳಿಬಿಡುತ್ತೇನೆ. ಇದು ಇತ್ತೀಚೆಗಷ್ಟೇ ಬಿಡುಗಡೆಯಾದ ‘ರಾಕಿ ಔರ್ ರಾಣಿ ಕಿ ಪ್ರೇಮ್ ಕಥಾ’ ಸಿನಿಮಾದ ಸಂಭಾಷಣೆ. ಅತ್ತೆಯಾಗಲಿರುವ ಪೂನಂ ರನ್‌ಧಾವಾ (ಕ್ಷಿತಿ ಜೋಗ್) ಸೊಸೆಯಾಗಲಿರುವ ರಾಣಿ (ಆಲಿಯಾ ಭಟ್) ಮಧ್ಯೆ ನಡೆಯುವ ಸಂಭಾಷಣೆ ಇದು.

> ನಮ್ಮ ನಮ್ಮ ಖುಷಿಯ ಮಾದರಿಗಳನ್ನು ನಾವೇ ಹುಡುಕಿಕೊಳ್ಳಬೇಕು. ಈ ಹುಡುಕಾಟ ನಿರಂತರ...

ಮದುವೆಯಾದ ಮಹಿಳೆಯರಿಗೆ ‘ಖುಷಿ’ ನೀಡುವ ಹಲವು ಸಂಗತಿಗಳಿವೆ. ಇವು ನಿಜಕ್ಕೂ ಅವರ ಮನಸ್ಸಿನಾಳದಿಂದ ಪಡುವ ಖುಷಿಯೋ ಅಥವಾ ಇಂಥ ವಿಷಯಕ್ಕೇ ಖುಷಿಪಡಬೇಕು ಎಂದು ಸಮಾಜವು ಹೇಳಿಕೊಟ್ಟ ಖುಷಿಯೋ ಎನ್ನುವುದೇ ಈಗ ಚರ್ಚಾ ವಿಷಯ. ಪುರುಷನೊಬ್ಬನಿಗೆ ಆಗುವ ಖುಷಿಗೆ ಕಾರಣಗಳು ಹಲವು ಇರುತ್ತವೆ ಮತ್ತು ಅವುಗಳು ಅವರ ವ್ಯಕ್ತಿ ಸ್ವಾತಂತ್ರ್ಯದ ಭಾಗವೇ ಆಗಿರುತ್ತವೆ. ಆದರೆ, ಮಹಿಳೆಯ ವಿಷಯ ಹೀಗಲ್ಲ. ಆಕೆಗೆ ವ್ಯಕ್ತಿ ಸ್ವಾತಂತ್ರ್ಯ ವ್ಯಾಪ್ತಿ ಬಹಳ ಸೀಮಿತವಾದುದು. ಗಂಡನಿಗೆ ರುಚಿಯಾದ ಅಡುಗೆ ಮಾಡುವುದು, ಮಕ್ಕಳನ್ನು ಚೆನ್ನಾಗಿ ಬೆಳೆಸುವುದು, ಮನೆ ಮರ್ಯಾದೆ ಕಾಪಾಡುವುದು, ಮನೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಇವೇ ಆಕೆಯ ಪ್ರಪಂಚ ಮತ್ತು ಇದರಲ್ಲೇ ಆಕೆ ಖುಷಿಪಡಬೇಕು.

ಮನೆ ಮರ್ಯಾದೆ ಕಾಪಾಡುವುದು ಎಂದ ಕೂಡಲೇ ನಮ್ಮ ಊರಿನಲ್ಲಿ ನಡೆದ ಘಟನೆಯೊಂದು ನೆನಪಿಗೆ ಬಂತು. ದಂಪತಿಗೆ ಇಬ್ಬರು ಹೆಣ್ಣುಮಕ್ಕಳು. ಅಕ್ಕನಿಗೆ ಮದುವೆ ಮಾಡಲಾಯಿತು. ಆದರೆ, ಆಕೆಯ ಸಂಸಾರ ಸರಿಹೊಂದಲಿಲ್ಲ. ಗಂಡನಿಂದ ದೌರ್ಜನ್ಯ ಎದುರಿಸಿದಳು. ಇನ್ನು ಸಹಿಸಲು ಅಸಾಧ್ಯ ಎಂದಾಗ ತವರು ಮನೆಗೆ ಬಂದಳು. ತಂಗಿಯ ಮದುವೆಯೂ ನಡೆಯಿತು. ಆಕೆಯದ್ದೂ ಇದೇ ಪರಿಸ್ಥಿತಿ. ಗಂಡ, ಅತ್ತೆ ಸೇರಿ ಕೋಣೆಯಲ್ಲಿ ಕೂಡಿ ಹಾಕುತ್ತಿದ್ದರು. ಎರಡೆರಡು ದಿನ ಕಳೆದರೂ ಊಟ ನೀಡುತ್ತಿರಲಿಲ್ಲ. ಎರಡು ವರ್ಷದ ಮಗಳಿಗೂ ಹೊಡೆಯುತ್ತಿದ್ದರು. ತವರು ಮನೆಗೆ ಬರಬೇಕು. ಹೀಗೆನ್ನಿಸಿದರೂ ಆಕೆ ಬರಲಿಲ್ಲ. ಅಕ್ಕನಿಗೂ ಹೀಗೆಯೇ ಆಯಿತು, ತಂಗಿಗೂ ಹೀಗೇ ಆಯಿತು ಎಂದಾದರೆ ಸಮಾಜ ತನ್ನ ತಂದೆ–ತಾಯಿಯ ಬಗ್ಗೆ ಏನು ಅಂದುಕೊಳ್ಳುತ್ತದೆಯೋ ಎಂದು ಭಾವಿಸಿ ತಂಗಿಯು ತವರು ಮನೆಗೆ ಬರಲು ಒಪ್ಪಲಿಲ್ಲ. ಮನೆ ಮರ್ಯಾದೆ ಕಾಪಾಡಿದ ‘ಖುಷಿ’ ಅನುಭವಿಸಿದ್ದಳು ತಂಗಿ.

ಹೇಳುತ್ತಾ ಹೋದರೆ ಇಂಥ ಹಲವು ಉದಾಹರಣೆಗಳಿವೆ. ಸಮಾಜ ಹೇರುವ ಇಂಥ ‘ಖುಷಿ’ಗಳನ್ನು ಅನುಭವಿಸಿ ಅನುಭವಿಸಿ ಮಹಿಳೆ ತಾನೇ ಇಂಥ ‘ಖುಷಿ’ಗಳಿಗೆ ಹೊಂದಿಕೊಂಡು ಬಿಟ್ಟಿದ್ದಾಳೆ. ಆದರೆ, ವಾಸ್ತವದಲ್ಲಿ ಇಂಥ ಯಾವ ‘ಖುಷಿ’ಯನ್ನೂ ಹೆಣ್ಣೊಬ್ಬಳು ಅನುಭವಿಸಬೇಕಾಗಿಲ್ಲ. ಮತ್ತು ಸಮಾಜ ವಿಧಿಸಿರುವ ಇಂಥ ‘ಖುಷಿಯ ಮಾದರಿ’ಗಳಿಂದ ಮಹಿಳೆ ಹೊರಬರಬೇಕಿದೆ. ನಮ್ಮ ಬಗ್ಗೆ ನಾವು ಖುಷಿ, ಹೆಮ್ಮೆ ಪಡುವುದಕ್ಕೆ, ನಮ್ಮನ್ನು ನೋಡಿ ನಮ್ಮ ಸಮಾಜ ಹೆಮ್ಮೆ ಪಡುವುದಕ್ಕೆ ಬೇರೆ ಹಲವು ಮಾರ್ಗಗಳಿವೆ. ಅವುಗಳನ್ನು ನಾವು ಕಂಡುಕೊಳ್ಳಬೇಕಿದೆ.

ನಮ್ಮ ನಮ್ಮ ‘ಖುಷಿಯ ಮಾದರಿ’ಗಳನ್ನು ನಾವೇ ಹುಡುಕಿಕೊಳ್ಳಬೇಕಿದೆ. ನನಗಂತೂ ಹಾಡು ಕಲಿಯುವುದೆಂದರೆ, ಹಾಡುವುದು ಎಂದರೆ ಬಹಳ ಖುಷಿ ನೀಡುತ್ತದೆ. ನಿಮಗೆ ಯಾವುದು ಖುಷಿ ನೀಡುತ್ತದೆ... ಯೋಚಿಸಿ, ಖುಷಿಯಾಗಿರಿ... ಚಿಲ್‌ಔಟ್...

## ನಮ್ಮ ‘ಖುಷಿಯ ಮಾದರಿ’




**ಉದ್ಯೋಗದ ಖುಷಿ:** ಮನೆಗೆಲಸದಲ್ಲೇ ಮುಳುಗಿರುವ ಮಹಿಳೆಯರಿಗೆ ಸ್ವಂತದ್ದೊಂದು ಉದ್ಯೋಗ ಮಾಡುವ ಆಸೆ ಇರುತ್ತದೆ. ಇಲ್ಲವೇ ಉದ್ಯೋಗಿ ಆಗುವ ಕನಸು ಇರಬಹುದು. ಸ್ವತಂತ್ರವಾಗುವ ಖುಷಿಯೇ ಬೇರೆ ಅಲ್ಲವೇ? ಇದನ್ನು ಕಳೆದುಕೊಳ್ಳಬೇಡಿ; ಅನುಭವಿಸಿ.

**ವ್ಲಾಗಿಂಗ್:** ದೇಶದಲ್ಲಿ ಕೋವಿಡ್ ಕಾಲದ ನಂತರವಂತೂ ಮಹಿಳೆಯರೂ ಸೇರಿದಂತೆ ಎಲ್ಲರೂ ವ್ಲಾಗಿಂಗ್ ಮಾಡುತ್ತಿದ್ದಾರೆ. ದೇಶದ ಮೂಲೆ ಮೂಲೆಗಳ ಗ್ರಾಮಗಳಿಂದಲೂ ಮಹಿಳೆಯರು ತಮ್ಮ ದೈನಂದಿನ ಜೀವನವನ್ನು ತೋರಿಸುತ್ತಾ, ಆರೋಗ್ಯ, ಅಡುಗೆ, ಸೌಂದರ್ಯ ಟಿಪ್ಸ್ ನೀಡುತ್ತಾ ವಿಡಿಯೊಗಳನ್ನು ಪೋಸ್ಟ್ ಮಾಡುತ್ತಿದ್ದಾರೆ. ಇದರಿಂದ ಆದಾಯವೂ ಬರುತ್ತಿದೆ.

**ನಾನಿರುವುದೇ ಹೀಗೆ ಎಂದು ಸಾರುವ ಖುಷಿ:** ನಾನು ದಪ್ಪ ಇದ್ದೇನೆ. ತೆಳ್ಳಗೆ ಆಗಬೇಕು ಎಂದು ನನಗೆ ಅನ್ನಿಸುತ್ತಿಲ್ಲ (ಆರೋಗ್ಯ ಸಮಸ್ಯೆಯ ಬಗ್ಗೆ ಕಾಳಜಿ ವಹಿಸಿ), ನಾನು ಹೇಗಿದ್ದೇನೊ ಹಾಗೆಯೇ ಖುಷಿಯಾಗಿದ್ದೇನೆ ಎನ್ನುವ ಆತ್ಮವಿಶ್ವಾಸವು ಬಹುಮುಖ್ಯವಾದ ಖುಷಿ. ತೆಳ್ಳಗಿರುವುದು, ಬೆಳ್ಳಗಿರುವುದೇ ಸೌಂದರ್ಯ ಎನ್ನುವ ಕಟ್ಟುಕಥೆಗಳಿಗೆ ಕಟ್ಟುಬಿದ್ದು ಒತ್ತಡ ಅನುಭವಿಸುವ ಅಗತ್ಯ ಇಲ್ಲ.

**ಬೇಕಾದ ಕೋರ್ಸ್ ಓದಬಹುದು:** ಹೆಣ್ಣುಮಕ್ಕಳಿಗೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದುವುದು ಕಷ್ಟ. ಆ ಕೋರ್ಸ್ ಬೇಡ. ಹೆಣ್ಣುಮಕ್ಕಳು ಸಂಗೀತ ಕಲಿಯಬಹುದು. ತಬಲಾ, ಗಿಟಾರ್ ಎಲ್ಲ ಗಂಡಸರು ನುಡಿಸುವ ವಾದ್ಯಗಳು. ಅದರ ಕಲಿಕೆ ಬೇಡ. ಹೆಣ್ಣುಮಕ್ಕಳಿಗೆ ವಾಹನ ಚಾಲನೆ ಬರುವುದಿಲ್ಲ. ಇತ್ತೀಚೆಗಂತೂ ರಸ್ತೆಯಲ್ಲಿ ಎಲ್ಲರೂ ಅಡ್ಡಾದಿಡ್ಡಿ ಬರುತ್ತಾರೆ. ವಾಸ್ತವದಲ್ಲಿ ಈ ಎಲ್ಲವನ್ನೂ ಹೆಣ್ಣು ಮಾಡಬಹುದು.ಇಲ್ಲಿ ಹೇಳಿರುವುದು ಕೆಲವು ಮಾದರಿಗಳಷ್ಟೇ. ಮೊದಲೇ ಹೇಳಿದಂತೆ ನಮ್ಮ ‘ಖುಷಿಯ ಮಾದರಿ’ಗಳನ್ನು ನಾವೇ ಕಂಡುಕೊಳ್ಳಬೇಕು.

# ದೌರ್ಬಲ್ಯಗಳನ್ನು ಮೀರುವುದು ಹೇಗೆ?



ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **ನನಗೆ ನನ್ನ ದೌರ್ಬಲ್ಯಗಳು ಯಾವುವು ಎಂದು ಗೊತ್ತು. ಅದರಿಂದ ದೂರ ಉಳಿಯುವುದು ಹೇಗೆ ಎಂಬುದೂ ಗೊತ್ತು. ಆದರೆ, ಪ್ರಾಯೋಗಿಕವಾಗಿ ದೂರ ಉಳಿಯಲು ಸಾಧ್ಯವಾಗುತ್ತಿಲ್ಲವೇಕೆ? ಈ ಗೊಂದಲಕ್ಕೆ ಮಾರ್ಗದರ್ಶನ ನೀಡಿ.**

**ಹೆಸರು ಊರು ತಿಳಿಸಿಲ್ಲ.**

ನಿಮ್ಮನ್ನು ಮತ್ತು ನಿಮ್ಮ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಬೇಕಾದ ಸ್ಪಷ್ಟ ವಿವರಗಳು ಪತ್ರದಲ್ಲಿಲ್ಲ. ದೌರ್ಬಲ್ಯಗಳೆಂದು ಹೇಳಿರುವ ಪ್ರವೃತ್ತಿಗಳ ಕುರಿತು ಮಾತನಾಡಲು ಬಹಳ ಹಿಂಜರಿಕೆಯಾಗುತ್ತಿರಬೇಕಲ್ಲವೇ? ಮಾನವನ ಮಿದುಳು ನರಮಂಡಲಗಳು ಹಂಚಿಕೊಂಡು ಬದುಕುವುದಕ್ಕಾಗಿಯೇ ಸೃಷ್ಟಿಯಾಗಿವೆ. ದೌರ್ಬಲ್ಯಗಳ ಕುರಿತು ಯಾರಲ್ಲಿಯೂ ಮುಕ್ತವಾಗಿ ಹಂಚಿಕೊಳ್ಳುವುದನ್ನು ತಡೆಯುವ ಹಿಂಜರಿಕೆಯೇ ಪರಿಹಾರಗಳನ್ನು ಹುಡುಕುವುದಕ್ಕೂ ಅಡ್ಡಬರುತ್ತಿದೆ. ತಿಳಿದಿರುವುದನ್ನು ಮಾಡಲಾಗದಿರುವುದು ನಮ್ಮೆಲ್ಲರ ಸಮಸ್ಯೆ. ಇದಕ್ಕೆ ಪರಿಹಾರ ಹುಡುಕಲು ನಮ್ಮ ಮಿದುಳಿನ ರಚನೆಯ ಕುರಿತು ಸ್ವಲ್ಪ ತಿಳಿದುಕೊಳ್ಳುವ ಅಗತ್ಯವಿದೆ.

ದೌರ್ಬಲ್ಯಗಳಿಗೆ ಪರಿಹಾರಗಳು ನಿಮಗೆ ಗೊತ್ತಿರುವುದು ನಿಜ. ಆದರೆ ದೌರ್ಬಲ್ಯಗಳ ಹುಟ್ಟಿನ ಮೂಲ ನಿಮಗೆ ಗೊತ್ತಿರಲಾರದು. ಈ ಕ್ಷಣಕ್ಕೆ ನಮ್ಮ ತರ್ಕಕ್ಕೆ ಸಿಗುವ ಅಂಶಗಳು ಮುಮ್ಮೆದುಳಿನಲ್ಲಿ ಇರುತ್ತವೆ. ಮಾನವರ ವೈಶಿಷ್ಯವಾಗಿರುವ ಈ ಮುಮ್ಮೆದುಳು ಒಟ್ಟು ಮಿದುಳಿನ ಸುಮಾರು ಶೇ 25 ಭಾಗ ಮಾತ್ರ. ಉಳಿದ ಶೇ 75 ಭಾಗ ಮಿದುಳಿನಲ್ಲಿ ಬಾಲ್ಯದಿಂದ ನಾವು ಎದುರಿಸಿರುವ ಸಂದರ್ಭಗಳಿಂದ ಮೂಡಿದ ಅನುಭವಗಳ ದಾಖಲೆ ಇರುತ್ತದೆ. ಆಗಿನ ಎಲ್ಲಾ ಘಟನೆಗಳು ಈ ಕ್ಷಣಕ್ಕೆ ನೆನಪಾಗದಿದ್ದರೂ ಅವುಗಳಿಗೆ ಸಂಬಂಧಿಸಿದ ಅನುಭವಗಳು ನಮಗೆ ಪ್ರೇರಕ ಶಕ್ತಿಗಳಾಗಿರುತ್ತವೆ. ಇವುಗಳನ್ನು ಅಂತರ್ಗತದ ನೆನಪುಗಳು (Implicit Memory) ಎನ್ನಲಾಗುತ್ತದೆ. ಇಂತಹ ಅನುಭವಗಳ ಆಧಾರದ ಮೇಲೆ ನಾವು ಹೊರಜಗತ್ತನ್ನು ನೋಡುತ್ತಾ ಸಂಬಂಧಗಳನ್ನು ಕಟ್ಟಿಕೊಳ್ಳುತ್ತಾ ಬದುಕನ್ನು ರೂಪಿಸಿಕೊಳ್ಳುತ್ತಾ ಹೋಗುತ್ತೇವೆ. ತಕ್ಷಣಕ್ಕೆ ನೆನಪಿಗೆ ಬರದ ಈ ಅನುಭವಗಳ ಹಿನ್ನೆಲೆ ನಮ್ಮ ಮುಮ್ಮೆದುಳಿನ ಹಿಡಿತದಲ್ಲಿ ಇರುವುದಿಲ್ಲ. ಹಾಗಾಗಿ ದೌರ್ಬಲ್ಯಗಳ ಹಿಂದಿರುವ ಪ್ರೇರಕ ಶಕ್ತಿಗಳೇನು ಎಂದು ನಮ್ಮ ಅರಿವಿಗೆ ಬರುವುದಿಲ್ಲ. ಅದನ್ನು ತಿಳಿದುಕೊಂಡಾಗ ಮಾತ್ರ ಅವುಗಳನ್ನು ಮೀರುವುದು ಸುಲಭವಾಗುತ್ತದೆ. ಉದಾಹರಣೆಗೆ ಬೇಸರ ವೈಫಲ್ಯ ಒತ್ತಡ ಮುಂತಾದವುಗಳನ್ನು ಎದುರಿಸಲು ಸಾಧ್ಯವಾಗದಿದ್ದಾಗ ನಶೆಯ ವಸ್ತುಗಳ ಮೂಲಕ ಅವುಗಳನ್ನು ಮರೆಯಲು ಪ್ರಯತ್ನಿಸಬಹುದು. ತಾತ್ಕಾಲಿಕವಾಗಿ ಸಮಾಧಾನ ನೀಡುವ ನಶೆಯ ವಸ್ತುಗಳು ನಮ್ಮನ್ನು ಸಮಾಜದಿಂದ ದೂರತಳ್ಳುತ್ತವೆ. ಕೇವಲ ಧೃಢ ನಿರ್ಧಾರದಿಂದ ಇಂಥ ವ್ಯಸನಗಳಿಂದ ಹೊರಬರುವುದು ಸಾಧ್ಯವಿಲ್ಲ. ಬದುಕಿನ ವಾಸ್ತವಗಳನ್ನು ಎದುರಿಸುವುದನ್ನು ಕಲಿಯಬೇಕಾಗುತ್ತದೆ. ಇದಕ್ಕಾಗಿ ತಜ್ಞ ಮನೋಚಿಕಿತ್ಸಕರ ಸಹಾಯದ ಅಗತ್ಯವಿರುತ್ತದೆ. ಅಂಥವರ ಸೇವೆ ಲಭ್ಯವಿದ್ದರೆ ಬಳಸಿಕೊಳ್ಳಿ.

- **ನನ್ನ ಮಗ ಶಾಲೆಗೆ ಹೋಗುವುದಕ್ಕೆ ಹಿಂಜರಿಯುತ್ತಾನೆ ಮತ್ತು ದಿನ ಅಳುತ್ತಾನೆ. ತನಗೆ ಸರಿ ಹೋಗುವುದಿಲ್ಲ ಎಂದು ಹೇಳುತ್ತಾನೆ. ಅವನ ಬಗೆಗಿನ ಚಿಂತೆಯಿಂದ ಬಹಳ ಬೇಸರದಲ್ಲಿದ್ದೇವೆ. ಅವನನ್ನು ಶಾಲೆಗೆ ಕಳಿಸುವುದು ಹೇಗೆ ಎಂಬುದನ್ನು ತಿಳಿಸಿಕೊಡಿ.**

**ಹೆಸರು ಊರು ತಿಳಿಸಿಲ್ಲ.**

ಮಕ್ಕಳ ಶಾಲಾಭಯದ ಕುರಿತು ಆಗಸ್ಟ್ 19ರ ಸಂಚಿಕೆಯಲ್ಲಿ ದೀರ್ಘವಾಗಿ ಬರೆಯಲಾಗಿದೆ. 2ನೇ ಸೆಪ್ಟೆಂಬರ್‌ರಂದು ಮಕ್ಕಳೊಡನೆ ಸುಮಧುರ ಬಾಂಧವ್ಯ ರೂಪಿಸಿಕೊಳ್ಳುವ ಕುರಿತು ಬರೆಯಲಾಗಿದೆ. ದಯವಿಟ್ಟು ಇವುಗಳನ್ನು ಗಮನಿಸಿ. ಮಕ್ಕಳಿಗೆ ಶಾಲೆಯ ವಾತಾವರಣದಲ್ಲಿ ಸುರಕ್ಷಿತ ಭಾವ ಮೂಡದಿದ್ದಾಗ ಅವರು ಶಾಲೆಗೆ ಹೋಗಲು ಸಿದ್ಧರಾಗುವುದಿಲ್ಲ. ತಮ್ಮ ಭಯ, ಹಿಂಜರಿಕೆಗಳನ್ನು ಅರ್ಥಮಾಡಿಕೊಂಡು ಭಾಷೆಯ ಮೂಲಕ ವ್ಯಕ್ತಪಡಿಸಲು ಬೇಕಾದ ಮಿದುಳಿನ ಭಾಗಗಳು ಮಕ್ಕಳಲ್ಲಿ ಬೆಳೆದಿರುವುದಿಲ್ಲ. ಹಾಗಾಗಿ ಶಾಲೆಗೆ ಹೋಗುವುದನ್ನು ವಿರೋಧಿಸಲು ಮಕ್ಕಳು ಇತರ ವರ್ತನೆಗಳಾದ ಅಳು, ಹಟಮಾರಿತನ, ಸಿಟ್ಟು ಮುಂತಾದವುಗಳನ್ನು ತೋರಿಸುತ್ತಾರೆ.

ಮಕ್ಕಳಿಗೆ ಶಾಲೆಯ ವಾತಾವರಣ ಏಕೆ ಸುರಕ್ಷಿತ ಅನ್ನಿಸುತ್ತಿಲ್ಲ ಎನ್ನುವುದನ್ನು ತಿಳಿಯುವ ಅಗತ್ಯವಿರುತ್ತದೆ. ಪೋಷಕರು ಮಕ್ಕಳೊಡನೆ ಹೇಗೆ ಮಾತನಾಡಬಹುದು ಎಂದು ಹಿಂದೆ ತಿಳಿಸಲಾಗಿದೆ. ನಿಮಗೆ ಕಷ್ಟವೆನ್ನಿಸಿದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಬೇಕು.

### ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

# ಪುಂಡಿ ಸೊಪ್ಪಿನ ಪುಳಿಯೋಗರೆ

ಪೂರ್ಣಿಮಾ ಗೊಂದೆನಾಯ್ಕರ

ನಳಪಾಕ

ಹುಣಸೆಹುಳಿಯ ಪುಳಿಯೋಗರೆ ಎಲ್ಲರಿಗೂ ಗೊತ್ತು. ಆಗಿಂದಾಗ ಮಾಡಿಕೊಂಡು, ಉಣ್ಣಬಹುದಾದ ಪುಳಿಯೋಗರೆಯನ್ನೇ ಹೋಲುವ ಖಾದ್ಯ ಇದು. ಪುಂಡಿಪುಳಿಯೋಗರೆ. ಪುಂಡಿ ಸೊಪ್ಪನ್ನು ಬಳಸಿ ಮಾಡುವ ಈ ಪುಳಿಯೋಗರೆ ನಾಲಗೆಯ ರುಚಿಮೊಗ್ಗುಗಳನ್ನು ಅರಳಿಸಿ, ಹೊಟ್ಟೆ ಹಸಿಯುವಂತೆ ಮಾಡುತ್ತದೆ. ಹಸಿರು ಬಣ್ಣದ ಈ ಪುಳಿಯೋಗರೆ ಪ್ರಯತ್ನಿಸಿ ನೋಡಿ

**ಬೇಕಾಗುವ ಸಾಮಗ್ರಿಗಳು:** ಒಂದು ಕಟ್ಟು ಪುಂಡಿ ಸೊಪ್ಪು, ಬೇಯಿಸಿದ ಅನ್ನ ಒಂದು ಬಟ್ಟಲು, ಎಣ್ಣೆ, ಶೇಂಗಾ, ಗೋಡಂಬಿ, ದ್ರಾಕ್ಷಿ, ಉದ್ದಿನಬೇಳೆ, ಕಡ್ಲೆಬೇಳೆ, ಸಾಸಿವೆ, ಜೀರಿಗೆ, ಉಪ್ಪು, ಅರಿಶಿಣ, ಕೆಂಪು ಒಣ ಮೆಣಸಿನಕಾಯಿ, ಮೆಂತೆಕಾಳು, ಕೊತ್ತಂಬರಿ ಸೊಪ್ಪು.

**ಮಾಡುವ ವಿಧಾನ:** ಕಾದ ಬಾಣಲಿಗೆ ಎರಡು ಸಣ್ಣ ಚಮಚ ಎಣ್ಣೆ ಹಾಕಿ ಅದಕ್ಕೆ ಅರ್ಧ ಚಮಚ ಮೆಂತೆಕಾಳು, 5ರಿಂದ 6 ಕೆಂಪು ಒಣ ಮೆಣಸಿನಕಾಯಿ, ಬಿಡಿಸಿಟ್ಟುಕೊಂಡ ಪುಂಡಿಸೊಪ್ಪು ಹಾಕಿ ಹುರಿದುಕೊಳ್ಳಬೇಕು. ಹುರಿದುಕೊಂಡ ಸಾಮಗ್ರಿಗಳನ್ನು ನೀರು ಹಾಕದೆ ಮಿಕ್ಸಿಯಲ್ಲಿ ನುಣ್ಣಗೆ ರುಬ್ಬಿಟ್ಟುಕೊಳ್ಳಬೇಕು. ನಂತರ ಒಂದು ಬಾಣಲಿಯಲ್ಲಿ ತುಪ್ಪದಲ್ಲಿ ಗೋಡಂಬಿ, ದ್ರಾಕ್ಷಿ, ಶೇಂಗಾ ಹುರಿದಿಟ್ಟುಕೊಳ್ಳಬೇಕು. ಪುಳಿಯೋಗರೆ ತಯಾರಿಗಾಗಿ ಒಂದು ಬಾಣಲಿಗೆ ಪಲ್ಯಕ್ಕೆ ಬೇಕಾಗುವಷ್ಟು ಎಣ್ಣೆ ಹಾಕಿ ಅದಕ್ಕೆ ಉದ್ದಿನಕಾಳು, ಸಾಸಿವೆ, ಜೀರಿಗೆ, ಕರಿಬೇವು, ಕೆಂಪು ಒಣ ಮೆಣಸಿನಕಾಯಿ, ಅರಿಶಿಣ (ಖಾರ ಜಾಸ್ತಿ ಬೇಕೆನ್ನುವವರು ಹಸಿಮೆಣಸಿನಕಾಯಿ ಹಾಕಿಕೊಳ್ಳಬಹುದು), ರುಬ್ಬಿಟ್ಟುಕೊಂಡ ಪುಂಡಿಸೊಪ್ಪಿನ ಪೌಡರ್ ಹಾಕಿ ಮಿಕ್ಸ್ ಮಾಡಿ ನಂತರ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಬೇಯಿಸಬೇಕು. ಚೆನ್ನಾಗಿ ಬೆಂದ ನಂತರ ತಯಾರಿಸಿಟ್ಟುಕೊಂಡ ಅನ್ನವನ್ನು ಹಾಕಿ ಚಿತ್ರಾನ್ನ ರೀತಿಯಲ್ಲಿ ಮಿಶ್ರಣ ಮಾಡಬೇಕು.



ಪುಂಡಿ ಸೊಪ್ಪಿನ ಪುಳಿಯೋಗರೆ

ಪುಂಡಿಸೊಪ್ಪು- ಚಿತ್ರ-ಗೋವಿಂದರಾಜ ಜವಳಿ

# ಎಂದಿಗೂ ಹಳತಾಗದ ‘ಸ್ಕಾರ್ಫ್’ ಫ್ಯಾಷನ್



ಉಡುಗೆ ತೊಡುಗೆ

ಚೇತನ ಜೆ.ಕೆ.

ಹಿಂದೆಲ್ಲಾ ಚಳಿಗಾಲದಲ್ಲಿ ಬೆಚ್ಚಗಿರಲು ಸ್ಕಾರ್ಫ್‌ಗಳನ್ನು ಧರಿಸಲಾಗುತ್ತಿತ್ತು. ಕ್ರಮೇಣ ಸ್ಕಾರ್ಫ್‌ಗಳಿಗೆ ಫ್ಯಾಷನ್ ಟಚ್ ಕೊಡಲಾಯಿತು. ಧರಿಸಿರುವ ಉಡುಪಿನ ಅಂದ ಹೆಚ್ಚಿಸಲು, ಇನ್ನಷ್ಟು ಸ್ಟೈಲಿಶ್ ಆಗಿ ಕಾಣಲು ಮಹಿಳೆಯರು ಸ್ಕಾರ್ಫ್ ಧರಿಸಲಾರಂಭಿಸಿದರು. ಧರಿಸಿರುವ ಸ್ಕಾರ್ಫ್ ವ್ಯಕ್ತಿಯ ವ್ಯಕ್ತಿತ್ವವನ್ನೂ ಸೂಚಿಸುತ್ತದೆ. ಸ್ಕಾರ್ಫ್ ಬಳಕೆ ಈಚಿನದ್ದಲ್ಲ. ಕ್ರಿ.ಶ. 1350ರಲ್ಲಿಯೇ ಈಜಿಪ್ಟಿನ ರಾಣಿ ನೆಫರ್‌ಟಿಟಿ ಉಣ್ಣೆಯ ನೂಲಿನಿಂದ ಹೆಣೆದ ಸ್ಕಾರ್ಫ್‌ಅನ್ನು ಕತ್ತಿನ ಸುತ್ತ ಧರಿಸುತ್ತಿದ್ದರು ಎಂಬ ಉಲ್ಲೇಖವು ಇತಿಹಾಸದಲ್ಲಿದೆ. ಫ್ಯಾಷನ್ ಟ್ರೆಂಡ್ ಪುನರಾವರ್ತನೆ ಆಗುತ್ತಿರುತ್ತದೆ ಎಂಬುದಕ್ಕೆ ಸ್ಕಾರ್ಫ್ ಟ್ರೆಂಡ್ ಸಾಕ್ಷಿ. 2023ರಲ್ಲಿದ್ದೇವೆ. ಆದರೂ ಈ ಟ್ರೆಂಡ್ ಮತ್ತೆ ಸದ್ದು ಮಾಡುತ್ತಿದೆ.



## ಈಗ ಟ್ರೆಂಡ್‌ನಲ್ಲಿರುವ ಸ್ಕಾರ್ಫ್ ಮಾದರಿಗಳು

**ಚೌಕಾಕಾರದ ಸ್ಕಾರ್ಫ್ (ಸ್ಕ್ವೇರ್ ಸ್ಕಾರ್ಫ್):** ಚಿಕ್ಕಗಾತ್ರದ ಚೌಕಾಕಾರದ ಸ್ಕಾರ್ಫ್‌ಗಳು ಇಂದಿನ ಕಾಲೇಜು ಹುಡುಗಿಯರು ಮತ್ತು ಉದ್ಯೋಗಸ್ಥ ಮಹಿಳೆಯರ ನೆಚ್ಚಿನ ಆಯ್ಕೆ. ತ್ರಿಕೋನಾಕಾರವಾಗಿ ಈ ಸ್ಕಾರ್ಫ್ ಅನ್ನು ಮಡಚಿ ಕತ್ತಿನ ಸುತ್ತ ಧರಿಸುವುದು ಬಹಳ ಸುಲಭ. ಎಲ್ಲಾ ರೀತಿಯ ನೆಕ್‌ಗಳಿಗೂ ಈ ಮಾದರಿಯ ಸ್ಕಾರ್ಫ್ ಹೊಂದುತ್ತದೆ. ಸ್ಲೀವ್‌ಲೆಸ್ ತೋಳಿನ ಡ್ರೆಸ್ ಧರಿಸಿದಾಗ ಮುಂಗೈಗೆ ಸ್ಕಾರ್ಫ್ ಕಟ್ಟಿಕೊಂಡರೆ ನಿಮ್ಮದೇ ಆದ ಸ್ಟೈಲ್ ಸ್ಟೇಟ್‌ಮೆಂಟ್ ಕೊಟ್ಟಂತೆ. ಜುಟ್ಟಿಗೆ, ಸ್ಲಿಂಗ್ ಬ್ಯಾಗ್‌ಗೆ ಕಟ್ಟುವ ಫ್ಯಾಷನ್ ಕೂಡ ಚಾಲ್ತಿಯಲ್ಲಿದೆ.

**ಬ್ಲಾಂಕೆಟ್ ಸ್ಕಾರ್ಫ್:** ಇನ್ನೇನು ಚಳಿಗಾಲ ಆರಂಭವಾಗುತ್ತದೆ. ಬ್ಲಾಂಕೆಟ್ ಸ್ಕಾರ್ಫ್‌ಗಳನ್ನು ಕೊಂಡು ನಿಮ್ಮ ವಾರ್ಡ್‌ರೋಬ್‌ಗಳಲ್ಲಿ ಇರಿಸಲು ಇದು ಸೂಕ್ತ ಸಮಯ. ಉಣ್ಣೆಯಿಂದ ತಯಾರಿಸಲಾಗುವ ಈ ಸ್ಕಾರ್ಫ್‌ಗಳನ್ನು ಕತ್ತಿನ ಸುತ್ತ ಧರಿಸಿದರೆ ಅಥವಾ ಭುಜಗಳ ಮೇಲೆ ಹಾಗೇ ಹರಿಬಿಟ್ಟರೆ ಚಂದ. ಪ್ಲೇನ್ ಟಿ–ಶರ್ಟ್ ಅಥವಾ ಕುರ್ತಿ ಮೇಲೆ ಇದನ್ನು ಧರಿಸಿದರೆ ಚಳಿಗಾಲದಲ್ಲಿ ಟ್ರೆಂಡಿ ಆಗಿ ಕಾಣುತ್ತೀರಿ. ದೊಡ್ಡ ಚೆಕ್ಸ್, ದೊಡ್ಡ ಹೂಗಳ ಪ್ರಿಂಟ್ ಇರುವ ಬ್ಲಾಂಕೆಟ್ ಸ್ಕಾರ್ಫ್‌ಗಳು ಈಗ ಟ್ರೆಂಡ್‌ನಲ್ಲಿ ಇವೆ.

**ಉದ್ದನೆಯ ಸ್ಕಾರ್ಫ್ (ಲಾಂಗ್ ಸ್ಕಾರ್ಫ್):** ಈ ಮಾದರಿಯ ಸ್ಕಾರ್ಫ್‌ಗಳು ಸಾರ್ವಕಾಲಿಕ ಫ್ಯಾಷನ್ ಸ್ಟೇಟ್‌ಮೆಂಟ್ ಎಂದೇ ಕರೆಸಿಕೊಂಡಿವೆ. ಈಗ ಈ ಸ್ಕಾರ್ಫ್‌ಗಳನ್ನು ಧರಿಸುವ ವಿಧಾನದಲ್ಲಿ ತುಸು ಬದಲಾವಣೆಯಾಗಿದೆ. ಪ್ಲೇನ್ ಕುರ್ತಾ ಅಥವಾ ಟಾಪ್ ಧರಿಸಿದಾಗ ಲಾಂಗ್ ಸ್ಕಾರ್ಫ್ ಅನ್ನು ಎರಡು ಭುಜಗಳಿಂದ ಹರಿಬಿಟ್ಟು. ಅದರ ಮೇಲೆ ದೊಡ್ಡಗಾತ್ರದ ಬೆಲ್ಟ್ ಧರಿಸುವುದು ಸದ್ಯದ ಟ್ರೆಂಡ್.

# ಪಿತೃತರ್ಪಣೆಯ ಮಹಾಕಾಲ

• ನವೀನ ಗಂಗೋತ್ರಿ

ಪಿತೃಗಳು, ದೇವತೆಗಳು ಮತ್ತು ಋಷಿಗಳು ಭಾರತೀಯ ಜೀವನಪದ್ಧತಿಯಲ್ಲಿ ಶ್ರದ್ಧೆಯವಾದ ಹಲವು ಸಂಗತಿಗಳಲ್ಲಿ ಪ್ರಮುಖವಾದವು. ಜವಾಬ್ದಾರಿಯುತವಾದ ಗೃಹಸ್ಥನೊಬ್ಬನು ಪಿತೃ, ದೇವತಾ ಮತ್ತು ಋಷಿ – ಈ ಮೂವರ ಋಣಿತ್ವದಿಂದ ಮುಕ್ತನಾಗುವ ಕರ್ತವ್ಯವನ್ನು ಸ್ಮೃತಿಗಳು ಕಲ್ಪಸೂತ್ರಗಳು ಪದೇ ಪದೇ ಹೇಳಿದ್ದಿವೆ. ಅಂದರೆ ಇವರನ್ನು, ಮಾನವಜೀವಿತ ನೆರವಾಗಿರುವ ಬಲುಮುಖ್ಯವಾದ ಸಂಗತಿಗಳಲ್ಲಿ ದೇವತೆಗಳು, ಪಿತೃಗಳು ಮತ್ತು ಋಷಿಗಳ ಪಾಲು ಬಲುದೊಡ್ಡದು. ಹೀಗಾಗಿ ಅವರ ಋಣದಿಂದ ಮುಕ್ತಿಹೊಂದುವ ಸಲುವಾಗಿ ಗೃಹಸ್ಥನೊಬ್ಬನು ಕರ್ತವ್ಯಬದ್ಧನೂ ಆಗುತ್ತಾನೆ. ತಿಳಿವನ್ನು ಕರುಣಿಸಿದ ಋಷಿಗಳಿಗೆ ತರ್ಪಣವರ್ಪಿಸಿ ತೃಪ್ತಿಗೊಳಿಸುವ ಸಲುವಾಗಿಯೇ ಭಾದ್ರಪದಮಾಸದ ಶುಕ್ಲಪಂಚಮಿ ಋಷಿಪಂಚಮಿ ಎಂದೇ ವಿಶೇಷವಾಗಿ ಹೇಳಲಾಗಿದೆ. ಇನ್ನು ದೇವತೆಗಳಿಗೆ ತೃಪ್ತಿತರುವ ನಾನಾ ಬಗೆಯ ಪೂಜೆಗಳೂ ವ್ರತಗಳೂ ಹಬ್ಬಗಳೂ ಕಾಮ್ಯಕರ್ಮಗಳೂ ಇವೆಯಷ್ಟೆ. ಎಂದಿಲ್ಲೊಂದು ಬಗೆಯಲ್ಲಿ ದೇವತಾರ್ಚನೆಯನ್ನು ದಿನವೂ ಆಚರಿಸುವ ಅವಕಾಶ ಇದಿದ್ದುಂಟು. ಇನ್ನು ಉಳಿದಿರುವುದು ಪಿತೃತರ್ಪಣೆ. ತಂದೆಯ ಮತ್ತು ತಾಯಿಯ ಹಿಂದಿನ ಏಳು ತಲೆಮಾರುಗಳನ್ನು ಪಿತೃಗಳೆಂದು ಗುರುತಿಸಲಾಗಿದೆ. ಕುಲದ ಉದ್ಧಾರ, ಕುಲದ ಕ್ಷೇಮ ಮತ್ತು ಶ್ರೇಯಸ್ಸುಗಳಿಗೆ ಇವರ ಹಾರೈಕೆ ಬಲುಮುಖ್ಯ. ದೇವತಾರ್ಚನೆಯ ಭಾಗವಾಗಿ ದಿನವೂ ಪಿತೃಗಳನ್ನು ನೆನೆದುಕೊಂಡು ನಮಸ್ಕರಿಸುವ ಪದ್ಧತಿ ಇದೆ. ಇದಲ್ಲದೆ, ಗತಿಸಿದ ಹಿರಿಯರಿಗಾಗಿ ಅವರ ಮರಣದ ತಿಥಿಯಂದು ವಾರ್ಷಿಕ ಶ್ರಾದ್ಧಾಚರಣೆಯನ್ನೂ ಅವರ ಮಕ್ಕಳು ಮಾಡುವ ಸಂಪ್ರದಾಯ ಇದೆ. ಇದರ ಹೊರತಾಗಿಯೂ ಪಿತೃಗಳಿಗಾಗಿಯೇ ವಿಶೇಷವೆಂದು ಗುರುತಿಸಲಾದ, ಅವರ ಸಂತರ್ಪಣೆಗೆ ಅರ್ಪಿತವಾದ ಒಂದಿಡೀ ಪಕ್ಷವೇ ಇರುವುದು, ಅಂದರೆ ಹದಿನೈದು ದಿನಗಳ ಕಾಲಾವಕಾಶ ಇರುವುದು ವಿಶೇಷ. ಭಾದ್ರಪದ ಮಾಸದ ಕೃಷ್ಣಪಕ್ಷವನ್ನು ಪಿತೃಪಕ್ಷವೆಂದೇ ಕರೆಯಲಾಗುತ್ತದೆ. ಕುಲದ ಮೃತ ಹಿರಿಯರು ಯಾರೇ ಇದ್ದರೂ ಅವರನ್ನು ನೆನೆದು ತರ್ಪಣವನ್ನು ಅರ್ಪಿಸಿ ಕರ್ತವ್ಯವನ್ನು ಪೂರೈಸುವ ಹೊತ್ತು ಇದು.

ಭಾರತಭೂಮಿಯ ನಾನಾ ತೀರ್ಥಕ್ಷೇತ್ರಗಳಲ್ಲಿ, ಅದರಲ್ಲಿಯೂ ನದೀಸಂಗಮ ಇರುವ ಕ್ಷೇತ್ರಗಳಲ್ಲಿ ಪಿತೃಪಕ್ಷದ ಹದಿನೈದು ದಿನಗಳು ಬಹಳೇ ಜನಜಂಗುಳಿ ಇರುತ್ತದೆ. ಗತಿಸಿದ ತಮ್ಮ ಪಿತೃಗಳಿಗೆ ಪುಣ್ಯನದೀತೀರದಲ್ಲಿ ತರ್ಪಣ ಅರ್ಪಿಸುವುದಕ್ಕೆ ಗೃಹಸ್ಥರು ಮುಂದಾಗುತ್ತಾರೆ. ಈ ಮಾಸದ ಕೊನೆಯಲ್ಲಿ ಬರುವ ಅಮಾವಾಸ್ಯೆಯ ಹೊತ್ತಿಗಂತೂ ಈ ಜನಸಂದಣಿ ಇನ್ನಷ್ಟು ಬೆಳೆದಿರುತ್ತದೆ. ಈ ಅಮಾವಾಸ್ಯೆಯೇ ಮಹಾಲಯ ಅಮಾವಾಸ್ಯೆ, ಮತ್ತು ಪಿತೃಪಕ್ಷದ ಮುಕ್ತಾಯವೂ ಹೌದು.

**ಇಂದು ಮಹಾಲಯ ಅಮಾವಾಸ್ಯೆ**

ಬದುಕು ಒಂದು ಪುನರಾವರ್ತನಗೊಳ್ಳುವ ಮಹಾವರ್ತುಲ ಎಂಬ ಭಾರತೀಯ ದರ್ಶನಗಳ ಕಾಣ್ಕೆ. ಇದು ನಮ್ಮ ನಂಬಿಕೆ, ಹಬ್ಬಗಳು, ಜೀವನದೃಷ್ಟಿ, ಮೌಲ್ಯಗಳು ಹಾಗೂ ಪೂರ್ಣ ಬದುಕನ್ನು ಪ್ರಭಾವಿಸುತ್ತದೆ. ಜೀವನಮಾಪನಾತ್ಮಕತೆಯಲ್ಲಿ ಮಾನವ ದೇಹವನ್ನು ಧರಿಸಿ ಓಡಾಡಿ ಬದುಕಿಕೊಂಡಿರುವುದು ಸಣ್ಣದೊಂದು ಭಾಗ ಮಾತ್ರ; ಅದರ ಹೊರತಾಗಿಯೂ ಆ ಯಾತ್ರೆ ಮುಂದುವರಿಯುತ್ತದೆ ಎಂಬ ನಂಬುಗೆಯೇ ಪಿತೃಪ್ರಜ್ಞೆಯ ಮೂಲ. ಈ ಲೋಕದ ಬದುಕಿನಂತೆಯೇ ಜೀವನು ನಾನಾ ಅವಸ್ಥೆಯಲ್ಲಿ ನಾನಾ ಲೋಕಗಳನ್ನು ಹಾದು ಸಂಚಲಿಸುತ್ತಲೇ ಇರುತ್ತಾನೆ, ಮತ್ತು ಈ ಲೋಕದ ಕೊಡುಗೆಗಳು ಅವನನ್ನು ತೃಪ್ತವಾಗಿರಿಸುತ್ತವೆ; ತರ್ಪಣಕೊಟ್ಟವರನ್ನು ಆತ ಅನುಗ್ರಹಿಸುತ್ತಾನೆ ಎಂಬುದು ಸನಾತನಪ್ರಜ್ಞೆ.

# ಗರ್ಭಪಾತ: ವರದಿ ಸಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ತನ್ನ 26 ವಾರಗಳ ಭ್ರೂಣ ತೆಗೆಸಲು ಅನುಮತಿ ಕೋರಿರುವ ವಿವಾಹಿತ ಮಹಿಳೆಯ ಮಾನಸಿಕ ಮತ್ತು ದೈಹಿಕ ಆರೋಗ್ಯ ಸ್ಥಿತಿಗತಿಯನ್ನು ಹೊಸದಾಗಿ ಪರೀಕ್ಷಿಸಿ ವರದಿ ನೀಡುವಂತೆ ಸುಪ್ರೀಂ ಕೋರ್ಟ್ ಶುಕ್ರವಾರ ಏಮ್ಸ್ ವೈದ್ಯಕೀಯ ಮಂಡಳಿಗೆ ನಿರ್ದೇಶನ ನೀಡಿದೆ.

ಆಕೆಯ ಭ್ರೂಣದ ಆರೋಗ್ಯವನ್ನು ತಕ್ಷಣವೇ (ಶುಕ್ರವಾರವೇ) ಪರಿಶೀಲಿಸುವಂತೆಯೂ ಏಮ್ಸ್ ವೈದ್ಯಕೀಯ ಮಂಡಳಿಗೆ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿರುವ ಪೀಠವು ಆದೇಶಿಸಿದೆ.

ಏಮ್ಸ್‌ಗೆ ದಾಖಲಾಗಿರುವ, ಎರಡು



ಮಕ್ಕಳ ತಾಯಿಯಾದ 27 ವರ್ಷದ ಮಹಿಳೆಗೆ ತನ್ನ 26 ವಾರಗಳ ಭ್ರೂಣ ತೆಗೆಸಲು ಸುಪ್ರೀಂ ಕೋರ್ಟ್ ಅನುಮತಿಸಿ ಅಕ್ಟೋಬರ್ 9ರಂದು ಆದೇಶ ನೀಡಿತ್ತು. ಆದೇಶವನ್ನು ಹಿಂಪಡೆಯುವಂತೆ ಕೇಂದ್ರ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಪೀಠ ವಿಚಾರಣೆ ನಡೆಸುತ್ತಿದೆ.

'ಭ್ರೂಣವು ಯಾವುದಾದರೂ ಅಸಹಜ ಸಮಸ್ಯೆಯಿಂದ ಬಳಲುತ್ತಿದೆಯೇ ಎನ್ನುವ ಕುರಿತು ಪರೀಕ್ಷಿಸಿ ವರದಿ ಸಲ್ಲಿಸಬೇಕೆಂದೂ ಏಮ್ಸ್‌ನ ವೈದ್ಯಕೀಯ ಮಂಡಳಿಗಳಿಗೆ ನಾವು ವಿನಂತಿಸುತ್ತೇವೆ' ಎಂದು ಪೀಠವು ಹೇಳಿದೆ.

ಮಹಿಳೆಯು ಕಳೆದ ವರ್ಷದಿಂದ ಖಿನ್ನತೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅರ್ಜಿದಾರರ ವಕೀಲರು ಸಲ್ಲಿಸಿದ ಪೂರಕ ಮಾಹಿತಿಗಳನ್ನೂ ಪೀಠವು ಗಮನಿಸಿತು.

ಅರ್ಜಿದಾರರ ಮಾನಸಿಕ ಮತ್ತು ದೈಹಿಕ ಸ್ಥಿತಿಯ ಬಗ್ಗೆ ಸ್ವತಂತ್ರ ಮೌಲ್ಯಮಾಪನ ನಡೆಸಲು ಏಮ್ಸ್‌ಗೆ ಮುಕ್ತ ಅವಕಾಶ ಕಲ್ಪಿಸಿದ ನ್ಯಾಯಪೀಠವು, ವರದಿಯನ್ನು ಮುಂದಿನ ವಿಚಾರಣೆಯೊಳಗೆ ಸಲ್ಲಿಸಲು ಸೂಚಿಸಿ, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿತು.

# ಮಣಿಪುರ: ವಿದ್ಯಾರ್ಥಿಗಳ ಹತ್ಯೆ ಪ್ರಮುಖ ಆರೋಪಿ ಬಂಧನ

ನವದೆಹಲಿ (ಪಿಟಿಐ): 'ಮಣಿಪುರದ ಇಬ್ಬರು ವಿದ್ಯಾರ್ಥಿಗಳ ಹತ್ಯೆ ಪ್ರಕರಣದ ಶಂಕಿತ ಪ್ರಮುಖ ಆರೋಪಿ ಪೌಲುನ್ಮಾಂಗ್ ಎಂಬಾತನನ್ನು ಸಿಬಿಐ ಪುಣೆಯಲ್ಲಿ ಬಂಧಿಸಿದೆ' ಎಂದು ಅಧಿಕಾರಿಗಳು ಶುಕ್ರವಾರ ಮಾಹಿತಿ ನೀಡಿದ್ದಾರೆ.

'ಪೌಲುನ್ಮಾಂಗ್‌ನನ್ನು ಬುಧವಾರ ಬಂಧಿಸಿರುವ ಸಿಬಿಐನ ವಿಶೇಷ ತನಿಖಾ ದಳವು, ಗುವಾಹಟಿ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ನ್ಯಾಯಾಲಯವು ಆರೋಪಿಯನ್ನು ಇದೇ 16ರವರೆಗೆ ಸಿಬಿಐ ವಶಕ್ಕೆ ನೀಡಿದೆ' ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ಅಕ್ಟೋಬರ್ 1ರಂದು ಪಾವೊಮಿನ್ಲುನ್ ಹಾಕಿಪ್ ಮತ್ತು ಸ್ಮಾಲ್ಸಾಮ್ ಹಾಕಿಪ್ ಎಂಬ ಇಬ್ಬರು ಪುರುಷರನ್ನು ಮತ್ತು ಲಿಂಗ್ನಿಚಾಂಗ್ ಬೈಟೆಕುಕಿ ಮತ್ತು ಟಿನ್ನೆಲ್ಹಿಂಗ್ ಹೆಂಥಾಂಗ್ ಎಂಬ ಇಬ್ಬರು ಮಹಿಳೆಯರನ್ನು ಬಂಧಿಸಿದ್ದರು.

ಫಿಜಾಮ್ ಹೇಮಜಿತ್ (20), ಹಿಜಾಮ್ ಲಿಂಥೋಯ್ನ್‌ಗಂಬಿ (17) ಎಂಬ ಯುವಕ ಮತ್ತು ಯುವತಿ ಜುಲೈ 6ರಂದು ನಾಪತ್ತೆಯಾಗಿದ್ದರು. ಅವರ ಮೃತದೇಹಗಳ ಚಿತ್ರಗಳು ಸೆ.25ರಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ಇಂಫಾಲ್‌ನಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು.

# 'ಅದಾನಿ ಕಲ್ಲಿದ್ದಲು ವ್ಯವಹಾರದಲ್ಲಿ ಲೂಟಿ'

ನವದೆಹಲಿ (ಪಿಟಿಐ): ವಿದೇಶದ ಮಾಧ್ಯಮವೊಂದು ಅದಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸ ವಿಚಾರವೊಂದನ್ನು ಬಹಿರಂಗಪಡಿಸಿದೆ. ಅದರ ಪ್ರಕಾರ, ₹12 ಸಾವಿರಕ್ಕೂ ಹೆಚ್ಚು ಮೊತ್ತವನ್ನು ದೇಶದಿಂದ ಹೊರಕ್ಕೆ ಕಳೆದ ಎರಡು ವರ್ಷಗಳಲ್ಲಿ ಸಾಗಿಸಲಾಗಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

2019 ಮತ್ತು 2021ರ ನಡುವಣ ಅವಧಿಯಲ್ಲಿ ಅದಾನಿ ಸಂಸ್ಥೆ 31 ಲಕ್ಷ ಟನ್ ಕಲ್ಲಿದ್ದಲು ಆಮದು ಮಾಡಿಕೊಂಡಿದೆ. ಇದರಲ್ಲಿ ಶೇ 52ರಷ್ಟು ಲಾಭ ಗಳಿಸಿದೆ ಎಂದು 'ಫೈನಾನ್ಷಿಯಲ್ ಟೈಮ್ಸ್' ವರದಿ ಪ್ರಕಟಿಸಿದೆ.

'ಇದು ಆಧುನಿಕ ಭಾರತದ ದೊಡ್ಡ ಹಗರಣ. ಇದು ಕೇವಲ ಲೂಟಿಯಲ್ಲ, ಕೋಟ್ಯಂತರ ಭಾರತೀಯರ ಜೇಬಿನಿಂದ ಆದ ಕಳ್ಳತನ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

'ಬಿಜೆಪಿ ಸರ್ಕಾರವು ಅದಾನಿ ಸಮೂಹಕ್ಕೆ ಸಂಪತ್ತು ಗಳಿಸಲು ನೆರವು ನೀಡುತ್ತಿದೆ. ಮತ್ತೊಂದೆಡೆ, ಚುನಾವಣಾ ಬಾಂಡ್ ಮೂಲಕ ಬಿಜೆಪಿ ಹಣ ಸಂಗ್ರಹಿಸುತ್ತಿದ್ದು ಅದನ್ನು ಶಾಸಕರ ಖರೀದಿಗೆ, ಸರ್ಕಾರಗಳನ್ನು ಉರುಳಿಸಲು ಬಳಸುತ್ತಿದೆ. ಈ ಮೂಲಕ ಪಕ್ಷಗಳನ್ನು ಒಡೆಯುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಈ ಆರೋಪದ ಬಗ್ಗೆ ಅದಾನಿ ಸಮೂಹದಿಂದ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

'ಶಾಹೆನ್‌ಶಾ (ನರೇಂದ್ರ ಮೋದಿ) ಲೆಕ್ಕಾಚಾರ ತಪ್ಪಾಗಲಿದೆ. ಭಾರತವನ್ನು 'ಮೋದಾನಿ' ತನ್ನ ವಶಕ್ಕೆ ಪಡೆಯಲು ಸಾಧ್ಯವಿಲ್ಲ. 2024ರಲ್ಲಿ ಭಾರತೀಯರು ಇದಕ್ಕೆಲ್ಲ ಉತ್ತರ ನೀಡುತ್ತಾರೆ' ಎಂದು ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ಸೆಂಥಿಲ್ ಬಾಲಾಜಿ ನ್ಯಾಯಾಂಗ ಬಂಧನ ವಿಸ್ತರಣೆ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ದಿಂದ ಬಂಧನಕ್ಕೊಳಗಾಗಿರುವ ತಮಿಳುನಾಡಿನ ಡಿಎಂಕೆ ಸಚಿವ ವಿ. ಸೆಂಥಿಲ್ ಬಾಲಾಜಿ ಅವರ ನ್ಯಾಯಾಂಗ ಬಂಧನವನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯ ಇದೇ 20ರವರೆಗೆ ವಿಸ್ತರಿಸಿದೆ.

ಪುಝಲ್ ಜೈಲಿನಲ್ಲಿರುವ ಸೆಂಥಿಲ್ ಬಾಲಾಜಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಿದ್ದು, ಪ್ರಥಮ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಡಿ. ಲಿಂಗೇಶ್ವರನ್ ಅವರು ನ್ಯಾಯಾಂಗ ಬಂಧನದ ಅವಧಿಯನ್ನು ವಿಸ್ತರಿಸಿದರು.

ತಮಿಳುನಾಡಿನಲ್ಲಿ ನಡೆದಿದ್ದ ಉದ್ಯೋಗಕ್ಕಾಗಿ ಹಣ ಹಗರಣದಲ್ಲಿ ಸಚಿವ ಸೆಂಥಿಲ್ ಬಾಲಾಜಿ ಅವರನ್ನು ಜೂನ್ 14ರಂದು ಜಾರಿ ನಿರ್ದೇಶನಾಲಯವು ಬಂಧಿಸಿತ್ತು.

# ಬಂಧನ ಪ್ರಶ್ನಿಸಿದ್ದ ಪುರಕಾಯಸ್ಥ ಅರ್ಜಿ ವಜಾ

ನವದೆಹಲಿ (ಪಿಟಿಐ): ಸುದ್ದಿ ಪೋರ್ಟಲ್ 'ನ್ಯೂಸ್‌ಕ್ಲಿಕ್'ನ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಮತ್ತು ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಅಮಿತ್ ಚಕ್ರವರ್ತಿ ಅವರನ್ನು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧಿಸಿರುವ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ದೆಹಲಿ ಹೈಕೋರ್ಟ್ ಶುಕ್ರವಾರ ನಿರಾಕರಿಸಿದೆ.

ತಮ್ಮ ಬಂಧನ ಮತ್ತು ಏಳು ದಿನಗಳ ಪೊಲೀಸ್ ಕಸ್ಟಡಿಯನ್ನು ಪ್ರಶ್ನಿಸಿ ಪುರಕಾಯಸ್ಥ ಮತ್ತು ಚಕ್ರವರ್ತಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಮಧ್ಯಂತರ ಪರಿಹಾರವಾಗಿ ತಕ್ಷಣ ಬಿಡುಗಡೆ ಮಾಡುವಂತೆ ಕೋರಿದ್ದರು.

ಚೀನಾ ಪರ ಪ್ರಚಾರ ಮಾಡಲು ವಿದೇಶದಿಂದ ಹಣ ಪಡೆದ ಆರೋಪವನ್ನು ಅವರ ಮೇಲೆ ಹೊರಿಸಲಾಗಿದೆ.

# ಶಸ್ತ್ರಚಿಕಿತ್ಸೆಯ ನೇರ ಪ್ರಸಾರ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಶಸ್ತ್ರ ಚಿಕಿತ್ಸೆಯ ನೇರ ಪ್ರಸಾರದಿಂದ ಎದುರಾಗುವ ಕಾನೂನು ಮತ್ತು ನೈತಿಕ ಸಮಸ್ಯೆಗಳನ್ನು ಉಲ್ಲೇಖಿಸಿ ಸಲ್ಲಿಕೆಯಾಗಿರುವ ಅರ್ಜಿಯ ಕುರಿತು ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಇತರರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ದೆಹಲಿಯ ಕೆಲವರು ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ನೀಡುವಂತೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಕೇಂದ್ರ ಸರ್ಕಾರ, ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಹಾಗೂ ಇತರರಿಗೆ ನೋಟಿಸ್ ಜಾರಿ ಮಾಡಿದೆ.

ಶಸ್ತ್ರಚಿಕಿತ್ಸೆಯ ನೇರ ಪ್ರಸಾರವನ್ನು ನಿಯಮಿತವಾಗಿ ಮೇಲ್ವಿಚಾರಣೆ ನಡೆಸಲು ಸಮಿತಿಯನ್ನು ರಚಿಸಲು ಹಾಗೂ ಮಾರ್ಗಸೂಚಿಗಳನ್ನು ರೂಪಿಸಲು ಎನ್‌ಎಂಸಿಗೆ ನಿರ್ದೇಶನ ನೀಡಬೇಕೆಂದು ಅರ್ಜಿದಾರರು ಕೋರಿರುವುದಾಗಿ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನೂ ಒಳಗೊಂಡಿರುವ ನ್ಯಾಯಪೀಠ ಹೇಳಿದೆ.

ಈ ಕುರಿತು ಮೂರು ವಾರಗಳ ಬಳಿಕ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ಹೇಳಿದೆ.

# ಕುಲಪತಿ ನೇಮಕ: ಚರ್ಚೆಗೆ ಆಹ್ವಾನಿಸಿದ ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ವಿಶ್ವವಿದ್ಯಾಲಯಗಳಿಗೆ ಕುಲಪತಿಗಳ ನೇಮಕ ಕುರಿತು ಚರ್ಚಿಸಲು ರಾಜಭವನಕ್ಕೆ ಬರಬೇಕು ಎಂದು ಆಹ್ವಾನಿಸಿ ಪಶ್ಚಿಮ ಬಂಗಾಳದ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದಾರೆ. ಸುಪ್ರೀಂ ಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ರಾಜ್ಯಪಾಲರು ಪತ್ರ ಬರೆದಿದ್ದಾರೆ.

ರಾಜ್ಯ ಸರ್ಕಾರ ಅಧೀನದ ವಿವಿಧ ವಿಶ್ವವಿದ್ಯಾಲಯಗಳಿಗೆ ಹೊಸದಾಗಿ ಕುಲಪತಿಗಳ ನೇಮಿಸುವ ವಿಷಯ ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ನಡುವೆ ಬಿಕ್ಕಟ್ಟಿಗೆ ಕಾರಣವಾಗಿದ್ದು, ಈ ವಿಷಯ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿತ್ತು.

ಈಚೆಗೆ ವಿಚಾರಣೆಯ ವೇಳೆ ಸುಪ್ರೀಂ ಕೋರ್ಟ್, 'ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯ ಹಾಗೂ ವಿಶ್ವವಿದ್ಯಾಲಯಗಳ ಹಿತಾಸಕ್ತಿ ದೃಷ್ಟಿಯಿಂದ ಇಬ್ಬರು ಕಾಫಿ ಸೇವಿಸುತ್ತ ಚರ್ಚಿಸಿ ಬಿಕ್ಕಟ್ಟು ಬಗೆಹರಿಸಿಕೊಳ್ಳಬೇಕು' ಎಂದು ಸಲಹೆ ಮಾಡಿತ್ತು.

ಅಲ್ಲದೆ, ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ರಾಜ್ಯಪಾಲರು ನೇಮಿಸಿದ್ದ ಹಂಗಾಮಿ ಕುಲಪತಿಗಳ ಸೌಲಭ್ಯಗಳಿಗೆ ತಡೆಯೊಡ್ಡಿ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ದೀಪಂಕರ್ ದತ್ತಾ ಅವರಿದ್ದ ಪೀಠ ಆದೇಶವನ್ನು ನೀಡಿತ್ತು.

'ರಾಜಭವನದಿಂದ ಮುಖ್ಯಮಂತ್ರಿ ಅವರಿಗೆ ಪತ್ರ ಬರೆಯಲಾಗಿದೆ. ಮುಖ್ಯಮಂತ್ರಿ ಕಚೇರಿಯಿಂದ ಬರಲಿರುವ ಪ್ರತ್ಯುತ್ತರದ ನಿರೀಕ್ಷೆಯಲ್ಲಿದ್ದೇವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.


**ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ರವರ ಕಛೇರಿ**
**ಸಂಪರ್ಕ, ಲಾಜಿಸ್ಟಿಕ್ ಮತ್ತು ಆಧುನೀಕರಣ**
ಪೊಲೀಸ್ ಅಧೀಕ್ಷಕರು–ವೈರ್‌ಲೆಸ್ ರವರ ಕಛೇರಿ, ನಂ. 1, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ದೂರವಾಣಿ ಸಂಖ್ಯೆ: +91–80–22864626, ಇ–ಮೇಲ್: spwireless@ksp.gov.in
ಟೆಂಡರ್ ಸಂಖ್ಯೆ: GEM/2023/B/4081963 ದಿನಾಂಕ: 12.10.2023
**ಸಂಕ್ಷಿಪ್ತ ಟೆಂಡರ್ ಪ್ರಕಟಣೆ** (ಜೆಮ್ ಪೋರ್ಟಲ್ ಮುಖಾಂತರ)
ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಸಂಪರ್ಕ, ಲಾಜಿಸ್ಟಿಕ್ಸ್ ಮತ್ತು ಆಧುನೀಕರಣ, ಬೆಂಗಳೂರು ರವರಿಂದ ರಾಜ್ಯದ ಪೊಲೀಸ್ ಇಲಾಖೆಗೆ ಅವಶ್ಯವಿರುವ Body worn camera ಮತ್ತು Docking station ಗಳನ್ನು ಸರಬರಾಜು ಮಾಡಿ ನಿರ್ವಹಣೆ ಮಾಡುವ ಸಲುವಾಗಿ ಜೆಮ್ ಪೋರ್ಟಲ್ ಮುಖಾಂತರ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೌಲ್ಯ ರೂ. 274.10 ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 15.11.2023ರ ಸಂಜೆ 5:00 ಗಂಟೆಯವರೆಗೆ.** ಇತರೆ ಮಾಹಿತಿಯನ್ನು https://gem.gov.inರಲ್ಲಿ ಪಡೆಯಬಹುದು. ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಪೊಲೀಸ್ ಅಧೀಕ್ಷಕರು, ವೈರ್‌ಲೆಸ್, ಬೆಂಗಳೂರು.
ವಾ.ಸಾ.ಸಂ.ಇ/ವಾಪ್ರ/1695/ಶಿರಡಿಸಾಯಿ/2023–24



**ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ**
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ:ರಾಗಾವಿ/ಪ್ರೊಕ್/ಯುಪಿಎಸ್ ಅಳವಡಿಕೆ/80/2023–24 ದಿನಾಂಕ:12.10.2023
**ಇ–ಟೆಂಡರ್ ಪ್ರಕಟಣೆ** (ಆರ್‌ಎಫ್‌ಪಿ)
ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಯುಪಿಎಸ್ ಅಳವಡಿಸಲು (Installation) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಉಲ್ಲೇಖದ ಷರತ್ತುಗಳಲ್ಲಿ ಪಡೆದುಕೊಳ್ಳಬಹುದಾಗಿದೆ.
**Tender No: RGUHSK/2023-24/IND0007**

| | |
|---|---|
| ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ | 12/10/2023 |
| ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ | 27/10/2023 ಸಂಜೆ 4:00 ಗಂಟೆಗೆ |
| ತಾಂತ್ರಿಕ ಬಿಡ್ ತೆರೆಯುವ ದಿನಾಂಕ | 30/10/2023 ಸಂಜೆ 4:00 ಗಂಟೆಗೆ |
| ಟೆಂಡರ್ ತೆರೆಯುವ ಸ್ಥಳ | ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು |

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/– ಕುಲಸಚಿವರು
ವಾ.ಸಾ.ಸಂ.ಇ/1686/2023–24



**ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ**
**BELAGAVI URBAN DEVELOPMENT AUTHORITY, BELAGAVI.**
ಫ್ಯಾಕ್ಸ/ದೂರವಾಣಿ: 0831-2470342, 2470257 E-mail:belagavibuda@gmail.com
No BUDA/PWD/ದರಪಟ್ಟಿ/2023-24/2718 ದಿನಾಂಕ:12/10/2023
**ದರ ಪಟ್ಟಿ ಆಹ್ವಾನ ಪ್ರಕಟಣೆ**
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಯೋಜನೆ ಸಂಖ್ಯೆ:61, ಕಣಬರ್ಗಿ, ಬೆಳಗಾವಿ ಯಲ್ಲಿ ನೂತನ ವಸತಿ ಯೋಜನೆಯ ಅನುಷ್ಠಾನಕ್ಕಾಗಿ ಅಂದಾಜು ರೂ.85.51 ಕೋಟಿ, ಮೊತ್ತದ ಕಾಮಗಾರಿಯನ್ನು ಟೆಂಡರ್ ಕರೆದಿದ್ದು, ಸದರಿ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಪ್ರಸ್ತುತ ಕಾಮಗಾರಿಗೆ ಯೋಜನಾ ಸಮಾಲೋಚಕರನ್ನು (ಕಾಮಗಾರಿಯ ಸಂಪೂರ್ಣ ಮೇಲುಸ್ತುವಾರಿ, 3ನೇ ವ್ಯಕ್ತಿ ತಪಾಸಣೆ ವರದಿ ಹಾಗೂ ಇನ್ನೂಳಿದ ಎಲ್ಲ ತಾಂತ್ರಿಕ ಕಾರ್ಯಗಳು) ನೇಮಿಸಲು ಅರ್ಹ ಏಜೆನ್ಸಿಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಆಸಕ್ತ ಏಜೆನ್ಸಿಗಳು ಪ್ರಕಟಣೆಯ ದಿನದಿಂದ 7 ದಿನಗಳೊಳಗಾಗಿ ಕಚೇರಿ ಸಮಯದಲ್ಲಿ ತಮ್ಮ ದರಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಲು ಕೋರಲಾಗಿದೆ. ಈ ದರಗಳನ್ನು ಅಂದಾಜು ಪತ್ರಿಕೆ ತಯಾರಿಸಲು ಮಾತ್ರ ಪರಿಗಣಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಲು ತಿಳಿಸಿದೆ.
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಬೆಳಗಾವಿ
DIPR/BGM/RO-NO-514/KSMCA/2023-24



ಕರ್ನಾಟಕ ಸರ್ಕಾರ
**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ ಬಾಗಲಕೋಟೆ – 587103**
Ph: 08354-235776 E-mail: dudc_bgk@yahoo.co.in, Itstaff dudc_bagalkote@yahoo.co.in
ಸಂಖ್ಯೆ:ಜಿನಕೋಬಾ:ಇಂ.ಕ್ಯಾ:2023–24 ದಿನಾಂಕ:13.10.2023
**ಅಲ್ಪಾವಧಿ ಟೆಂಡರ್ ಪ್ರಕಟಣೆ**
E-Procurement portal ಮುಖಾಂತರ
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾಗಲಕೋಟೆ ಜಿಲ್ಲೆಯ ನಗರಸಭೆ ಬಾಗಲಕೋಟೆ –2, ನಗರಸಭೆ ಜಮಖಂಡಿ–1 ಹಾಗೂ ಪುರಸಭೆ ಬದಾಮಿ–1 ವ್ಯಾಪ್ತಿಯಲ್ಲಿರುವ 4 ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ತಯಾರಿಸಿ ಸರಬರಾಜು ಮಾಡಲು ಮತ್ತು ನಿರ್ವಹಣೆ ಕುರಿತು ಟೆಂಡರಗಳನ್ನು ಆಹ್ವಾನಿಸಲಾಗಿದ್ದು (INDENT NO : DMA/2023- 24/SE1075) ಇರುತ್ತದೆ. ಸರಬರಾಜುದಾರರು ಇ–ಪ್ರಕ್ಯೂರಮೆಂಟದಲ್ಲಿ ಲಗತ್ತಿಸಿದ ದಾಖಲೆಗಳನ್ವಯ ಟೆಂಡರಗಳನ್ನು ಸಲ್ಲಿಸಬಹುದಾಗಿದೆ.
ಸೂಚನೆಗಳು:
(1) Pre-bid Meeting: 25.10.2023 at 16.30.
(2) Last date of submission of Technical and Financial bid seperately through E.procurement portal before: 30.10.2023. at 16.30.
(3) Opening of Technical bid is on Dtd: 31.10.2023 at 17.00.
(4) Opening of price(financial) bid of the successfull tenders will be on or After Dtd : 10.11.2023at 11.00 am
ಸೂಚನೆ : ಟೆಂಡರನಲ್ಲಿ ದಿನಾಂಕ ಹಾಗೂ ಇತರೆ ತಿದ್ದುಪಡಿಗಳು ಇದ್ದಲ್ಲಿ ಇ–ಪೋರ್ಟಲ್ ನಲ್ಲಿ ತಿಳಿಸಲಾಗುವದು, ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಿಸಲಾಗುವದಿಲ್ಲ.
ಸಹಿ/– ಜಿಲ್ಲಾಧಿಕಾರಿಗಳು, ಬಾಗಲಕೋಟ
ವಾ.ಸಾ.ಇ./ಬಾಗಲಕೋಟ/151/2023–24/ದೇಶಪಾಂಡೆಪಬ್ಲಿಸಿಟಿ



ಕರ್ನಾಟಕ ಸರ್ಕಾರ
**ಜಿಲ್ಲಾ ಪಂಚಾಯತ್, ಬಳ್ಳಾರಿ.**
**ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,**
**ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಬಳ್ಳಾರಿ.**
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ/ಟೆಂಡರು/2023–24/619
ದಿನಾಂಕ 11–10–2023.
**ಟೆಂಡರು ಪ್ರಕಟಣೆ** (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 15ನೇ ಹಣಕಾಸು ಯೋಜನೆ, 2022–23 ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ, ಕೆ.ಕೆ.ಆರ್.ಡಿ.ಬಿ, ಸಿ.ಎಸ್.ಆರ್, ಪ್ರಗತಿ ಕಾಲೋನಿ ಮತ್ತು 2022–23 ನೇ ಸಾಲಿನ ಆರಾಧನಾ ಕಾರ್ಯಕ್ರಮ ಯೋಜನೆ ಒಟ್ಟು 11 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 00 ಹಾಗೂ ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 03 ಕಾಮಗಾರಿಯನ್ನು** ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 11–10–2023 ರಿಂದ ದಿನಾಂಕ 25–10–2023** ರಂದು ಸಂಜೆ **4.00** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 25–10–2023 ರ 16.00** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 26–10–2023** ರಂದು **17.00** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (https://kppp.karnataka.gov.in) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/351/ಕೆಎಸ್‌ಎಂಸಿಎ/2023–24



ಕರ್ನಾಟಕ ಸರ್ಕಾರ
**ನಗರಸಭೆ ಕಾರ್ಯಾಲಯ, ಹಾವೇರಿ–581 110**
ಜಿಲ್ಲೆ : ಹಾವೇರಿ ರಾಜ್ಯ : ಕರ್ನಾಟಕ
ವೆಬ್‌ಸೈಟ್ : http://www.havericity.mrc.gov.in ದೂರವಾಣಿ ಕಛೇರಿ : 08375–232444
ಇ–ಮೈಲ್ : itstaff_ulb_ haveri@yahoo.com ಜನಹಿತ ಸಹಾಯವಾಣಿ : 080 375–23108108
ಕ್ರ.ಸಂ.:ನಸಹಾ/ತಾ.ವಿ/ಟೆ.ಪ್ರ./ವಹಿ :2023–24 ದಿನಾಂಕ : 10–10–2023
**ಟೆಂಡರ್ ಪ್ರಕಟಣೆ**
ಈ ಮೂಲಕ ಯಾವತ್ತೂ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಇ–ಪ್ರಕ್ಯೂರ್‌ಮೆಂಟ್ ಮೂಲಕ 2020–21ನೇ ಸಾಲಿನ 15ನೇ ಹಣಕಾಸು ಯೋಜನೆಯ 96.25 ಲಕ್ಷಗಳಲ್ಲಿ "ಕಂಚರಗಟ್ಟಿ ಜಾಕ್‌ವೆಲ್‌ದಿಂದ ಗುತ್ತಲ ಪಟ್ಟಣದ ರಾಣೇಬೆನ್ನೂರು ಕ್ರಾಸ್‌ವರೆಗೆ ಕಂಚರಗಟ್ಟಿ ಜಾಕ್‌ವೆಲ್‌ನ 400 ಎಂ.ಎಂ. ವ್ಯಾಸದ ಪೈಪ್‌ಲೈನ್ ಲೀಕೇಜ್‌ಗಾಗಿ ಆಯ್ದ ಸ್ಥಳಗಳಲ್ಲಿ ಹೊಸ ಪೈಪ್ ಅಳವಡಿಸುವುದು" ಕಾಮಗಾರಿಗೆ ಟೆಂಡರನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ತಮ್ಮ–ತಮ್ಮ ದರಗಳನ್ನು ಈ ಕೆಳಕಾಣಿಸಿದ ವೆಬ್‌ಸೈಟ್ ಮೂಲಕ ನಮೂದಿಸಬಹುದಾಗಿದೆ. Kppp.karnataka.gov.in ನಲ್ಲಿ ನೋಡಿ ತಿಳಿದುಕೊಳ್ಳಬಹುದಾಗಿದೆ.
ಪೌರಾಯುಕ್ತರು, ನಗರಸಭೆ, ಹಾವೇರಿ
ವ.ಸಾ.ಇ./ಹಾವೇರಿ/269/2023–24 ದೇಶಪಾಂಡೆ ಪಬ್ಲಿಸಿಟಿ



ಕರ್ನಾಟಕ ಸರ್ಕಾರ
**ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ**
9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 080–22867172/22866302
ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in
EOI NOTIFICATION NO: 1116917/DMA/TECH/INDC (OTH)/1/2023 Date: 13/10/2023
**: ಪರಿಷ್ಕೃತ ಅಧಿಸೂಚನೆ :**
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ರಾಜ್ಯದ ಮಹಾನಗರ ಪಾಲಿಕೆಗಳು (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇಂದಿರಾ ಕ್ಯಾಂಟೀನ್ (ಪ್ರಿ– ಕಾಸ್ಟ್ ಟೈಪ್) ಮತ್ತು ಇಂದಿರಾ ಕ್ಯಾಂಟೀನ್ ಕಂ ಕಿಚನ್ (ಪ್ರಿ–ಕಾಸ್ಟ್ ಟೈಪ್) ನಿರ್ಮಾಣಕ್ಕೆ ದರ ವಿಶ್ಲೇಷಣೆ ಸೇರಿದಂತೆ ರಚನಾತ್ಮಕ ವಿನ್ಯಾಸ, ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸುವ ಕೆಲಸಕ್ಕಾಗಿ Expression of Interest ನ್ನು ದಿನಾಂಕ: 27–09–2023ರಂದು ಆಹ್ವಾನಿಸಲಾಗಿತ್ತು. ಸದರಿ ಪ್ರಸ್ತಾವನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : 13–10–2023ರಂದು ನಿಗದಿಪಡಿಸಲಾಗಿತ್ತು. ಸದರಿ ಕೊನೆಯ ದಿನಾಂಕವನ್ನು 25–10–2023ರವರೆಗೆ ವಿಸ್ತರಿಸಲಾಗಿದೆ ಹಾಗೂ ಸದರಿ Expression of Interest ಇಂಡೆಂಟ್ ಸಂಖ್ಯೆ: DMA/2023–24/SE1049ನ್ನು ಕೆಪಿಪಿಪಿ ಪೋರ್ಟಲ್ ನಲ್ಲಿ ಕರೆಯಲಾಗಿರುತ್ತದೆ. ಟೆಂಡರ್ ದಾರರು Manually Expression of Interest ಪ್ರಸ್ತಾವನೆ ಸಲ್ಲಿಸುವುದನ್ನು ರದ್ದು ಪಡಿಸಲಾಗಿದೆ. ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರವೇ Expression of Interest ಪ್ರಸ್ತಾವನೆ ಸಲ್ಲಿಸಬಹುದಾಗಿದೆ.
ಸೂಚನೆ: ಹೆಚ್ಚುವರಿ ಮಾಹಿತಿ ಮತ್ತು ಸ್ಪಷ್ಟೀಕರಣಗಳಿಗಾಗಿ, ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ, 10ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ ಬೆಂಗಳೂರು–01 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸಂಪರ್ಕ ದೂರವಾಣಿ ಸಂಖ್ಯೆ: 080–22861611 ಇ–ಮೇಲ್ ವಿಳಾಸ : sedmatech@gmail.com
ಸಹಿ/– ಅಧೀಕ್ಷಕ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
DIPR/CP/1713/Zen/2023-24



**ಮೈಸೂರು ಮಹಾನಗರ ಪಾಲಿಕೆ, ಮೈಸೂರು**
ಉಪ ಆಯುಕ್ತರು (ಆಡಳಿತ)ರವರ ಕಛೇರಿ, ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಸಂಖ್ಯೆ:ಮೈನಪಾ/ಉ.ಆ(ಆಡಳಿತ)/ತೋವಿ/ಸಾಟೆಪ್ರ–02/2023–24 ದಿನಾಂಕ: 12.10.2023
**ಟೆಂಡರ್ ಪ್ರಕಟಣೆ** (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ದಸರಾ–2023ರ ಅಂಗವಾಗಿ ಮೈಸೂರು ನಗರ ಪಾಲಿಕೆಯ ನಗರದ ಪ್ರಮುಖ ವೃತ್ತಗಳಲ್ಲಿ ಹುಲ್ಲು ಹಾಸು ಹಾಗೂ ಅಲಂಕಾರಿಕ ಗಿಡಗಳನ್ನು ನೆಟ್ಟು, 2 ವರ್ಷಗಳ ಕಾಲ ನಿರ್ವಹಣೆ ಮಾಡಲು ದಸರಾ–2023 ರ ಅನುದಾನದಡಿಯ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿದೆ.

| ಕ್ರ. ಸಂ. | ವಿವರ | ಟೆಂಡರ್ ಪ್ರಕಟಣೆ ಸಂಖ್ಯೆ | ಒಟ್ಟು ಕಾಮಗಾರಿಗಳು | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ಟೆಂಡರ್ ತೆರೆಯುವ ದಿನಾಂಕ |
|---|---|---|---|---|---|---|---|
| 1. | ಉಪ ಆಯುಕ್ತರು (ಆಡಳಿತ) ತೋಟಗಾರಿಕೆ ವಿಭಾಗ | ಮೈನಾಪಾ/ಉ.ಆ (ಆಡಳಿತ)/ತೋವಿ/ಸಾಟೆಪ್ರ–02/ 2023–24, ದಿ:12.10.2023 | 02 | 67.61 | 13.10.2023 | 20.10.2023 | 21.10.2023 |

ಇ–ಪೋರ್ಟಲ್ ಮುಖಾಂತರ ಸಿಂಗಲ್ ಕವರ್ ಡಾಕ್ಯುಮೆಂಟ್ ಪದ್ಧತಿಯಲ್ಲಿ ದಸರಾ–2023ರ ಅನುದಾನದಲ್ಲಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ (https://kppp.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ನಿಗಧಿತ ಕೊನೆಯ ದಿನಾಂಕದಂದು ಸಂಜೆ 5.30 ರೊಳಗೆ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿಯ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ತೋಟಗಾರಿಕೆ ವಿಭಾಗರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಉಪ ಆಯುಕ್ತರು (ಆಡಳಿತ) ಮೈಸೂರು ಮಹಾನಗರ ಪಾಲಿಕೆ, ಮೈಸೂರು
DIPR/MYS/KAVITA/515/23-24



**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ**
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ವಲಯ ಕಚೇರಿ ನಂ–07, ಎಮ್ ಐ ಜಿ–08, ಆರ್ ಎನ್ ಶೆಟ್ಟಿ ರಸ್ತೆ, ಅಕ್ಷಯ ಪಾರ್ಕ ಹುಬ್ಬಳ್ಳಿ–580023
hdmczonal7@gmail.com Phone: 0836-2334532
ನಂ.ಎಚ್.ಡಿ.ಎಂ.ಸಿ.ವ.ಕ.ನಂ–07/04/2023–24 ದಿನಾಂಕ : 13–10–2023
**Quotation Notification**
Hubballi-Dharwad Municipal Corporation (HDMC) invites the quotation rates from authorized Agencies/dealers/contractors for the work described below which is a part of Construction of Mahadwara interested can submit the rates through quotation on or before 20-10-2023 within 4 pm to mail id **hdmczonal7@gmail.com** or send it through post to the below mentioned officer's office.
**ಹುಬ್ಬಳ್ಳಿ ವಿಭಾಗದ ವಾರ್ಡ ನಂ. 34ರಲ್ಲಿ ಬರುವ ಶ್ರೀನಿವಾಸ ನಗರ ಉದ್ಯಾನವನದ ಹತ್ತಿರ ಆನಂದ ನಗರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಶ್ರೀ ಸಿದ್ಧಾರೂಢ ಸ್ವಾಮೀಜಿ ಮಠಕ್ಕೆ ಹೋಗುವ ರಸ್ತೆಯಲ್ಲಿರುವ ಮಹಾದ್ವಾರ ಉನ್ನತೀಕರಣ ಕಾಮಗಾರಿ.**

| Sl. no | Item Description | Specification | Unit | Qty |
|---|---|---|---|---|
| 1 | Idol work | Providing and fixing Idols above 45 feet Platfom, In centre 13 feet height mantapa consisting of Shri Siddharood Swami statue of size 1.5m x 1.4m sitting on Simhasana, Providing and fixing Running Clock above the centre statue of size 3 ft in circular, centre mantapa to be designed with Kalasha, Keerthimukha, Drishtigombe, Kamaladele, Cornice golu, Providing and fixing idols of Shri Siddharood Swami and Shri Gurunathrood Swami on either sides of the centre statue of size 1.2m x 0.9m inside 9 feet height mantapa, mantapas to be designed with Kamba, Kalasha, Keerthimukha, Padaka design, Balligolu, Cornice, Kamaledele, Padaka, Pattigolu, 4 ft height Mantapas on either edges of the platform, All The statues fixed on the top should have a view on both entry and exit of Mahadwara (Replicating), Statues to be prepared using bricks, steel reinforcement (TMT) of 8 mm dia spacing of 150 mm c/c not less han 35 kg/idol. Plastering the surfaces, finishing with cement, metal paste, Marble powder and giving Artistic shape, applying primer and water based paint and colour paint, Quoted rates are Inclusive of material, labor charges, transportation, scaffolding and centering charges etc. Quoted rate should be exclusive of GST. Design, Specification and work to be carried out as directed by the engineer in-charge of the work. | Each | 1 |

ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು, ವಲಯ ಕಛೇರಿ ನಂ. 07, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹುಬ್ಬಳ್ಳಿ
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/375/2023–24



**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (KSOU)**
ಮುಕ್ತಗಂಗೋತ್ರಿ, ಮೈಸೂರು – 570006, ಕರ್ನಾಟಕ.
ಕಚೇರಿ ದೂರವಾಣಿ ಸಂಖ್ಯೆ: 0821-2500981, 2519941 / 43 / 48 / 52
ಇ–ಮೇಲ್: techsupport@ksouportal.com, ಅಂತರ್ಜಾಲ : www.ksoumysuru.ac.in
ಅಧಿಸೂಚನೆ ಸಂಖ್ಯೆ : ಕರಾಮುವಿ/ಪ್ರವಿ/ಎಡಿಎಂ–1/119/2023–24 ದಿನಾಂಕ: 30–06–2023
**2023–24 ರ ಜುಲೈ ಆವೃತ್ತಿಗೆ ಪ್ರಥಮ ವರ್ಷದ ಶೈಕ್ಷಣಿಕ ಕಾರ್ಯಕ್ರಮಗಳ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಸ್ನಾತಕ (ಯುಜಿ) ಶಿಕ್ಷಣ ಕಾರ್ಯಕ್ರಮಗಳು**
• ಬಿ.ಎ. • ಬಿ.ಕಾಂ.
• ಬಿ.ಲಿಬ್.ಐ.ಎಸ್‌ಸಿ.
• ಬಿ.ಬಿ.ಎ.
• ಬಿ.ಎಸ್.ಡಬ್ಲ್ಯೂ
• ಬಿ.ಎಸ್‌ಸಿ (ಸಂಯೋಜನೆಗಳು)
(• PCM • PMCs • BcBZ
• CBZ • BcBMi • BcMiFs
• CBMi • CZEs • BcZEs
• BME • BBE
• CBE • CME • BzE)
[• P-Physics • C-Chemistry
• M-Mathematics
• Cs-Computer Science
• B-Botany • Mi-Microbiology
• Bc-Biochemistry • Z-Zoology
• Es-Environmental Science
• Fs-Food Science & Nutrition]
• ಬಿ.ಎಸ್‌ಸಿ – ಇನ್‌ಫರ್‌ಮೇಷನ್ ಟೆಕ್ನಾಲಜಿ (ಬಿ.ಎಸ್‌ಸಿ–ಐಟಿ)
• ಬಿ.ಸಿ.ಎ. – ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್

**ಸ್ನಾತಕೋತ್ತರ (ಪಿಜಿ) ಶಿಕ್ಷಣ ಕಾರ್ಯಕ್ರಮಗಳು:**
• ಎಂ.ಎ.
• ಕನ್ನಡ • ಇಂಗ್ಲಿಷ್ • ಸಂಸ್ಕೃತ • ಉರ್ದು • ಹಿಂದಿ • ತೆಲುಗು • ಶಿಕ್ಷಣ • ಇತಿಹಾಸ • ರಾಜ್ಯಶಾಸ್ತ್ರ • ಅರ್ಥಶಾಸ್ತ್ರ • ಸಾರ್ವಜನಿಕ ಆಡಳಿತ • ಸಮಾಜಶಾಸ್ತ್ರ • ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ • ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ
• ಎಂ.ಎಸ್.ಡಬ್ಲ್ಯೂ
• ಎಂ.ಬಿ.ಎ.- ಆನ್‌ಲೈನ್ ಪ್ರವೇಶ ಪರೀಕ್ಷೆಮೂಲಕ
ಸ್ಪೆಷಲೈಜೇಷನ್: • ಫೈನಾನ್ಸ್ • ಮಾರ್ಕೆಟಿಂಗ್ • ಹೆಚ್‌ಆರ್ • ಆಪರೇಷನ್ಸ್ • ಟೂರಿಸಂ • ಕಾರ್ಪೊರೇಟ್ ಲಾ • ಇನ್‌ಫರ್‌ಮೇಷನ್ ಟೆಕ್ನಾಲಜಿ • ಆಸ್ಪತ್ರೆ ಮತ್ತು ಆರೋಗ್ಯ ಕಾಳಜಿ ನಿರ್ವಹಣೆ.
• ಎಂ.ಕಾಂ.
ಡ್ಯುಯೆಲ್ ಸ್ಪೆಷಲೈಜೇಷನ್: • ಅಕೌಂಟಿಂಗ್ ಮತ್ತು ಫೈನಾನ್ಸ್/ಹೆಚ್‌ಆರ್‌ಎಂ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ ಮತ್ತು ಹೆಚ್‌ಆರ್‌ಎಂ/ಫೈನಾನ್ಸ್
• ಎಂ.ಸಿ.ಎ.
• ಎಂ.ಲಿಬ್.ಐ.ಎಸ್‌ಸಿ.
• ಎಂ.ಎಸ್‌ಸಿ.
• ಭೌತಶಾಸ್ತ್ರ • ರಸಾಯನ ಶಾಸ್ತ್ರ • ಗಣಿತ • ಬಯೋಕೆಮಿಸ್ಟ್ರಿ • ಬಯೋಟೆಕ್ನಾಲಜಿ • ಕ್ಲಿನಿಕಲ್ ನ್ಯೂಟ್ರಿಷನ್ & ಡಯಟೆಟಿಕ್ಸ್ • ಪರಿಸರ ವಿಜ್ಞಾನ • ಭೂಗೋಳ ಶಾಸ್ತ್ರ • ಮೈಕ್ರೋ ಬಯಾಲಜಿ • ಮನಃಶಾಸ್ತ್ರ • ಸಸ್ಯಶಾಸ್ತ್ರ • ಪ್ರಾಣಿಶಾಸ್ತ್ರ • ಫುಡ್ & ನ್ಯೂಟ್ರಿಷನ್ ಸೈನ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಸೈನ್ಸ್ • ಡಾಟಾ ಸೈನ್ಸ್


**ಪಿಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು**–(ಪದವಿ ಆಧಾರಿತ) (ಒಂದು ವರ್ಷ)
• ಇಂಗ್ಲಿಷ್ • ಕಮ್ಯುನಿಕೇಟಿವ್ ಇಂಗ್ಲಿಷ್ • ಪತ್ರಿಕೋದ್ಯಮ & ಸಮೂಹ ಸಂವಹನ • ಕುವೆಂಪು ಸಾಹಿತ್ಯ • ಹಣಕಾಸು ನಿರ್ವಹಣೆ • ಮಾನವ ಸಂಪನ್ಮೂಲ ನಿರ್ವಹಣೆ • ಬಿಸಿನೆಸ್ ಲಾ • ಬಿಸಿನೆಸ್ ಅಡ್ಮಿನಿಸ್ಟ್ರೇಷನ್ • ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್ • ಅಂಬೇಡ್ಕರ್ ಅಧ್ಯಯನಗಳು • ನ್ಯೂಟ್ರಿಷನ್ & ಡಯಟೆಟಿಕ್ಸ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್.

**ಡಿಪ್ಲೋಮ ಶಿಕ್ಷಣ ಕಾರ್ಯಕ್ರಮಗಳು**–(10+2 ಆಧಾರಿತ) (ಒಂದು ವರ್ಷ)
• ಕನ್ನಡ • ಪತ್ರಿಕೋದ್ಯಮ • ನ್ಯೂಟ್ರಿಷನ್ & ಹೆಲ್ತ್ ಎಜುಕೇಷನ್ • ಮಾಹಿತಿ ತಂತ್ರಜ್ಞಾನ • ಕಂಪ್ಯೂಟರ್ ಅಪ್ಲಿಕೇಷನ್ಸ್ • ಅರ್ಲಿ ಚೈಲ್ಡ್‌ಹುಡ್ ಕೇರ್ ಅಂಡ್ ಎಜುಕೇಷನ್

**ಸರ್ಟಿಫಿಕೇಟ್ ಶಿಕ್ಷಣ ಕಾರ್ಯಕ್ರಮಗಳು** (ಆರು ತಿಂಗಳು)
• ಪಂಚಾಯತ್ ರಾಜ್ • ನ್ಯೂಟ್ರಿಷನ್ & ಫುಡ್ • ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ)

**ಆನ್‌ಲೈನ್ ಕಾರ್ಯಕ್ರಮಗಳು**
•ಬಿ.ಎ •ಬಿ.ಕಾಂ. •ಎಂ.ಎ. ♦ ಕನ್ನಡ ♦ ಹಿಂದಿ ♦ ಸಂಸ್ಕೃತ ♦ ಅರ್ಥಶಾಸ್ತ್ರ ♦ ಇಂಗ್ಲೀಷ್
•ಎಂ.ಕಾಂ. •ಎಂ.ಬಿ.ಎ. •ಎಂ.ಎಸ್‌ಸಿ. ♦ ಗಣಿತಶಾಸ್ತ್ರ

ಹೆಚ್ಚಿನ ವಿವರಗಳಿಗಾಗಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in / www.ksouonlinestudy.com ಅನ್ನು ಅಥವಾ ಸಹಾಯವಾಣಿ ಸಂಖ್ಯೆ: 91411 81241, ಇ–ಮೇಲ್ onlinesupport@ksouportal.com ಅಥವಾ ಕೇಂದ್ರ ಕಛೇರಿ ಮೈಸೂರಿನಲ್ಲಿ ಸಂಪರ್ಕಿಸುವುದು.
**ಪ್ರವೇಶಾತಿಗೆ ಅಂತಿಮ ದಿನಾಂಕ: 20.10.2023** ಸಹಿ/–, ಕುಲಸಚಿವರು



## ಸುಭಾಷಿತ

ಸಿದ್ಧತೆ ಮಾಡಿಕೊಳ್ಳುವಲ್ಲಿ ಯಾರು ವಿಫಲರಾಗುತ್ತಾರೋ ಅವರು ಸೋಲಲು ಸಿದ್ಧರಾದಂತೆಯೇ ಸರಿ.

–ಕನ್‌ಫ್ಯೂಷಿಯಸ್

# ಗೊಂದಲ ದೂರ ಮಾಡಿದ ಕೋರ್ಟ್ ಶಿಕ್ಷಕರ ಕೊರತೆಯನ್ನು ಶೀಘ್ರ ನೀಗಿಸಿ

ರಾಜ್ಯ ಸರ್ಕಾರದಿಂದ ಆರಂಭಿಸಲಾಗಿದ್ದ 13,352 ಪ್ರಾಥಮಿಕ ಶಾಲಾ ಪದವೀಧರ ಶಿಕ್ಷಕರ ನೇಮಕ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಹೈಕೋರ್ಟ್‌ನಿಂದ ಈಗ ಅನುಮತಿ ಸಿಕ್ಕಿದೆ. ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಏಕಸದಸ್ಯ ನ್ಯಾಯಪೀಠ ರದ್ದುಗೊಳಿಸಿದ್ದರಿಂದ ನೇಮಕಾತಿ ಪ್ರಕ್ರಿಯೆಯು ನನೆಗುದಿಗೆ ಬಿದ್ದಿತ್ತು. ಹೈಕೋರ್ಟ್‌ನ ವಿಭಾಗೀಯ ಪೀಠದ ಆದೇಶವು ನೇಮಕ ಪ್ರಕ್ರಿಯೆ ಹಾದಿಯನ್ನು ಸುಗಮಗೊಳಿಸಿದೆ. ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ 66,059 ಹುದ್ದೆಗಳು ಖಾಲಿ ಇವೆ. ಸರ್ಕಾರಿ ಶಾಲೆಗಳನ್ನೇ ಹೆಚ್ಚಾಗಿ ನೆಚ್ಚಿಕೊಂಡ ಗ್ರಾಮಾಂತರ ಭಾಗದಲ್ಲೇ ಶಿಕ್ಷಕರ ಕೊರತೆ ತೀವ್ರವಾಗಿದೆ. ಪಾಠ ಮಾಡಲು ಶಿಕ್ಷಕರಿಲ್ಲದೆ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷಿಸುವುದಾದರೂ ಹೇಗೆ? ಕಲ್ಯಾಣ ಕರ್ನಾಟಕದ ನೂರಾರು ಶಾಲೆಗಳಂತೂ ಶಿಕ್ಷಕರಿಲ್ಲದೆ ಸೊರಗಿಹೋಗಿವೆ. ಕಾಲಕಾಲಕ್ಕೆ ನೇಮಕಾತಿ ಪ್ರಕ್ರಿಯೆ ನಡೆಯದಿರುವುದೇ ಸಮಸ್ಯೆ ಈ ಪರಿ ಉಲ್ಬಣಿಸಲು ಕಾರಣ. [illegible] ಇಲ್ಲಿಯವರೆಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹುದ್ದೆಗಳು ಖಾಲಿ ಇದ್ದಾಗಲೂ ಭರ್ತಿ ಮಾಡಲು ಕ್ರಮ ಕೈಗೊಳ್ಳದೇ ಇರುತ್ತಿದ್ದುದು. ಯಾವುದೇ ನೇಮಕಾತಿ ಪ್ರಕ್ರಿಯೆ ಆರಂಭಿಸಿದಾಗ ತಕರಾರಿಗೆ ಆಸ್ಪದವಿಲ್ಲದಂತೆ ಮತ್ತು ಗೊಂದಲಕ್ಕೆ ಅವಕಾಶವಾಗದಂತೆ ನಿಯಮಗಳನ್ನು ರೂಪಿಸಬೇಕು ಮತ್ತು ಪಾರದರ್ಶಕವಾಗಿ ಎಲ್ಲ ಪ್ರಕ್ರಿಯೆಗಳನ್ನು ನಡೆಸಬೇಕು. ವಿವಾಹಿತ ಮಹಿಳೆಯರ ಆದಾಯ ಪ್ರಮಾಣಪತ್ರಕ್ಕೆ ಸಂಬಂಧಿಸಿದ ವಿಷಯವು ಪ್ರಸ್ತುತ ನೇಮಕಾತಿಯಲ್ಲಿ ಗೊಂದಲವನ್ನು ಸೃಷ್ಟಿಸಿತ್ತು. ಇಂತಹ ನಿಯಮಗಳನ್ನು ರೂಪಿಸುವಾಗ ಸಂಬಂಧಿಸಿದ ಅಧಿಕಾರಿಗಳು ಕಾನೂನಿನ ಎಲ್ಲ ಆಯಾಮಗಳನ್ನು ಗಣನೆಗೆ ತೆಗೆದುಕೊಳ್ಳಬೇಕಿತ್ತು. ಅಧಿಕಾರಿಗಳ ಮೈಮರೆವಿನಿಂದ ನೇಮಕ ಪ್ರಕ್ರಿಯೆಯೇ ವಿಳಂಬವಾಗುವಂತಾಯಿತು.



ನೇಮಕಾತಿ ನಿಯಮಾವಳಿ ರೂಪಿಸುವಾಗ ಎಷ್ಟೊಂದು ಎಚ್ಚರಿಕೆ ವಹಿಸಬೇಕು ಎನ್ನುವುದಕ್ಕೂ ಈ ಪ್ರಕರಣವು ಶಿಕ್ಷಣ ಇಲಾಖೆಗೆ ಪಾಠವಾಗಬೇಕು

ರಾಜ್ಯ ಸರ್ಕಾರವು ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವಾಗ ವಿವಾಹಿತ ಮಹಿಳೆಯರ ಪತಿಯ ಆದಾಯ ಪ್ರಮಾಣಪತ್ರವನ್ನು ಪರಿಗಣಿಸಿತ್ತು. 'ಜಾತಿ ಮೀಸಲಾತಿ ಅನ್ವಯ ಹುದ್ದೆಗೆ ಆಯ್ಕೆ ಬಯಸುವವರು ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಬೇಕು. ಅವಿವಾಹಿತರು ತಂದೆಯ ಆದಾಯ, ವಿವಾಹಿತರು ಪತಿಯ ಆದಾಯದ ವಿವರ ಸಲ್ಲಿಸಬೇಕು. ಹಲವು ವಿವಾಹಿತ ಮಹಿಳೆಯರು ತಮ್ಮ ತಂದೆಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಿದ್ದರು. ಇದರಿಂದ ಅವರ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು' ಎನ್ನುವುದು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ವಾದ. 'ಮದುವೆಯಾದ ಮಹಿಳೆಯರು ಪತಿಯ ಆದಾಯ ಪ್ರಮಾಣಪತ್ರವನ್ನೇ ಸಲ್ಲಿಸಬೇಕು ಎನ್ನುವ ಕುರಿತು ನೇಮಕಾತಿ ಅಧಿಸೂಚನೆಯಲ್ಲಿ ಸ್ಪಷ್ಟ ನಿರ್ದೇಶನ ಇರಲಿಲ್ಲ. ಮೆರಿಟ್ ಇದ್ದರೂ ನಮ್ಮನ್ನು ನೇಮಕಾತಿ ಪಟ್ಟಿಯಿಂದ ಕೈಬಿಡಲಾಗಿದೆ' ಎಂಬುದು ಅವಕಾಶ ವಂಚಿತರ ಆಕ್ಷೇಪ. ಹೈಕೋರ್ಟ್‌ನ ಏಕಸದಸ್ಯ ಪೀಠವು 'ವಿವಾಹಿತ ಮಹಿಳೆಯ ತಂದೆಯ ಆದಾಯ ಪ್ರಮಾಣಪತ್ರವನ್ನೂ ಪರಿಗಣಿಸಬೇಕು' ಎಂದು ಆದೇಶಿಸಿ, ತಾತ್ಕಾಲಿಕ ಆಯ್ಕೆಪಟ್ಟಿಯನ್ನೇ ರದ್ದುಗೊಳಿಸಿತ್ತು. ಕೋರ್ಟ್ ಆದೇಶದಂತೆ ಆಯ್ಕೆಪಟ್ಟಿಯನ್ನು ಪರಿಷ್ಕರಿಸಿದ ಸರ್ಕಾರ, ಹೊಸ ಪಟ್ಟಿ ಪ್ರಕಟಿಸಿದಾಗ ಮೊದಲಿದ್ದ ಪಟ್ಟಿಯಿಂದ 451 ಅಭ್ಯರ್ಥಿಗಳು ಹೊರಗುಳಿದರು. ಈ ವಿದ್ಯಮಾನವು ವಿವಾದಕ್ಕೆ ಕಾರಣವಾಗಿ ಪ್ರಕರಣ ಮತ್ತೆ ಕೋರ್ಟ್ ಮೆಟ್ಟಿಲೇರಿತು. 'ತಾತ್ಕಾಲಿಕ ಆಯ್ಕೆಪಟ್ಟಿಯಲ್ಲಿ ಹೊರಗುಳಿದಿರುವ ಅಭ್ಯರ್ಥಿಗಳು ತಮ್ಮ ತಕರಾರನ್ನು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ ಮುಂದೆ ಮಂಡಿಸಿ ಸೂಕ್ತ ನ್ಯಾಯ ಪಡೆಯಬಹುದು' ಎಂದೂ ವಿಭಾಗೀಯ ಪೀಠ ಸ್ಪಷ್ಟಪಡಿಸಿದೆ. ಇದರಿಂದ ನೇಮಕ ಪ್ರಕ್ರಿಯೆ ಸುತ್ತ ನಿರ್ಮಾಣವಾಗಿದ್ದ ಗೊಂದಲಗಳು ದೂರವಾದಂತಾಗಿದೆ. ಶಿಕ್ಷಣ ಮತ್ತು ಆರೋಗ್ಯವು ಸರ್ಕಾರದ ಎರಡು ಆದ್ಯತಾ ವಲಯಗಳು. ಯಾವುದೇ ಕಾರಣಕ್ಕೂ ಈ ಎರಡು ವಲಯಗಳನ್ನು ನಿರ್ಲಕ್ಷಿಸುವಂತೆಯೇ ಇಲ್ಲ. ಹುದ್ದೆಗಳು ಖಾಲಿಯಾದ ಕೂಡಲೇ ಅವುಗಳನ್ನು ತಕ್ಷಣ ಭರ್ತಿ ಮಾಡುತ್ತಾ ಹೋಗಿದ್ದರೆ ಇಷ್ಟೊಂದು ಪ್ರಮಾಣದ ಹುದ್ದೆಗಳು ಖಾಲಿ ಉಳಿಯುತ್ತಿರಲಿಲ್ಲ. ಇನ್ನಾದರೂ ಈ ದಿಸೆಯಲ್ಲಿ ಸರ್ಕಾರ ಕಾರ್ಯಪ್ರವೃತ್ತವಾಗಬೇಕು. ನೇಮಕಾತಿ ನಿಯಮಾವಳಿ ರೂಪಿಸುವಾಗ ಎಷ್ಟೊಂದು ಎಚ್ಚರಿಕೆ ವಹಿಸಬೇಕು ಎನ್ನುವುದಕ್ಕೂ ಈ ಪ್ರಕರಣವು ಶಿಕ್ಷಣ ಇಲಾಖೆಗೆ ಪಾಠವಾಗಬೇಕು. ಶಿಕ್ಷಣದ ವಿಚಾರಗಳು ಹೈಕೋರ್ಟ್‌ನಲ್ಲಿ ಪದೇ ಪದೇ ಬರುತ್ತಿವೆ ಎಂದರೆ ಅಲ್ಲಿ ಎಲ್ಲವೂ ಸರಿಯಾಗಿಲ್ಲ ಎಂದೇ ಅರ್ಥ. 'ಶಾಲೆಗೆ ಶೌಚಾಲಯವಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿಲ್ಲ, ಶಿಕ್ಷಕರಿಲ್ಲ' ಎಂದು ಕೊರಗುವ ಪ್ರಮೇಯ ಉಂಟಾಗಬಾರದು. ಗುಣಮಟ್ಟದ ಶಿಕ್ಷಣಕ್ಕೆ ಶಾಲಾ ಮೂಲಸೌಕರ್ಯ ಎಷ್ಟು ಮುಖ್ಯವೋ ಅಗತ್ಯ ಸಂಖ್ಯೆಯ ಶಿಕ್ಷಕರು ಇರಬೇಕಾದುದೂ ಅಷ್ಟೇ ಮುಖ್ಯ. ಹೈಕೋರ್ಟ್ ಆದೇಶಗಳಿಂದಲಾದರೂ ಈ ಸಂಗತಿ ಸರ್ಕಾರಕ್ಕೆ ಮನವರಿಕೆಯಾಗಬಹುದು ಎಂದು ನಿರೀಕ್ಷಿಸೋಣವೇ?

## ದಿನದ ಟ್ವೀಟ್


### ಬಲಿಯಾಗುವವರು ದುರ್ಬಲರು



ವೃದ್ಧರು ಸ್ಥಳಾಂತರಗೊಳ್ಳುವುದಿಲ್ಲ. ಕೆಲವೊಮ್ಮೆ ನೀವು ಪರಾರಿಯಾಗುವ ಬದಲು ಮನೆಗಳಲ್ಲೇ ಇದ್ದು ಪಾರಾಗುವ ಅವಕಾಶವನ್ನು ಆಯ್ದುಕೊಳ್ಳುತ್ತೀರಿ. ಇದು, ಮಾನವನ ವಿಷಯದಲ್ಲಿ ಅಂತರರಾಷ್ಟ್ರೀಯವಾಗಿ ಕಂಡುಬರುವ ಸತ್ಯ ಎಂದು ನನಗನಿಸುತ್ತದೆ. ಬಾಂಬ್ ದಾಳಿಗೆ ಒಳಗಾಗುವ ಸ್ಥಳಕ್ಕೆ ಪ್ರತಿ ಬಾರಿ ನಾನು ಭೇಟಿ ನೀಡಿದಾಗಲೂ ಅದು ವೃದ್ಧರು, ಅಂಗವಿಕಲರು, ಗೊಂದಲಕ್ಕೆ ಒಳಗಾದವರಿಂದ ತುಂಬಿಹೋಗಿರುತ್ತದೆ. ಅಂತಹವರೇ ಬಾಂಬ್ ದಾಳಿಗೆ ಒಳಗಾಗುವುದು.

**ಮೇಗನ್ ಕೆ. ಸ್ಟ್ಯಾಕ್**, ಪತ್ರಕರ್ತೆ

## ಕಿಡಿನುಡಿ



ಪಂಚರಾಜ್ಯ ಚುನಾವಣೆ ಘೋಷಣೆ ಆಗಿದ್ದೇ ತಡ, ರಾಜ್ಯದಲ್ಲಿ ಕುರುಡು ಕಾಂಚಾಣ ಕಂತೆ ಕಂತೆಯಾಗಿ ಕಾಟನ್ ಬಾಕ್ಸ್‌ಗಳಲ್ಲಿ ಕುಣಿಯುತ್ತಿದೆ! ಅದೂ ಮಂಚದ ಕೆಳಗೆ! ಐ.ಟಿ. ದಾಳಿ ವೇಳೆ ಗುತ್ತಿಗೆದಾರನ ಮನೆಯಲ್ಲಿ ಪತ್ತೆಯಾದ ಹಣ ಯಾರದ್ದು? ಯಾರ ಹೆಣದ ಮೇಲೆ ಸಂಗ್ರಹಿಸಿದ ಪಾಪದ ಹಣವಿದು? ಈ ಪ್ರಶ್ನೆಗಳಿಗೆ ಉತ್ತರ ಬೇಕಿದೆ.

**ಎಚ್.ಡಿ.ಕುಮಾರಸ್ವಾಮಿ**, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಬುಧವಾರ, 14-10-1998

**• ರಾಜ್ಯದಲ್ಲಿ ಯೂರಿಯಾ ಬಿಟ್ಟು ಎಲ್ಲ ರಸಗೊಬ್ಬರ ವಹಿವಾಟು ತೆರಿಗೆ ರದ್ದು**

**ಬೆಂಗಳೂರು, ಅ. 13–** ರಾಜ್ಯದ ರೈತರ ಹಿತದೃಷ್ಟಿಯಿಂದ, ಯೂರಿಯಾ ಬಿಟ್ಟು ಉಳಿದ ಎಲ್ಲ ರಸಗೊಬ್ಬರಗಳ ಮೇಲೆ ವಿಧಿಸಲಾಗಿರುವ ವಹಿವಾಟು ತೆರಿಗೆಯನ್ನು ಮುಂದಿನ ಮಾರ್ಚ್ ಅಂತ್ಯದವರೆಗೆ ರಾಜ್ಯ ಸರ್ಕಾರ ರದ್ದು ಮಾಡಿದೆ.

ಇದರಿಂದ ಸರ್ಕಾರಕ್ಕೆ ತೆರಿಗೆಯಲ್ಲಿ ಸುಮಾರು 10 ಕೋಟಿ ರೂಪಾಯಿ ಕಡಿತ ಆಗುತ್ತದೆ ಎಂದು ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಹಿವಾಟು ತೆರಿಗೆ ನೆಪ ಮಾಡಿಕೊಂಡು, ವಿದೇಶಗಳಿಂದ ಆಮದು ಮಾಡಿಕೊಂಡು ವಿತರಿಸಬೇಕಾಗಿದ್ದ ವರ್ತಕರು ಕೊರತೆ ಇರುವ ಪೊಟ್ಯಾಷ್, ಸಲ್ಫೇಟ್ ಹಾಗೂ ಇತರೆ ಸಂಯುಕ್ತ ಗೊಬ್ಬರಗಳನ್ನು ರಾಜ್ಯದಲ್ಲಿ ಮಾರಾಟ ಮಾಡಲು ನಿರಾಕರಿಸಿದ್ದರಿಂದ ರೈತರಿಗೆ ತೊಂದರೆಯಾಗಿತ್ತು. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

**• ಕಾವ್ಯ ತಪಸ್ವಿ ಪು.ತಿ.ನ ಇನ್ನಿಲ್ಲ**

**ಬೆಂಗಳೂರು ಅ. 13–** ಕನ್ನಡ ಕಾವ್ಯ ಜಗತ್ತಿನಲ್ಲಿ ಹಣತೆಯಂತೆ ಬೆಳಗಿದ ಕಾವ್ಯ ತಪಸ್ವಿ, ಶ್ರೇಷ್ಠ ವಿದ್ವಾಂಸ, ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಚೇತನ ಡಾ. ಪು.ತಿ. ನರಸಿಂಹಾಚಾರ್ (ಪು.ತಿ.ನ) ಅವರು ಇಂದು ಸಂಜೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ನವೋದಯದ ಕಾವ್ಯ ಪರಂಪರೆಯ ಕೊನೆಯ ಕೊಂಡಿಯಾಗಿದ್ದ ಪು.ತಿ.ನ ಅವರಿಗೆ 93 ವರ್ಷ ವಯಸ್ಸಾಗಿತ್ತು. ಜನ್ಮಸ್ಥಳದ ಬಗ್ಗೆ ಅತೀವ ಭಾವನಾತ್ಮಕ ಸಂಬಂಧ ಹೊಂದಿದ್ದ ಪು.ತಿ.ನ ಅವರ ಅಂತ್ಯಕ್ರಿಯೆ ಅವರ ಜನ್ಮ ಸ್ಥಳವಾದ ಮೇಲುಕೋಟೆಯಲ್ಲಿ ನಡೆಯಲಿದೆ.

## 50 ವರ್ಷಗಳ ಹಿಂದೆ

ಭಾನುವಾರ, 14-10-1973

**• ನಗರದಲ್ಲಿ ಅಕ್ಕಿ ಬೆಲೆ ಇಳಿತ: ರಸ್ತೆ ಅಂಚಿನಲ್ಲಿ ಮಾರಾಟ**

**ಬೆಂಗಳೂರು ಅ. 13–** ನಗರದಲ್ಲಿ ಅಕ್ಕಿ ಬೆಲೆ ಕೆ.ಜಿ. ಒಂದಕ್ಕೆ 50ರಿಂದ 70 ಪೈಸೆಯಷ್ಟು ಇಳಿದಿದ್ದು, ಕೆಲವು ಕಡೆ ಕೆ.ಜಿ. ಒಂದಕ್ಕೆ 2.10 ರೂಪಾಯಿ ಹಾಗೂ 2.20 ರೂಪಾಯಿಗೆ ದೊರೆಯುತ್ತಿದೆ.

ನಗರದ ಮಂಡಿಪೇಟೆ ಹಾಗೂ ಹತ್ತಿರದ ಪ್ರದೇಶಗಳಲ್ಲಿ ರಸ್ತೆಯ ಅಂಚುಗಳಲ್ಲಿ ಚಿಲ್ಲರೆ ವರ್ತಕರು ಅಕ್ಕಿರಾಶಿ ಹಾಕಿಕೊಂಡು 'ಕೆ.ಜಿ.ಗೆ 2.10 ಹಾಗೂ 2.20 ರೂಪಾಯಿ' ಎಂದು ಕೂಗಿ ಇಂದು ಮಾರಾಟ ಮಾಡಿದರು. ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿರುವ ಅಕ್ಕಿ ತಮಿಳುನಾಡು ಮತ್ತು ಆಂಧ್ರಪ್ರದೇಶದ್ದು.

ಮೈಸೂರಿನಲ್ಲಿ ಬೆಳೆದ ಅಕ್ಕಿಯ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿದಿಲ್ಲ. ಕೆ.ಜಿ.ಗೆ 10ರಿಂದ 15 ಪೈಸೆಯಷ್ಟು ಇಳಿದಿದೆ. ಡಿಸೆಂಬರ್ ಹೊತ್ತಿಗೆ ಸುಗ್ಗಿ ಆರಂಭವಾಗಿ, ಆಗ ಗಣನೀಯ ಪ್ರಮಾಣದಲ್ಲಿ ಬೆಲೆ ಇಳಿಕೆಯಾಗುವ ನಿರೀಕ್ಷೆಯಿದೆ.

ಬಳಕೆದಾರರ ಆಲೋಚನೆ ಬದಲಿಸುವ 'ಡಾರ್ಕ್‌ಪ್ಯಾಟರ್ನ್'ಗೆ ಬೀಳಲಿದೆ ಕಡಿವಾಣ

# ಆನ್‌ಲೈನ್ ಮಾರಾಟ ಮತ್ತು ಕಣ್ಕಟ್ಟು ಆಟ



ವಿಶ್ಲೇಷಣೆ

ವೈ.ಜಿ.ಮುರಳೀಧರನ್

ಸಿನಿಮಾ, ನಾಟಕ, ಸಂಗೀತ ಕಛೇರಿ, ಸ್ಟ್ಯಾಂಡ್‌ಅಪ್ ಕಾಮಿಡಿ ಷೋ ಮುಂತಾದ ಕಾರ್ಯಕ್ರಮಗಳಿಗೆ ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸುವಾಗ, ಟಿಕೆಟ್ ಮೊತ್ತಕ್ಕಿಂತ ಒಂದೆರಡು ರೂಪಾಯಿ ಹೆಚ್ಚಿಗೆ ಪಾವತಿಸಬೇಕಾದ ಅನಿವಾರ್ಯವು ಕೆಲವು ಬಳಕೆದಾರರಿಗೆ ಎದುರಾಗಿರುತ್ತದೆ. ಕಾರಣ, ಆ ಸಣ್ಣ ಮೊತ್ತವನ್ನು ಯಾವುದೋ ಸಮಾಜ ಸೇವಾ ಸಂಸ್ಥೆಗೆ ದೇಣಿಗೆಯಾಗಿ ಬಳಕೆದಾರರಿಂದ ವಸೂಲಿ ಮಾಡಲಾಗಿರುತ್ತದೆ. ಇದೇ ರೀತಿ ವಿಮಾನ ಪ್ರಯಾಣಕ್ಕೆ ಟಿಕೆಟ್ ಕಾಯ್ದಿರಿಸುವಾಗ ಕೆಲವೊಮ್ಮೆ ಟಿಕೆಟ್ ಮೊತ್ತಕ್ಕಿಂತ ತುಸು ಅಧಿಕ ಮೊತ್ತವು ಬಳಕೆದಾರರ ಖಾತೆಯಿಂದ ಡೆಬಿಟ್ ಆಗುತ್ತಿತ್ತು. ಟಿಕೆಟ್ ನೀಡುವ ಸಂಸ್ಥೆಯು ಪ್ರಯಾಣಕ್ಕೆ ವಿಮೆ ಮಾಡಿಸಿ ಅದರ ಮೊತ್ತವನ್ನು ಟಿಕೆಟ್ ಮೊತ್ತದಲ್ಲಿ ಸೇರಿಸುತ್ತಿದ್ದುದೇ ಇದಕ್ಕೆ ಕಾರಣ. ಇದನ್ನು ಗಮನಿಸಿದ ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು ಆ ರೀತಿ ಮಾಡಬಾರದೆಂದು ನಿರ್ದೇಶನ ನೀಡಿದ ಮೇಲೆ ಈ ಪರಿಪಾಟವು ಕೊನೆಗೊಂಡಿದೆ.

ಬಳಕೆದಾರರಲ್ಲಿ ಭಯ ಹುಟ್ಟಿಸುವುದು, ಕೀಳರಿಮೆ ಉಂಟುಮಾಡುವುದು, ಅನಗತ್ಯ ಸರಕುಗಳನ್ನು ಅತ್ಯಗತ್ಯ ಎಂಬ ಭಾವನೆ ಬರುವಂತೆ ಮಾಡುವುದು ಎಲ್ಲವೂ ಒಂದು ಕಾಲದಲ್ಲಿ ಜಾಹೀರಾತಿನ ಮೂಲಕ ನಡೆಯುತ್ತಿದ್ದವು. ಆದರೆ ಈಗ ಮಾರಾಟಗಾರರು ಬಳಕೆದಾರರ ಸುಪ್ತ ಮನಸ್ಸಿಗೆ ಕೈಹಾಕಿದ್ದಾರೆ. ಈ ಉದ್ದೇಶಕ್ಕಾಗಿ ವರ್ತನಾ ಮನೋವಿಜ್ಞಾನವನ್ನು ಬಳಸಿಕೊಳ್ಳುತ್ತಿದ್ದಾರೆ.


ಬಳಕೆದಾರರು ಸರಕನ್ನು ನೋಡಿದ ಕೂಡಲೇ ಅವರಿಗೆ ಅಗತ್ಯವೋ ಇಲ್ಲವೋ ಅದನ್ನು ತಕ್ಷಣ ಖರೀದಿಸುವಂತೆ ಮಾಡಲು ಕೃತಕ ತುರ್ತು ಸೃಷ್ಟಿಸಲಾಗುತ್ತಿದೆ. ಉದಾಹರಣೆಗೆ, ಆನ್‌ಲೈನ್ ಜಾಲತಾಣದಲ್ಲಿ ಒಂದು ಪುಸ್ತಕಕ್ಕಾಗಿ ಹುಡುಕುತ್ತಿರುವಾಗ, 'ಇದು ಕಡೆಯ ಅವಕಾಶ. ಒಂದು ಪ್ರತಿ ಮಾತ್ರ ಉಳಿದಿದೆ. ಅಷ್ಟರಲ್ಲಿ ಖರೀದಿಸಿ' ಎಂಬ ಎಚ್ಚರಿಕೆ ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುತ್ತದೆ. ಇದನ್ನು ನೋಡಿದ ಕೂಡಲೇ ಬಳಕೆದಾರರು ಆತಂಕಗೊಂಡು, ಪುಸ್ತಕದ ಬೆಲೆ ಎಷ್ಟಾದರೂ ಲೆಕ್ಕಿಸದೆ ಖರೀದಿಸಲು ಮುಂದಾಗುತ್ತಾರೆ. ಆದರೆ ಪುಸ್ತಕದ ಮಳಿಗೆಗಳಲ್ಲಿ ಅದೇ ಪುಸ್ತಕದ ನೂರಾರು ಪ್ರತಿಗಳು ಮತ್ತಷ್ಟು ಕಡಿಮೆ ಬೆಲೆಗೆ ಲಭ್ಯವಿರುತ್ತವೆ.

ಹ್ಯಾರಿ ಬ್ರಿಗ್‌ನಲ್ ಎಂಬ ಯುಎಕ್ಸ್ ವಿನ್ಯಾಸಕ ಈ ಪದ್ಧತಿಗೆ 2010ರಲ್ಲಿ 'ಡಾರ್ಕ್‌ಪ್ಯಾಟರ್ನ್' ಎಂದು ನಾಮಕರಣ ಮಾಡಿದ. ಇದು ಯೂಸರ್ ಇಂಟರ್‌ಫೇಸ್ (ಯುಐ) ತಂತ್ರಜ್ಞಾನದ ಒಂದು ಮಾದರಿ. ಬಳಕೆದಾರರ ಆಲೋಚನೆ ಮತ್ತು ವರ್ತನೆಯನ್ನು ಬದಲಾಯಿಸುವ ಮೂಲಕ ಅವರು ಬಯಸದ ನಿರ್ಧಾರಗಳನ್ನು ಕೈಗೊಳ್ಳುವಂತೆ ಮಾಡುವುದು ಡಾರ್ಕ್‌ಪ್ಯಾಟರ್ನ್ ಉದ್ದೇಶ. ತಮಗೆ ಅಗತ್ಯವಿದೆಯೋ ಇಲ್ಲವೋ ಖರೀದಿಯ ಸೆಳೆತಕ್ಕೆ ಒಳಗಾಗುವ ಬಳಕೆದಾರರೇ ಹೆಚ್ಚು. ಈ ಮನೋದೌರ್ಬಲ್ಯವನ್ನು ಬಳಸಿಕೊಳ್ಳುವ ಆನ್‌ಲೈನ್ ಮಾರಾಟಗಾರರು ನಾನಾ ರೀತಿಯ ಡಾರ್ಕ್‌ಪ್ಯಾಟರ್ನ್‌ಗಳನ್ನು ಹುಟ್ಟುಹಾಕುತ್ತಾರೆ. ಲೇಖಕ ಡೇನಿಯಲ್ ಕಹ್‌ನೇಮ್ಯಾನ್ 'ಥಿಂಕಿಂಗ್ ಫಾಸ್ಟ್ ಆ್ಯಂಡ್ ಸ್ಲೋ' ಪುಸ್ತಕದಲ್ಲಿ ಪ್ರಚುರಪಡಿಸಿದ ಎರಡು ಬಗೆಯ ಚಿಂತನಾ ವಿಧಾನಗಳನ್ನು ಆಧರಿಸಿ, ಈ ಡಾರ್ಕ್‌ಪ್ಯಾಟರ್ನ್‌ಗಳು ಯಾವ ರೀತಿ ಪರಿಣಾಮ ಉಂಟುಮಾಡುತ್ತಿವೆ ಎಂಬುದನ್ನು ಅಧ್ಯಯನ ಮಾಡಲಾಗುತ್ತಿದೆ.

ಡಾರ್ಕ್‌ಪ್ಯಾಟರ್ನ್‌ಗಳ ಬಗ್ಗೆ ಅಧ್ಯಯನ ನಡೆಸಿರುವ ತಜ್ಞರು ಈ ದಿಸೆಯಲ್ಲಿ ಕೆಲವು ಮಾದರಿಗಳನ್ನು ಗುರುತಿಸಿದ್ದಾರೆ. ಚೆಕ್‌ಔಟ್ ಮಾಡುವಾಗ ಬಳಕೆದಾರರ ಅನುಮತಿ ಇಲ್ಲದೆ ಒಂದಿಷ್ಟು ಹಣವನ್ನು ಯಾವುದಾದರೂ ಅನಾಥಾಶ್ರಮ, ಮಕ್ಕಳ ವಸತಿಕೇಂದ್ರದಂಥವುಗಳಿಗೆ ದೇಣಿಗೆ ನೀಡುವ ಹೆಸರಿನಲ್ಲಿ ಬಿಲ್ ಮೊತ್ತಕ್ಕೆ ಸೇರಿಸಲಾಗುತ್ತದೆ. ಇದನ್ನು ಬಾಸ್ಕೆಟ್ ಸ್ನೀಕಿಂಗ್ ಎನ್ನುತ್ತಾರೆ. ಹೀಗೆ ಮಾಡುವಾಗ 'ದೇಣಿಗೆ ನೀಡುವುದು ಸಿರಿವಂತರು ಮಾತ್ರ' ಎಂಬ ಒಕ್ಕಣೆ ಕಂಪ್ಯೂಟರ್ ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ. ಇದನ್ನು ಕಂಡ ಕೂಡಲೇ ಬಳಕೆದಾರರಲ್ಲಿ ಒಂದು ರೀತಿಯ ಕೀಳರಿಮೆ ಕಾಣಿಸಿಕೊಳ್ಳುತ್ತದೆ. ತಾನು ದೇಣಿಗೆ ನೀಡದಷ್ಟು ಬಡವನಲ್ಲ ಎಂಬ ಭಾವನೆ ಉಂಟಾಗಿ, ಅವರು ದೇಣಿಗೆ ನೀಡಲು ಮುಂದಾಗುತ್ತಾರೆ. ಬಳಕೆದಾರರಲ್ಲಿ ಈ ಬಗೆಯ ವರ್ತನೆ ಉಂಟಾಗುವಂತೆ ಮಾಡುವ ಮೂಲಕ ಡಾರ್ಕ್‌ಪ್ಯಾಟರ್ನ್ ತನ್ನ ಕೆಲಸವನ್ನು ಮಾಡಿರುತ್ತದೆ.

ಬಳಕೆದಾರರಿಗೆ ಇಷ್ಟವಿಲ್ಲದ ಆ್ಯಪ್ ಖರೀದಿಸುವಂತೆ ಒತ್ತಾಯ ಮಾಡುವ ಡಾರ್ಕ್‌ಪ್ಯಾಟರ್ನ್‌ಗಳೂ ಇವೆ. ಉದಾಹರಣೆಗೆ, ಬಳಕೆದಾರರು ಒಂದು ಆ್ಯಪ್ ಮೂಲಕ ಮನೆ ಖರೀದಿಸಲು ಹೊರಟಿದ್ದರೆ ಆ ಮನೆಗೆ ಬೇಕಾಗುವ ಸೋಫಾ, ಕುರ್ಚಿ, ಪೇಯಿಂಟ್, ಒಳಾಂಗಣ ವಿನ್ಯಾಸಕ್ಕೆ ಅಗತ್ಯವಾದ ವಸ್ತುಗಳನ್ನು ಸರಬರಾಜು ಮಾಡುವಂತಹ ಆ್ಯಪ್ ಡೌನ್‌ಲೋಡ್ ಮಾಡುವಂತೆ ಒತ್ತಾಯಿಸಲಾಗುತ್ತದೆ. ಈ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡದಿದ್ದರೆ ಮನೆ ಖರೀದಿಸಲು ಬೇಕಾದ ಆ್ಯಪ್ ಕಾರ್ಯನಿರ್ವಹಿಸುವುದಿಲ್ಲ.

ಯಾವುದಾದರೂ ಪತ್ರಿಕೆಗೆ ಚಂದಾದಾರರಾಗಲು ಇಚ್ಛಿಸುವ ಬಳಕೆದಾರರಿಗೆ ಸಬ್‌ಸ್ಕ್ರಿಪ್ಷನ್ ಟ್ರ್ಯಾಪ್ ಎಂಬ ಡಾರ್ಕ್‌ಪ್ಯಾಟರ್ನ್ ಬಳಸಲಾಗುತ್ತಿದೆ. ಪತ್ರಿಕೆಗೆ ಚಂದಾ ಹಣ ಪಾವತಿಸಿದ ನಂತರ ಅದನ್ನು ರದ್ದುಪಡಿಸಲು ಚಂದಾದಾರರು ಹರಸಾಹಸಪಟ್ಟರೂ ಸಾಧ್ಯವಾಗುವುದಿಲ್ಲ. ಚಂದಾ ರದ್ದು ಮಾಡುವ ಗುಂಡಿ ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳದಂತೆ ಮಾಡಿರುತ್ತಾರೆ. ಹಾಗೊಮ್ಮೆ ಕಾಣಿಸಿಕೊಂಡರೂ ಆ ಗುಂಡಿಯನ್ನು ಒತ್ತುವುದಕ್ಕೆ ಬರೀ ಒಂದೆರಡು ನಿಮಿಷ ಕಾಲಾವಕಾಶ ಇರುತ್ತದೆ. ಅಷ್ಟರಲ್ಲಿ ನಿಮ್ಮ ಬ್ಯಾಂಕ್ ಖಾತೆಯಿಂದ ಚಂದಾಹಣ ಪತ್ರಿಕೆಯ ಖಾತೆಗೆ ಜಮಾ ಆಗಿರುತ್ತದೆ. ಈ ಮಾದರಿ ಡಾರ್ಕ್‌ಪ್ಯಾಟರ್ನ್ ಅನ್ನು ರೋಚ್ ಮೋಟೆಲ್ ಡಿಸೈನ್ (Roach Motel Design) ಎಂದೂ ಕರೆಯಲಾಗಿದೆ.



ಬಳಕೆದಾರರು ಏನನ್ನು ಖರೀದಿಸಲು ಇಚ್ಛಿಸುತ್ತಾರೋ ಅದರ ಕುರಿತ ಮಾಹಿತಿಗೆ ಮಹತ್ವ ನೀಡುವ ಬದಲು, ಬಳಕೆದಾರರಿಗೆ ಬೇಡದ ಇನ್ಯಾವುದೋ ಸರಕು ಅಥವಾ ವಿಷಯದ ಬಗ್ಗೆ ಮತ್ತೊಂದು ಪಾಪ್‌ಅಪ್ ಕಾಣಿಸಿಕೊಳ್ಳುವಂತೆ ಮಾಡಿ, ಅವರ ಹಾದಿ ತಪ್ಪಿಸುವುದಕ್ಕೆ ಇಂಟರ್‌ಫೇಸ್ ಇಂಟರ್‌ಫಿಯರೆನ್ಸ್ ಎಂಬ ಡಾರ್ಕ್‌ಪ್ಯಾಟರ್ನ್ ಬಳಸಲಾಗುತ್ತದೆ. ಒಬ್ಬ ಮಾರಾಟಗಾರ ಒಂದು ಸರಕನ್ನು ಕಡಿಮೆ ಬೆಲೆಗೆ ನೀಡುತ್ತೇನೆ ಎಂದು ಜಾಹೀರಾತು ನೀಡಿ ಬಳಕೆದಾರರನ್ನು ತನ್ನ ವೆಬ್‌ಸೈಟ್‌ಗೆ ಆಹ್ವಾನಿಸುತ್ತಾನೆ. ಬಳಕೆದಾರರು ಆ ಸರಕನ್ನು ಖರೀದಿಸಲು ಪ್ರಯತ್ನಿಸಿದಾಗ, ಆ ಮೂಲ ಸರಕು ದಾಸ್ತಾನು ಇಲ್ಲವೆಂದು, ಅದರ ಬದಲಾಗಿ ಮತ್ತೊಂದು ಸರಕನ್ನು (ಸಾಮಾನ್ಯವಾಗಿ ಮೂಲ ಸರಕಿನ ಬೆಲೆಗಿಂತ ಹೆಚ್ಚಾಗಿರುತ್ತದೆ) ಖರೀದಿಸುವಂತೆ ಪ್ರೇರೇಪಿಸಲು ಮಾರಾಟಗಾರರು ಬೇಟ್ ಆ್ಯಂಡ್ ಸ್ವಿಚ್ ಮಾದರಿಯ ಡಾರ್ಕ್‌ಪ್ಯಾಟರ್ನ್ ಬಳಸುತ್ತಾರೆ.

ಡ್ರಿಪ್ ಪ್ರೈಸಿಂಗ್ ಎಂಬುದು ಮತ್ತೊಂದು ಮಾದರಿಯ ಡಾರ್ಕ್‌ಪ್ಯಾಟರ್ನ್. ಚದುರಂಗದ ಆಟವಾಡಲು ಉಚಿತ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ ಎಂಬ ಜಾಹೀರಾತು ನೋಡಿ, ಅನೇಕರು ಅದನ್ನು ಬಳಸಲು ಆರಂಭಿಸುತ್ತಾರೆ. ಅದಾದ ಕೆಲವೇ ದಿನಗಳಲ್ಲಿ, ಚೆಸ್ ಆಟವನ್ನು ಮುಂದುವರಿಸಲು ಇಂತಿಷ್ಟು ಹಣ ಪಾವತಿಸಿ ಎಂಬ ಸಂದೇಶ ಕಾಣಿಸಿಕೊಳ್ಳುತ್ತದೆ. ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಾಗ ಇಂತಿಷ್ಟು ದಿನ ಮಾತ್ರ ಈ ಸೌಲಭ್ಯ ಉಚಿತ ಎಂಬ ಮಾಹಿತಿಯನ್ನು ಬಹಿರಂಗಪಡಿಸಿರುವುದಿಲ್ಲ.

ನ್ಯಾಗಿಂಗ್ ಎಂಬುದು ಮತ್ತೊಂದು ಡಾರ್ಕ್‌ಪ್ಯಾಟರ್ನ್. ಬಳಕೆದಾರರಿಂದ ಖರೀದಿಗೆ ಸಂಬಂಧವಿಲ್ಲದ ಅನಗತ್ಯ ಮಾಹಿತಿ ಸಂಗ್ರಹಿಸುವುದು ಇದರ ಉದ್ದೇಶ. ಪದೇಪದೇ ಬಳಕೆದಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆಯಂತಹ ಮಾಹಿತಿ ಕೇಳಲಾಗುತ್ತದೆ ಅಥವಾ ನಿರ್ದಿಷ್ಟ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ ಎಂದು ಒತ್ತಾಯಿಸಲಾಗುತ್ತದೆ. ಈ ವಿವರವನ್ನು ನೀಡಿದ ನಂತರ ಬಳಕೆದಾರರ ಮೊಬೈಲ್, ಇಮೇಲ್ ಇನ್‌ಬಾಕ್ಸ್‌ಗೆ ಜಾಹೀರಾತಿನ ಹೊಳೆ ಹರಿದುಬರುತ್ತದೆ.

ಡಾರ್ಕ್‌ಪ್ಯಾಟರ್ನ್‌ಗಳ ಬಳಕೆಗೆ ಮುಖ್ಯವಾಗಿ ಎರಡು ಕಾರಣಗಳುಂಟು. ಒಂದು, ಇಂತಹ ಅನುಚಿತ ವ್ಯಾಪಾರ ಪದ್ಧತಿಯಿಂದ ರಕ್ಷಿಸಿಕೊಳ್ಳಲು ಬಳಕೆದಾರರು ಸಮರ್ಥರಲ್ಲ. ಎರಡನೆಯದು, ಇದನ್ನು ನಿಯಂತ್ರಿಸಲು ಬೇಕಾಗಿರುವ ಕಾನೂನುಗಳ ಕೊರತೆ. ಕೇಂದ್ರ ಗ್ರಾಹಕ ಸಂರಕ್ಷಣಾ ಪ್ರಾಧಿಕಾರವು ಡಾರ್ಕ್‌ಪ್ಯಾಟರ್ನ್‌ಗಳಿಗೆ ಕಡಿವಾಣ ಹಾಕಲು ಈಗ ಮುಂದಾಗಿದೆ. ಗ್ರಾಹಕ ಸಂರಕ್ಷಣಾ ಕಾಯ್ದೆ– 2019ರ ಅಡಿಯಲ್ಲಿ ಡಾರ್ಕ್‌ಪ್ಯಾಟರ್ನ್‌ಗಳನ್ನು ತಡೆಗಟ್ಟುವ ಮಾರ್ಗಸೂಚಿಯನ್ನು ಸದ್ಯದಲ್ಲೇ ಜಾರಿಗೊಳಿಸಲಿದೆ. ಈ ಮಾರ್ಗಸೂಚಿಯನ್ನು ಉಲ್ಲಂಘಿಸುವ ಆನ್‌ಲೈನ್ ಮಾರಾಟಗಾರರಿಗೆ ಗ್ರಾಹಕ ಸಂರಕ್ಷಣಾ ಕಾಯ್ದೆಯ ಅನುಸಾರ ದಂಡ ವಿಧಿಸಲಾಗುತ್ತದೆ.

## ಚುರುಮುರಿ



### ದೊಡ್ಡೆಜಮಾನ್ರ ದೊಡ್ಡಿ!

• ತುರುವೇಕೆರೆ ಪ್ರಸಾದ್

'ಇನ್ನೇನ್ ಬುಡಪ್ಪ, ನಮ್ ಜನಪ್ರತಿನಿಧಿಗಳಿಗೆ ಓಗೋಕೆ ಇನ್ನೊಂದು ದೊಡ್ಡೆಜಮಾನ್ರ ದೊಡ್ಡಿ ಸಿಕ್ತು' ಎಂದು ಕ್ಯಾತೆ ತೆಗೆದ ಗುದ್ಲಿಂಗ.

'ಏನೇ ಯೋಳು, ಮಾಡೋ ಕೆಲಸ ಬುಟ್ಟು ಆಡೋ ದಾಸಯ್ಯನ್ ಕುಟ್ಟೆ ಓದ್ರು ಅಂದಾಗಾಯ್ತು?' ಕರಕರ ಅಂದ ಮಾಲಿಂಗ.

'ಅಂಗಲ್ಲಲೇ, ದೊಡ್ಡೆಜಮಾನ್ರ ಮನೇಲಿ ಎಂತೆಂಥ ಘಟಾನುಘಟಿಗಳು ಹಸಿಹಸಿ ಪೀಚಾಗಿ ಬಂದು ಬಲಿತ ಬದ್ನೇಕಾಯಿ ಆಗಿ ಓಗವ್ರೆ ಗೊತ್ತಾ? ಟ್ರೇನಿಂಗ್ ತಗಳಕ್ಕೆ ಹೊಸ ಸಾಸಕರು ದೊಡ್ಡೆಜಮಾನ್ರ ಮನೆಗೆ ಓದ್ರೆ ತಪ್ಪೇನಿಲ್ಲ' ಎಂದು ಕಲ್ಲೇಶಿ ತಿದಿ ಒತ್ತಿದ.

'ಹದಿನಾರಾಣೆ ಸತ್ಯ ಬುಡು, ಅಲ್ಲಿ ಮೂಲ್ ಮೂಲೆಗೂ ಸಿಕ್ಸಿರೋ ಕ್ಯಾಮರಾ ಕಣ್ಣಾವಲ್ನಾಗೇ ಮಾತು ಕತೆ ಎಲ್ಲಾ ಮಾಡ್ಬೇಕು. ಇದ್ನ ಜನಪ್ರತಿನಿಧಿಗಳು ಅಭ್ಯಾಸ ಮಾಡ್ಕಂಡ್ರೆ ಜನಗಳ ಕಣ್ ನಮ್ ಮ್ಯಾಲಿರ್ತದೆ ಅನ್ನೋ ಗ್ಯಾನ ಬತ್ತದಲ್ವಾ?'

'ವೂ ಕಣ್ಲಾ! ಈ ಟಾಸ್ಕು ಅಂತ ಇರ್ತದೆ. ನಿಧಿ ಉಡ್ಕದ್ರಲ್ಲಿ ಪಳುಗುದ್ರೆ ಎಲ್ಲೆಲ್ಲಿ ಎಷ್ಟೆಷ್ಟು ಗೆಬಕ್ಕಬಹುದು ಅನ್ನೋ ಐಡಿಯಾ ಬತ್ತದೆ'.

'ಊ ಅಂಗೆ ಕ್ಯಾಪ್ಟನ್ನು ಆಗ್ಬುಟ್ರೆ ಯಾವ್ಯಾವ ಬಾಬತ್ತಾಗೆ ಎಷ್ಟೆಷ್ಟು ಕಿತ್ತು ಗ್ಯಾರಂಟಿ ಯೋಜನೆಗೆ ಸೇರಸ್ಕಬಹುದು ಅಂತ ಅನುಭವ ಬತ್ತದೆ'.

'ಅಮ್ಯಾಕೆ ಆಚೆ ಕಡಿಯಿಂದ ಮೊಟ್ಟೆ ಎಸೆದಿದ್ನ ಈ ಕಡೆ ಇಡ್ಕಳೋ ಟಾಸ್ಕು ಇರ್ತದೆ... ಬುಟ್ರೆ ಒಡ್ದು ಇಟ್ಬಾಡಿ ಬೆಂಗಳೂರು ರೋಡ್ ತರ ಪಿಚಪಿಚ ಆಗಿ ಕಾಲು ಜಾರ್ತದೆ. ಇದ್ನ ಆಡಿ ಅನುಭವ ಇದ್ರೆ ಯಾರ್ ಮೊಟ್ಟೆ ಎಸೆದ್ರೂ ಕಾಲು ಎಳುದ್ರೂ ಸಲೀಸಾಗಿ ನಿಭಾಯಿಸ್ಬಹುದು'.

'ಆಮ್ಯಾಕೆ ತೊಟ್ಟಿನಾಗೆ ಆಕಿ ಬುಡಕ್ ಬಿಸ್ನೀರು ಬುಟ್ಟು ಒಗೆ ಹಾಕುದ್ರೂ ಎದ್ ಬರ್ದಂಗ್ ಕೂತಿರದ್ ಕಲುತ್ರೆ ಸದನದ್ ಬಾವೀಲಿ ಚಳವಳಿ ಮಾಡೋ ಹಟಯೋಗ ಬತ್ತದೆ'.

'ಲೇ, ಈ ಫಿಸಿಕಲ್ ಟಾಸ್ಕೆಲ್ಲ ಹಾಗಿರ್ಲಿ... ದೊಡ್ಡೆಜಮಾನ್ರ ಮನೇಲಿ ಮೇಲ್ನೋರ ಮಾತ್ನ ಉಸಿರು ಕಿಸಕ್ ಅನ್ದೆ ಕೇಳೋದ ಯೋಳ್ಕೊಡ್ತಾರೆ. ಕೆಳಮನೆ, ಮೇಲ್ಮನೆ ಸಿಕ್ಲಿಲ್ಲ ಅಂತ ಕಿತಾಪತಿ ಮಾಡೋರ್ನ ಸರ್ಕಾರನೇ ದೊಡ್ಡೆಜಮಾನ್ರು ಮನೆಗೆ ಕಳ್ಸಿ ಲಾಕ್ ಮಾಡ್ಬಹುದು, ಎಂಗೆ?' ಕಣ್ ಹೊಡೆದ ಪರ್ಮೇಶಿ. ಎಲ್ಲಾ 'ಸೂಪರ್' ಎಂದು ಪರ್ಮೇಶಿಯ ಬೆನ್ನಿಗೆ ಗುದ್ದಿದರು.

## ಸಂಗತ

# ಮೂಲ ಸೂತ್ರ ಮರೆತರೆ ಹೇಗೆ?

ಸಾರ್ವಜನಿಕ ಶೌಚಾಲಯದಲ್ಲಿ ಶುಚಿತ್ವ ಕಾಯ್ದುಕೊಳ್ಳದಿದ್ದರೆ, ಅದು ಹಲವು ಕಾಯಿಲೆಗಳ ವಾಹಕ ಆಗಬಹುದು ಎಂಬ ಎಚ್ಚರಿಕೆ ನಮಗೆ ಇರಬೇಕು

• ಸದಾಶಿವ್ ಸೊರಟೂರು

**ದೂರದ** ಊರಿನಿಂದ ಆಗಾಗ ಶಿವಮೊಗ್ಗಕ್ಕೆ ಬರುವ ಗೆಳೆಯನೊಬ್ಬ, ನಗರದಲ್ಲಿ ಶೌಚಕ್ಕೆ ಹೋಗಲು ಸಂಕಟಪಟ್ಟುಕೊಳ್ಳುತ್ತಾನೆ. ನಿಲ್ದಾಣಗಳಲ್ಲಿರುವ ಸಾರ್ವಜನಿಕ ಶೌಚಾಲಯ ಕಂಡರೆ ಸಾಕು, ಅಕ್ಷರಶಃ ಗಂಟಲಲ್ಲಿ ಏನೋ ಸಿಕ್ಕಿಹಾಕಿಕೊಂಡವನಂತೆ ಹಲುಬುತ್ತಾನೆ. ಎಲ್ಲೋ ಹೊರಗೆ ಜನರ ಕಣ್ಣುತಪ್ಪಿಸಿ ದೇಹಬಾಧೆ ತೀರಿಸಿಕೊಳ್ಳುತ್ತಾನೆ. ಇದು ಸಭ್ಯತೆ ಅಲ್ಲ ಅನ್ನುತ್ತೇನೆ ನಾನು. ಅವನು ಸಾರ್ವಜನಿಕ ಶೌಚಾಲಯ, ಅಲ್ಲಿನ ಅಶುಚಿತ್ವ ಮತ್ತು ವಸೂಲಿಬಾಜಿತನದ ಬಗ್ಗೆ ದೂರುತ್ತಾನೆ.

ರಾಜ್ಯದಾದ್ಯಂತ ಬಹುತೇಕ ಬಸ್ ನಿಲ್ದಾಣಗಳಲ್ಲಿ, ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಇರುವ ಶೌಚಾಲಯಗಳ ಸ್ಥಿತಿ ಗಾಬರಿ ಹುಟ್ಟಿಸುತ್ತದೆ. ಗಬ್ಬುನಾತ ಮೂಗಿಗೆ ರಾಚಿ, ಉಬ್ಬಳಿಕೆ ತರಿಸುತ್ತದೆ. ಅನಿವಾರ್ಯಕ್ಕೆ ನಮ್ಮ ವಿಧಿಗಳನ್ನು ಮುಗಿಸಿಕೊಂಡು ನಾವು ಆಚೆ ಬರಬೇಕಾಗುತ್ತದೆ. ನಿಜಕ್ಕೂ ಅದೊಂದು ರೀತಿಯ ಹಿಂಸೆ. ಎಲ್ಲೋ ಒಂದೆರಡು ಕಡೆ ತುಂಬಾ ವ್ಯವಸ್ಥಿತವಾದ ಮತ್ತು ಸ್ವಚ್ಛವಾದ ಶೌಚಾಲಯಗಳಿರಬಹುದು. ಆದರೆ ಅವುಗಳ ಸಂಖ್ಯೆ ತೀರಾ ಕಡಿಮೆ.

'ಲೋಕಲ್‌ಸರ್ಕಲ್ಸ್' ಎಂಬ ಸಂಸ್ಥೆಯು ದೇಶದಲ್ಲಿ ಇತ್ತೀಚೆಗೆ ಒಂದು ಸಮೀಕ್ಷೆ ನಡೆಸಿದೆ. ಅದರಲ್ಲಿ ಸಾರ್ವಜನಿಕ ಶೌಚಾಲಯಗಳ ದುಃಸ್ಥಿತಿಯ ಬಗ್ಗೆ ಮಾಹಿತಿ ಇದೆ. 'ಸುಲಭ್ ಇಂಟರ್‌ನ್ಯಾಷನಲ್'ನಂತಹ ಪಾವತಿ ಬಳಕೆಯ ಶೌಚಾಲಯಗಳು ಸ್ವಲ್ಪಮಟ್ಟಿಗೆ ಸಮಾಧಾನ ತರುವಂತೆ ಇದ್ದರೂ ಕೆಲವು ಕಡೆ ಅವುಗಳ ಸ್ಥಿತಿಯೂ ಅಷ್ಟಕ್ಕಷ್ಟೆ. ಉಳಿದಂತೆ ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಅಸಹನೀಯವಾಗಿದೆ. ಸಮೀಕ್ಷೆಯಲ್ಲಿ ಶೇ 52ರಷ್ಟು ಮಂದಿ, ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಸುಧಾರಿಸಿಯೇ ಇಲ್ಲ, ಅತ್ಯಂತ ಕಳಪೆ ಮತ್ತು ಬಳಸಲಾಗದ ಸ್ಥಿತಿಯಲ್ಲಿವೆ ಎಂದು ಹೇಳಿದ್ದಾರೆ.

ಇದಕ್ಕೆ ಕಾರಣ ಏನಿರಬಹುದು? ಶೌಚಾಲಯ ನಿರ್ವಹಿಸುವವರು ಮತ್ತು ಬಳಸುತ್ತಿರುವವರು ಇಬ್ಬರೂ ಕಾರಣರೇ. ಈ ಜನ ಶೌಚಾಲಯವನ್ನು ಮಲ, ಮೂತ್ರ ಹೊರಹಾಕುವ ಜಾಗ ಮಾತ್ರ ಅಂದುಕೊಂಡಿದ್ದಾರೊ, ಜೊತೆ ಜೊತೆಗೆ ತಮ್ಮ ಕಸವನ್ನೆಲ್ಲ ಹಾಕುವ ಜಾಗ ಅಂದುಕೊಂಡಿದ್ದಾರೊ ಎಂಬ ಪ್ರಶ್ನೆ ಮೂಡುತ್ತದೆ. ಅಗಿದ ಗುಟ್ಕಾವನ್ನು ಅಲ್ಲೇ ಉಗಿಯುತ್ತಾರೆ. ಜಗಿದ ಚೂಯಿಂಗಂ ಅನ್ನು ಅಲ್ಲೇ ಉಗುಳುತ್ತಾರೆ. ಅದು ರಂಧ್ರಗಳಲ್ಲಿ ಸಿಕ್ಕಿಹಾಕಿಕೊಂಡು ಇನ್ನಷ್ಟು ಹೊಲಸು ನಿಲ್ಲಲು ಕಾರಣವಾಗುತ್ತದೆ.

ಬೀಡಿ, ಸಿಗರೇಟು ತುಣುಕುಗಳು, ಕುಡಿದು ಬಿಸಾಡಿದ ಬಾಟಲಿಗಳು, ತಿಂದುಳಿದ ಎಲೆ ಅಡಿಕೆಯ ಚರಟ, ಪೇಪರ್ ತುಣುಕು... ಒಂದೇ ಎರಡೇ? ಶೌಚಾಲಯವನ್ನು ಬಳಸಿದ ಮೇಲೆ ನೀರು ಹಾಕದೆ ಹಾಗೇ ಬರುವವರು ಬಹಳಷ್ಟು ಮಂದಿ. ಅಲ್ಲಿ ಕೂತು ಗೋಡೆಯ ಮೇಲೆ ಏನೇನೋ ಅಸಭ್ಯವಾಗಿ ಬರೆದಿರುತ್ತಾರೆ. ದುಡ್ಡು ಕೊಟ್ಟಿದ್ದೇವೆ ಎನ್ನುವ ಉಡಾಫೆಯಿಂದ ಅಲ್ಲಿ ಹಾಗೆಲ್ಲ ನಡೆದುಕೊಳ್ಳಬಹುದೇ? ನಮಗೆ ಕನಿಷ್ಠ ಮಟ್ಟದ ಸ್ವಚ್ಛತಾ ಪ್ರಜ್ಞೆಯಾದರೂ ಇರಬೇಕಲ್ಲವೇ? ಗಲೀಜಿಗೆ ನಾವೇ ಕಾರಣರಾಗಿ, ಮತ್ತೆ ಸರಿಯಿಲ್ಲ ಎಂದು ನಾವೇ ದೂರುವುದು ಎಷ್ಟು ಸರಿ?

ಶೌಚಾಲಯ ನಿರ್ವಹಿಸುವವರ ಕಡೆಯಿಂದಲೂ ಬಹಳಷ್ಟು ತಪ್ಪುಗಳಿವೆ. ಅವರು ಹಣ ಪಡೆಯುವ ವಿಚಾರದಲ್ಲಿ ತೋರುವಷ್ಟು ಬಿಗಿಯನ್ನು ಶೌಚಾಲಯದ ಸ್ವಚ್ಛತೆಗೆ ತೋರಿಸುವುದಿಲ್ಲ. ಬೆಳಿಗ್ಗೆ ಒಮ್ಮೆ ಹಾಗೋ ಹೀಗೋ ಸ್ವಚ್ಛಗೊಳಿಸಿಬಿಟ್ಟರೆ ಮರುದಿನದವರೆಗೂ ಅಲ್ಲೇನಾಗಿದೆ ಎಂದು ನೋಡುವುದಿಲ್ಲ. ಒಡೆದು ಹೋದ, ಮುರಿದುಹೋದ ಮತ್ತು ಮುಚ್ಚಲಾದ ಪೈಪುಗಳನ್ನು, ಟಾಯ್ಲೆಟ್ ಬೌಲ್‌ಗಳನ್ನು ಕಾಲಕಾಲಕ್ಕೆ ಸರಿಪಡಿಸುವುದಿಲ್ಲ. ಕೆಲವು ಕಡೆ ಸಮರ್ಪಕ ನೀರಿನ ವ್ಯವಸ್ಥೆ ಕೂಡ ಇರುವುದಿಲ್ಲ ಮತ್ತು ನೀರು ಬಳಸಲು ಸರಿಯಾದ ಮಗ್ಗುಗಳನ್ನೂ ಇಟ್ಟಿರುವುದಿಲ್ಲ.



ಇನ್ನೊಂದು ಮುಖ್ಯ ವಿಚಾರ, ಶೌಚಾಲಯದವರ ವಸೂಲಿಬಾಜಿತನ. 'ಮೂತ್ರ ಉಚಿತ' ಎಂದು ಬೋರ್ಡ್ ಹಾಕಿದ್ದರೂ ಹಣ ಪೀಕುತ್ತಾರೆ. ಎಷ್ಟೋ ಜನ ಇದಕ್ಕೆಲ್ಲ ಯಾಕೆ ವಾದ ಎಂದುಕೊಂಡು ಹಣ ಕೊಟ್ಟು ಬರುತ್ತಾರೆ. ಕೆಲವು ಕಡೆ ಅವರು ಕೇಳಿದಷ್ಟನ್ನು ಮುಲಾಜಿಲ್ಲದೇ ಕೊಟ್ಟುಬಿಡಬೇಕು. 'ಮೂತ್ರ ಉಚಿತ' ಎಂಬ ಬೋರ್ಡ್ ಇದ್ದೆಡೆಯೂ ಒಬ್ಬ ಹಳ್ಳಿ ಮಹಿಳೆಯಿಂದ ಮೂವತ್ತು ರೂಪಾಯಿ ವಸೂಲಿ ಮಾಡುತ್ತಿದ್ದುದನ್ನು ನಾನು ನೋಡಿದ್ದೇನೆ. ಕೆಲವು ಮಹಿಳೆಯರು ಮುಜುಗರದ ಕಾರಣದಿಂದ ವಾದ ಮಾಡದೆ ಕೇಳಿದಷ್ಟು ಹಣ ಕೊಟ್ಟು ಬರುತ್ತಾರೆ. ಈ ಬಗ್ಗೆ ಯಾರಿಗೆ, ಎಲ್ಲಿ ದೂರು ಕೊಡಬೇಕೆಂದು ಗೊತ್ತೇ ಆಗುವುದಿಲ್ಲ. ಶೌಚಾಲಯ ನಿರ್ವಹಣೆಯನ್ನು ಗುತ್ತಿಗೆ ಕೊಟ್ಟವರು ಮತ್ತು ಪಡೆದವರಿಗೆ ಒಂದು ನೀತಿ-ನಿಯಮ ಇರಬೇಡವೇ?

ಮನುಷ್ಯನಿಗೆ ಉತ್ತಮ ಆಹಾರ ಮತ್ತು ನೀರಿನ ಅವಶ್ಯಕತೆ ಇರುವಷ್ಟೇ ಅದನ್ನು ಹೊರ ಹಾಕುವಾಗ ಶುಚಿತ್ವದ ಅವಶ್ಯಕತೆಯೂ ಇರುತ್ತದೆ. ಇಲ್ಲದಿದ್ದರೆ ಶೌಚಾಲಯ ಎಂಬುದು ಹಲವು ಕಾಯಿಲೆಗಳ ವಾಹಕ ಆಗಬಹುದು. ಅಷ್ಟೇಅಲ್ಲದೆ, ಶುಚಿತ್ವ ಇಲ್ಲದ ಕಡೆ ಶೌಚಕ್ರಿಯೆ ಒಂದು ಮಾನಸಿಕ ಹಿಂಸೆ. ನಾವೀಗ 'ಬಯಲುಶೌಚಮುಕ್ತ ದೇಶ' ಘೋಷಣೆಯ ಹೊಸ್ತಿಲಲ್ಲಿದ್ದೇವೆ ಎಂಬುದನ್ನು ಮರೆಯಬಾರದು.

ಸಾರ್ವಜನಿಕ ಶೌಚಾಲಯಗಳನ್ನು ಸ್ವಚ್ಛವಾಗಿ ಇಡುವಲ್ಲಿ ಸಾರ್ವಜನಿಕರ ಸಹಕಾರ ತುಂಬಾ ಮುಖ್ಯವಾದದ್ದು. ನಮ್ಮ ಜನರಿಗೆ ಅದರ ಅರಿವಿರಬೇಕು ಮತ್ತು ಶೌಚಾಲಯ ನಿರ್ವಹಣೆಯನ್ನು ಗುತ್ತಿಗೆಗೆ ಕೊಡುವಾಗ ನಿಯಮಗಳನ್ನು ಸ್ಪಷ್ಟವಾಗಿ ತಿಳಿಸಬೇಕು. ಅದನ್ನು ಅನುಸರಿಸದೇ ಹೋದರೆ ಮುಲಾಜಿಲ್ಲದೆ ಗುತ್ತಿಗೆಯ ಕರಾರು ರದ್ದಾಗಬೇಕು. ಮನಸ್ಸಿಗೆ ಬಂದಂತೆ ಹಣ ವಸೂಲಿ ಮಾಡುವ ದಂಧೆ ನಿಲ್ಲಬೇಕು. ಶೌಚಾಲಯವನ್ನು ಸದಾ ಸ್ವಚ್ಛವಾಗಿ ಇಡಬೇಕು. ಸ್ವಚ್ಛತೆಯೇ ಆರೋಗ್ಯದ ಮೊದಲ ಸೂತ್ರ ಎಂಬುದನ್ನು ಯಾರೂ ಮರೆಯಬಾರದು.

## ವಾಚಕರ ವಾಣಿ

### ಭವಿಷ್ಯದ ಪೀಳಿಗೆಗಾಗಿ ಉಳಿಸಬೇಕಿದೆ ಜಲಮೂಲ

ಕಪ್ಪತಗುಡ್ಡ, ಬುಕ್ಕಾಪಟ್ಟಣ, ಕಾಮಸಂದ್ರ, ನಾಗರಹೊಳೆ, ಕಾವೇರಿ ವಿಸ್ತರಿತ ವನ್ಯಜೀವಿಧಾಮ ಹಾಗೂ ದಾಂಡೇಲಿ ಸೇರಿದಂತೆ ಆರು ಅರಣ್ಯ ಪ್ರದೇಶಗಳನ್ನು ಪರಿಸರಸೂಕ್ಷ್ಮ ವಲಯಗಳೆಂದು ಘೋಷಣೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದು ಉತ್ತಮ ನಡೆಯಾಗಿದೆ. ಆದರೆ ಇನ್ನೊಂದೆಡೆ, ಬೆಂಗಳೂರಿನ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಜಲಾನಯನ ಪ್ರದೇಶದ ಅರ್ಕಾವತಿ, ಕುಮುದ್ವತಿ ನದಿಗಳ ಪ್ರದೇಶದಲ್ಲಿ ಬಫರ್ ವಲಯವನ್ನು ಕಡಿಮೆ ಮಾಡಿರುವ 2019ರ ಆದೇಶವನ್ನು ಅನುಷ್ಠಾನ ಮಾಡಲು ಮುಂದಾಗಿರುವುದು ಖಂಡನಾರ್ಹ. ನಗರ ಈಗಾಗಲೇ ಹಲವಾರು ಸಮಸ್ಯೆಗಳಿಂದ ನಲುಗುತ್ತಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡದೆ, ಭೂತಾಯಿಯ ಒಡಲನ್ನೇ ಬಗೆದು ಬೆಂಗಳೂರು ನಾಗರಿಕರ ಬದುಕನ್ನು ನರಕ ಮಾಡಲು ಹೊರಟಿರುವುದು ಸಲ್ಲದು. ನಗರ ಅಡ್ಡಾದಿಡ್ಡಿಯಾಗಿ ಬೆಳೆಯುತ್ತಿದೆ. ಈ ಜಲಾನಯನ ಪ್ರದೇಶವನ್ನು ಸಂರಕ್ಷಿಸಲು 2003ರಲ್ಲಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಯಥಾವತ್ತಾಗಿ ಪಾಲಿಸುವ ಮೂಲಕ ಜಲಮೂಲಗಳನ್ನು ಮುಂದಿನ ಪೀಳಿಗೆಗಾಗಿ ಉಳಿಸಬೇಕಾಗಿದೆ.

**ಟಿ.ಉಮಾಶಂಕರ್ ಲಕ್ಷ್ಮೀಪುರ**, ಬೆಂಗಳೂರು

### ಪ್ಯಾಲೆಸ್ಟೀನ್ ಪರ ಸ್ಟೇಟಸ್: ಕ್ರಮ ಖಂಡನೀಯ

ಪ್ಯಾಲೆಸ್ಟೀನ್ ಪರ ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿದ್ದ ಹೊಸಪೇಟೆಯ ವ್ಯಕ್ತಿಯೊಬ್ಬರನ್ನು ಪೊಲೀಸರು ವಶಕ್ಕೆ ಪಡೆದುದು ಆಘಾತಕಾರಿಯಾಗಿದೆ. ಹಾಗಿದ್ದರೆ, ಇತಿಹಾಸದಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸ್‌ನಂತಹ ಸಾಮ್ರಾಜ್ಯಶಾಹಿ ದೇಶಗಳು ಮಾಡಿದ ಪ್ರಮಾದದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ದೇಶದಲ್ಲಿ ಅಪರಾಧವೇ? 75 ವರ್ಷಗಳಿಂದ ಇಸ್ರೇಲ್ ದೇಶವು ಪ್ಯಾಲೆಸ್ಟೀನಿಯನ್ನರ ಪ್ರದೇಶವನ್ನು ಆಕ್ರಮಣ ಮಾಡುತ್ತಾ ದಿನನಿತ್ಯ ಅವರ ಮೇಲೆ ದಾಳಿ ನಡೆಸುತ್ತಾ ಬಂದಿರುವುದು ನ್ಯಾಯಯುತವೇ?

ವಿಶ್ವಸಂಸ್ಥೆಯ ಮಹಾ ಅಧಿವೇಶನವು ತನ್ನ ಈ ದಾಳಿ, ದಬ್ಬಾಳಿಕೆಗಳ ವಿರುದ್ಧ ಕೈಗೊಂಡ ನಿರ್ಣಯಗಳನ್ನು ಧಿಕ್ಕರಿಸಿ ಇಸ್ರೇಲ್ ಹೀಗೆ ನಡೆದುಕೊಳ್ಳುತ್ತಿರುವುದು ಎಷ್ಟು ಸರಿ? ಅಮೆರಿಕ, ಇಂಗ್ಲೆಂಡ್‌ನಂತಹ ಶ್ರೀಮಂತ ದೇಶಗಳ ತೀರ್ಮಾನಗಳೇ ಅಂತಿಮವೇ? ತೀರಾ ಇತ್ತೀಚಿನವರೆಗೂ ಭಾರತ ಸರ್ಕಾರವು ಪ್ಯಾಲೆಸ್ಟೀನಿಯನ್ನರ ಹೋರಾಟದ ಪರವಾಗಿ ತನ್ನ ನಿಲುವನ್ನು ಹೊಂದಿತ್ತು ಎನ್ನುವುದನ್ನು ನಾವು ಮರೆಯಬಾರದು.

**ಟಿ.ಸುರೇಂದ್ರ ರಾವ್**, ಬೆಂಗಳೂರು

### ಸುಳ್ಳು ಸುದ್ದಿ ಆಯಸ್ಸು ಹೆಚ್ಚಿಸಲಿ!

ಇತ್ತೀಚಿನ ಕೆಲವು ದಿನಗಳಿಂದ, ಕೆಲವು ಗಣ್ಯವ್ಯಕ್ತಿಗಳು ಅಗಲಿದ್ದಾರೆ ಎಂಬ ಸುದ್ದಿ ಆಗಾಗ ಕೇಳಿಬರುತ್ತದೆ. ಆದರೆ ಅದನ್ನು ಓದಿ ಅರಗಿಸಿಕೊಳ್ಳುವ ಮುನ್ನವೇ, ಆ ವ್ಯಕ್ತಿಗಳ ಆರೋಗ್ಯದಲ್ಲಿ ಸುಧಾರಣೆ ಅಗುತ್ತಿದ್ದು, ಸುಳ್ಳು ಸುದ್ದಿಗಳನ್ನು ನಂಬಬೇಡಿ ಎಂದು ಕುಟುಂಬದ ಸದಸ್ಯರಿಂದ ಹೇಳಿಕೆ ಬಿಡುಗಡೆಯಾಗುತ್ತದೆ. ನನ್ನ ಬಾಲ್ಯದಲ್ಲಿ ಅಪರೂಪಕ್ಕೊಮ್ಮೆ ಇಂತಹ ವಿಷಯ ಕೇಳಿಬಂದಾಗ, ಯಾವ ವ್ಯಕ್ತಿ ಸತ್ತ ಎಂದು ಸುಳ್ಳು ಸುದ್ದಿ ಹರಡುತ್ತದೋ ಅಂತಹ ವ್ಯಕ್ತಿಯ ಆಯಸ್ಸು ಹೆಚ್ಚಾಗುತ್ತದೆ ಎಂದು ನನ್ನ ಅಜ್ಜಿ ದಿವಂಗತ ಅಂಬುಬಾಯಿ ತಾಪ್ಸೆ ಹೇಳುತ್ತಿದ್ದರು.

ಹೀಗಾಗಿಯೇ ಏನೋ, ಸಾಲುಮರದ ತಿಮ್ಮಕ್ಕ ಹಾಗೂ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರಿಬ್ಬರೂ ನಿಧನರಾಗಿದ್ದಾರೆ ಎಂದು ಇತ್ತೀಚೆಗೆ ಸುಳ್ಳು ಸುದ್ದಿ ಹರಡುತ್ತಿದ್ದಂತೆ, ಅವರ ಆರೋಗ್ಯದಲ್ಲಿ ಚೇತರಿಕೆ ಆಗಿದೆ ಎಂಬ ಅವರ ಕುಟುಂಬದ ಸದಸ್ಯರ ಪತ್ರಿಕಾ ಹೇಳಿಕೆ ಓದಿ ಖುಷಿಯಾಯಿತು. ಇಂತಹ ಮಹಾನ್ ವ್ಯಕ್ತಿಗಳು ನಮ್ಮ ಕಾಲದಲ್ಲಿ ಹುಟ್ಟಿದ್ದು ನಮಗೆ ಹೆಮ್ಮೆಯ ವಿಷಯ. ನಮ್ಮ ಅಜ್ಜಿ ಹೇಳಿದಂತೆ, ಅವರ ಆಯಸ್ಸು ಹೆಚ್ಚಾಗಲಿ ಎಂಬುದು ನನ್ನ ಆಶಯ.

**ರಘುನಾಥರಾವ್ ತಾಪ್ಸೆ**, ದಾವಣಗೆರೆ

### 'ಕನ್ನಡ ನುಡಿ': ಬಳಕೆಯಾಗಲಿ ತಂತ್ರಜ್ಞಾನ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾಗುತ್ತಿದ್ದ ಸದಭಿಮಾನದ 'ಕನ್ನಡ ನುಡಿ' ಮಾಸಪತ್ರಿಕೆಯು ಸ್ಥಗಿತವಾಗಿರುವುದರಿಂದ, ಸಾಂಸ್ಕೃತಿಕ, ಸಾಹಿತ್ಯಿಕ ಕ್ಷೇತ್ರಕ್ಕೆ ಸಂಬಂಧಿಸಿದ ಪರಿಷತ್ತಿನ ಉದ್ದೇಶಿತ ಚಟುವಟಿಕೆಗಳು, ನವೀನ ಪುಸ್ತಕಗಳು, ಹಮ್ಮಿಕೊಂಡ ಯೋಜನೆಗಳ ಬಗ್ಗೆ ಚಂದಾದಾರರಿಗೆ ಪೂರ್ಣ ಮಾಹಿತಿ ಸಿಗುತ್ತಿಲ್ಲ. ಪತ್ರಿಕೆಯ ಪ್ರಕಟಣೆಯನ್ನು ಪುಸ್ತಕದ ರೂಪದಲ್ಲಿ ಪುನರಾರಂಭಿಸಲು ಸಾಧ್ಯವಾಗದಿದ್ದರೆ, ಇಂದಿನ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡು, ಚಂದಾದಾರರ ವಾಟ್ಸ್‌ಆ್ಯಪ್‌ಗೆ ಪಿಡಿಎಫ್ ರೂಪದಲ್ಲಾದರೂ ಅದನ್ನು ರವಾನಿಸುವ ವ್ಯವಸ್ಥೆ ಮಾಡಬೇಕು. ಈ ಮೂಲಕ 'ಕನ್ನಡ ನುಡಿ'ಯನ್ನು ಕನ್ನಡಿಗರ ಕೈಯಲ್ಲಿ ಇರಿಸುವ ಕೆಲಸ ಆಗಬೇಕು.

**ಜಯವೀರ ಎ.ಕೆ.**, ಖೇಮಲಾಪುರ, ರಾಯಬಾಗ

### ಬಡವರಿಗೆ ನೆರವು: ಜಾತಿ ಮಾಹಿತಿ ಏಕೆ?

ಬೇರೊಂದು ಜಾತಿಯ ಯುವಕನನ್ನು ಪ್ರೀತಿಸುತ್ತಿದ್ದ ಮಗಳನ್ನು ಅಪ್ಪ ಮರ್ಯಾದೆಗೇಡು ಹತ್ಯೆ ಮಾಡಿರುವ ಸುದ್ದಿಯನ್ನು (ಪ್ರ.ವಾ., ಅ. 13) ಓದಿ ದುಃಖವಾಯಿತು. ಇತ್ತೀಚೆಗೆ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ಜಾತಿ ವ್ಯವಸ್ಥೆಯಿಂದ ಜಾತಿಗಳ ನಡುವೆ ಪರಸ್ಪರ ದ್ವೇಷ, ಜಗಳ, ಹಿಂಸೆ ಎಲ್ಲೆಲ್ಲೂ ನಡೆಯುತ್ತಿದ್ದು ಅಶಾಂತಿ ತಾಂಡವವಾಡುತ್ತಿದೆ. ಇಂತಹ ಸ್ಥಿತಿಯಲ್ಲಿ ಪ್ರಜೆಗಳನ್ನು ಅವರ ಜಾತಿ, ಉಪಜಾತಿಯಿಂದ ಗುರುತಿಸಿದರೆ ಅವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಪ್ರಜೆಗಳು ತಮ್ಮ ಜಾತಿಯನ್ನು ಮರೆಯುವಂತೆ ಮಾಡಬೇಕು. ಈ ಕಾರಣಕ್ಕಾಗಿ, ಜಾತಿ ಜನಗಣತಿಯಂಥವುಗಳನ್ನು ನಡೆಸುವುದು ಸರಿಯಲ್ಲ.

ಬಡವರಿಗೆ ಸಹಾಯ ಮಾಡಲು ಜಾತಿ ಜನಗಣತಿಯ ಅಂಕಿಅಂಶಗಳೇ ಅವಶ್ಯ ಎಂದೇನಿಲ್ಲ. ಉದಾಹರಣೆಗೆ, 2022- 23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 80ಕ್ಕಿಂತ ಹೆಚ್ಚು ಅಂಕ ಪಡೆದ 19 ವಿದ್ಯಾರ್ಥಿನಿಯರಿಗೆ ಚಿಂತಾಮಣಿಯ ಸರ್ಕಾರಿ ಬಾಲಕಿಯರ ಶಾಲೆಯಲ್ಲಿ ಇತ್ತೀಚೆಗೆ ನಮ್ಮ ಸಂಸ್ಥೆಯೊಂದರಿಂದ ಪ್ರೋತ್ಸಾಹಧನ ನೀಡಲಾಯಿತು. ನಮಗೆ ಈ ಮಕ್ಕಳ ಜಾತಿ, ಕುಲದ ವಿವರ ಬೇಕಿರಲಿಲ್ಲ. ಆದರೆ ಸರ್ಕಾರದ ನಿಯಮಾನುಸಾರ, ಬಳಿಕ ಶಾಲೆಯವರು ವಿವರ ತಿಳಿಸಿದರು. ಅದರಂತೆ, ನಾವು ಪ್ರೋತ್ಸಾಹಧನ ನೀಡಿದವರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ 11, ಮುಸ್ಲಿಂ 7 ಹಾಗೂ ಬ್ರಾಹ್ಮಣ ಸಮುದಾಯದ ಒಬ್ಬ ವಿದ್ಯಾರ್ಥಿನಿ ಇದ್ದರು. ಇದನ್ನು ತಿಳಿದು ನಮಗೆ ಸಂತೋಷವೇ ಆಯಿತು. ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡುವ ನಮ್ಮ ಉದ್ದೇಶ ಈಡೇರಿತು.

**ಜಿ.ಎಚ್.ವೆಂಕಟೇಶ್ ಮೂರ್ತಿ**, ಚಿಂತಾಮಣಿ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಲ್ಲಾ ಜನವರ್ಗಗಳ ಅಭಿರುಚಿಗೆ ಸ್ಪಂದಿಸಬೇಕಾದ ಮುಖ್ಯವಾಹಿನಿಯ ಜನಪ್ರಿಯ ಪತ್ರಿಕೆಗಳ ಈ ಅನಿವಾರ್ಯಗಳಾಚೆಗೂ 'ಪ್ರಜಾವಾಣಿ' ಪುಟಗಳಲ್ಲಿನ 'ಮಹಿಳಾ ಕಾಳಜಿ' ಬಿಂಬಿಸಿರುವ ಸೂಕ್ಷ್ಮತೆ ಹಾಗೂ ಘನತೆಯು ಜನರ ಪ್ರಜ್ಞಾವಲಯವನ್ನು ವಿಸ್ತರಿಸಿದೆ. ಸಮಸ್ಯೆಗಳ ಸಂಕೀರ್ಣತೆಗಳನ್ನು ಅರಿಯುವ ಯತ್ನ ನಿರಂತರವಾಗಿದೆ

## ಹೊಸ ಸ್ಪಂದನ, ಹೊಸ ನುಡಿಗಟ್ಟು

# ಕದಲಿದ ಯಥಾಸ್ಥಿತಿ ವಾದ

• ಸಿ.ಜಿ. ಮಂಜುಳಾ

**ಮಹಿಳಾ** ಹಕ್ಕುಗಳ ವಿಚಾರಗಳಲ್ಲಿ ಹೊಸ ಅರಿವು ಮೂಡಿದ ಕಾಲವೆಂದರೆ 1970ರ ದಶಕ. ಭಾರತದಲ್ಲಿನ ಮಹಿಳೆಯರ ಸ್ಥಿತಿಗತಿ ಕುರಿತಂತೆ 1974ರಲ್ಲಿ ಪ್ರಕಟವಾದ 'ಸಮಾನತೆಯತ್ತ' ವರದಿಯು ಸ್ವತಂತ್ರ ಭಾರತದಲ್ಲಿ ಮಹಿಳಾ ಹೋರಾಟಕ್ಕೆ ಹೊಸ ಅಸ್ತಿಭಾರ ಹಾಕಿತು. 1975ರ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ನಂತರ 1975-1985ರ ದಶಕವನ್ನು ಮಹಿಳಾ ದಶಕ ಎಂದು ವಿಶ್ವಸಂಸ್ಥೆ ಘೋಷಿಸಿತು. ವೇತನ ಸಮಾನತೆ, ಮಹಿಳೆ ಮೇಲಿನ ಹಿಂಸಾಚಾರ, ಮಾನವಹಕ್ಕುಗಳ ವಿಚಾರಗಳು ಮುನ್ನೆಲೆಗೆ ಬಂದವು. ಈ ಎಲ್ಲಾ ವಿಚಾರಗಳು, ಆ ದಶಕದ 'ಪ್ರಜಾವಾಣಿ' ಪುಟಗಳಲ್ಲಿ ಪ್ರತಿಬಿಂಬಿತವಾಗಿವೆ. ಹೊಸ ಕಾಲಕ್ಕೆ ಸ್ಪಂದಿಸುವ ಹೊಸ ದೃಷ್ಟಿಕೋನಗಳ ಬರಹಗಳು ಪ್ರಕಟವಾಗಿವೆ.

ಆಡಳಿತ ವರ್ಗದ ಸಂವೇದನಾಶೀಲತೆ ಹಾಗೂ ಉದಾರ ನಿಲುವಿನಿಂದಾಗಿ ಮಹಿಳೆಯರು ಸೇರಿದಂತೆ ಸಮಾಜದ ವಿವಿಧ ಸ್ತರಗಳ ಸಮುದಾಯಗಳ ವ್ಯಕ್ತಿಗಳಿಗೆ ನಾಲ್ಕು ದಶಕಗಳ ಹಿಂದೆಯೇ 'ಪ್ರಜಾವಾಣಿ'ಯ 'ನ್ಯೂಸ್ ರೂಮ್'ನಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ಲಭ್ಯವಾಗಿದ್ದು ದೊಡ್ಡ ಬೆಳವಣಿಗೆ. ನ್ಯೂಸ್ ಡೆಸ್ಕ್‌ನ ರಾತ್ರಿ ಪಾಳಿಗಳಲ್ಲಿ ಹಾಗೂ ಜಿಲ್ಲೆಗಳಲ್ಲಿ ವರದಿಗಾರ್ತಿಯರಾಗಿ ಕಾರ್ಯ ನಿರ್ವಹಿಸುವಂತಹ ಅವಕಾಶಗಳು ಮಹಿಳೆಯರಿಗೆ ಲಭ್ಯವಾದದ್ದೂ ಹೊಸತನದ ದೃಷ್ಟಿಗಳು, ಮೌಲ್ಯಗಳ ಬೆಳವಣಿಗೆಗೆ ಪೂರಕವಾಗಿದ್ದವು ಎಂದೇ ಹೇಳಬೇಕು. ಹಾಗೆಯೇ ಕನ್ನಡ ಸಾಹಿತ್ಯ ಲೋಕದಲ್ಲಿ ಸ್ತ್ರೀ ಸಂವೇದನೆ ರೂಪುತಳೆಯುತ್ತಿದ್ದ ಕಾಲವದು. ಹೊಸ ಲೇಖಕಿಯರ ಸೃಜನಾತ್ಮಕ ಬರಹಗಳು ಹಾಗೂ ಸ್ತ್ರೀವಾದಿ ನೆಲೆಗಳಿಂದ ಸಾಹಿತ್ಯವನ್ನು ಗ್ರಹಿಸುವ ವಿಮರ್ಶಾ ನೋಟಗಳಿಗೂ 'ಪ್ರಜಾವಾಣಿ' ವೇದಿಕೆಯಾಗಿತ್ತು. ಯಥಾಸ್ಥಿತಿವಾದಗಳನ್ನು ಕದಲಿಸಿ ಹೊಸ ದೃಷ್ಟಿಕೋನಗಳನ್ನು ಬೇರೂರಿಸುವ ಯತ್ನಗಳಾಗಿದ್ದವು ಅವು.

ವರದಕ್ಷಿಣೆ ಹಿಂಸೆ ಪ್ರಕರಣದಲ್ಲಿ ತಿಪಟೂರಿನ ವೈದ್ಯರೊಬ್ಬರ ಪತ್ನಿ ಶಶಿಕಲಾ 1987ರ ನವೆಂಬರ್ 6 ರಂದು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವು ರಾಜ್ಯದಲ್ಲಿ ದೊಡ್ಡ ಹೋರಾಟವನ್ನು ಹುಟ್ಟುಹಾಕಿತ್ತು. 'ಬೆಂಗಳೂರು ಮಾಧ್ಯಮ ಮಹಿಳೆಯರ ವೇದಿಕೆ'ಯ ನಿಯೋಗವು ತಿಪಟೂರಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿತ್ತು. ಕುಟುಂಬದ ವಿರುದ್ಧ ಊರಿನ ಜನರು ಸ್ವಯಂ ಪ್ರೇರಿತರಾಗಿ 'ತಿಪಟೂರು ಬಂದ್' ಆಚರಿಸಿದ್ದು ವಿಶಿಷ್ಟವಾಗಿತ್ತು. ಈ ಹಿನ್ನೆಲೆಯಲ್ಲಿ, ವರದಕ್ಷಿಣೆ ಸಮಸ್ಯೆಯ ಬಗ್ಗೆ ಬೆಂಗಳೂರು ಸೇರಿದಂತೆ ಜಿಲ್ಲಾ ಕೇಂದ್ರಗಳ ವರದಿಗಳನ್ನಾಧರಿಸಿದ ಸಾಪ್ತಾಹಿಕ ಪುರವಣಿಯ ಅಗ್ರ ಲೇಖನವು ಕಾನೂನಿನ ಅನುಷ್ಠಾನ ಹಂತದಲ್ಲಿರುವ ನಿರ್ಲಕ್ಷ್ಯ, ಜಾಗೃತಿಯ ಕೊರತೆಯನ್ನು ಪ್ರಸ್ತಾಪಿಸಿತ್ತು (1988 ಸೆಪ್ಟೆಂಬರ್ 25).

ಶಶಿಕಲಾ ಬರೆದಿದ್ದ ಡೈರಿಯ ಮಾತುಗಳನ್ನು ಈ ಬರಹದಲ್ಲಿ ಉಲ್ಲೇಖಿಸಲಾಗಿದೆ: 'ನಾನು ಗಂಡನಿಗೆ ಆದರ್ಶ ಪತ್ನಿ, ಅತ್ತೆ ಮಾವನಿಗೆ ಒಳ್ಳೆಯ ಸೊಸೆ ಆಗಲಿಲ್ಲವಾದರೆ - ನಾನು ಏತಕ್ಕೆ ಯೋಗ್ಯ? ಅವರು ನನ್ನನ್ನು ಜೀವನದಿಂದ ದೂರ ಏಕೆ ಮಾಡುತ್ತಿದ್ದಾರೆ? ನಾನು ನೇಣು ಹಾಕಿಕೊಂಡು ಸಾಯಲು ಇಚ್ಛಿಸುತ್ತೇನೆ. ಇದಕ್ಕೆ ಹೊಣೆ ನನ್ನ ಅತ್ತೆ, ಮಾವ ಮತ್ತು ಪತಿಯವರೆ. ನನ್ನ ಮಗುವನ್ನು ತಾಯಿಗೆ ಒಪ್ಪಿಸುತ್ತಿದ್ದೇನೆ. ಎಲ್ಲರೂ ಸೇರಿ ಆಕೆಯನ್ನು ಪ್ರೀತಿಯಿಂದ ಸಾಕಿರಿ. ಮಗಳನ್ನು ಓದಿಸಿ ಅವಳಿಗೆ ಇಚ್ಛೆ ಇದ್ದರೆ ಮದುವೆ ಮಾಡಿ. ಇಲ್ಲದಿದ್ದರೆ ಬೇಡ. ಅವಳನ್ನು ಅವರ ತಂದೆ, ತಾತ, ಅಜ್ಜಿಯವರೊಡನೆಯೂ ಯಾವಾಗಲೂ ಸೇರಿಸಬೇಡಿ. ನನ್ನಿಂದ ಸಹಿಸಲು ಸಾಧ್ಯವಿಲ್ಲ. ನಾನು ತಂದೆಯವರ ಹತ್ತಿರ ಹೋಗುತ್ತಿದ್ದೇನೆ. ಪಾಪ ಅವರೊಬ್ಬರೆ ಇದ್ದಾರೆ. ನಾನು ಸತ್ತ ನಂತರ ತಾವುಗಳು, ಗಂಡ, ಅತ್ತೆ ಮಾವ ಇವರುಗಳೊಡನೆ ಯಾವ ಸಂಬಂಧ ಇಟ್ಟುಕೊಳ್ಳಬೇಡಿ. ಸಾಯುವುದಕ್ಕೆ ಮುಂಚೆ ನಾನು ನನ್ನ ಪತಿಯನ್ನು ಕ್ಷಮಿಸಬಹುದು. ಆದರೆ ನನ್ನ ಅತ್ತೆ ಮತ್ತು ಮಾವನವರನ್ನು ನಾನೇನು ಆ ಭಗವಂತನೂ ಕ್ಷಮಿಸಲಾರ'.

ವರದಕ್ಷಿಣೆ ಕಿರುಕುಳಗಳ ಬಗ್ಗೆ ಪೊಲೀಸರಿಗೆ ದೂರು ಸಲ್ಲಿಸುವ ಕ್ರಿಯೆ ಜಿಲ್ಲೆಗಳಲ್ಲಿನ್ನೂ ಆರಂಭದ ಹಂತದಲ್ಲಿರುವುದನ್ನು ಜಿಲ್ಲಾ ವರದಿಗಳು ಪ್ರಸ್ತಾಪಿಸಿವೆ. ಸುಟ್ಟ ಗಾಯಗಳಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಸತ್ತಿರುವ ಯುವ ಮಹಿಳೆಯರ ಕುರಿತಾದ ಹೆಚ್ಚಿನ ಸಂಶೋಧನೆಯ ಅಗತ್ಯವನ್ನೂ ಈ ವರದಿಗಳು ಬೊಟ್ಟು ಮಾಡಿದ್ದವು.

ಜಿಲ್ಲೆಗಳಲ್ಲಿನ ವರದಿಗಾರರು ನೀಡುತ್ತಿದ್ದ ಅಭಿವೃದ್ಧಿಯ ಚಿತ್ರಣಗಳಲ್ಲಿ ಮಹಿಳೆಯೂ ಕೇಂದ್ರವಸ್ತುವಾಗಿರುತ್ತಿದ್ದಳು. ಕಳೆದ ಶತಮಾನದ ಎಂಬತ್ತರ ದಶಕದಲ್ಲಿ ಆಡಳಿತ ರಂಗದಲ್ಲಿ ಮಹಿಳಾ ಅಧಿಕಾರಿಗಳು ಬೆರಳೆಣಿಕೆಯಲ್ಲಿದ್ದರು. ಇತ್ತೀಚೆಗೆ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತರಾದ ರತ್ನಪ್ರಭಾ ಅವರು, 1986ರಲ್ಲಿ ಚಿಕ್ಕಮಗಳೂರು ವಿಶೇಷ ಜಿಲ್ಲಾಧಿಕಾರಿಯಾಗಿದ್ದರು. ರಾಜ್ಯದ ಪ್ರಥಮ ದಲಿತ ಮಹಿಳಾ ಐಎಎಸ್ ಅಧಿಕಾರಿ ಅವರು. ಅವರ ಸಂದರ್ಶನ ಲೇಖನ 'ಸಾಪ್ತಾಹಿಕ ಪುರವಣಿ'ಯ ಅಗ್ರಲೇಖನವಾಗಿ (ಮಾರ್ಚ್ 23, 1986) ಪ್ರಕಟವಾಗಿತ್ತು.

'ಮಹಿಳೆ ಮಹಾ ಶೋಷಿತೆ. ಆದ್ದರಿಂದ ಸರ್ಕಾರದ ಯೋಜನಾ ಸೌಲಭ್ಯಗಳು ನೂರಕ್ಕೆ ನೂರರಷ್ಟು ಮಹಿಳೆಗೇ ಸಿಕ್ಕಬೇಕು. ಕನಿಷ್ಠ ಶೇ 50ರಷ್ಟಾದರೂ ಸಿಕ್ಕದಿದ್ದರೆ ಅದಾವ ಸಾಮಾಜಿಕ ನ್ಯಾಯ?' ಎಂಬಂಥ ದಿಟ್ಟ ಪ್ರಶ್ನೆಯನ್ನು ಸಾರ್ವಜನಿಕ ಸಮಾರಂಭವೊಂದರಲ್ಲಿ ಕೇಳಿದ್ದವರು ಆಗಿನ ಯುವ ಅಧಿಕಾರಿ ರತ್ನಪ್ರಭಾ. ವಿಶ್ವಸಂಸ್ಥೆ ಘೋಷಿಸಿದ್ದ ಮಹಿಳಾ ದಶಕ ಮುಕ್ತಾಯವಾಗಿ ಮಹಿಳಾ ಹಕ್ಕುಗಳ ಕುರಿತಾದ ಮಹಿಳಾ ಆಂದೋಲನ ವ್ಯಾಪಿಸಿಕೊಳ್ಳುತ್ತಿದ್ದ ಆ ಕಾಲಘಟ್ಟದಲ್ಲಿ ರತ್ನಪ್ರಭಾ ಮಾತು ರಾಜ್ಯದ ಆಡಳಿತರಂಗದಲ್ಲಿ ಹೊಸ ನುಡಿಗಟ್ಟೊಂದನ್ನು ಕಟ್ಟಿದಂತಿತ್ತು. 'ಕುಟುಂಬದಲ್ಲಿ ಆಸ್ತಿಯ ಹಕ್ಕಿನಿಂದ ಹಿಡಿದು ಸರ್ಕಾರದ ವಿವಿಧ ಯೋಜನೆಗಳ ಎಲ್ಲಾ ಸೌಲಭ್ಯ... ಕಡೆಗೆ ಒಂದು ಜನತಾ ಮನೆ ಕೂಡ ಪುರುಷನ ಹೆಸರಿಗೇ ಹೋಗುತ್ತದೆ... ಮಹಿಳೆಗೆ ಅವಳದೇ ಆದ ಸುಖ-ಸಂತೋಷಗಳಿವೆ. ಅದನ್ನು ಪಡೆಯಲು ಆಕೆಗೂ ಪುರುಷನಷ್ಟೇ ಸಮಾನ ಹಕ್ಕಿದೆ. ಆಕೆ ಕೇವಲ ಕೊಡುವಾಕೆಯಾಗಬಾರದು. ಸ್ವೀಕರಿಸುವಾಕೆ ಕೂಡ ಆಗಬೇಕು. ಸಮಾನತೆಯ ಈ ಮೌಲ್ಯಗಳಿಗೆ ಮಾನ್ಯತೆ ಸಿಗುವುದು ಯಾವಾಗ?' ಎಂದು ಪ್ರಶ್ನಿಸಿದ್ದ ರತ್ನಪ್ರಭಾ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಹಿಳೆಯರ ಆರ್ಥಿಕ ಏಳಿಗೆಗಾಗಿ ಕೈಗೊಂಡ ಕ್ರಮಗಳನ್ನು ಈ ಲೇಖನ ಕಟ್ಟಿಕೊಟ್ಟಿತ್ತು.

ಸಂಪಾದಕೀಯ ಪುಟದ ಅಗ್ರ ಲೇಖನಗಳಾಗಿ ಪ್ರಕಟವಾಗುತ್ತಿದ್ದ 'ಪಿಟಿಐ ಫೀಚರ್' ಲೇಖನಗಳು, ಮಹಿಳಾ ವಿಚಾರಗಳನ್ನು ರಾಜಕೀಯ ಹಾಗೂ ತಾತ್ವಿಕ ನೆಲೆಗಳಲ್ಲಿ ವಿಶ್ಲೇಷಿಸಿ, ಅಭಿಪ್ರಾಯಗಳನ್ನು ರೂಢಿಸಲೆತ್ನಿಸಿವೆ. ಸ್ವತಂತ್ರ ಭಾರತದ ಆದಿ ಪತ್ರಕರ್ತೆಯರಲ್ಲಿ ಒಬ್ಬರಾದ ಕಮಲಾ ಮಂಕೇಕರ್ ಅವರ ಲೇಖನಗಳೂ ಈ ವಿಭಾಗದಲ್ಲಿ ಪ್ರಕಟವಾಗಿವೆ. ಸ್ತ್ರೀವಾದಿ ನೆಲೆಯ ಅಧ್ಯಯನಗಳ ಹಿನ್ನೆಲೆಯಿರುವ ಲೇಖಕಿಯರಾದ ಹೇಮಲತಾ ಮಹಿಷಿ, ಆರ್. ಇಂದಿರಾ, ವಸು ಮಳಲಿ ಮುಂತಾದವರ ವಿಶ್ಲೇಷಣಾತ್ಮಕ ಬರಹಗಳು ಚಿಂತನೆಯ ದಿಕ್ಕುಗಳಿಗೆ ಹೊಸ ಸ್ಪರ್ಶಗಳನ್ನು ನೀಡಿವೆ.

ಮಹಿಳೆ ವಿಚಾರಗಳ ಪರವಾಗಿ ಸೂಕ್ತ ದೃಷ್ಟಿಕೋನಗಳನ್ನು ಪಸರಿಸುವಲ್ಲಿ 'ಪ್ರಜಾವಾಣಿ'ಯ ಸಂಪಾದಕೀಯಗಳ ಪಾತ್ರ ಮಹತ್ವದ್ದು. ಶಾಬಾನು ಪ್ರಕರಣದ ನಂತರ, ಮುಸ್ಲಿಂ ಮಹಿಳೆಯರ ಹಕ್ಕು ರಕ್ಷಣೆ ಮಸೂದೆ ಜಾರಿಗೆ ವಿರೋಧ ವ್ಯಕ್ತಪಡಿಸಿ ಕೇಂದ್ರ ಸಚಿವ ಆರೀಫ್ ಮಹಮದ್ ಖಾನ್ ನೀಡಿದ ರಾಜೀನಾಮೆಗೆ ಸಂಬಂಧಿಸಿದ ಸಂಪಾದಕೀಯ 1986ರ ಫೆ. 28ರಂದು ಪ್ರಕಟವಾಗಿದೆ. ಪ್ರತಿಗಾಮಿ ಶಕ್ತಿಗಳೊಂದಿಗೆ ಕೇಂದ್ರ ಸರ್ಕಾರ ರಾಜಿ ಮಾಡಿಕೊಂಡರೆ ಅದರಿಂದ ದೂರಗಾಮಿ ಪ್ರತಿಕೂಲ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಸಂಪಾದಕೀಯ ಎಚ್ಚರಿಸಿತ್ತು. ಮುಂದಿನ ದಿನಗಳಲ್ಲಿ ಅದು ನಿಜವಾದದ್ದಕ್ಕೆ ನಂತರದ ಇತಿಹಾಸವೇ ಸಾಕ್ಷಿ.

'ಪ್ರಜಾವಾಣಿ'ಯ ಭಾನುವಾರದ ಪುಟಗಳಲ್ಲಿ 'ಮಹಿಳೆ'ಗೆ ವಿಶೇಷ ಪುಟ ಅಥವಾ ಕಾಲಂಗಳನ್ನು ಮೀಸಲಿಡುವ ಪರಂಪರೆ ಐವತ್ತರ ದಶಕದಿಂದಲೂ ಇದೆ. 'ವನಿತಾ ವಿಹಾರ', 'ಮಹಿಳಾ ವಾಣಿ' 'ಸಾಪ್ತಾಹಿಕ ಪುರವಣಿ'ಯಲ್ಲಿ ಅರ್ಧ ಪುಟದಷ್ಟು ಪ್ರಕಟವಾಗುತ್ತಿದ್ದ 'ಮಹಿಳೆ', 'ಕೇಳೇ ಗೆಳತಿ' ಕಾಲಂಗಳು, ನಂತರದ ದಿನಗಳಲ್ಲಿ ಸಮೃದ್ಧ ನಾಲ್ಕು ಪುಟಗಳ 'ಭೂಮಿಕಾ' ಪುರವಣಿ-ಮಹಿಳೆಯರ ವಿವಿಧ ಆಸಕ್ತಿಗಳಿಗೆ ಅಭಿವ್ಯಕ್ತಿ ನೀಡಿವೆ. ಈ ಪುಟಗಳಲ್ಲಿ ಅಂದಂದಿನ ಕಾಲದ ಮಹಿಳಾ ಕಾಳಜಿಯ ವಿಷಯಗಳ ಕುರಿತು ಬಿಸಿಬಿಸಿಯಾದ ಸಂವಾದ ಹಾಗೂ ಮಹಿಳಾ ವಿಷಯಗಳಿಗೆ ತಾತ್ವಿಕ ನೆಲೆ ಕಂಡುಕೊಳ್ಳುವ ಆಶಯದ ಬೌದ್ಧಿಕ ಚರ್ಚೆಗಳು ನಡೆದಿವೆ. ತ್ರಿವೇಣಿ, ಅನುಪಮಾ ನಿರಂಜನ ಸೇರಿದಂತೆ ಹಲವು ಲೇಖಕಿಯರು ಮಹಿಳಾ ಪುಟಗಳಲ್ಲಿ ವಿಚಾರಗಳನ್ನು ಮಂಡಿಸಿದ್ದಾರೆ. 'ಸ್ವಾಸ್ಥ್ಯ ಸಮಸ್ಯೆ - ಸಲಹೆ' ವಿಭಾಗದಲ್ಲಿ (1959) ತಮ್ಮ ಸ್ವಂತ ಹಾಗೂ ಕುಟುಂಬ ಸದಸ್ಯರಿಗೆ ಸಂಬಂಧಿಸಿದಂತೆ ಹೆಣ್ಣುಮಕ್ಕಳು ಕೇಳಿದ ಆರೋಗ್ಯ ಸಂಬಂಧಿ ಪ್ರಶ್ನೆಗಳಿಗೆ ಡಾ. ಅನುಪಮಾ ನಿರಂಜನ ಉತ್ತರಿಸಿದ್ದಾರೆ.

ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಬಿ.ಎಸ್. ವೆಂಕಟಲಕ್ಷ್ಮಿ, ನೇಮಿಚಂದ್ರ ಮುಂತಾದ ಲೇಖಕಿಯರ ಲೇಖನಗಳು ಮಹಿಳಾ ಬದುಕಿನ ವಿಭಿನ್ನವಾದ ಆಯಾಮಗಳನ್ನು ಪರಿಚಯಿಸಿವೆ. ಹೆಣ್ಣುಮಕ್ಕಳಿಗೆ ಆಸ್ತಿ ಹಕ್ಕು ವಿಚಾರವಂತೂ ಓದುಗರ ಅನಿಸಿಕೆಗಳಿಂದ ಹಿಡಿದು ವಿವಿಧ ವಿಷಯ ತಜ್ಞರ ವಿಶ್ಲೇಷಣೆಗಳೊಂದಿಗೆ ಎಲ್ಲಾ ಆಯಾಮಗಳಲ್ಲಿ ಕಳೆದ ಹಲವಾರು ವರ್ಷಗಳಲ್ಲಿ ಚರ್ಚಿತವಾಗಿದೆ. ಏಕರೂಪ ನಾಗರಿಕ ಸಂಹಿತೆ ಕುರಿತಾದ ಚರ್ಚೆಗಳು ಸೃಷ್ಟಿಯಾದಾಗಲೆಲ್ಲಾ 'ಪ್ರಜಾವಾಣಿ'ಯ ವಿವಿಧ ವಿಭಾಗಗಳ ಪುಟಗಳಲ್ಲಿ ಲೇಖನಗಳು ಪ್ರಕಟವಾಗುತ್ತಲೇ ಇವೆ. ಲಿಂಗಾನುಪಾತ ಕುಸಿತಕ್ಕೆ ಕಾರಣವಾಗುತ್ತಿರುವ ಹೆಣ್ಣು ಭ್ರೂಣ ಹತ್ಯೆಯ ಕರಾಳತೆಯನ್ನು ಜನರ ಪ್ರಜ್ಞಾ ವಲಯಕ್ಕೆ ತರಲು 'ಪ್ರಜಾವಾಣಿ' ಬರಹಗಳು ಶ್ರಮಿಸುತ್ತಲೇ ಇವೆ.

ಮಹಿಳೆ - ಏಕ ಜಾತಿ, ವರ್ಗವನ್ನು ಪ್ರತಿನಿಧಿಸುವುದಿಲ್ಲ. ಮಹಿಳೆಯರಲ್ಲಿ ಪ್ರಾದೇಶಿಕ ಭಿನ್ನತೆಗಳಿವೆ, ವಿವಿಧ ಸಾಮಾಜಿಕ, ಆರ್ಥಿಕ ವರ್ಗಗಳಿವೆ. ವಯೋ ಗುಂಪುಗಳಿವೆ. ಈ ಮಹಿಳೆಯರ ನಡುವಣ ವ್ಯತ್ಯಾಸಗಳಿಗೆ, ಕಾಳಜಿಗಳಿಗೆ ದನಿ ನೀಡುವ ಕೆಲಸವನ್ನು 'ಪ್ರಜಾವಾಣಿ' ಮಾಡಿದೆ.


ಜೈಲಿನಲ್ಲಿರುವ ಮಹಿಳಾ ಕೈದಿಗಳ ಕಷ್ಟಗಳಿಗೆ 'ಪ್ರಜಾವಾಣಿ' ಮಿಡಿದಿದೆ. ಅವರ ಸಮಸ್ಯೆಗಳನ್ನು ಮುನ್ನೆಲೆಗೆ ತಂದಿದೆ. ಮನೆಗೆಲಸದವರು, ಪೌರ ಕಾರ್ಮಿಕರು, ಗಾರ್ಮೆಂಟ್ ಮಹಿಳೆಯರು, ಬೀಡಿ ಕಾರ್ಮಿಕರು - ಹೀಗೆ, ಅಸಂಘಟಿತ ಕ್ಷೇತ್ರದ ದುಡಿಯುವ ಮಹಿಳೆಯರ ಸಂಕಷ್ಟಗಳು ಅಕ್ಷರಗಳಾಗಿ ಇಲ್ಲಿ ಮೂಡಿವೆ. ಸ್ಥಳೀಯ ಸಂಸ್ಥೆಗಳ ಮಹಿಳಾ ನೇತಾರರ ಸಾಧನೆಗಳ ಜೊತೆಗೆ ಸಂಕಷ್ಟಗಳ ದನಿಗಳೂ ಇವೆ. ಲಿಂಗತ್ವ ಅಲ್ಪಸಂಖ್ಯಾತರ ಒಳಗೊಳ್ಳುವಿಕೆಯೂ ಇಲ್ಲಿದೆ.

ಉದ್ಯಮಿ ಮಹಿಳೆಯರು, ಮಹಿಳಾ ರಾಜತಾಂತ್ರಿಕರು, ರಾಜಕೀಯ ನೇತಾರರು, ಸೇನೆಯಲ್ಲಿನ ಮಹಿಳೆ, ಐಟಿ ರಂಗದ ಹೊಸ ಮಹಿಳೆ, ಅಷ್ಟೇ ಅಲ್ಲ.... ಪುರುಷರ ಕೋಟೆಯಾಗಿದ್ದ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ಮಹಿಳೆಯರು ಮೂಡಿಸುತ್ತಿರುವ ಛಾಪು - ಸ್ಫೂರ್ತಿ ಕಥನಗಳಾಗಿ ಹರಿದಿವೆ. ಮೌಲ್ಯಗಳ ಸಂಘರ್ಷಗಳಲ್ಲಿ ತನ್ನ ಅಸ್ಮಿತೆಯನ್ನು ಪ್ರತಿಪಾದಿಸಲು ಹೆಣ್ಣು ನಡೆಸಬೇಕಿರುವ ಹೋರಾಟದ ಕಥನಗಳು, ಸಮಾಜದಲ್ಲಾಗುತ್ತಿರುವ ಪಲ್ಲಟಗಳು ಕಥೆಗಳಾಗಿ, ಕವನಗಳಾಗಿ, ಪ್ರಬಂಧಗಳಾಗಿ, ವಿಮರ್ಶೆಗಳಾಗಿ, ಲೇಖನಗಳಾಗಿ ಅಭಿವ್ಯಕ್ತಿ ಪಡೆಯುತ್ತಾ ಸ್ತ್ರೀ ಸಂವೇದನೆಯನ್ನು ಸಾಂದ್ರವಾಗಿಸುತ್ತಿದೆ.

ಸಾರಾಯಿ ವಿರೋಧಿ ಚಳವಳಿ, ಕಾರ್ಮಿಕ ಹಕ್ಕು, ಅತ್ಯಾಚಾರ ವಿರೋಧಿ ಹೋರಾಟಗಳಲ್ಲದೆ ದಿನನಿತ್ಯದ 'ಸೆಕ್ಸಿಸಂ' (ಲಿಂಗ ತಾರತಮ್ಯ), ಸ್ತ್ರೀದ್ವೇಷದ ಉದಾಹರಣೆಗಳನ್ನೂ ಮುನ್ನೆಲೆಗೆ ತಂದು ಸ್ತ್ರೀಪರ ಸಂವೇದನೆಯನ್ನು ಸೂಕ್ಷ್ಮಗೊಳಿಸುವ ಯತ್ನಗಳನ್ನು 'ಪ್ರಜಾವಾಣಿ'ಯ ಬರಹಗಳು ಮಾಡಿವೆ.

ಮೊದಲ ಪುಟದ ವಿಷಯವಾಗಿ ಸಾಮಾನ್ಯವಾಗಿ ಕಾಣಿಸುವಂತಹ ಸುದ್ದಿ , ಸಂಪಾದಕೀಯ ವಿಷಯಗಳಾಗಿ ಮಾಮೂಲಾಗಿ ಪರಿಗಣಿಸುವಂತಹ ವಿಷಯಗಳಾಚೆಗೆ ಲಿಂಗತ್ವ ನೆಲೆಯಲ್ಲಿ ಸುದ್ದಿ ಮೌಲ್ಯವನ್ನು ಪರಿಭಾವಿಸುವ ಕ್ರಮವನ್ನು ವಿಸ್ತರಿಸುವಂತಹ ಪ್ರಯತ್ನಗಳನ್ನೂ 'ಪ್ರಜಾವಾಣಿ' ಮಾಡಿರುವುದು ಜೆಂಡರ್ ಪ್ರತಿಪಾದನೆಯ ಸಮಾಜಶಾಸ್ತ್ರೀಯ ವಿದ್ಯಮಾನವಾಗಿದೆ.

ಲಿಂಗ ತಾರತಮ್ಯದ ಸಮಾಜದ ಯಥಾಸ್ಥಿತಿ ಬಿಂಬಿಸುವ ಬಿಂಬಗಳು, ಫೋಟೊಗಳು, ಕಾರ್ಟೂನ್‌ಗಳು, ಯಥಾಸ್ಥಿತಿ ಮೌಲ್ಯಗಳನ್ನು ಪ್ರತಿಪಾದಿಸುವ ದೃಷ್ಟಿಕೋನಗಳ ಬರಹಗಳು, ಹಾಸ್ಯ ಲೇಖನಗಳು, ಲಘು ಶೈಲಿಯ ಮೂರನೇ ಸಂಪಾದಕೀಯಗಳ ರಂಜನೆಗಳ ಮುಖ್ಯವಾಹಿನಿಯಲ್ಲಿ ಮಹಿಳಾ ವಿಚಾರಗಳು ಕ್ಷುಲ್ಲಕೀಕರಣಗೊಳ್ಳುವುದರ ಜೊತೆ ಜೊತೆಗೇ ಗಂಭೀರ ನೆಲೆಗಳಲ್ಲಿ ಪ್ರಾಧಾನ್ಯ ಪಡೆದುಕೊಳ್ಳುವುದೂ ಇಲ್ಲಿ ಮುಖ್ಯ. ಎಲ್ಲಾ ಜನವರ್ಗಗಳ ಅಭಿರುಚಿಗೆ ಸ್ಪಂದಿಸಬೇಕಾದ ಮುಖ್ಯವಾಹಿನಿಯ ಜನಪ್ರಿಯ ಪತ್ರಿಕೆಗಳ ಈ ಅನಿವಾರ್ಯಗಳಾಚೆಗೂ 'ಪ್ರಜಾವಾಣಿ' ಪುಟಗಳಲ್ಲಿನ 'ಮಹಿಳಾ ಕಾಳಜಿ' ಬಿಂಬಿಸಿರುವ ಸೂಕ್ಷ್ಮತೆ ಹಾಗೂ ಘನತೆಯು ಜನರ ಪ್ರಜ್ಞಾವಲಯವನ್ನು ವಿಸ್ತರಿಸಿದೆ. ಸಮಸ್ಯೆಗಳ ಸಂಕೀರ್ಣತೆಗಳನ್ನು ಅರಿಯುವ ಯತ್ನ ನಿರಂತರವಾಗಿದೆ. ಈಗಲೂ ಗಂಡಾಳಿಕೆಯ ಸಾಂಸ್ಕೃತಿಕತೆಯೇ ನಮ್ಮನ್ನಾಳುತ್ತಿದೆ. ತರತಮವಿಲ್ಲದ ಹೊಸ ಜಗತ್ತು ಸೃಷ್ಟಿಸುವ ಪ್ರಕ್ರಿಯೆಗೆ ಈ 'ಅಕ್ಷರಯಜ್ಞ' ನಿರಂತರವಾಗಿರಬೇಕಿದೆ.


'ಮಹಿಳೆ' ವಿಶೇಷ ಪುಟ – ಚಿತ್ರಗಳು: ಪ್ರಜಾವಾಣಿ ಆರ್ಕೈವ್

### ಸಾಲುಮರದ ತಿಮ್ಮಕ್ಕ

ಸುದ್ದಿಯೆಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಹೊಸ ಆಯಾಮಗಳು, ಹೊಸ ವ್ಯಾಖ್ಯೆಗಳನ್ನು 'ಪ್ರಜಾವಾಣಿ' ರೂಢಿಸಿದೆ. ಈವರೆಗೆ ಅಗೋಚರರಾಗಿದ್ದವರನ್ನು ಗೋಚರತೆಯ ನೆಲೆಗೆ ಒಯ್ದ ಹೆಗ್ಗಳಿಕೆ 'ಪ್ರಜಾವಾಣಿ'ಗಿದೆ. ಇದಕ್ಕೆ ಉತ್ತಮ ಉದಾಹರಣೆ, 'ಸಾಲುಮರಗಳ ಸಂಗಾತಿ ತಿಮ್ಮಕ್ಕ' ರನ್ನು ಕುರಿತ ಚಿತ್ರಬರಹ (ಸಾಪ್ತಾಹಿಕ ಪುರವಣಿ -1994ರ ಜೂನ್ 19). 'ಪ್ರಜಾವಾಣಿ'ಯ ಅರೆಕಾಲಿಕ ವರದಿಗಾರರಾಗಿದ್ದ ಎಂ.ವಿ. ನೆಗಳೂರು ಅವರು ಬರೆದ ಈ ಚಿತ್ರ-ಬರಹ, ತಿಮ್ಮಕ್ಕನ ಖ್ಯಾತಿಯನ್ನು ರಾಷ್ಟ್ರ-ಅಂತರರಾಷ್ಟ್ರ ಮಟ್ಟಗಳಿಗೆ ಎತ್ತರಿಸಿತು.

### 'ಸತಿ'

1987ರ ಸೆಪ್ಟೆಂಬರ್ 4ರಂದು ರಾಜಸ್ಥಾನದ ದೇವರಾಲಾ ಗ್ರಾಮದಲ್ಲಿ ಮರುಕಳಿಸಿದ ಸತಿ ಪದ್ಧತಿಗೆ ಸಂಬಂಧಿಸಿದಂತೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ಬರಹಗಳು ಅಸಂಖ್ಯ. ಕರ್ನಾಟಕದಲ್ಲಿ 'ಸತಿ' ಇತಿಹಾಸ ಶೋಧಿಸುವ ಸೂರ್ಯನಾಥ ಕಾಮತರ ಲೇಖನವು (1988ರ ಜೂನ್ 19, ಸಾಪ್ತಾಹಿಕ ಪುರವಣಿ) ಹತ್ತನೆಯ ಶತಮಾನಕ್ಕೆ ಮೊದಲು ಕರ್ನಾಟಕದಲ್ಲಿ ಸಹಗಮನ ರೂಢಿಯಲ್ಲಿರಲಿಲ್ಲ ಎಂಬುದನ್ನು ಚಾರಿತ್ರಿಕ ದಾಖಲೆಗಳ ಮೂಲಕ ನಿರೂಪಿಸಿತ್ತು. ಹತ್ತನೆಯ ಶತಮಾನದ ನಂತರ ಕರ್ನಾಟಕದಲ್ಲಿ ಕಾಣಿಸಿಕೊಂಡ ಈ ಪದ್ಧತಿ, ಬ್ರಿಟಿಷರ ಆಗಮನದ ವೇಳೆಗೆ ಕಣ್ಮರೆಯಾಗುತ್ತಾ ಬಂದಿತ್ತು. 19ನೇ ಶತಮಾನದ ವೇಳೆಗಂತೂ ಹಳೆಯ ಮೈಸೂರು ಸಂಸ್ಥಾನದಲ್ಲಿ ಸತಿ ಹೋಗಲು ಸರ್ಕಾರದ ಅನುಮತಿ ಪಡೆದುಕೊಳ್ಳಬೇಕಿತ್ತು.


ಕೇಂದ್ರ ಸಚಿವ ಆರೀಫ್ ಮಹಮದ್ ಖಾನ್ ನೀಡಿದ ರಾಜೀನಾಮೆ ಕುರಿತ ಸಂಪಾದಕೀಯ ಇರುವ ಪುಟ

### ಅವಳು - ಅವನು

ಮಹಿಳೆಯರ ಲೋಕ ವಿಸ್ತಾರವಾಗಿದೆ. ಹೀಗಾಗಿ ಗಂಡು-ಹೆಣ್ಣಿನ ಸಂಬಂಧಗಳಲ್ಲಿ, ಕುಟುಂಬ ವ್ಯವಸ್ಥೆಯಲ್ಲಿ ಹಲ ಬಗೆಯ ಸ್ಥಿತ್ಯಂತರಗಳು ಸಹಜವಾಗಿಯೇ ಉಂಟಾಗಿವೆ. ಮಹಿಳೆಯ ಈ ಹೊಸ ಆತ್ಮ ವಿಶ್ವಾಸ, ಅಸ್ಮಿತೆಯ ಪ್ರತಿಪಾದನೆಗೆ ಪುರುಷಲೋಕ ಸ್ಪಂದಿಸುವ ಬಗೆ ಎಂತಹದ್ದು ಎಂಬ ಬಗ್ಗೆ ವಿವಿಧ ಕ್ಷೇತ್ರಗಳ, ವ್ಯಕ್ತಿಗಳ ಸಂದರ್ಶನಗಳನ್ನೊಳಗೊಂಡ ಮಾಲಿಕೆಯನ್ನು 'ಭೂಮಿಕಾ' ಪುರವಣಿಯಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶತಮಾನೋತ್ಸವದ ವರ್ಷದಲ್ಲಿ ಪ್ರಕಟಿಸಲಾಗಿದೆ. ಮೊದಲ ಕಂತಿನಲ್ಲಿ (2011ರ ಜನವರಿ 1) ಯು. ಆರ್. ಅನಂತಮೂರ್ತಿ ಹೇಳಿದ್ದ ಮಾತುಗಳಿವು:

'ಗಂಡು ಬೇರೆ ಹೆಣ್ಣು ಬೇರೆ. ಆದರೆ ಇಬ್ಬರೂ ಸಮಾನ ಅಂತ ಗಾಂಧಿ ಹೇಳಿದ್ರು. ಸಮಾನ ಅಂತ ಹೇಳೋವ್ರು ವಿಭಿನ್ನತೆ ಮರೀತಾರೆ. ವಿಭಿನ್ನತೆ ಅನ್ನೋವ್ರು ಸಮಾನತೆ ಮರೀತಾರೆ.'

'ಆಧುನಿಕ ಜಗತ್ತಿನ ಅತ್ಯಂತ ಸುಂದರ ಅಭಿವ್ಯಕ್ತಿಯಾಗಿ ಮಹಿಳೆ ಅರಳುತ್ತಿರುವಾಗ ಪುರುಷ ಸಮಾಜ ಮಾನವಪೂರ್ವ ಪಶುನಾಗರಿಕತೆಗೆ ಮರಳುತ್ತಿದೆ. ಒಂದು ಕಡೆ ಬಂಡವಾಳಶಾಹಿಯು, ಮಹಿಳೆಯನ್ನು ಅನುತ್ಪಾದಕ ಜೀವಿಯನ್ನಾಗಿಸುತ್ತಿದ್ದರೆ ಬಲಪಂಥೀಯ ಸಂಘಟನೆಗಳು ಮಹಿಳೆಯರನ್ನು ಇಲ್ಲವಾಗಿಸಿ ಕಂತೆಗಟ್ಟಲೆ 'ಮಾತೆ'ಯರನ್ನು ಉತ್ಪಾದಿಸುತ್ತಿದೆ' ಎಂದಿದ್ದವರು ರಾಜೇಂದ್ರ ಚೆನ್ನಿ (2011ರ ಜನವರಿ 8)

ಮಹಿಳೆಯನ್ನು ಘನತೆಯಿಂದ ನಡೆಸಿಕೊಳ್ಳುವ ಸಮಾಜ ಸೃಷ್ಟಿಯಾಗಿಲ್ಲ ಎಂಬುದು ರಹಮತ್ ತರೀಕೆರೆ ಅನಿಸಿಕೆ (2011ರ ಜನವರಿ 22)


'ಕೇಳೇ ಗೆಳತಿ' ವಿಶೇಷ ಪುಟ

---

## ನಾವು ನೋಡಿದ ಸಿನಿಮಾ

**ಮಾರಕಾಸ್ತ್ರ**

- **ನಿರ್ಮಾಣ:** ಕೋಮಲ ನಟರಾಜ್
- **ನಿರ್ದೇಶನ:** ಗುರುಮೂರ್ತಿ ಸುನಾಮಿ
- **ತಾರಾಗಣ:** ಮಾಲಾಶ್ರೀ, ಹರ್ಷಿಕಾ ಪೂಣಚ್ಚ,ಆನಂದ್ ಆರ್ಯ ಮತ್ತಿರರು

### ಚೇತರಿಕೆಗೂ ಅವಕಾಶ ಕೊಡದ 'ಮಾರಕಾಸ್ತ್ರ'



**ಈ ಸಿನಿಮಾ** ನಿರ್ಮಾಪಕರ ಪತಿಗೆ ದೊಡ್ಡ ವೇದಿಕೆ ಕಲ್ಪಿಸಲು ಸಿದ್ಧವಾಗಿದೆ ಎನ್ನುವುದು ಮೊದಲ ಫ್ರೇಂನಲ್ಲಿಯೇ ಸ್ಪಷ್ಟವಾಗಿಬಿಡುತ್ತದೆ. ಕಾಲೇಜೊಂದರ ಸಭೆಯಲ್ಲಿನ ಭಾಷಣದಿಂದ ಸಿನಿಮಾ ಪ್ರಾರಂಭವಾಗುತ್ತದೆ. ಅಲ್ಲಿ ಭಾಷಣ ಮಾಡುತ್ತಿರುವ ಶಂಕರಪ್ಪ ಪಾತ್ರಧಾರಿಯೇ ಈ ಚಿತ್ರಕ್ಕೆ ಬಂಡವಾಳ ಹಾಕಿದ್ದಾರೆ. ಆ ದೃಶ್ಯದಲ್ಲಿನ ಭಾಷಣ ಮುಗಿಯುತ್ತಿದ್ದಂತೆ 'ವಿದೇಶಕ್ಕಿಂತ ನಮ್ಮ ದೇಶವೇ ಸೊಗಸು' ಎಂಬ ಹಾಡು. ಬಾಲಿಶವಾದ ಸಾಹಿತ್ಯ, ಸಂಗೀತ. ಅದಕ್ಕಿಂತ ಕಿರಿಕಿರಿಯಾಗುವುದು ಹಾಡಿಗೆ ಶಂಕರಪ್ಪ ಪಾತ್ರಧಾರಿ ಮಾಡುವ ನೃತ್ಯ. ಬಹುಶಃ ಇದೇ ಕಾರಣಕ್ಕೆ ನಿರ್ದೇಶಕರು ಸಿನಿಮಾದಲ್ಲಿ ಪ್ರತ್ಯೇಕವಾಗಿ ಹಾಸ್ಯದ ದೃಶ್ಯಗಳನ್ನಿಡುವ ಸಾಹಸ ಮಾಡಿಲ್ಲ!

ಬಳ್ಳಾರಿಯಲ್ಲಿ ನಡೆಯುವ ಸರಣಿ ಕೊಲೆ, ಅದರ ಹಿಂದಿನ ಕಾರಣ ಇಡೀ ಚಿತ್ರದ ಕಥೆಯ ಹೂರಣ. ಹಾಗಂತ ಕಥೆಗೂ, ಚಿತ್ರಕಥೆಗೂ ಸಂಬಂಧವಿಲ್ಲ. ಬಂಡವಾಳ ಹಾಕಿರುವ ಶಂಕರಪ್ಪ ಅವರನ್ನು ಓರ್ವ ಮಹಾನ್ ವ್ಯಕ್ತಿ ಎಂದು ಬಿಂಬಿಸಲು ನಿರ್ದೇಶಕರು ಅರ್ಧ ಸಿನಿಮಾವನ್ನೇ ಬಳಸಿಕೊಂಡಿದ್ದಾರೆ. ಹೀಗಾಗಿ ಒಂದು ರೀತಿಯ 'ಪ್ರೊಪಗ್ಯಾಂಡಾ' ಚಿತ್ರಕಥೆಯ ಸಿನಿಮಾವಿದು.

ಪತ್ರಕರ್ತೆಯಾಗಿ ಹರ್ಷಿಕಾ ಪೂಣಚ್ಚ ಕಾಣಿಸಿಕೊಂಡಿದ್ದಾರೆ. ಗಟ್ಟಿಯಾದ ನೆಲೆಯೇ ಇಲ್ಲದ ಪಾತ್ರವದು. ಚಿತ್ರದಲ್ಲೊಂದು ಪ್ರೀತಿಯ ಟ್ರ್ಯಾಕ್ ಬೇಕು, ನಾಯಕ-ನಾಯಕಿಯ ಕಥೆ ಇರಬೇಕು ಎಂಬ ಕಾರಣಕ್ಕೆ ಈ ಪಾತ್ರವನ್ನು ಸೃಷ್ಟಿಸಿದಂತಿದೆ. ನಾಯಕ ಆನಂದ್ ಆರ್ಯ ಅವರ ಧ್ವನಿ ಸ್ವಲ್ಪ ಪುನೀತ್ ರಾಜಕುಮಾರ್ ಧ್ವನಿಯನ್ನು ಹೋಲುತ್ತದೆ. ಹೀಗಾಗಿ ಇವರು ತಮ್ಮನ್ನು ತಾವು ಜೂನಿಯರ್ ಪುನೀತ್ ರಾಜ್‌ಕುಮಾರ್ ಎಂದು ಭ್ರಮಿಸಿಕೊಂಡು ಅವರನ್ನು ಅನುಕರಿಸಿದ್ದಾರೆ. ಅನವಶ್ಯ ಬಿಲ್ಡಪ್‌ಗಳನ್ನು ಅವರಿಗೆ ನೀಡಿರುವುದು ಕಿರಿಕಿರಿಯ ಬೆಂಕಿಗೆ ಸುರಿದ ತುಪ್ಪ. ಸರಣಿ ಕೊಲೆ ಪತ್ತೆಗಾಗಿ ಪೊಲೀಸ್ ಅಧಿಕಾರಿಯಾಗಿ ಮಾಲಾಶ್ರೀ ಮಧ್ಯಂತರಕ್ಕೂ ಸ್ವಲ್ಪ ಮೊದಲು ಬರುತ್ತಾರೆ.

ಮಾಲಾಶ್ರೀ ಪ್ರವೇಶವಾಗುವುದು ಫೈಟ್‌ನಿಂದಲೇ. ಮೊದಲ ಫೈಟೇ ಪೇಲವವಾಗಿದೆ. ಅದರಿಂದ ಸುಧಾರಿಸಿಕೊಳ್ಳುವಷ್ಟರಲ್ಲಿ ಮತ್ತೊಂದು ಫೈಟ್. ಎಂಎಲ್‌ಎ ರಕ್ಷಿಸಲು ನಡೆಯುವ ಈ ಫೈಟ್ ಸ್ವಲ್ಪ ವರ್ಣಮಯವಾಗಿ, ನೋಡುವಂತಿದೆ. ಮಾಲಾಶ್ರೀ ತಮ್ಮ ರಗಡ್ ನಟನೆಯೊಂದಿಗೆ ಕೊಟ್ಟ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಮೈಕೊ ನಾಗರಾಜ್ ಎಂಎಲ್‌ಎ ಆಗಿ ಇಷ್ಟವಾಗುತ್ತಾರೆ. ಒಟ್ಟಾರೆ ಕಥೆಯ ಸ್ವರೂಪ ಮಾಸ್ ಸಿನಿಮಾಗೆ ಬೇಕಾದಂತೆ ಇತ್ತು. ಆದರೆ ಅದನ್ನು ಚಿತ್ರಕಥೆಯಾಗಿಸುವಲ್ಲಿ, ದೃಶ್ಯಕ್ಕೆ ಸಮರ್ಥವಾಗಿ ಇಳಿಸುವಲ್ಲಿ ನಿರ್ದೇಶಕರು ಇನ್ನಷ್ಟು ಎಚ್ಚರವಹಿಸಬೇಕಿತ್ತು. ಚಿತ್ರದಲ್ಲಿ ಸಾಕಷ್ಟು ಸಮರ್ಥ ನಟರಿದ್ದಾರೆ. ಅವರಲ್ಲಿ ಅನೇಕರಿಗೆ ತಕ್ಕ ಪಾತ್ರಗಳನ್ನು ಕಟ್ಟಿಕೊಟ್ಟಿಲ್ಲ. ಸಂಗೀತ, ಹಿನ್ನೆಲೆ ಸಂಗೀತ, ತೀರ ಬಾಲಿಶವಾದ ಸಾಹಿತ್ಯ ಸಿನಿಮಾದ ಹದಗೆಡಿಸಿದೆ. ಇಷ್ಟೆಲ್ಲದರ ನಡುವೆ ಛಾಯಾಗ್ರಾಹಕ ಅರುಣ್ ಸುರೇಶ್ ಹಲವು ಕಡೆ ದೃಶ್ಯಗಳನ್ನು ಸುಂದರವಾಗಿಸಿದ್ದಾರೆ.

**ವಿನಾಯಕ ಕೆ.ಎಸ್.**


ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

---

## ಪದಬಂಧ 5470 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
2.ನೇರವಲ್ಲದ ಕೊಂಕು ಮಾತು (3)
4.ದನದೊಳಗಿನ ಕಾಣ್ಕೆ (3)
5.ಸೂಕ್ಷ್ಮವಾಗಿ ಪರಿಶೀಲಿಸುವವನು (4)
6.ಪಾಪಭೀರುವು ನಡೆಸಿದ ಮೇಲ್ವಿಚಾರಣೆ (4)
7.ಕವಿತೆಯನ್ನು ಬರೆಯುವವನು (2)
9.ತರಬೇತಿ ನೀಡುವಾಗ ಸೇರಿದ ಗುಂಪು (2)
13.ದಾರ ಹಿಡಿರುವ ಸೈನ್ಯದ ಮುಖ್ಯಸ್ಥ (4)
14.ನಡುವೆ ರಾಜನಿದ್ದರೂ ರಾಜನಿಲ್ಲದ ಸ್ಥಿತಿ (4)
15.ದಾವಣಿಧರಿಸಿ ಹಾಡಿದ್ದು ಜನಪದ ಹಾಡು (3)
16.ಊರೊಳಗೆ ಬಂದಿರುವ ಹಾವು (3)

**ಮೇಲಿಂದ ಕೆಳಕ್ಕೆ**
1.ಅದೇ ತಾನೆ ಅಭಿವೃದ್ಧಿಹೊಂದುತ್ತಿರುವುದು (5)
2.ಈತ ಕಾಡಿನ ರಕ್ಷಕ (5)
3.ಪ್ರದಕ್ಷಿಣೆ ಮಾಡುತ್ತಾ ನೀರನ್ನು ಸಿಂಪಡಿಸುವಿಕೆ (3)
5.ಯಾವಾಗಲೂ ನಿಜವನ್ನು ನುಡಿಯುವವನು (4)
8.ನಾಶಮಾಡುವವನು ಇಲ್ಲಿದ್ದಾನೆ (4)
10.ತಿರುಗಿ ಹಾಕುವ ಲಾಗ (5)
11.ಊರಲ್ಲಿ ರಭಸದಿಂದ ಮುಂದೆ ನುಗ್ಗು! (5)
12.ಗುಣಿ ತೋಡುವಾಗ ಹಿಡಿದ ಥಾಲು (3)



### 5469ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ಹಾರವ 4.ರಥೋತ್ಸವ
6.ಜಾಗತಿಕ 8.ನವೀನ
11.ಕಸೂತಿ 13.ಮರಕತ
17.ಮದಗಜ
18.ಲಿಲಾವು

**ಮೇಲಿಂದ ಕೆಳಕ್ಕೆ:**
1.ಹಾರೈಕೆ
2.ವರಮಾನ 3.ಸಮ್ಮತಿ
5.ವಜಾ
7.ಕಣ್ಮಣಿ 9.ನಡುಕ
10.ಉಗಮ
12.ತಿಲಾಂಜಲಿ 14.ರಕ್ಷಕ
15.ತಮ
16.ಹಗೇವು

## ಸುಡೊಕು 5856


| | | | | | | | | |
|---|---|---|---|---|---|---|---|---|
| 2 | | | | | 5 | 4 | | 9 |
| 4 | | 7 | 6 | | | | 5 | |
| | 6 | | | | 8 | 1 | | |
| | 2 | | | | 7 | | | 6 |
| 5 | | 1 | | 6 | | | 2 | |
| | | | 5 | | | | 1 | 7 |
| | 3 | 9 | | | | 6 | | |
| 6 | | | 8 | | 4 | | 3 | |
| | | 4 | | 3 | | 2 | | 5 |

### 5855 ಸುಡೊಕು

| | | | | | | | | |
|---|---|---|---|---|---|---|---|---|
| 3 | 4 | 9 | 1 | 5 | 8 | 2 | 7 | 6 |
| 2 | 5 | 6 | 4 | 9 | 7 | 8 | 1 | 3 |
| 1 | 7 | 8 | 3 | 6 | 2 | 4 | 5 | 9 |
| 5 | 3 | 7 | 2 | 4 | 6 | 9 | 8 | 1 |
| 8 | 9 | 1 | 7 | 3 | 5 | 6 | 2 | 4 |
| 4 | 6 | 2 | 8 | 1 | 9 | 7 | 3 | 5 |
| 6 | 8 | 4 | 5 | 2 | 3 | 1 | 9 | 7 |
| 7 | 1 | 3 | 9 | 8 | 4 | 5 | 6 | 2 |
| 9 | 2 | 5 | 6 | 7 | 1 | 3 | 4 | 8 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಅಕ್ಟೋಬರ್ 14, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಭಾದ್ರಪದ ಕೃಷ್ಣ ಅಮಾವಾಸ್ಯೆ ಗಂ. 23-25 ನಕ್ಷತ್ರ: ಹಸ್ತ ಗಂ. 16-24 ಯೋಗ: ಐಂದ್ರ ಗಂ 10-24 ಕರಣ: ಚತುಷ್ಪಾದ್ ಗಂ. 10-41, ಕನ್ಯಾ ಮಾಸದ 27ನೇ ದಿನ, ಮಳೆನಕ್ಷತ್ರ: ಚಿತ್ರ 1. ರಾಹುಕಾಲ: ಬೆಳಿಗ್ಗೆ 09-00 - 10-30, ಸೂರ್ಯೋದಯ : 06-24 ಸೂರ್ಯಾಸ್ತ : 06-10, ಮುಸ್ಲಿಂ ದಿನಾಂಕ : 28 ರಬಿಉಲ್ಲಾವಲ್, ದಿನ ವಿಶೇಷ : ಮಹಾಲಯ ಅಮಾವಾಸ್ಯೆ, ಸರ್ವ ಪಿತೃ ಅಮಾವಾಸ್ಯೆ, ಜಗದ್ಗುರು ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಆರಾಧನೆ. ಸಂಪೂರ್ಣ ಸೂರ್ಯಗ್ರಹಣ (ಭಾರತದಲ್ಲಿ ಗೋಚರಿಸುವುದಿಲ್ಲ), ಅದೃಷ್ಟ ಸಂಖ್ಯೆ : 2, 5

**ಮೇಷ:** ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ. ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸಿ. ಮಗಳ ಮೇಲೆ ಇದ್ದಂಥ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವಿರಿ.

**ವೃಷಭ:** ಮನೆಯಲ್ಲಿ ಅಶಾಂತ ವಾತಾವರಣ ಬರದಂತೆ ಕಾಪಾಡಿಕೊಳ್ಳುವುದು ಹಿಡಿತದಲ್ಲಿರುವ ವಿಚಾರವಾದ್ದರಿಂದ ಎಚ್ಚರವಾಗಿರಿ. ನಿಧಾನಗತಿಯ ಕಟ್ಟಡದ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು.

**ಮಿಥುನ:** ಮಗಳ ಮದುವೆಯ ವಿಚಾರದಲ್ಲಿ ಹೊಸ ಸಂಬಂಧಗಳು ಹುಡುಕಿಕೊಂಡು ಬಂದರೂ ಒಪ್ಪಿಗೆಯ ನಿರ್ಧಾರ ತಿಳಿಸದಿರಿ. ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿನದಾದರೂ ಪ್ರಯೋಜನಕಾರಿ ಎನಿಸಲಿದೆ.

**ಕರ್ಕಾಟಕ:** ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ದೃಷ್ಟಿಯಲ್ಲಿ ಬದಲಾವಣೆ ಆಗಲೇ ಬೇಕಿರುವ ನಿರ್ಧಾರವನ್ನು ಸ್ಪಷ್ಟ ಮಾತುಗಳಲ್ಲಿ ಅಥವಾ ಬರಹದಲ್ಲಿ ಇತರರಿಗೆ ತಿಳಿಯಪಡಿಸಿ.

**ಸಿಂಹ:** ಸ್ವತ್ತು ಖರೀದಿ ಮಾಡುವ ವಿಚಾರದಲ್ಲಿ ಯಾವುದಾದರೂ ಗೃಹ ಸಮಾರಂಭದಲ್ಲಿ ನಾಲ್ಕಾರು ಜನರ ಮಧ್ಯ ಮಾತುಗಳು ಬರಲಿದೆ. ತಂದೆಯವರ ಮಾತಿನಂತೆ ನಡೆಯುವುದರಿಂದ ಶ್ರೇಯಸ್ಸು ಲಭಿಸಲಿದೆ.

**ಕನ್ಯಾ:** ಸಮೀಪವರ್ತಿಗಳ ದುರ್ಬುದ್ಧಿಯಿಂದ ವ್ಯಾಪಾರದಲ್ಲಿ ವಂಚನಾಕಾರ್ಯ ನಡೆದಾವು. ಧಾರ್ಮಿಕ ಕಾರ್ಯಗಳಲ್ಲಿ ಹಣವನ್ನು ತೊಡಗಿಸುವಂತಹ ಮನಸ್ಸು ಉಂಟಾಗಲಿದೆ. ಉತ್ತಮ ಕೌಟುಂಬಿಕ ಸಮಯ ದೊರೆಯಲಿದೆ.

**ತುಲಾ:** ಯಾವುದೋ ಅನಿವಾರ್ಯ ಸಂದರ್ಭ ಉಂಟಾದ ಕಾರಣದಿಂದ ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಮಾತುಗಳನ್ನು ಕೇಳಿದ ಜನರಲ್ಲಿ ಅನುಯಾಯಿಗಳು ದೊರೆಯುವರು. ಸಂತೃಪ್ತಿಯ ಜೀವನ ಮುನ್ನಡೆಸಿ.

**ವೃಶ್ಚಿಕ:** ಯೋಜನೆಗಳು ಕಾರ್ಯಗತಗೊಳ್ಳಲು ಹೆಚ್ಚಿನ ಪ್ರಯತ್ನ ನಡೆಸಬೇಕಾಗುವುದು. ನಿತ್ಯದ ಸಿಬ್ಬಂದಿ ವರ್ಗದವರಿಂದ ಹೆಚ್ಚಿನ ಸಹಕಾರ ನಿರೀಕ್ಷಿಸಬೇಡಿ. ಅಭ್ಯುದಯದತ್ತಲೇ ಗಮನವಿರುವುದು ಉತ್ತಮ.

**ಧನು:** ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿ ಇರುವುದು. ಕೌಟುಂಬಿಕವಾಗಿ ಹೊಸ ಜವಾಬ್ದಾರಿಯೊಂದನ್ನು ನಿಭಾಯಿಸಬೇಕಾಗುವುದು.

**ಮಕರ:** ದೂರ ಪ್ರಯಾಣ ಮಾಡುವ ಅನಿವಾರ್ಯತೆ ಬಂದಲ್ಲಿ ರಾಹುಕಾಲದ ನಂತರ ಪ್ರಯಾಣ ಬೆಳೆಸಿ. ಸಮಸ್ಯೆಗಳ ಪರಿಹಾರಕ್ಕಾಗಿ ಹಿತ ಚಿಂತಕರೊಡನೆ ಮಾತುಕತೆ ನಡೆಸುವುದು ಒಳ್ಳೆಯದು. ಹೊಸ ವಾಹನ ಖರೀದಿಗೆ ಸಕಾಲ.

**ಕುಂಭ:** ತಂದೆ ತಾಯಿಯವರ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯಗಳನ್ನು ನಡೆಸುವಿರಿ. ಇಂದು ಯಾವುದೇ ಕೆಲಸವನ್ನು ಮಾಡಿದರೂ ಆಲೋಚಿಸಿ ಮಾಡುವುದು ಒಳ್ಳೆಯದು. ಶಿರೋವೇದನೆ ಎದುರಾಗಬಹುದು.

**ಮೀನ:** ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಎಲ್ಲಾ ರೀತಿ ಅನುಕೂಲ ಉಂಟಾಗುವುದು. ಇತರರಿಗೆ ಮಾದರಿಯಾಗುವಂತೆ ಜೀವನ ನಡೆಸಬೇಕೆಂಬ ಆಸೆಗೆ ಪುಷ್ಟಿ ಕೊಡುವ ವಾತಾವರಣ ಸಿಗಲಿದೆ.

ಸಾವಿರಾರು ಮಂದಿ ನಡುವೆ ಪುರಭವನ ಆವರಣದಲ್ಲಿ ಸಮಾರಂಭ • ಸಭಿಕರಿಗೆ ಸಂವಿಧಾನ ಪೀಠಿಕೆಯ ಬೋಧನೆ

# ಪೊಲೀಸ್ ಭದ್ರತೆಯಲ್ಲಿ ಮಹಿಷ ದಸರಾ

ಪ್ರಜಾವಾಣಿ ವಾರ್ತೆ

**ಮೈಸೂರು:** ಮಹಿಷ ದಸರಾ ಆಚರಣೆ ಸಮಿತಿಯು ಇಲ್ಲಿನ ಪುರಭವನದ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಮಹಿಷ ದಸರಾ ಹಾಗೂ ದಮ್ಮ ದೀಕ್ಷಾ ಕಾರ್ಯಕ್ರಮ' ಪೊಲೀಸ್ ಭದ್ರತೆಯಲ್ಲಿ, ಹಿಂದೆಂದಿಗಿಂತಲೂ ದೊಡ್ಡಮಟ್ಟದಲ್ಲಿ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳ ಸಾವಿರಾರು ಮಂದಿ ಭಾಗವಹಿಸಿದ್ದರು. ಮಹಿಷಾಸುರನಿಗೆ ಜೈಕಾರ ಮೊಳಗಿದವು.

ಮಹಿಷ ದಸರಾ ಆಚರಣೆಗೆ ಬಿಜೆಪಿ ವಿರೋಧ ವ್ಯಕ್ತಪಡಿಸಿದ್ದರಿಂದ ನಗರದಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಪುರಭವನದ ಆವರಣದಲ್ಲಿ ಮಾತ್ರ ಕಾರ್ಯಕ್ರಮಕ್ಕೆ ಪೊಲೀಸರು ಅವಕಾಶ ನೀಡಿದ್ದರು. ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲು ಅವಕಾಶ ಕೊಡಲಿಲ್ಲ. ಬೆಟ್ಟದ ಪ್ರವೇಶಕ್ಕೆ ಸಾರ್ವಜನಿಕರಿಗೂ ನಿರ್ಬಂಧ ವಿಧಿಸಲಾಗಿತ್ತು.

ನಿಷೇಧಾಜ್ಞೆ ನಡುವೆಯೂ ವಿವಿಧೆಡೆಯಿಂದ ನೀಲಿ ಪಟ್ಟಿಗಳನ್ನು ತೊಟ್ಟು ತಂಡೋಪತಂಡವಾಗಿ ಬೈಕ್ ಜಾಥಾದಲ್ಲಿ ಜನ ಬಂದು ಸೇರಿದ್ದರು. ಸ್ತಬ್ಧಚಿತ್ರವನ್ನೂ ತಂದಿದ್ದರು. ಜೈ ಭೀಮ್ ಘೋಷಣೆಗಳೂ ಮೊಳಗಿದವು.

'ಮೈಸೂರಿನ ಅಸ್ಮಿತೆಗಾಗಿ ಮಹಿಷ ದಸರಾ' ಫಲಕ ಹಾಕಲಾಗಿತ್ತು. ಮಾತನಾಡಿದವರಲ್ಲಿ ಕೆಲವರು ಇದು 'ಮಹಿಷ ಉತ್ಸವ' ಎಂದರು. ದಮ್ಮ ದೀಕ್ಷಾ ಕಾರ್ಯಕ್ರಮವೂ ನಡೆಯಿತು. ಮಹಿಷಾಸುರನ ಕಟೌಟ್, ಬುದ್ಧ, ಬಸವ ಹಾಗೂ ಮಹಿಷನ ಚಿಕ್ಕ ಪ್ರತಿಮೆಗಳಿಗೆ ಪುಷ್ಪಾರ್ಚನೆಯಾಯಿತು. ನೆರೆದಿದ್ದವರಿಗೆ ಭಾರತದ ಸಂವಿಧಾನದ ಪೀಠಿಕೆಯನ್ನು ಬೋಧಿಸಲಾಯಿತು.

**ದಾಖಲೆ:** ಹಿಂದೆ, ಚಾಮುಂಡಿ ಬೆಟ್ಟದ ಮಹಿಷಾಸುರನ ಪ್ರತಿಮೆಗೆ ಪುಷ್ಪಾರ್ಚನೆ, ಅಶೋಕಪುರಂನಲ್ಲಿ ಮೆರವಣಿಗೆಯಂತಹ ಸಣ್ಣ ಕಾರ್ಯಕ್ರಮವಷ್ಟೇ ನಡೆಯುತ್ತಿತ್ತು. ಇದೇ ಮೊದಲ ಬಾರಿಗೆ ಅರಮನೆ ಎದುರಿನ ಪುರಭವನದ ಆವರಣದಲ್ಲಿ ಅದ್ದೂರಿಯಾಗಿ ನಡೆದ ಕಾರ್ಯಕ್ರಮ ದಾಖಲೆ ಬರೆಯಿತು. ಮಧ್ಯಾಹ್ನದವರೆಗೂ ಕಾರ್ಯಕ್ರಮ ನಡೆಯಿತು. ಪುರಭವನದ ಒಳಾವರಣ ಹಾಗೂ ಸುತ್ತಮುತ್ತಲೂ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಕಾಂಗ್ರೆಸ್ ಗ್ರಾಮಾಂತರ ಜಿಲ್ಲಾ ಸಮಿತಿಯ ಅಧ್ಯಕ್ಷ ಬಿ.ಜೆ. ವಿಜಯ್ ಕುಮಾರ್ ಹಾಗೂ ಬಿಜೆಪಿ ಮುಖಂಡ ಗಿರಿಧರ್ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ವಿವಿಧ ಸಂಘಟನೆ, ಜಾತಿಗಳ ಮುಖಂಡರು ಪಾಲ್ಗೊಂಡಿದ್ದರು.

ಗಾಂಧಿ ನಗರದ ಸುರೇಶ್ ಹಾಗೂ ವಿನೋದ್ ಮಹಿಷಾಸುರನ ವೇಷ ಧರಿಸಿ ಗಮನ ಸೆಳೆದರು. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲೆಡೆಯೂ ಈ ಕಾರ್ಯಕ್ರಮವನ್ನು ಆಯೋಜಿಸಬೇಕು ಎಂದು ಕರೆ ನೀಡಲಾಯಿತು. ಮಹಿಷಾಸುರನನ್ನು ವಿರೋಧಿಸುವವರನ್ನು ಖಂಡಿಸಲಾಯಿತು. ಮಾತನಾಡಿದ ಪ್ರಮುಖರಲ್ಲಿ ಕೆಲವರು ನೇರವಾಗಿ ಹಾಗೂ ಕೆಲವರು ಹೆಸರು ಪ್ರಸ್ತಾಪಿಸಿದೇ ಬಿಜೆಪಿ ಸಂಸದ ಪ್ರತಾಪ ಸಿಂಹ ವಿರುದ್ಧ ಕಿಡಿಕಾರಿದರು.

ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಭೋದಿದತ್ತ ಭಂತೇಜಿ, ಕೆ.ಎಸ್. ಭಗವಾನ್, ಮಹೇಶ್ ಚಂದ್ರಗುರು, ತಲಕಾಡು ಚಿಕ್ಕರಂಗೇಗೌಡ, ಜೆ.ಎಸ್. ಪಾಟೀಲ, ಪುರುಷೋತ್ತಮ, ಮಹಿಷ ಮಂಡಲ ಕೃತಿಯ ಲೇಖಕ ಸಿದ್ದಸ್ವಾಮಿ ಪಾಲ್ಗೊಂಡಿದ್ದರು. ಆವರಣದಲ್ಲೇ ಊಟದ ವ್ಯವಸ್ಥೆ ಮಾಡಲಾಗಿತ್ತು.


ಮೈಸೂರಿನ ಪುರಭವನದ ಆವರಣದಲ್ಲಿ ಮಹಿಷ ದಸರಾ ಆಚರಣೆ ಸಮಿತಿಯಿಂದ ಶುಕ್ರವಾರ ನಡೆದ ಮಹಿಷ ದಸರಾ– ದಮ್ಮ ದೀಕ್ಷೆ ಕಾರ್ಯಕ್ರಮದಲ್ಲಿ ಮಹಿಷಾಸುರನ ಕಟೌಟ್‌ಗೆ ಪುಷ್ಪಾರ್ಚನೆ ಮಾಡಲಾಯಿತು. ಸಮಿತಿಯ ಅಧ್ಯಕ್ಷ ಪುರುಷೋತ್ತಮ, ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಕೆ.ಎಸ್. ಭಗವಾನ್ ಇದ್ದಾರೆ –ಪ್ರಜಾವಾಣಿ ಚಿತ್ರ

### 'ಕೊಲೆಯಾದವರನ್ನು ಸ್ಮರಿಸಬೇಡವೇ?'

'ಕೊಂದವರನ್ನು ನೀವು ಮೆರೆಸಿ ವಿಜೃಂಭಿಸುತ್ತೀರೆಂದರೆ ಕೊಲೆಯಾದ ನಮ್ಮ ಚಕ್ರವರ್ತಿಯನ್ನು ನಾವು ಸ್ಮರಿಸಬೇಡವೇ? ಮನುವಾದಿಗಳ ಹಬ್ಬಗಳು ಹಾಗೂ ಅವರ ದೇವರುಗಳು ನಮಗೆ ಬೇಕಿಲ್ಲ. ನಮಗೆ ಬೇಕಿರುವುದು ಸಂವಿಧಾನ ಮಾತ್ರ' ಎಂದು ಉರಿಲಿಂಗ ಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

'ಅಂಬೇಡ್ಕರ್ ಅವರ ಮೂಲಕ ನಾವು ಪೆನ್ನಿನ ಭಾರತವನ್ನು ಕಟ್ಟಿದ್ದೇವೆಯೇ ಹೊರತು ಗನ್ನಿನ ಭಾರತವನ್ನಲ್ಲ. ಕೊಲೆಗಾರನನ್ನು ಮನುಷ್ಯನನ್ನಾಗಿ ಮಾಡಿದ ಬೌದ್ಧ ಧರ್ಮ ನಮ್ಮದು. ನಾವು ಬೆಂಕಿ ಹಚ್ಚುವವರಲ್ಲ; ನಂದಿಸುವವರು' ಎಂದರು.

'ಬಹುಜನರಾದ ನಮ್ಮ ಶಕ್ತಿ ಪ್ರದರ್ಶನಕ್ಕೆ ಸಹಕಾರ ನೀಡಿದವರಿಗೆ ಧನ್ಯವಾದಗಳನ್ನು ಹೇಳುತ್ತೇವೆ' ಎಂದಾಗ ಕಾರ್ಯಕ್ರಮದಲ್ಲಿ ಚಪ್ಪಾಳೆಗಳ ಸುರಿಮಳೆಯಾಯಿತು.

#### ಎರಡು ನಿರ್ಣಯಗಳು

ಪ್ರತಿ ವರ್ಷ ಅ.14ರಂದು ನಮ್ಮ ಪೂರ್ವಿಕರನ್ನು ನೆನೆಯುತ್ತಾ ದಮ್ಮ ದೀಕ್ಷೆ ಕಾರ್ಯಕ್ರಮ ನಡೆಸಲಾಗುವುದು ಎಂದು ತಿಳಿಸಲಾಯಿತು. ರಾಜ್ಯ ಸರ್ಕಾರವು ಬೌದ್ಧ ಅಭಿವೃದ್ಧಿ ಪ್ರಾಧಿಕಾರವನ್ನು ತ್ವರಿತವಾಗಿ ರಚಿಸಬೇಕು ಎಂದು ಆಗ್ರಹಿಸಲಾಯಿತು. ಇದಕ್ಕೆ ನೆರೆದಿದ್ದವರು ಕೈಮೇಲೆತ್ತಿ ಸಹಮತ ವ್ಯಕ್ತಪಡಿಸಿದರು.

## ಸುದ್ದಿ 2 ನಿಮಿಷ

### ಮಾರಕಾಸ್ತ್ರಗಳಿಂದ ಇರಿದು ಗ್ರಾ.ಪಂ. ಅಧ್ಯಕ್ಷನ ಕೊಲೆ

**ಕಲಬುರಗಿ:** ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಚೌಡಾಪುರ ಗ್ರಾಮದ ಜನನಿಬಿಡ ಪ್ರದೇಶದಲ್ಲಿ ದುಷ್ಕರ್ಮಿಗಳ ಗುಂಪು ಮದರಾ (ಬಿ) ಗ್ರಾಮ ಪಂಚಾಯಿತಿ ಅಧ್ಯಕ್ಷ ಗೌಡಪ್ಪಗೌಡ ಬಿರಾದಾರ (50) ಅವರನ್ನು ಶುಕ್ರವಾರ ತಲ್ವಾರ್‌ಗಳಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದೆ.

ಚೌಡಾಪುರದ ಬಸ್ ನಿಲ್ದಾಣದ ಬಳಿ ಎರಡು ಜೀಪ್‌ಗಳಲ್ಲಿ ಬಂದ ದುಷ್ಕರ್ಮಿಗಳು ಗೌಡಪ್ಪಗೌಡ ಅವರ ಮುಖಕ್ಕೆ ಖಾರದಪುಡಿ ಎರಚಿ ಮನಬಂದಂತೆ ತಲ್ವಾರ್‌ನಿಂದ ಇರಿದಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದ ಗೌಡಪ್ಪಗೌಡ ಸ್ಥಳದಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

ಮದರಾ (ಬಿ) ಗ್ರಾಮದಲ್ಲಿ ಶವ ಸಾಗಿಸುವ ಗಾಡಿ ಕೆಟ್ಟಿತ್ತು. ಅದನ್ನು ದುರಸ್ತಿ ಮಾಡಿಸಲು ಚೌಡಾಪುರಕ್ಕೆ ತಂದಿದ್ದರು. ದುರಸ್ತಿ ಮಾಡಿಸುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದ ದುಷ್ಕರ್ಮಿಗಳು ಕೊಲೆ ಮಾಡಿದರು. ಜೀವ ರಕ್ಷಣೆಗಾಗಿ ಅವರು ಅನುಮತಿ ಇರುವ ಪಿಸ್ತೂಲ್ ಹೊಂದಿದ್ದರು. ಆದರೆ, ಗಣೇಶ ಚತುರ್ಥಿ ಸಂದರ್ಭದಲ್ಲಿ ಪೊಲೀಸ್ ಠಾಣೆಗೆ ಒಪ್ಪಿಸಿದ್ದರು. ಮರಳಿ ಪಡೆದಿರಲಿಲ್ಲ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಎಸ್ಪಿ ಅಡ್ಡೂರು ಶ್ರೀನಿವಾಸಲು, 'ಕೊಲೆಗಾರರನ್ನು ಪತ್ತೆ ಹಚ್ಚಲು ಮೂರು ತನಿಖಾ ತಂಡಗಳನ್ನು ರಚಿಸಲಾಗಿದೆ. ಕುಟುಂಬದ ಸದಸ್ಯರು ನೀಡಿದ ಸುಳಿವಿನ ಮೇರೆಗೆ ಆರೋಪಿಗಳ ಪತ್ತೆ ಕಾರ್ಯ ನಡೆದಿದೆ. ಘಟನೆ ಸಂದರ್ಭದಲ್ಲಿ ಸ್ಥಳದಲ್ಲಿದ್ದವರು ಮಾಹಿತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ' ಎಂದರು.

ಗೌಡಪ್ಪಗೌಡ ಅವರು ಅಫಜಲಪುರದ ಶಾಸಕ ಎಂ.ವೈ. ಪಾಟೀಲ ಅವರ ಕಟ್ಟಾ ಬೆಂಬಲಿಗರಾಗಿದ್ದರು. 1994ರಿಂದ ಆರು ಬಾರಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು.



### ಎರವಲು ಸೇವೆ: ಅರ್ಜಿ ವಜಾ

**ಬೆಂಗಳೂರು:** 'ಎರವಲು ಸೇವೆಯಲ್ಲಿ ಮತ್ತೊಂದು ಇಲಾಖೆಗೆ ನಿಯೋಜಿತಗೊಳ್ಳುವ ಅಧಿಕಾರಿಗಳಿಗೆ, ಒಂದೇ ಹುದ್ದೆಯಲ್ಲಿ ಎರಡು ವರ್ಷ ಮುಂದುವರೆಯಬೇಕು ಎಂಬ ನಿಯಮ ಕಡ್ಡಾಯವಾಗಿ ಅನ್ವಯವಾಗದು' ಎಂದು ಹೈಕೋರ್ಟ್ ತಿಳಿಸಿದೆ.

ತಮ್ಮನ್ನು ಮಾತೃ ಇಲಾಖೆಗೆ ವರ್ಗಾವಣೆ ಮಾಡಿದ್ದ ಕ್ರಮವನ್ನು ಪ್ರಶ್ನಿಸಿ ಗ್ರೇಡ್ -1 ತಹಶೀಲ್ದಾರ್ ಪಿ.ದಿನೇಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ಸೋಮಶೇಖರ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ. ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಎರಡು ವರ್ಷಗಳ ಸೇವೆ ಪೂರ್ಣಗೊಳ್ಳುವ ಮುನ್ನವೇ ವರ್ಗಾವಣೆ ಮಾಡಲಾಗಿದೆ' ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, 'ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಅಧಿಕಾರಿಗಳನ್ನು ಬದಲಾವಣೆ ಮಾಡುವ ಅಗತ್ಯ ಹೊಂದಿರುತ್ತದೆ. ಇದೇ ಕಾರಣದಿಂದ ಅರ್ಜಿದಾರರನ್ನು ಮಾತೃ ಇಲಾಖೆಗೆ ವರ್ಗಾವಣೆ ಮಾಡಲಾಗಿದೆ. ಹೀಗಾಗಿ, ಈ ಪ್ರಕರಣದಲ್ಲಿ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಆದೇಶದಲ್ಲಿ ಮಧ್ಯಪ್ರವೇಶ ಮಾಡುವ ಅಗತ್ಯವಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

## ವೈದ್ಯಕೀಯ ಸೀಟಿಗಾಗಿ ನಕಲಿ ದಾಖಲೆ ಸೃಷ್ಟಿ!

**ಬೆಂಗಳೂರು:** ವೈದ್ಯಕೀಯ ಸೀಟು ಪಡೆಯಲು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ರ‍್ಯಾಂಕಿಂಗ್ ಕಾರ್ಡ್ ಸೇರಿದಂತೆ ಪೂರ್ಣ ದಾಖಲೆಗಳನ್ನೇ ನಕಲು ಮಾಡಿರುವ ಪ್ರಕರಣಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪತ್ತೆ ಮಾಡಿದೆ.

ಎರಡು ಪ್ರಕರಣಗಳಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಶಿವಮೊಗ್ಗ ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲು ಅಭ್ಯರ್ಥಿಗಳು ಮುಂದಾಗಿದ್ದರು. ಕೆಇಎ ಪೋರ್ಟಲ್‌ನಲ್ಲಿ ಸೀಟು ಹಂಚಿಕೆ ವಿವರಗಳು ಲಭ್ಯವಾಗದ ಕಾರಣ ಈ ಎರಡು ಕಾಲೇಜುಗಳ ಆಡಳಿತ ಮಂಡಳಿ ಕೆಇಎ ಸಂಪರ್ಕಿಸಿದೆ. ಆಗ ವಂಚನೆಯ ಪ್ರಕರಣ ಪತ್ತೆಯಾಗಿದೆ. ಮೂರೂ ಪ್ರಕರಣಗಳಲ್ಲಿ ವಂಚನೆ ಎಸಗಿದವರು ವಿದ್ಯಾರ್ಥಿನಿಯರು.

ನೀಟ್‌ನ ನಕಲಿ ದಾಖಲೆಯ ಜತೆಗೆ, ಶುಲ್ಕ ಪಾವತಿಸಿದ ರಸೀದಿ, ವೈದ್ಯಕೀಯ ಕಾಲೇಜು ಪ್ರವೇಶ ಹಂಚಿಕೆಯ ಪತ್ರಗಳನ್ನೂ ನಕಲು ಮಾಡಿ ವಂಚಿಸಲು ಪ್ರಯತ್ನಿಸಿದ ಆರೋಪದ ಮೇಲೆ ಕೆ.ಎಂ.ಭುವನೇಶ್ವರಿ ವಿರುದ್ಧ ಮಲ್ಲೇಶ್ವರಂ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

**ಕೋರ್ಟ್‌ಗೂ ನಕಲಿ ದಾಖಲೆ ಸಲ್ಲಿಕೆ:** 'ಮತ್ತೊಬ್ಬ ವಿದ್ಯಾರ್ಥಿನಿ ನಕಲಿ ದಾಖಲೆ ಸೃಷ್ಟಿಸಿ ವೈದ್ಯಕೀಯ ಸೀಟು ಪಡೆಯಲು ಪ್ರಯತ್ನಿಸಿದ್ದಾರೆ. ಕಾಲೇಜಿಗೆ ಪ್ರವೇಶ ಪಡೆಯಲು ವಿಫಲರಾಗಿದ್ದಾರೆ. 'ಉತ್ತಮ ರ‍್ಯಾಂಕಿಂಗ್ ಇದ್ದರೂ ಪ್ರವೇಶ ನಿರಾಕರಿಸಲಾಗಿದೆ' ಎಂಬ ಕಾರಣ ನೀಡಿ ಕೋರ್ಟ್ ಮೆಟ್ಟಿಲೇರಿದ್ದಾರೆ.

# ಶೇ 50ರಷ್ಟು ಬಾಕಿ ಬಿಡುಗಡೆಗೆ ತಿಂಗಳ ಗಡುವು

## ಪಾವತಿಯಾಗದಿದ್ದರೆ ರಾಜ್ಯದಾದ್ಯಂತ ಹೋರಾಟ: ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗುತ್ತಿಗೆದಾರರಿಗೆ ಬಾಕಿ ಇರುವ ಮೊತ್ತದಲ್ಲಿ ಶೇ 50ರಷ್ಟನ್ನು 30 ದಿನಗಳಲ್ಲಿ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ರಾಜ್ಯ ಗುತ್ತಿಗೆದಾರರ ಸಂಘ ಎಚ್ಚರಿಸಿದೆ.


ಡಿ.ಕೆಂಪಣ್ಣ

'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮೂರು ಬಾರಿ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ವಿವಿಧ ಇಲಾಖೆಯ ಸಚಿವರನ್ನೂ ಭೇಟಿ ಮಾಡಿದ್ದೇವೆ. ಆದರೂ ಗುತ್ತಿಗೆದಾರರ ಸಂಕಷ್ಟ ಅವರಿಗೆ ತಿಳಿಯುತ್ತಿಲ್ಲ. ಹೀಗಾಗಿ ಹೋರಾಟ ಅನಿವಾರ್ಯವಾಗಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಡಿ. ಕೆಂಪಣ್ಣ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಲೋಕೋಪಯೋಗಿ, ಜಲಸಂಪನ್ಮೂಲ, ಸಣ್ಣ ನೀರಾವರಿ, ಆರ್‌ಡಿಪಿಆರ್ ಮತ್ತು ಬಿಬಿಎಂಪಿ ಸೇರಿದಂತೆ ಸುಮಾರು ₹20 ಸಾವಿರ ಕೋಟಿಗೂ ಅಧಿಕ ಬಿಲ್ ಮೊತ್ತ ಪಾವತಿಸಬೇಕಿದೆ. ಹಂತಹಂತವಾಗಿ ಹಣ ಬಿಡುಗಡೆ ಮಾಡಲು ಮನವಿ ಮಾಡಿದ್ದರೂ ಕ್ರಮವಾಗಿಲ್ಲ. ಹಣ ಇಲ್ಲ ಎಂದರೆ ಹೊಸ ಕಾಮಗಾರಿ ಕೈಗೊಳ್ಳಬೇಡಿ. ಬಾಕಿಯನ್ನು ಮೊದಲು ಪಾವತಿ ಮಾಡಿ ಎಂದು ಆಗ್ರಹಿಸಿದರು.

'ಕೆಲವು ಇಲಾಖೆಗಳಲ್ಲಿ ಜ್ಯೇಷ್ಠತೆ ಆಧಾರದಲ್ಲೂ ಪಾವತಿ ಆಗುತ್ತಿಲ್ಲ. ಬಿಲ್ ಬಾಕಿ ಮೊತ್ತದಲ್ಲಿ ಶೇ 7ರಷ್ಟು ಪಾವತಿಸಲಾಗುತ್ತಿದೆ. ಇದರಲ್ಲೇ ಪೂರ್ಣ ಪ್ರಮಾಣದ ಶೇ 18ರಷ್ಟು ಜಿಎಸ್‌ಟಿ ಪಾವತಿಸಬೇಕು. ₹1 ಕೋಟಿ ಮೊತ್ತಕ್ಕೆ ₹7 ಲಕ್ಷ ಪಾವತಿಸುತ್ತಿದ್ದಾರೆ. ₹18 ಲಕ್ಷ ಜಿಎಸ್‌ಟಿ ಪಾವತಿಸಬೇಕು. ₹11 ಲಕ್ಷ ನಾವೆಲ್ಲಿಂದ ತರಬೇಕು' ಎಂದು ಪ್ರಶ್ನಿಸಿದರು.

'ಮುಖ್ಯಮಂತ್ರಿಯವರಿಗೆ 30 ದಿನ ಅವಕಾಶ ನೀಡಿದ್ದೇವೆ. ನಂತರ ಅವರ ಹೈಕಮಾಂಡ್‌ಗೂ ಮನವಿ ಸಲ್ಲಿಸಲಾಗುತ್ತದೆ. ಪ್ರಧಾನಮಂತ್ರಿಯವರಿಗೂ ಪತ್ರ ಬರೆಯಲಾಗುತ್ತದೆ' ಎಂದು ಕೆಂಪಣ್ಣ ಹೇಳಿದರು.

ರಾಜ್ಯದ ಗುತ್ತಿಗೆದಾರರಿಗೆ ದೊಡ್ಡ ಮೊತ್ತದ ಕಾಮಗಾರಿಗಳನ್ನು ನಡೆಸಲು ಅವಕಾಶ ಮಾಡಿಕೊಡಬೇಕು. ಕೋಟ್ಯಂತರ ಮೊತ್ತದ ಕಾಮಗಾರಿಗಳನ್ನು ಆಂಧ್ರ ಪ್ರದೇಶ ಸೇರಿದಂತೆ ಹೊರ ರಾಜ್ಯದವರೇ ಮಾಡುತ್ತಿದ್ದಾರೆ. ಸ್ಥಳೀಯ ಗುತ್ತಿಗೆದಾರರ ದರ್ಜೆಯನ್ನು ಉನ್ನತೀಕರಿಸಿ, ಅವರಿಗೆ ಅವಕಾಶ ಕಲ್ಪಿಸಲು ನಿಯಮ ರೂಪಿಸಬೇಕು ಎಂದರು.

'ಶೇ 40ರಷ್ಟು ಕಮಿಷನ್‌ಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ಸಮಿತಿಗೆ ಮಾಹಿತಿ ಒದಗಿಸಲಾಗುತ್ತದೆ. ಸಮಿತಿಯಿಂದ ನಮಗೆ ಇನ್ನೂ ಯಾವುದೇ ಸೂಚನೆ ಬಂದಿಲ್ಲ' ಎಂದರು.

### 'ಶಿಫಾರಸು ತಂದವರಿಗೆ ಹಣ'

'ಶಿಫಾರಸು ತಂದವರಿಗೆ ರಾತ್ರೋರಾತ್ರಿ ಚೆಕ್ ನೀಡಿದ ಉದಾಹರಣೆಗಳಿವೆ. ತಮಗೆ ಬೇಕಾದವರಿಗೆ ಹಣ ಪಾವತಿಸಲಾಗುತ್ತಿದೆ. ಯಾರಿಗೆ ಎಷ್ಟು ಹಣ ನೀಡಲಾಗುತ್ತಿದೆ ಎಂಬ ಬಗ್ಗೆ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಮಾಹಿತಿ ಇಲ್ಲ. ಸಚಿವರೊಂದಿಗೆ ಮಾತನಾಡಿ ಎನ್ನುತ್ತಿದ್ದಾರೆ. ಆರ್‌ಟಿಐ ಮೂಲಕ ಯಾರಿಗೆ ಹಣ ಪಾವತಿಸಲಾಗಿದೆ ಎಂಬ ಮಾಹಿತಿಯನ್ನು ಕೇಳಿದ್ದೇವೆ' ಎಂದು ಕೆಂಪಣ್ಣ ಹೇಳಿದರು.

'ಲೋಕೋಪಯೋಗಿ ಇಲಾಖೆಯಲ್ಲಿ ಮಾತ್ರ ಸರಿಯಾಗಿ ಪಾವತಿಯಾಗುತ್ತಿದೆ. ಎಲ್ಲ ನಿಯಮ ಅನುಸರಿಸಿ ಬಿಲ್ ಪಾವತಿಸುವಂತೆ ಸಚಿವ ಜಾರಕಿಹೊಳಿ ಸೂಚಿಸಿದ್ದಾರೆ. ಇದೊಂದೇ ಇಲಾಖೆ ನಮಗೆ ಸ್ಪಂದಿಸಿರುವುದು' ಎಂದು ತಿಳಿಸಿದರು.

### 'ಕೆಂಪಣ್ಣ ಆತಂಕ ಪಡಬೇಕಿಲ್ಲ'

'ಬಿಲ್ ಪಾವತಿ ವಿಚಾರದಲ್ಲಿ ಕೆಂಪಣ್ಣ ಅವರು ಆತಂಕ ಪಡುವ ಅಗತ್ಯವಿಲ್ಲ. ಏನಾದರೂ ಇದ್ದರೆ ಬಂದು ನಮ್ಮ ಬಳಿ ಮಾತನಾಡಲಿ. ನಾವು ನ್ಯಾಯ ಒದಗಿಸುತ್ತೇವೆ. ಕೆಂಪಣ್ಣ ಅವರ ಮನವಿ ಮೇರೆಗೆ ನಾವು ತನಿಖೆ ಪಕ್ಕಕ್ಕಿಟ್ಟು, ಕಾಮಗಾರಿಗಳ ಶೇ 60-70ರಷ್ಟು ಹಣವನ್ನು ಆದ್ಯತೆ ಮೇರೆಗೆ ಬಿಡುಗಡೆ ಮಾಡಿದ್ದೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ನಮ್ಮ ಪರಿಸ್ಥಿತಿ ರೈತರಿಗಿಂತ ಶೋಚನೀಯವಾಗಿದೆ. ತನಿಖೆ ಪಕ್ಕಕ್ಕಿಟ್ಟು ಬಿಲ್ ಪಾವತಿ ಮಾಡಲಿ' ಎಂಬ ಕೆಂಪಣ್ಣ ಮಾತಿಗೆ ಅವರು ಪ್ರತಿಕ್ರಿಯಿಸಿದರು.

'ಬಿಲ್ ಪಾವತಿ ಸಮಯದಲ್ಲಿ ಜಿಎಸ್‌ಟಿ ಕೂಡ ಪಾವತಿ ಮಾಡಬೇಕು. ಹೀಗಾಗಿ ತನಿಖೆ ವರದಿ ಬರುವ ಮುನ್ನವೇ ನಾವು ಸುಮಾರು ಮುಕ್ಕಾಲು ಭಾಗ ಹಣ ಬಿಡುಗಡೆ ಮಾಡಿದ್ದೇವೆ' ಎಂದರು.

### ಸಿ.ಎಂ, ಡಿಸಿಎಂ ರಾಜೀನಾಮೆಗೆ ನಳಿನ್ ಆಗ್ರಹ

**ಮಂಗಳೂರು:** 'ಬೆಂಗಳೂರಿನಲ್ಲಿ ಗುತ್ತಿಗೆದಾರರೊಬ್ಬರ ಮನೆ ಮೇಲೆ ನಡೆದ ಐಟಿ ದಾಳಿ, ಆ ವ್ಯಕ್ತಿ ಕೆಲ ದಿನಗಳ ಹಿಂದೆ ಡಿಸಿಎಂ ಜೊತೆ ಕಾಣಿಸಿಕೊಂಡಿರುವುದನ್ನು ಗಮನಿಸಿದರೆ ಇದು ಪರ್ಸೆಂಟೇಜ್ ಸರ್ಕಾರ ಎಂಬುದು ಸಾಬೀತಾಗಿದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಗುತ್ತಿಗೆದಾರರೊಬ್ಬರ ಮನೆ ಮೇಲೆ ಐಟಿ ದಾಳಿ ನಡೆದ ವೇಳೆ ₹42 ಕೋಟಿ ಹಣ ದೊರೆತಿದೆ. ರಾಜ್ಯ ಸರ್ಕಾರವು ಕೆಲ ದಿನಗಳ ಹಿಂದೆ ಗುತ್ತಿಗೆದಾರರ ಬಿಲ್ ₹600 ಕೋಟಿ ಬಿಡುಗಡೆ ಮಾಡಿತ್ತು. ಇದಕ್ಕೆ ಪ್ರತಿಯಾಗಿ ಕಮಿಷನ್ ರೂಪದಲ್ಲಿ ಕಾಂಗ್ರೆಸ್‌ಗೆ ಸೇರಿರುವ ಹಣ ಇದಾಗಿದೆ' ಎಂದು ಹೇಳಿದರು.

## ವಿಶ್ವ ಬಂಟರ ಸಮ್ಮೇಳನ 28, 29ರಂದು

**ಉಡುಪಿ:** ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಜತೆಗೂಡಿ ಸಮಸ್ತ ಬಂಟರ ಸಹಯೋಗದಲ್ಲಿ ನಗರದಲ್ಲಿ ಇದೇ 28 ಹಾಗೂ 29ರಂದು ವಿಶ್ವ ಬಂಟರ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜಯಕರ ಶೆಟ್ಟಿ ಇಂದ್ರಾಳಿ ತಿಳಿಸಿದರು.

ಶುಕ್ರವಾರ ಸಮ್ಮೇಳನದ ಆಹ್ವಾನ ಪತ್ರಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 28ರಂದು ಅಜ್ಜರಕಾಡು ಕ್ರೀಡಾಂಗಣದಲ್ಲಿ ವಿಶ್ವ ಬಂಟರ ಕ್ರೀಡಾಕೂಟ ನಡೆಯಲಿದೆ, 29ರಂದು ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಂಗಣದಲ್ಲಿ ವಿಶ್ವ ಬಂಟರ ಸಾಂಸ್ಕೃತಿಕ ವೈಭವ ನಡೆಯಲಿದೆ ಎಂದರು.

ಕವಿಗೋಷ್ಠಿ, ವಿಚಾರ ಸಂಕಿರಣ, ಕಾವ್ಯ ಗಾಯನ, ಚಿತ್ರ ರಚನೆ ಸೇರಿದಂತೆ ಹಲವು ಸ್ಪರ್ಧೆಗಳು ನಡೆಯಲಿವೆ. 25ರಂದು ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದೆ. ಎಲ್ಲ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ವಹಿಸಲಿದ್ದಾರೆ ಎಂದರು.

## ಎಂಜಿನಿಯರಿಂಗ್‌ನಲ್ಲೂ 'ಸೀಟ್ ಬ್ಲಾಕಿಂಗ್'

### ಪ್ರತಿಷ್ಠಿತ ಕಾಲೇಜುಗಳಲ್ಲೂ ಶೇ 60ರಷ್ಟು ಉಳಿಕೆ: ಸಚಿವರ ಶಂಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಂಚಿಕೆ ಮಾಡಿದ್ದ ಸೀಟುಗಳು ಕೆಲ ಪ್ರತಿಷ್ಠಿತ ಕಾಲೇಜುಗಳಲ್ಲೂ ಖಾಲಿ ಉಳಿದಿದ್ದು, 'ಸೀಟ್ ಬ್ಲಾಕಿಂಗ್' ದಂಧೆ ನಡೆದಿರುವ ಅನುಮಾನಕ್ಕೆ ಕಾರಣವಾಗಿದೆ.

ಕೆಇಎಗೆ ಶುಕ್ರವಾರ ಭೇಟಿ ನೀಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, 'ಆರ್.ವಿ. ಕಾಲೇಜು, ಎಂ.ಎಸ್.ರಾಮಯ್ಯ, ಸಾಗರ್ ಎಂಜಿನಿಯರಿಂಗ್ ಕಾಲೇಜು, ಪಿಇಎಸ್ ವಿಶ್ವವಿದ್ಯಾಲಯ ಸೇರಿದಂತೆ ಉನ್ನತ ಕಾಲೇಜುಗಳಲ್ಲಿ ಕಂಪ್ಯೂಟರ್ ಸೈನ್ಸ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸಿ, ಬಯೊ ಟೆಕ್ನಾಲಜಿ, ಎಲೆಕ್ಟ್ರಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ವಿಭಾಗದ ಸೀಟುಗಳು ಖಾಲಿ ಉಳಿದಿವೆ. ಬೇಡಿಕೆ ಇರುವ ಕಾಲೇಜಿನಲ್ಲಿ ಶೇ 60ರಷ್ಟು ಸೀಟು ಖಾಲಿ ಉಳಿದಿರುವುದು ಸಂಶಯ ಮೂಡಿಸಿದೆ' ಎಂದರು.

**ಆ್ಯಪ್ ಆಧಾರಿತ ಅರ್ಜಿ ಸಲ್ಲಿಕೆ:** 'ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಯಲ್ಲಿ ಸಾಕಷ್ಟು ಲೋಪಗಳು ಪತ್ತೆಯಾಗಿವೆ. ಅವುಗಳನ್ನು ನಿವಾರಿಸಲು ಮುಂದಿನ ಶೈಕ್ಷಣಿಕ ವರ್ಷದಿಂದ ಸಿಇಟಿಗೆ ಮೊಬೈಲ್ ಆ್ಯಪ್ ಆಧಾರಿತ ಅರ್ಜಿ ಸಲ್ಲಿಕೆಗೆ ಅವಕಾಶ ಕಲ್ಪಿಸಲಾಗುವುದು' ಎಂದರು.

#### ಸೀಟು ಸಿಕ್ಕ ಕಾಲೇಜೇ ಅಸ್ತಿತ್ವದಲ್ಲಿಲ್ಲ!

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ವಿದ್ಯಾರ್ಥಿಯೊಬ್ಬರಿಗೆ ದಕ್ಷಿಣ ಕನ್ನಡ ಜಿಲ್ಲೆಯ ನರ್ಸಿಂಗ್ ಕಾಲೇಜಿನಲ್ಲಿ ಸೀಟು ಸಿಕ್ಕಿದೆ. ನಿಗದಿತ ಶುಲ್ಕ ಪಾವತಿಸಿ, ಪ್ರವೇಶಕ್ಕಾಗಿ ಅಲ್ಲಿಗೆ ತೆರಳಿದರೆ ಆ ವಿಳಾಸದಲ್ಲಿ ಕಾಲೇಜೇ ಇರಲಿಲ್ಲ.

ವಿದ್ಯಾರ್ಥಿ ಅಹವಾಲು ಆಲಿಸಿದ ಉನ್ನತ ಶಿಕ್ಷಣ ಸಚಿವ ಸುಧಾಕರ್, ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮಾಹಿತಿ ನೀಡಿದರು.

## ಕಲುಷಿತ ನೀರು; ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

**ದಾವಣಗೆರೆ:** ತಾಲ್ಲೂಕಿನ ಮತ್ತಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಇಬ್ಬರು ಮೃತಪಟ್ಟಿದ್ದು, 30ಕ್ಕೂ ಹೆಚ್ಚು ಜನರು ಅಸ್ವಸ್ಥಗೊಂಡಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ.

ಗ್ರಾಮದ ಕುಡಿಯುವ ನೀರಿನ ಪೈಪ್‌ಲೈನ್ ಒಡೆದಿದ್ದು, ಚರಂಡಿ ನೀರು ಸೇರಿದ ಕಾರಣ ನೀರು ಕಲುಷಿತಗೊಂಡಿದೆ. ಈ ನೀರನ್ನು ಕುಡಿದು ಆರೋಗ್ಯ ಸಮಸ್ಯೆ ಉಲ್ಬಣಗೊಂಡಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

'ಗ್ರಾಮಕ್ಕೆ ನಲ್ಲಿಯಿಂದ ಪೂರೈಸಲಾಗಿದ್ದ ಕಲುಷಿತ ನೀರು ಕುಡಿದು ಹಲವರು ವಾಂತಿ–ಭೇದಿಯಿಂದ ಅಸ್ವಸ್ಥಗೊಂಡಿದ್ದು, ಅಕ್ಟೋಬರ್ 7ರಂದು ಗ್ರಾಮದ ಟಿ.ಸೋಮಶೇಖರಪ್ಪ (66) ಹಾಗೂ 8ರಂದು ಶಾಂತಮ್ಮ (75) ಮೃತಪಟ್ಟಿದ್ದಾರೆ.


15 ದಿನಗಳ ಹಿಂದೆ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಹಲವರು ವಾಂತಿ–ಭೇದಿಯಿಂದ ಅಸ್ವಸ್ಥಗೊಂಡು ಪ್ರಾಥಮಿಕ ಆರೋಗ್ಯ ಕೇಂದ್ರ, ಜಿಲ್ಲಾ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

'ನಮ್ಮ ಕುಟುಂಬದ ನಾಲ್ವರು ಅಸ್ವಸ್ಥರಾಗಿದ್ದಾರೆ. ತಂದೆ ದಾವಣಗೆರೆಯ ಬಾಪೂಜಿ ಆಸ್ಪತ್ರೆಯಲ್ಲಿ, ಸಹೋದರಿ ಮಣಿಪಾಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಲುಷಿತ ನೀರು ಅಥವಾ ಆಹಾರ ಸೇವಿಸಿದ್ದರಿಂದ ಸಮಸ್ಯೆಯಾಗಿದ್ದಾಗಿ ವೈದ್ಯರು ತಿಳಿಸಿದ್ದಾರೆ' ಎಂದು ಗ್ರಾಮದ ಶಿವರುದ್ರಣ್ಣ ವಿವರಿಸಿದರು. ಆಶಾ ಕಾರ್ಯಕರ್ತೆಯನ್ನು ಹೊರತುಪಡಿಸಿ ಆರೋಗ್ಯ, ಪಂಚಾಯತ್ ರಾಜ್, ಕಂದಾಯ ಇಲಾಖೆಯ ಯಾವುದೇ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿಲ್ಲ. ಗ್ರಾಮದಲ್ಲಿ ಸ್ವಚ್ಛತೆ ಮರೀಚಿಕೆಯಾಗಿದೆ. ಚರಂಡಿಯಲ್ಲಿ ಕೊಳಚೆ ಸಂಗ್ರಹವಾಗಿದೆ. ಸೊಳ್ಳೆಗಳ ಹಾವಳಿ ಹೆಚ್ಚಿದೆ ಎಂದು ಅವರು ದೂರಿದರು.

'ಗ್ರಾಮದಲ್ಲಿ ಪ್ರತಿದಿನ ಒಬ್ಬೊಬ್ಬರು ವಾಂತಿ–ಭೇದಿಯಿಂದ ಆಸ್ಪತ್ರೆ ಸೇರುತ್ತಿದ್ದಾರೆ. ಆತಂಕ ಎದುರಾಗಿದೆ' ಎಂದು ಸೋಮಶೇಖರ್ ಅವರ ಸಹೋದರ ಮಂಜುನಾಥ್ ತಿಳಿಸಿದರು.

## ನಿಧನವಾರ್ತೆ

### ಪತ್ರಕರ್ತ ಸಚ್ಚಿದಾನಂದಮೂರ್ತಿ



**ಬೆಂಗಳೂರು:** 'ಮಲಯಾಳ ಮನೋರಮಾ' ಮತ್ತು 'ದಿ ವೀಕ್' ಪತ್ರಿಕೆಗಳ ಸಂಪಾದಕರಾಗಿದ್ದ ಕೆ.ಎಸ್. ಸಚ್ಚಿದಾನಂದಮೂರ್ತಿ (66) ಶುಕ್ರವಾರ ನಿಧನರಾದರು.

ಇತ್ತೀಚೆಗಷ್ಟೇ ಶ್ವಾಸಕೋಶ ಕಸಿ ಮಾಡಿಸಿಕೊಂಡಿದ್ದರು. ಆರೋಗ್ಯದ ಸ್ಥಿತಿ ಬಿಗಡಾಯಿಸಿತ್ತು. ಶೇಷಾದ್ರಿಪುರ ಅಪೋಲೊ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಕೋಲಾರ ಜಿಲ್ಲೆಯ ಅಷ್ಟ ಗ್ರಾಮದ ಸಚ್ಚಿದಾನಂದ ಮೂರ್ತಿ ಅವರು 1982ರಲ್ಲಿ 'ದಿ ವೀಕ್' ಬೆಂಗಳೂರಿನ ವರದಿಗಾರರಾಗಿ ವೃತ್ತಿ ಆರಂಭಿಸಿದ್ದರು. 1990ರಲ್ಲಿ ದೆಹಲಿಗೆ ರಾಜಧಾನಿ ಮುಖ್ಯಸ್ಥರಾಗಿ ತೆರಳಿದ್ದರು. ನಂತರ 'ಮಲಯಾಳ ಮನೋರಮಾ' ಮತ್ತು 'ದಿ ವೀಕ್' ಪತ್ರಿಕೆಗಳ ಸಂಪಾದಕರಾಗಿ ಕೆಲಸ ಮಾಡಿದ್ದರು.

ಸಚ್ಚಿದಾನಂದಮೂರ್ತಿ ದೆಹಲಿಯ ಮಾಧ್ಯಮರಂಗದಲ್ಲಿ ಸಕ್ರಿಯರಾಗಿದ್ದ ಕೆಲವೇ ಕೆಲವು ಕನ್ನಡಿಗ ಪತ್ರಕರ್ತರಲ್ಲಿ ಒಬ್ಬರಾಗಿದ್ದರು. ರಾಜ್ಯ-ರಾಷ್ಟ್ರಗಳ ವಿದ್ಯಮಾನಗಳ ಬಗ್ಗೆ ಅಪಾರವಾದ ಜ್ಞಾನ ಹೊಂದಿದ್ದ ಅವರು, ಎಡಿಟರ್ ಗಿಲ್ಡ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಪ್ರೆಸ್ ಕೌನ್ಸಿಲ್ ಸದಸ್ಯರಾಗಿದ್ದರು. ಲೋಕಸಭಾ ಮಾಧ್ಯಮ ಸಲಹಾ ಸಮಿತಿ ಸದಸ್ಯರೂ ಆಗಿದ್ದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸಹಿತ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಆಸ್ಪತ್ರೆಯಿಂದ ಜಯನಗರದಲ್ಲಿರುವ ಅವರ ಮನೆಗೆ ಪಾರ್ಥಿವ ಶರೀರ ಒಯ್ಯಲಾಯಿತು. ಬಳಿಕ ಬನಶಂಕರಿಯಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.


### ಸೋಮಶೇಖರ ಸ್ವಾಮೀಜಿ



**ನವಲಗುಂದ (ಧಾರವಾಡ ಜಿಲ್ಲೆ):** ತಾಲ್ಲೂಕಿನ ಮೊರಬ ಗ್ರಾಮದ ಜಡಿಮಠದ ಪೀಠಾಧೀಶ ಸೋಮಶೇಖರ ಬಸಲಿಂಗಯ್ಯ ಶಿವಾಚಾರ್ಯರು (53) ಶುಕ್ರವಾರ ಅನಾರೋಗ್ಯದಿಂದ ನಿಧನರಾದರು. ಜಡಿಮಠದ ಆವರಣದಲ್ಲಿ ಸಂಜೆ ಧಾರ್ಮಿಕ ವಿಧಿವಿಧಾನದಂತೆ ಅಂತ್ಯಕ್ರಿಯೆ ನೆರವೇರಿತು.

ಇವರ ಪೂರ್ವಾಶ್ರಮದ ತಂದೆ ಬಸಲಿಂಗಯ್ಯನವರ ಹಾಗೂ ತಾಯಿ ಕಾಶಮ್ಮ ಜಡಿಮಠಯವರ. ನಾಲ್ವರ ಪುತ್ರಿಯರು ಹಾಗೂ ಮೂವರು ಪುತ್ರರಲ್ಲಿ ಸೋಮಶೇಖರ ಬಸಲಿಂಗಯ್ಯ ಶಿವಾಚಾರ್ಯರು ಮೂರನೇ ಪುತ್ರರಾಗಿದ್ದರು. ಬಾಲ್ಯದ ದಿನಗಳಿಂದ ಮೊರಬ ಗ್ರಾಮದ ಜಡಿಮಠದ ಪರಂಪರೆಯಲ್ಲಿ ಬೆಳೆದರು. ನಂತರ ಅವರು, ಜಡಿಮಠದ ಪೀಠಾಧೀಶರಾಗಿ ಮಠದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ಭಕ್ತರಿಗೆ ಪ್ರವಚನ ಹೇಳುವ ಮೂಲಕ ಮಠದ ಪರಂಪರೆ ಪೋಷಿಸಿದರು.

### ಪತ್ರಕರ್ತ ಪಿ.ಎಂ ಮಣ್ಣೂರ



**ಕಲಬುರಗಿ:** ಜಿಲ್ಲೆಯ ಹಿರಿಯ ಪತ್ರಕರ್ತ, ಸಾಹಿತಿ ಹಾಗೂ ಮಹಾನಗರ ಪಾಲಿಕೆಯ ಮಾಜಿ ಸದಸ್ಯ ಪಂಚಪ್ಪ ಎಂ. ಮಣ್ಣೂರ (78) ಶುಕ್ರವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೂಲತಃ ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದ ಪಿ.ಎಂ. ಮಣ್ಣೂರ ಅವರು ದಶಕಗಳಿಂದ ಕಲಬುರಗಿಯಲ್ಲಿ ನೆಲೆಸಿದ್ದರು.

ಸತ್ಯಕಾಮ ಪತ್ರಿಕೆಯ ಸಂಪಾದಕರಾಗಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದಿದ್ದರು.

1994ರಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾಗಿದ್ದರು. 371 (ಜೆ) ಹೋರಾಟದಲ್ಲಿ ಮಾಜಿ ಸಚಿವ ದಿ. ವೈಜನಾಥ ಪಾಟೀಲ ನೇತೃತ್ವದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಶನಿವಾರ ಬೆಳಿಗ್ಗೆ 11ಕ್ಕೆ ಕಲಬುರಗಿಯ ಗಂಜ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

## ಬೆಂಗಳೂರು, ಹೈದರಬಾದ್‌ನಲ್ಲಿ ಐಟಿ ದಾಳಿ: ₹42 ಕೋಟಿ ಜಪ್ತಿ

ಒಂದನೇ ಪುಟದಿಂದ...

'ಇತರ ಗುತ್ತಿಗೆದಾರರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ನಡೆಸಿದ ಶೋಧದಲ್ಲಿ ₹7 ಕೋಟಿ ಸಿಕ್ಕಿದೆ. ಒಟ್ಟು ₹42 ಕೋಟಿ ನಗದು ಜಪ್ತಿ ಮಾಡಲಾಗಿದೆ' ಎಂದಿವೆ.

'ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಈ ಶೋಧಗಳನ್ನು ಮಾಡಲಾಗಿದೆ. ನಗದು ಜೊತೆಯಲ್ಲಿ ಹಲವು ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಅವುಗಳ ಪರಿಶೀಲನೆ ನಡೆಸಲಾಗುತ್ತಿದೆ. ಹಲವು ಗುತ್ತಿಗೆದಾರರ ಮನೆಗಳಲ್ಲಿ ಶನಿವಾರವೂ ಶೋಧ ಮುಂದುವರಿಯಲಿದೆ ' ಎಂದು ಮೂಲಗಳು ತಿಳಿಸಿವೆ.

### 21 ರಟ್ಟಿನ ಪೆಟ್ಟಿಗೆಗಳಲ್ಲಿ ₹20 ಕೋಟಿ

ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರೂ ಆಗಿರುವ ಅಂಬಿಕಾಪತಿ ಹಾಗೂ ಕುಟುಂಬಸ್ಥರ ಮನೆಗಳಲ್ಲಿ ಐಟಿ ಅಧಿಕಾರಿಗಳು ಏಕಕಾಲದಲ್ಲಿ ಗುರುವಾರ ಶೋಧ ಮಾಡಿದರು. ಅಂಬಿಕಾಪತಿ–ಪತ್ನಿ ಅಶ್ವತಮ್ಮ ವಾಸವಿರುವ ಮಾನ್ಯತಾ ಟೆಕ್‌ಪಾರ್ಕ್ ಬಳಿಯ ಮನೆ, ಮಗ ಪ್ರದೀಪ್ ವಾಸವಿರುವ ಆರ್.ಟಿ.ನಗರ ಸುಲ್ತಾನ್‌ಪಾಳ್ಯದಲ್ಲಿರುವ ಮನೆ, ಇನ್ನೊಬ್ಬ ಮಗನ ಮನೆ ಹಾಗೂ ಇತರೆ ಸ್ಥಳಗಳಲ್ಲಿ ಐಟಿ ಅಧಿಕಾರಿಗಳು ಶೋಧ ನಡೆಸಿದರು.

ಮಗ ಪ್ರದೀಪ್ ಮನೆಯ ಎಲ್ಲ ಕಡೆ ತಪಾಸಣೆ ನಡೆಸಿದ ಐಟಿ ಅಧಿಕಾರಿಗಳು, ಮಂಚದ ಕೆಳಗೆ ಬಚ್ಚಿಟ್ಟಿದ್ದ ರಟ್ಟಿನ 21 ಪೆಟ್ಟಿಗೆಗಳು ಹಾಗೂ 1 ಬ್ಯಾಗ್ ಅನ್ನು ಪತ್ತೆ ಹಚ್ಚಿದ್ದರು. ಪೆಟ್ಟಿಗೆಗಳು ಹಾಗೂ ಬ್ಯಾಗ್‌ನಲ್ಲಿ ₹500 ಮುಖ ಬೆಲೆಯ ನೋಟುಗಳ ಕಂತೆಗಳು ಇದ್ದವು. ಇದೇ ಮನೆಯಲ್ಲಿ ₹20 ಕೋಟಿಯನ್ನು ಅಧಿಕಾರಿಗಳು ವಶಕ್ಕೆ ಪಡೆದರು.

ಡೋಣಿ ಬಸವಣ್ಣ ಕ್ಯಾಂಪ್ ರೈತನ ವಿಶಿಷ್ಟ ಅಭಿಮಾನ

## ಭತ್ತ ಬೆಳೆಯಲ್ಲಿ ಅರಳಿದ ಪುನೀತ್

• ಪಿ. ಕೃಷ್ಣ

**ಸಿರವಾರ (ರಾಯಚೂರು ಜಿಲ್ಲೆ):** ತಾಲ್ಲೂಕಿನ ಡೋಣಿ ಬಸವಣ್ಣ ಕ್ಯಾಂಪ್‌ನ ರೈತ ಕರ್ರಿ ಸತ್ಯನಾರಾಯಣ ಅವರು ತಮ್ಮ ಎರಡು ಎಕರೆ ಜಮೀನಿನಲ್ಲಿ ವಿವಿಧ ತಳಿಯ ಬೀಜ ಬಳಸಿ ಪುನೀತ್ ರಾಜ್‌ಕುಮಾರ್ ಚಿತ್ರದ ಮಾದರಿಯಲ್ಲಿ ಭತ್ತ ಬೆಳೆದು ಎರಡನೇ ಪುಣ್ಯಸ್ಮರಣೆಯನ್ನು ವಿಶೇಷವಾಗಿ ಆಚರಿಸಲು ಮುಂದಾಗಿದ್ದಾರೆ.

ಚಿಕ್ಕಂದಿನಿಂದಲೂ ಪುನೀತ್ ರಾಜ್‌ಕುಮಾರ್ ಅಭಿಮಾನಿಯಾಗಿರುವ ಕರ್ರಿ ಸತ್ಯನಾರಾಯಣ ಅವರು, ಗುಜರಾತ್‌ನಿಂದ ತಂದ ಗೋಲ್ಡನ್ ರೋಸ್ ಹಾಗೂ ಕಾಲಾ ಭಟ್ಟಿ ಕಪ್ಪು ಬಣ್ಣದ ಭತ್ತದ ತಳಿಗಳ ಜತೆಯಲ್ಲಿ ಸ್ಥಳೀಯ ಸೋನಾಮಸೂರಿ ತಳಿಯ 100 ಕೆ.ಜಿ ಭತ್ತದ ಬೀಜ ಬಳಸಿ ಪುನೀತ್ ರಾಜ್‌ಕುಮಾರ್ ಹಾಗೆ ಕಾಣುವಂತೆ ಭತ್ತ ಬೆಳೆದಿದ್ದಾರೆ. ಎತ್ತರಿಂದ ನೋಡಿದಾಗ ಪುನೀತ್ ರಾಜ್‌ಕುಮಾರ್ ಭಾವಚಿತ್ರದಂತೆ ಕಾಣುತ್ತದೆ.

ಮೂರು ತಿಂಗಳ ಭತ್ತದ ಬೆಳೆಯಾಗಿದ್ದು, ಜುಲೈ 17ಕ್ಕೆ ಬೆಳೆಯಲು ಪ್ರಾರಂಭಿಸಿದ್ದಾರೆ. ಇದಕ್ಕಾಗಿ ಕರ್ರಿ ಸತ್ಯನಾರಾಯಣ ₹3 ಲಕ್ಷ ವ್ಯಯಿಸಿದ್ದಾರೆ. ಯೂಟ್ಯೂಬ್ ನೋಡಿ ಈ ಕಲೆ ಕಲಿತಿರುವ ಅವರು, ಹಂತ-ಹಂತವಾಗಿ ಡ್ರೋಣ್ ಕ್ಯಾಮೆರಾ ಹಾರಿಸಿ ಬೆಳೆ ವೀಕ್ಷಿಸಿ, ಅವಶ್ಯವಿರುವ ಕಡೆ ಆಯಾ ಬಣ್ಣದ ಭತ್ತ ಕತ್ತರಿಸಿ ಚಿತ್ರ ಕಾಣುವಂತೆ ಮಾಡಿದ್ದಾರೆ. ಕಾಲುವೆ ನೀರಿನ ಕೊರತೆಯ ನಡುವೆಯೂ ಟ್ಯಾಂಕರ್ ನೀರು ಹಾಕಿ ಭತ್ತದ ಬೆಳೆ ಉಳಿಸಿಕೊಂಡು ಅಭಿಮಾನ ಮೆರೆದಿದ್ದಾರೆ.

**ಚಿತ್ರದ ಅಳತೆ:** ಮುಖದ ಭಾಗವೊಂದೇ 140 ಅಡಿ ಉದ್ದ ಹಾಗೂ 40 ಅಡಿ ಅಗಲವಿದೆ. ಒಂದೊಂದು ಕಣ್ಣು 10 ಅಡಿ ಅಗಲವಿದೆ. ಚಿತ್ರದಲ್ಲಿನ 'ಕರ್ನಾಟಕ ರತ್ನ' ಎನ್ನುವ ವಾಕ್ಯವೇ 10X40 ಅಡಿಯಿದೆ. ಒಟ್ಟು 6 ಎಕರೆ ಜಮೀನಿನಲ್ಲಿ ಇದಕ್ಕಾಗಿ 2 ಎಕರೆ ಬಳಸಿಕೊಂಡಿದ್ದಾರೆ.


ಸಿರವಾರ ತಾಲ್ಲೂಕಿನ ಡೋಣಿ ಬಸವಣ್ಣ ಕ್ಯಾಂಪಿನ ರೈತ ಕರ್ರಿ ಸತ್ಯನಾರಾಯಣ ಅವರು ತಮ್ಮ ಭತ್ತದ ಗದ್ದೆಯಲ್ಲಿ ಪುನೀತ್ ರಾಜ್‌ಕುಮಾರ್ ಚಿತ್ರ ಕಾಣುವಂತೆ ಭತ್ತದ ಬೆಳೆ ಬೆಳೆದಿದ್ದಾರೆ

**ಪುನೀತ್ ರಾಜ್‌ಕುಮಾರ್ 2ನೇ ಪುಣ್ಯ ಸ್ಮರಣೆಯನ್ನು ವಿಭಿನ್ನವಾಗಿ ಆಚರಿಸಲು 'ರೈಸ್ ಪ್ಯಾಡಿ ಆರ್ಟ್' ಬಳಸಿಕೊಂಡಿದ್ದೇನೆ. ರಾಜ್‌ಕುಮಾರ್ ಕುಟುಂಬಕ್ಕೆ ಚಿತ್ರ ತೋರಿಸಿದ್ದು, ಹರ್ಷ ವ್ಯಕ್ತಪಡಿಸಿದ್ದಾರೆ**
**ಕರ್ರಿ ಸತ್ಯನಾರಾಯಣ,** ರೈತ

# ‘ಹಿಂದುತ್ವ’ಕ್ಕೆ ಪ್ರತಿಯಾಗಿ ವಿರೋಧಪಕ್ಷಗಳ ಜಾತಿಗಣತಿ ಅಸ್ತ್ರ

• ಮಂಜುನಾಥ ಹೆಬ್ಬಾರ್

ಸುದ್ದಿ ವಿಶ್ಲೇಷಣೆ

**ನವದೆಹಲಿ:** ನವೆಂಬರ್‌ನಲ್ಲಿ ಚುನಾವಣೆ ನಡೆಯಲಿರುವ ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಜಾತಿ ರಾಜಕಾರಣದ ಬಿಸಿ ಏರುತ್ತಿದೆ. ಚುನಾವಣೆ ಘೋಷಣೆಯ ಬೆನ್ನಲ್ಲೇ, ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು ಎಂದು ‘ಕೈ’ ಪಾಳಯ ದಾಳ ಉರುಳಿಸಿದೆ. ಈ ವಿಷಯದಲ್ಲಿ ಕಮಲ ಪಾಳಯ ಇಕ್ಕಟ್ಟಿನಲ್ಲಿ ಸಿಲುಕಿದೆ.

ಲೋಕಸಭೆ ಹಾಗೂ ಐದು ರಾಜ್ಯಗಳ ಚುನಾವಣೆಗಳಲ್ಲಿ ಮಹಿಳಾ ಮತದಾರರನ್ನು ಸೆಳೆಯುವ ಉದ್ದೇಶದಿಂದ ಬಿಜೆಪಿಯು ಮಹಿಳಾ ಮೀಸಲಾತಿ ಮಸೂದೆಯನ್ನು ತಂದಿತು. ಮಸೂದೆ ಅಂಗೀಕಾರಕ್ಕೆ ಸಂಪೂರ್ಣ ಬೆಂಬಲ ನೀಡಿದ ಕಾಂಗ್ರೆಸ್, ಇತರ ಹಿಂದುಳಿದ ವರ್ಗದ (ಒಬಿಸಿ) ಮಹಿಳೆಯರಿಗೆ ಒಳ ಮೀಸಲಾತಿ ನೀಡಬೇಕು ಎಂದು ಧ್ವನಿ ಎತ್ತಿತು. ಅದೇ ಹೊತ್ತಿಗೆ ಬಿಹಾರದಲ್ಲಿ ಜಾತಿ ಗಣತಿಯ ವರದಿಯನ್ನು ಬಿಡುಗಡೆ ಮಾಡಲಾಯಿತು. ಈ ವರದಿಯ ಪ್ರಕಾರ, ಬಿಹಾರದಲ್ಲಿ ಇತರ ಹಿಂದುಳಿದ ವರ್ಗಗಳು ಮತ್ತು ಅತ್ಯಂತ ಹಿಂದುಳಿದ ವರ್ಗಗಳು (ಇಬಿಸಿ) ಒಟ್ಟು ಜನಸಂಖ್ಯೆಯ ಶೇಕಡ 63ರಷ್ಟಿವೆ.

ಈ ವರದಿ ಬಹಿರಂಗಗೊಂಡ ಕೂಡಲೇ, ‘ಇಂಡಿಯಾ’ ಮೈತ್ರಿಕೂಟ ಚುರುಕಾಯಿತು. ಒಬಿಸಿ ಮತಗಳ ಮೇಲೆ ಕಣ್ಣಿಟ್ಟು ಕಾಂಗ್ರೆಸ್ ಹಾಗೂ ಮೈತ್ರಿಕೂಟದ ಹಲವು ಪಕ್ಷಗಳು, ರಾಷ್ಟ್ರ ಮಟ್ಟದಲ್ಲಿ ಜಾತಿಗಣತಿ ನಡೆಸಬೇಕು ಎಂದು ಪಟ್ಟು ಹಿಡಿದಿವೆ. ಮಧ್ಯಪ್ರದೇಶ ಹಾಗೂ ರಾಜಸ್ಥಾನದಲ್ಲಿ ಬಿಜೆಪಿ ಬಿತ್ತಿರುವ ಹಿಂದುತ್ವದ ಬೇರುಗಳು ಆಳವಾಗಿ ಬೇರೂರಿವೆ. ಕೇಸರಿ ಪಡೆಯ ಹಿಂದುತ್ವದ ಸಮೀಕರಣಕ್ಕೆ ಪ್ರತಿಯಾಗಿ ಒಬಿಸಿ ರಾಜಕಾರಣದ ಹೊಸ ಸಮೀಕರಣವನ್ನು ಮುನ್ನೆಲೆಗೆ ತರಲು ವಿಪಕ್ಷಗಳ ಕೂಟ ಹೆಜ್ಜೆ ಇಟ್ಟಿದೆ. ಬಿಜೆಪಿಯು ಜಾತಿ ಗಣತಿಯ ಪರವಾದ ನಿಲುವು ತಳೆದಿಲ್ಲ. ಜಾತಿ ಸಮೀಕ್ಷೆಗಳು ಜಾತಿಗಳ ನಡುವೆ ಮತ್ತಷ್ಟು ವಿಭಜನೆ ಉಂಟುಮಾಡಲಿವೆ ಎಂದು ಬಿಜೆಪಿ ನಾಯಕರು ರ‍್ಯಾಲಿಗಳಲ್ಲಿ ‘ಪ್ರಚಾರ’ ಮಾಡಲಾರಂಭಿಸಿದ್ದಾರೆ. ಐದು ರಾಜ್ಯಗಳ ಕಣದಲ್ಲಿ ‘ಜಾತಿ ಗಣತಿ’ಯೇ ಪ್ರಮುಖ ಚುನಾವಣಾ ವಿಷಯವಾಗುವ ಸಾಧ್ಯತೆ ಇದೆ.

ಒಬಿಸಿ ಮತಗಳನ್ನು ಹಿಡಿದಿಟ್ಟುಕೊಳ್ಳಲು ಚುನಾವಣೆ ಘೋಷಣೆಗೆ ಕೆಲವು ತಿಂಗಳುಗಳ ಮೊದಲು ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಛತ್ತೀಸಗಢ ರಾಜ್ಯಗಳ ಸರ್ಕಾರಗಳು ಹಲವು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಿದವು. ಮಧ್ಯಪ್ರದೇಶದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಬಿಜೆಪಿ ಸರ್ಕಾರವು ಕುರ್ಮಿ, ತೇಲಿ, ವಿಶ್ವಕರ್ಮ ಸೇರಿದಂತೆ ಒಂಬತ್ತು ಸಮುದಾಯಗಳಿಗೆ ‘ಕಲ್ಯಾಣ’ ಮಂಡಳಿಗಳನ್ನು ಆರಂಭಿಸಿತು. ರಾಜಸ್ಥಾನದಲ್ಲಿ ಅಶೋಕ ಗೆಹಲೋತ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಮೆಹಗ್ವಾಲ್, ಢಂಕಾ ಸೇರಿದಂತೆ ಒಬಿಸಿ ಸಮುದಾಯಗಳಿಗೆ ಎಂಟು ಕಲ್ಯಾಣ ಮಂಡಳಿಗಳ ಸ್ಥಾಪನೆಗೆ ಅನುಮೋದನೆ ನೀಡಿತು. ಛತ್ತೀಸಗಢದ ಭೂಪೇಶ್ ಬಘೇಲ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ವಿಷಯದಲ್ಲಿ ಹಿಂದೆ ಬೀಳಲಿಲ್ಲ. ಅಲ್ಲಿನ ಸರ್ಕಾರ ಒಬಿಸಿಗಳಿಗೆ ನಾಲ್ಕು ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಿತು.

ಹೆಚ್ಚಿನ ಮೀಸಲಾತಿ ಹಾಗೂ ಜಾತಿ ಗಣತಿ ನಡೆಸಬೇಕು ಎಂದು ಆಗ್ರಹಿಸಿ ಹಲವು ಜಾತಿ ಗುಂಪುಗಳು ರಾಜಸ್ಥಾನದಲ್ಲಿ ಕೆಲವು ತಿಂಗಳುಗಳಿಂದ ‘ಮಹಾ’ ಸಭೆಗಳನ್ನು ನಡೆಸಿ ಶಕ್ತಿ ಪ್ರದರ್ಶನ ಮಾಡಿದ್ದವು. ಐದು ರಾಜ್ಯಗಳಿಗೆ ಚುನಾವಣೆ ಘೋಷಣೆಯಾಗುವ ಎರಡು ದಿನಗಳ ಮುನ್ನ (ಅಕ್ಟೋಬರ್ 7) ರಾಜಸ್ಥಾನ ಸರ್ಕಾರವು ಜಾತಿ ಸಮೀಕ್ಷೆ ನಡೆಸಲು ಆದೇಶಿಸಿತು. ಕಳೆದ ವಾರ ಚುನಾವಣಾ ಪ್ರಚಾರದ ವೇಳೆ, ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಧ್ಯಪ್ರದೇಶ ಹಾಗೂ ಛತ್ತೀಸಗಢದಲ್ಲಿ ಜಾತಿ ಗಣತಿ ನಡೆಸುವುದಾಗಿ ಪ್ರಕಟಿಸಿದ್ದಾರೆ.

ಛತ್ತೀಸಗಢವನ್ನು ಜನರು ಗುರುತಿಸುವುದು ಬುಡಕಟ್ಟು ರಾಜ್ಯವೆಂದು. ಆದರೆ, ರಾಜ್ಯದಲ್ಲಿ ಬುಡಕಟ್ಟು ಜನಸಂಖ್ಯೆಗಿಂತ (ಶೇ 34.5) ಒಬಿಸಿಗಳ ಜನಸಂಖ್ಯೆ (ಶೇ 43.5) ಜಾಸ್ತಿ ಇದೆ. ಬಘೇಲ್ ಅವರು ರಾಜ್ಯದ ಮೊದಲ ಒಬಿಸಿ ಮುಖ್ಯಮಂತ್ರಿಯೂ ಹೌದು. ಒಬಿಸಿ ಮತಗಳನ್ನು ಸೆಳೆಯಲು ಅವರು ಅಧಿಕಾರದ ಅವಧಿಯಲ್ಲಿ ಹಲವಾರು ಯೋಜನೆಗಳನ್ನು ಜಾರಿ ಮಾಡಿದರು. ರಾಜ್ಯದಲ್ಲಿ ಒಬಿಸಿ ಮೀಸಲಾತಿಯನ್ನು ಶೇ 14ರಿಂದ ಶೇ 27ಕ್ಕೆ ಹೆಚ್ಚಿಸಲು ಹಾಗೂ ಪರಿಶಿಷ್ಟ ಜಾತಿಯ (ಎಸ್‌ಸಿ) ಮೀಸಲಾತಿಯನ್ನು ಶೇ 12ರಿಂದ ಶೇ 13ಕ್ಕೆ ಹೆಚ್ಚಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು 2022ರಲ್ಲಿ ಎರಡು ಮಸೂದೆಗಳನ್ನು ವಿಧಾನಸಭೆಯಲ್ಲಿ ಮಂಡಿಸಿತು. ವಿಧಾನಸಭೆ ಅಂಗೀಕರಿಸಿದ ಈ ಮಸೂದೆಗಳಿಗೆ ರಾಜ್ಯಪಾಲರ ಸಹಿ ಬಿದ್ದಿಲ್ಲ.

ಕಾಂಗ್ರೆಸ್‌ನ ತಂತ್ರಗಳಿಗೆ ಪ್ರತಿ ತಂತ್ರ ಹೆಣೆಯುವ ಕೆಲಸವನ್ನು ಬಿಜೆಪಿ ಮಾಡಿದೆ. ಒಬಿಸಿ ಸಮುದಾಯದ ಮುಖಂಡ ಅರುಣ್ ಸಾವೋ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ 2022ರಲ್ಲಿ ನೇಮಿಸಿತು. ವಿಧಾನಸಭೆಯ ಚುನಾವಣೆಗೆ 85 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಪಕ್ಷ ಅಖೈರುಗೊಳಿಸಿದೆ. ಅದರಲ್ಲಿ 29 ಮಂದಿ ಒಬಿಸಿಯವರು. 2018ರಲ್ಲಿ ಪಕ್ಷವು 28 ಒಬಿಸಿ ನಾಯಕರನ್ನು ಕಣಕ್ಕೆ ಇಳಿಸಿತ್ತು.

### ಒಬಿಸಿಗಳ ಸಂಖ್ಯೆ ಎಷ್ಟು?

ಛತ್ತೀಸಗಢದಲ್ಲಿ ಒಬಿಸಿ ಜನಸಂಖ್ಯೆ ಶೇ 43.5ರಷ್ಟು ಇದೆ. 2022ರಲ್ಲಿ ಛತ್ತೀಸಗಢ ಸರ್ಕಾರ ನಡೆಸಿರುವ ಒಬಿಸಿ ಸಮೀಕ್ಷೆಯಿಂದ ಈ ಅಂಶ ಗೊತ್ತಾಗಿದೆ. ಹಿಂದುಳಿದ ವರ್ಗಗಳ ಆಯೋಗದ ಪ್ರಕಾರ ಮಧ್ಯಪ್ರದೇಶದಲ್ಲಿ ಒಬಿಸಿ ಜನಸಂಖ್ಯೆ ಶೇ 48ರಷ್ಟಿದೆ. ರಾಜಸ್ಥಾನದಲ್ಲಿ ಇತರ ಹಿಂದುಳಿದ ವರ್ಗದವರು ಶೇ 42ರಷ್ಟು ಇದ್ದಾರೆ.

---

ಮಧ್ಯಪ್ರದೇಶ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಪ್ರಮುಖ ನಾಯಕರ ಸಭೆ

# ‘ಕೈ’ ಅಭ್ಯರ್ಥಿಗಳ ಪಟ್ಟಿ ನಾಳೆ ಬಿಡುಗಡೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮಧ್ಯಪ್ರದೇಶ ವಿಧಾನಸಭೆ ಚುನಾವಣೆಗೆ 130 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕಾಂಗ್ರೆಸ್ ಭಾನುವಾರ ಬಿಡುಗಡೆ ಮಾಡಲಿದೆ.

ಗೆಲ್ಲುವ ಅಭ್ಯರ್ಥಿಗಳ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಯು (ಸಿಇಸಿ) ಸಿದ್ಧಪಡಿಸುತ್ತಿದೆ. ಅಭ್ಯರ್ಥಿಗಳ ಆಯ್ಕೆ ಸಂಬಂಧ ಶುಕ್ರವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಪ್ರಮುಖ ನಾಯಕರ ಸಭೆ ನಡೆಯಿತು. ಸಂಸದ ರಾಹುಲ್ ಗಾಂಧಿ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್‌ನಾಥ್ ಭಾಗವಹಿಸಿದ್ದರು.

ಪಕ್ಷವು 230 ಸ್ಥಾನಗಳ ಪೈಕಿ ಸುಮಾರು 60ಕ್ಕೆ ಅಭ್ಯರ್ಥಿಗಳ ಬಗ್ಗೆ ಚರ್ಚೆ ನಡೆಸಿದೆ. ಮುಂದಿನ ದಿನಗಳಲ್ಲಿ ರಾಜ್ಯ ‘ಸ್ಕ್ರೀನಿಂಗ್ ಸಮಿತಿ’ ಮತ್ತು ಸಿಇಸಿ ಸಭೆಗಳು ನಡೆಯಲಿವೆ.

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕಮಲ್ ನಾಥ್, ‘ಅ.15ರಂದು ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಲಾಗುವುದು. ಈ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲಾಗಿದೆ’ ಎಂದರು.



ಗೋವಿಂದಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೃಷ್ಣ ಗೌರ್ ಅವರ ಪರವಾಗಿ ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭೋಪಾಲ್‌ನಲ್ಲಿ ರೋಡ್ ಶೋ ನಡೆಸಿದರು. ಪಿಟಿಐ ಚಿತ್ರ

ಮಧ್ಯಪ್ರದೇಶದ ಮಂಡ್ಲಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಮಾಸಿಕ ವಿದ್ಯಾರ್ಥಿ ವೇತನದೊಂದಿಗೆ ಹನ್ನೆರಡನೇ ತರಗತಿವರೆಗೆ ಉಚಿತ ಶಿಕ್ಷಣ ಸೇರಿದಂತೆ ಹಲವುಭರವಸೆಗಳನ್ನುಘೋಷಿಸಿದ್ದಾರೆ.

ಉಚಿತ ಶಿಕ್ಷಣದ ಯೋಜನೆ ಸುಳ್ಳು ಭರವಸೆ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಕಮಲ್ ನಾಥ್, ‘ಬಿಜೆಪಿಯ ಸಾವಿರ ಸುಳ್ಳು ಘೋಷಣೆಗಳನ್ನು ಈಡೇರಿಸಲಾಗಿಲ್ಲ ಎಂದು ಮಧ್ಯಪ್ರದೇಶದ ಜನರು ಅರ್ಥ ಮಾಡಿಕೊಂಡಿದ್ದಾರೆ. ಅವರ ಬಗ್ಗೆ ಜನ ಅಸಮಾಧಾನಗೊಂಡಿದ್ದಾರೆ. ಬಿಜೆಪಿಯ ಸುಳ್ಳು ಭರವಸೆಗಳಿಂದ ಜನರು ಬೇಸತ್ತಿದ್ದಾರೆ’ ಎಂದರು.

‘ಐದು ಸಮೀಕ್ಷೆಗಳ ಆಧಾರದ ಮೇಲೆ 230 ಸ್ಥಾನಗಳಿಗೆ ಅಭ್ಯರ್ಥಿಗಳ ಹೆಸರನ್ನು ಘೋಷಿಸಲು ಕಾಂಗ್ರೆಸ್ ಯೋಜಿಸಿದೆ ಎಂದು ಕಮಲ್ ನಾಥ್ ಆಪ್ತ ನಾಯಕರೊಬ್ಬರು ಹೇಳಿದರು. ಈ ಸಮೀಕ್ಷೆಗಳಲ್ಲಿ ಒಂದನ್ನು ರಾಹುಲ್ ಗಾಂಧಿ ಪರವಾಗಿ ಚುನಾವಣಾ ತಂತ್ರಗಾರ ಸುನಿಲ್ ಕನುಗೋಲು ನಡೆಸಿದರೆ, ಕಮಲ್‌ನಾಥ್ ಮತ್ತೊಂದು ಸಮೀಕ್ಷೆ ನೋಡಿಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ’ ಎಂದು ಪಿಟಿಐ ಸುದ್ದಿಸಂಸ್ಥೆ ತಿಳಿಸಿದೆ.

ಕಾಂಗ್ರೆಸ್ ತನ್ನ ಮೊದಲ ಪಟ್ಟಿಯಲ್ಲಿ 15 ಮಾಜಿ ಶಾಸಕರು ಮತ್ತು ಸುಮಾರು 90 ಹಾಲಿ ಶಾಸಕರ ಹೆಸರುಗಳನ್ನು ಅಖೈರುಗೊಳಿಸಿದೆ ಎಂದು ಪಕ್ಷದ ಆಂತರಿಕ ಮೂಲಗಳು ತಿಳಿಸಿವೆ. ಕಮಲ್‌ನಾಥ್ ಅವರು ಬರೋಚಿದ್‌ವಾಡಾದಿಂದ ಸ್ಪರ್ಧಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಣದೀಪ್ ಸಿಂಗ್ ಸುರ್ಜೇವಾಲಾ, ‘ಸಿಇಸಿ ಸಭೆಯಲ್ಲಿ ಅನೇಕ ಸ್ಥಾನಗಳ ಬಗ್ಗೆ ಸಕಾರಾತ್ಮಕ ಚರ್ಚೆಗಳು ನಡೆದವು. ಮಧ್ಯಪ್ರದೇಶದಲ್ಲಿ ಪ್ರತಿದಿನ ಭ್ರಷ್ಟಾಚಾರ, ಹಗರಣಗಳು ಬೆಳಕಿಗೆ ಬರುತ್ತಿವೆ. ಈಗಲೂ ₹ 10 ಕೋಟಿಗಳ ಬುಡಕಟ್ಟು ಹಗರಣ ಬೆಳಕಿಗೆ ಬಂದಿದೆ. ಲೆಕ್ಕಪರಿಶೋಧನಾ ವರದಿಗಳು ಇದನ್ನು ಹೇಳುತ್ತಿವೆ’ ಎಂದು ಅವರು ಆರೋಪಿಸಿದರು.

### ಸುಳ್ಳು ಘೋಷಣೆ ಮಾಡಲು ಪ್ರಿಯಾಂಕಾಗೆ ಒತ್ತಾಯ: ಚೌಹಾಣ್

**ಭೋಪಾಲ್ (ಪಿಟಿಐ):** ‘ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಕಮಲ್ ನಾಥ್ ಅವರು ಸುಳ್ಳು ಘೋಷಣೆಗಳನ್ನು ಮಾಡುವಂತೆ ಒತ್ತಾಯಿಸುವ ಮೂಲಕ ಗಾಂಧಿ ಕುಟುಂಬಕ್ಕೆ ಮೋಸ ಮಾಡುತ್ತಿದ್ದಾರೆ’ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಆರೋಪಿಸಿದರು.

ಬುಡಕಟ್ಟು ಪ್ರಾಬಲ್ಯದ ಮಂಡ್ಲಾ ಜಿಲ್ಲೆಯಲ್ಲಿ ಗುರುವಾರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ಸಾರ್ವಜನಿಕ ಭಾಷಣವನ್ನು ಉಲ್ಲೇಖಿಸಿದ ಚೌಹಾಣ್, ‘ಈ ಹಿಂದೆ ಗಾಂಧಿ ಕುಟುಂಬ ಎಲ್ಲರಿಗೂ ಮೋಸ ಮಾಡಿತ್ತು. ಆದರೆ, ಕಮಲ್‌ನಾಥ್ ಈಗ ಗಾಂಧಿ ಕುಟುಂಬಕ್ಕೆ ಮೋಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

### ಛತ್ತೀಸಗಢ: ಎಎಪಿ ಪಟ್ಟಿ ಬಿಡುಗಡೆ

**ರಾಯಪುರ (ಪಿಟಿಐ):** ಛತ್ತೀಸಗಢ ವಿಧಾನಸಭಾ ಚುನಾವಣೆಗೆ 11 ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಎಎಪಿ ಬಿಡುಗಡೆ ಮಾಡಿದೆ.

ಕಾಂಗ್ರೆಸ್ ಆಡಳಿತದ ರಾಜ್ಯದಲ್ಲಿ ಎಎಪಿ ಒಟ್ಟಾರೆ 33 ಅಭ್ಯರ್ಥಿಗಳ ಹೆಸರನ್ನು ಬಿಡುಗಡೆ ಮಾಡಿದೆ. 90 ಸದಸ್ಯ ಬಲದ ವಿಧಾನಸಭೆಗೆ ನ. 7 ಮತ್ತು 17 ರಂದು ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ.

### ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ

**ಹೈದರಾಬಾದ್ (ಪಿಟಿಐ):** ತೆಲಂಗಾಣ ವಿಧಾನಸಭೆ ಚುನಾವಣೆಗೂ ಮುನ್ನ ಪ್ರದೇಶ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ಪೊನ್ನಲ ಲಕ್ಷ್ಮಯ್ಯ ಅವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಪತ್ರ ಬರೆದಿರುವ ಲಕ್ಷ್ಮಯ್ಯ, ‘ಭಾರವಾದ ಹೃದಯದಿಂದ ಪಕ್ಷದೊಂದಿಗಿನ ನನ್ನ ಒಡನಾಟ ನಿಲ್ಲಿಸುವ ನಿರ್ಧಾರ ಘೋಷಿಸುತ್ತಿದ್ದೇನೆ. ಹಿಂದುಳಿದ ವರ್ಗಗಳಿಗೆ ಆದ್ಯತೆ ನೀಡುವಂತೆ ಕೋರಿ ತೆಲಂಗಾಣದ 50 ಹಿಂದುಳಿದ ವರ್ಗಗಳ ನಾಯಕರ ಗುಂಪು ದೆಹಲಿಗೆ ಬಂದಾಗ, ಎಐಸಿಸಿ ನಾಯಕರೊಂದಿಗೆ ಸಭೆ ನಿರಾಕರಿಸಲಾಯಿತು. ಇದು ರಾಜ್ಯಕ್ಕೆ ಮುಜುಗರವನ್ನುಂಟು ಮಾಡಿದೆ’ ಎಂದು ಆರೋಪಿಸಿದ್ದಾರೆ.

### ‘ತೆಲಂಗಾಣ ಚುನಾವಣೆಗೆ ಕರ್ನಾಟಕ ಹಣ’

**ಹೈದರಾಬಾದ್ (ಪಿಟಿಐ):** ವಿಧಾನಸಭಾ ಚುನಾವಣೆಯಲ್ಲಿ ಮತಗಳನ್ನು ಖರೀದಿಸಲು ಕಾಂಗ್ರೆಸ್ ತೆಲಂಗಾಣಕ್ಕೆ ಕೋಟ್ಯಂತರ ರೂಪಾಯಿಗಳನ್ನು ಸುರಿಯುತ್ತಿದೆ ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ. ರಾಮರಾವ್ ಶುಕ್ರವಾರ ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ಆದಾಯ ತೆರಿಗೆ ದಾಳಿ ವೇಳೆ ₹40 ಕೋಟಿಗೂ ಅಧಿಕ ನಗದು ಪತ್ತೆಯಾಗಿದೆ ಎಂಬ ವರದಿಯನ್ನು ರಾಮರಾವ್ ಟ್ಯಾಗ್ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಟಿ.ಹರೀಶ್ ರಾವ್, ‘ಕರ್ನಾಟಕದಲ್ಲಿ ಹಿಂದೆ 40 ಪರ್ಸೆಂಟ್ ಸರ್ಕಾರ ಇತ್ತು. ಈಗಿನದು 50 ಪರ್ಸೆಂಟ್ ಸರ್ಕಾರ. ಕರ್ನಾಟಕ ಸರ್ಕಾರ ಭ್ರಷ್ಟವಾಗಿದ್ದು, ಆ ಹಣವನ್ನು ತೆಲಂಗಾಣ ಚುನಾವಣೆಯಲ್ಲಿ ಬಳಕೆ ಮಾಡಲು ಪ್ರಯತ್ನಿಸುತ್ತಿದೆ’ ಎಂದು ಆರೋಪಿಸಿದರು.

---


ಇಸ್ರೇಲ್–ಹಮಾಸ್ ಸಮರ

ಜನರ ಸ್ಥಳಾಂತರಿಸುತ್ತಿದ್ದ ಬೆಂಗಾವಲು ವಾಹನಗಳ ಮೇಲೆ ವೈಮಾನಿಕ ದಾಳಿ • 70 ನಾಗರಿಕರ ಸಾವು– ಹಮಾಸ್

# ಗಾಜಾ ಮೇಲೆ ಭೂದಾಳಿ ಆರಂಭಿಸಿದ ಇಸ್ರೇಲ್

**ಜೆರುಸಲೇಂ (ಎಪಿ/ರಾಯಿಟರ್ಸ್):** ಹಮಾಸ್ ಬಂಡುಕೋರರನ್ನು ಸದೆಬಡಿಯಲು ಗಾಜಾ ನಗರದ ಮೇಲೆ ಭೂಸೇನೆ ಮೂಲಕ ದಾಳಿ ನಡೆಸುವ ಸಲುವಾಗಿ ನಗರದ ಉತ್ತರ ಭಾಗವನ್ನು ತೊರೆಯುವಂತೆ ನಾಗರಿಕರಿಗೆ ಇಸ್ರೇಲ್ ಸೇನೆಯು, ಶುಕ್ರವಾರ ನೀಡಿದ್ದ 24 ತಾಸುಗಳ ಗಡುವಿನ ಮೊದಲೇ ದಾಳಿ ಆರಂಭಿಸಿದೆ.

ಗಾಜಾ ಪಟ್ಟಿಯೊಳಗೆ ಭೂಸೇನೆಯು ಕಾರ್ಯಾಚರಣೆಗೆ ಇಳಿದಿದೆ ಎಂದು ಇಸ್ರೇಲ್ ಸೇನೆ ಮೊದಲ ಬಾರಿಗೆ ಹೇಳಿದೆ.

‘ಸೇನೆಯು ಹಮಾಸ್ ವಿರುದ್ಧ ಹೋರಾಡಲು, ಶಸ್ತ್ರಾಸ್ತ್ರ ನಾಶಪಡಿಸಲು ಮತ್ತು ಉಗ್ರರು ಒತ್ತೆ ಇರಿಸಿಕೊಂಡಿರುವ ನಾಗರಿಕರ ಪತ್ತೆ ಮತ್ತು ರಕ್ಷಣಾ ಕಾರ್ಯಾಚರಣೆಗಾಗಿ ಗಾಜಾ ಪ್ರವೇಶಿಸಿದೆ. ಶುಕ್ರವಾರ ಗಾಜಾ ಮೇಲೆ ಸಣ್ಣ ದಾಳಿಗಳನ್ನು ನಡೆಸಲಾಗಿದೆ’ ಎಂದು ಅದು ಹೇಳಿಕೆ ಬಿಡುಗಡೆ ಮಾಡಿದೆ. ಇಸ್ರೇಲ್–ಹಮಾಸ್ ನಡುವಿನ ಸಂಘರ್ಷದಲ್ಲಿ ಈವರೆಗೂ 2,800ಕ್ಕೂ ಹೆಚ್ಚು ಜನರು ಹತರಾಗಿದ್ದಾರೆ.

**70 ಜನರ ಸಾವು:** ಗಾಜಾ ನಗರದಿಂದ ಜನರನ್ನು ಸ್ಥಳಾಂತರಿಸುತ್ತಿದ್ದ ಬೆಂಗಾವಲು ವಾಹನಗಳ ಮೇಲೆ ಇಸ್ರೇಲ್ ಶುಕ್ರವಾರ ನಡೆಸಿದ ವಾಯು ದಾಳಿಯಲ್ಲಿ ಸುಮಾರು 70 ಜನರು ಮೃತಪಟ್ಟಿದ್ದಾರೆ. ಮೃತರೆಲ್ಲರೂ ಬಹುಶಃ ಮಹಿಳೆಯರು ಮತ್ತು ಮಕ್ಕಳು ಎಂದು ಹಮಾಸ್ ಬಂಡುಕೋರರ ಮುಖಂಡರು ಹೇಳಿದ್ದಾರೆ.

ಗಾಜಾ ನಗರದ ಉತ್ತರ ಭಾಗದಿಂದ ದಕ್ಷಿಣಕ್ಕೆ ತೆರಳುತ್ತಿದ್ದ ಕಾರುಗಳು ಮೂರು ಸ್ಥಳಗಳಲ್ಲಿ ವೈಮಾನಿಕ ದಾಳಿಗೆ ತುತ್ತಾದವು ಎಂದು ಹಮಾಸ್ ಮಾಧ್ಯಮ ಕಚೇರಿ ಹೇಳಿದೆ. ಇಸ್ರೇಲ್ ಮಿಲಿಟರಿ ಈ ದಾಳಿಯ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

### ಇಸ್ರೇಲಿ ಪ್ರಜೆಗೆ ಚಾಕುವಿನಿಂದ ಇರಿತ

**ಬೀಜಿಂಗ್ (ಎಪಿ);** ಬೀಜಿಂಗ್‌ನಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯಲ್ಲಿ ಕೆಲಸ ಮಾಡುವ 50 ವರ್ಷದ ಇಸ್ರೇಲಿ ಪ್ರಜೆಗೆ ಶುಕ್ರವಾರ ಚಾಕುವಿನಿಂದ ಇರಿಯಲಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಚೀನಾ ಪೊಲೀಸ್ ಮತ್ತು ಇಸ್ರೇಲ್ ಸರ್ಕಾರ ತಿಳಿಸಿದೆ.

ದಾಳಿಯು ಸೂಪರ್ ಮಾರ್ಕೆಟ್ ಎದುರು ನಡೆದಿದೆ. ಉದ್ಯೋಗಿ ಆರೋಗ್ಯ ಸ್ಥಿರವಾಗಿದೆ. ಘಟನೆಗೆ ಸಂಬಂಧಿಸಿದಂತೆ ಶಂಕಿತ ವಿದೇಶಿ ಪ್ರಜೆಯನ್ನು ಬಂಧಿಸಲಾಗಿದೆ. ದಾಳಿ ಹೊಣೆಯನ್ನು ತಕ್ಷಣಕ್ಕೆ ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ. ಬೀಜಿಂಗ್‌ನಲ್ಲಿರುವ ಇಸ್ರೇಲ್ ಮತ್ತು ಪ್ಯಾಲೆಸ್ಟೀನ್ ರಾಯಭಾರ ಕಚೇರಿಗಳಿಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದೆ.

### ಇಸ್ರೇಲ್‌ಗೆ ಬೆಂಬಲ: ಆಸ್ಟಿನ್

**ಜೆರುಸಲೇಂ (ರಾಯಿಟರ್ಸ್):** ಗಾಜಾ ಪಟ್ಟಿ ಮೇಲೆ ದಾಳಿ ನಡೆಸಲು ಇಸ್ರೇಲ್ ಮಿಲಿಟರಿ ಸಜ್ಜಾಗುತ್ತಿರುವಂತೆಯೇ, ಆ ದೇಶಕ್ಕೆ ಹೆಚ್ಚುವರಿ ಮಿಲಿಟರಿ ಪರಿಕರಗಳನ್ನು ಒದಗಿಸಲು ಸಿದ್ಧವಿರುವುದಾಗಿ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಹೇಳಿದರು.

‘ನಾವು ನಿಮ್ಮೊಂದಿಗಿದ್ದೇವೆ’ ಎಂದೂ ಅವರು ಪುನರುಚ್ಚರಿಸಿದರು. ಇಸ್ರೇಲ್‌ನ ರಕ್ಷಣಾ ಸಚಿವ ಯೊವ್ ಗ್ಯಾಲಂಟ್ ಅವರ ಜತೆ 2 ತಾಸು ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಅವರು ಇಸ್ರೇಲ್‌ಗೆ ಭೇಟಿ ನೀಡಿದ ಮರುದಿನವೇ ಆಸ್ಟಿನ್ ಅವರು ಬ್ರುಸೆಲ್‌ನಿಂದ ಇಲ್ಲಿಗೆ ದಿಢೀರ್ ಪ್ರವಾಸ ಕೈಗೊಂಡಿದ್ದಾರೆ.

### ಲೆಬನಾನ್: ರಾಯಿಟರ್ಸ್ ಪತ್ರಕರ್ತ ಹತ

**ಅಲ್ಮಾ ಅಲ್-ಶಾಬ್ (ಲೆಬನಾನ್), (ಎಪಿ):** ದಕ್ಷಿಣ ಲೆಬನಾನ್‌ನ ಗಡಿಯಲ್ಲಿ ಯುದ್ಧ ವರದಿ ಮಾಡಲು ಸೇರಿದ್ದ ಅಂತರರಾಷ್ಟ್ರೀಯ ಪತ್ರಕರ್ತರ ಗುಂಪು ಇಸ್ರೇಲ್ ಸೇನೆಯ ಶೆಲ್ ದಾಳಿಗೆ ತುತ್ತಾಗಿದ್ದು, ಈ ದಾಳಿಯಲ್ಲಿ ಒಬ್ಬ ಪತ್ರಕರ್ತ ಸ್ಥಳದಲ್ಲೇ ಸಾವನ್ನಪ್ಪಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಮೃತರನ್ನು ‘ರಾಯಿಟರ್ಸ್’ ಸುದ್ದಿ ಸಂಸ್ಥೆಯ ವಿಡಿಯೊಗ್ರಾಫರ್ ಇಸಾಮ್ ಅಬ್ದೆಲ್ಲಾ ಎಂದು ಗುರುತಿಸಲಾಗಿದೆ. ‘ದಕ್ಷಿಣ ಲೆಬನಾನ್‌ನಲ್ಲಿ ಕರ್ತವ್ಯ ನಿರ್ವಹಿಸುವಾಗ ಇಸಾಮ್ ಕೊಲ್ಲಲ್ಪಟ್ಟಿದ್ದಾರೆ’ ಎಂದು ‘ರಾಯಿಟರ್ಸ್’ ಸುದ್ದಿಸಂಸ್ಥೆ ಹೇಳಿದೆ.

### ಒತ್ತೆಯಾಳುಗಳ ಬಲಿ: ಅಲ್ಲಗಳೆದ ಇಸ್ರೇಲ್

ಈ ಮಧ್ಯೆ ಗಾಜಾ ಪಟ್ಟಿಯ ವಿವಿಧೆಡೆ ಇಸ್ರೇಲ್ 24 ಗಂಟೆಗಳಲ್ಲಿ ನಡೆಸಿದ ತೀವ್ರ ದಾಳಿಗೆ ವಿದೇಶಿಯರು ಸೇರಿದಂತೆ 13 ಒತ್ತೆಯಾಳುಗಳು ಬಲಿಯಾಗಿದ್ದಾರೆ ಎಂದು ಹಮಾಸ್ ಮಿಲಿಟರಿ ಘಟಕ ಹೇಳಿದೆ. ಈ ವರದಿಗಳನ್ನು ಇಸ್ರೇಲ್ ಮಿಲಿಟರಿಯ ಹಿರಿಯ ವಕ್ತಾರ ಡೇನಿಯಲ್ ಹಗರಿ ತಳ್ಳಿ ಹಾಕಿದ್ದಾರೆ. ಹಮಾಸ್ ಬಂಡುಕೋರರು ಸುರಂಗದ ಮೂಲಕ ಸಂಚರಿಸಿ ಆಸ್ಪತ್ರೆ ಮತ್ತು ವಿಶ್ವ ಸಂಸ್ಥೆಯ ಕಟ್ಟಡಗಳನ್ನು ತಮ್ಮ ಕಮಾಂಡ್ ಕೇಂದ್ರಗಳಾಗಿ ಬಳಸಿಕೊಂಡಿದ್ದಾರೆ ಎಂದಿದ್ದಾರೆ.


ಆಪರೇಷನ್ ಅಜಯ್ ಕಾರ್ಯಾಚರಣೆ ಭಾಗವಾಗಿ ಇಸ್ರೇಲ್‌ನಿಂದ ದೆಹಲಿಯ ವಿಮಾನ ನಿಲ್ದಾಣಕ್ಕೆ ಶುಕ್ರವಾರ ಬಂದಿಳಿದ ಭಾರತ ಪ್ರಜೆಗಳ ಮೊದಲ ತಂಡ ಪಿಟಿಐ ಚಿತ್ರ

> ಇಸ್ರೇಲ್‌ಗೆ ತನ್ನನ್ನು ರಕ್ಷಿಸಿಕೊಳ್ಳುವ ಎಲ್ಲಾ ಹಕ್ಕೂ ಇದೆ. ಆದರೆ, ಗಾಜಾದಲ್ಲಿರುವ ನಾಗರಿಕರ ರಕ್ಷಣೆಗೆ ಅಗತ್ಯ ಕ್ರಮವನ್ನು ಅದು ಕೈಗೊಳ್ಳಬೇಕು
>
> **ರಿಷಿ ಸುನಕ್,** ಬ್ರಿಟನ್ ಪ್ರಧಾನಿ

> ಆಹಾರ– ವಿದ್ಯುತ್ ಮತ್ತು ಇಂಧನ ಪೂರೈಕೆ ಬಿಡಿ, ನೀವೀಗ ಇಲ್ಲಿ ಬದುಕುಳಿಯುತ್ತೀರಾ ಎಂಬುದಷ್ಟೇ ನಮ್ಮ ಮುಂದೆ ಇರುವ ಪ್ರಶ್ನೆ
>
> **ನೆಬಲ್ ಫರ್ಸಾಕ್,** ರೆಡ್ ಕ್ರೆಸೆಂಟ್‌ನ ವಕ್ತಾರೆ

---

ಜಿ20 ರಾಷ್ಟ್ರಗಳ ಸ್ಪೀಕರ್‌ಗಳ ಶೃಂಗಸಭೆ ಉದ್ಘಾಟಿಸಿ ಮಾತನಾಡಿದ ಪ್ರಧಾನಿ

# ‘ಭಯೋತ್ಪಾದನೆ ವಿರುದ್ಧ ಒಗ್ಗಟ್ಟಿನ ಹೋರಾಟ’

**ನವದೆಹಲಿ (ಪಿಟಿಐ):** ‘ಜಗತ್ತಿನ ಯಾವುದೇ ಸ್ಥಳ, ಯಾವುದೇ ಸ್ವರೂಪದಲ್ಲಿರುವ ಭಯೋತ್ಪಾದನೆ ಮಾನವೀಯತೆಗೆ ವಿರುದ್ಧವಾದುದು. ಶಾಂತಿ, ಭ್ರಾತೃತ್ವದಿಂದ ಎಲ್ಲರೂ ಒಟ್ಟಿಗೆ ಮುನ್ನಡೆಯಬೇಕಾದ ಕಾಲ ಇದಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಇಲ್ಲಿ ಪ್ರತಿಪಾದಿಸಿದರು.

‘ಜಗತ್ತಿನ ಯಾವುದೇ ಕಡೆ ಕಾಣಿಸುವ ಬಿಕ್ಕಟ್ಟು, ಸಂಘರ್ಷದ ಪರಿಣಾಮ ಎಲ್ಲರ ಮೇಲಾಗಲಿದೆ. ಇದರಿಂದ ಯಾರಿಗೂ ಲಾಭವಿಲ್ಲ. ಮಾನವ ಕೇಂದ್ರೀತವಾದ ಚಿಂತನೆಯೊಂದಿಗೆ ಜಗತ್ತು ಒಟ್ಟುಗೂಡಿ ನಡೆಯಬೇಕಾಗಿದೆ’ ಎಂದು ಹೇಳಿದರು.

ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ಸಂಘರ್ಷ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಈ ಮಾತು ಹೇಳಿರುವ ಮೋದಿ, ‘ವಿಶ್ವಾಸ ಮೂಡಿಸುವ ಹಾದಿಯಲ್ಲಿನ ಎಲ್ಲ ತೊಡಕುಗಳನ್ನು ನಿವಾರಿಸಬೇಕಾಗಿದೆ’ ಎಂದು ಕರೆ ನೀಡಿದರು.

ಇಲ್ಲಿ ಆರಂಭವಾದ, ಜಿ20 ರಾಷ್ಟ್ರಗಳ ಜನಪ್ರತಿನಿಧಿಗಳ ಸಭೆಯ ಸ್ಪೀಕರ್‌ಗಳ ಶೃಂಗಸಭೆಯ (ಪಿ20) ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.


ನವದೆಹಲಿಯಲ್ಲಿ ಶುಕ್ರವಾರ ನಡೆದ ಜಿ20 ಸದಸ್ಯ ರಾಷ್ಟ್ರಗಳ ಸ್ಪೀಕರ್ ಸಮಾವೇಶದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಆಹ್ವಾನಿತರತ್ತ ಕೈಬೀಸಿ ಶುಭಕೋರಿದರು. ಅಂತರ ಸಂಸದೀಯ ಒಕ್ಕೂಟದ ಅಧ್ಯಕ್ಷ ಡುವಾರ್ಟೆ ಪಚೆಕೊ, ಸ್ಪೀಕರ್ ಓಂ ಬಿರ್ಲಾ ಇದ್ದಾರೆ —ಪಿಟಿಐ ಚಿತ್ರ

20 ವರ್ಷಗಳ ಹಿಂದೆ ಸಂಸತ್ತಿನ ಮೇಲೆ ನಡೆದಿದ್ದ ಉಗ್ರರ ದಾಳಿ ಉಲ್ಲೇಖಿಸಿದ ಅವರು, ‘ಗಡಿಯಾಚೆಗಿನ ಉಗ್ರವಾದದ ಪರಿಣಾಮವನ್ನು ಭಾರತ ಎದುರಿಸುತ್ತಿದೆ. ಇದಕ್ಕೆ ಸಾವಿರಾರು ಅಮಾಯಕರು ಬಲಿಯಾಗಿದ್ದಾರೆ. ಭಯೋತ್ಪಾದನೆಯನ್ನು ಒಟ್ಟಿಗೆ ಎದುರಿಸುವ ಸಾಧ್ಯತೆಗಳ ಕುರಿತು ರಾಷ್ಟ್ರಗಳ ಸಂಸತ್ತು ಚರ್ಚಿಸಬೇಕು’ ಎಂದು ಹೇಳಿದರು.

‘ಭಯೋತ್ಪಾದನೆ ಎಂತಹ ಬೃಹತ್ ಸವಾಲು ಎಂಬುದು ಈಗ ಜಗತ್ತಿಗೇ ಅರಿವಾಗುತ್ತಿದೆ. ಆದರೆ, ಭಯೋತ್ಪಾದಕತೆ ವ್ಯಾಖ್ಯಾನ ಕುರಿತಂತೆ ಇನ್ನೂ ಸಹಮತ ಮೂಡಿಲ್ಲ ಎಂಬುದು ಬೇಸರದ ಸಂಗತಿ. ಈ ಪರಿಸ್ಥಿತಿಯ ಒಟ್ಟು ಲಾಭವನ್ನು ಮನುಷ್ಯತ್ವದ ವೈರಿಗಳು ಪಡೆದುಕೊಳ್ಳುತ್ತಿದ್ದಾರೆ’ ಎಂದು ಸೂಚ್ಯವಾಗಿ ಎಚ್ಚರಿಸಿದರು.

ಜಿ20 ಸದಸ್ಯ ರಾಷ್ಟ್ರಗಳು ಮತ್ತು ಆಹ್ವಾನಿತ ರಾಷ್ಟ್ರಗಳ ಸ್ಪೀಕರ್‌ಗಳು ಸಮಾವೇಶದಲ್ಲಿ ಭಾಗವಹಿಸಿದ್ದಾರೆ. ಜಿ20 ಶೃಂಗಕ್ಕೆ ಆಫ್ರಿಕನ್ ಒಕ್ಕೂಟದ ಸೇರ್ಪಡೆಯ ನಂತರ ನಡೆಯುತ್ತಿರುವ ಮೊದಲ ಶೃಂಗಸಭೆ ಇದಾಗಿದೆ.

ಡಿಜಿಟಲ್ ವೇದಿಕೆ ಮೂಲಕ ಜನರ ಜೀವನಮಟ್ಟ ಸುಧಾರಣೆ, ಮಹಿಳಾ ನಾಯಕತ್ವ ಆಧಾರಿತ ಅಭಿವೃದ್ಧಿ, ಸುಸ್ಥಿರಾಭಿವೃದ್ಧಿ ಗುರಿ ಸಾಧನೆಗೆ ಪ್ರಯತ್ನ ಚುರುಕುಗೊಳಿಸುವುದು ಸೇರಿ ವಿವಿಧ ವಿಷಯಗಳು ಶೃಂಗಸಭೆಯಲ್ಲಿ ಚರ್ಚೆಯಾಗಲಿವೆ.

### ‘ಇವಿಎಂಗಳಿಂದ ಹೆಚ್ಚಿದ ಪಾರದರ್ಶಕತೆ’

ವಿದ್ಯುನ್ಮಾನ ಮತಯಂತ್ರಗಳ ಬಳಕೆಯಿಂದ ಚುನಾವಣೆಯಲ್ಲಿ ಪಾರದರ್ಶಕತೆ ಮತ್ತು ಚುನಾವಣಾ ಕಾರ್ಯದಕ್ಷತೆ ಹೆಚ್ಚಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಇಲ್ಲಿ ಹೇಳಿದರು.

‘ಮುಂದಿನ ವರ್ಷ ಲೋಕಸಭೆಗೆ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ 100 ಕೋಟಿಗೂ ಹೆಚ್ಚು ಜನರು ಹಕ್ಕು ಚಲಾಯಿಸುವರು. ಜಿ20 ರಾಷ್ಟ್ರಗಳ ಸ್ಪೀಕರ್‌ಗಳು ಮುಂದಿನ ವರ್ಷ ಭಾರತಕ್ಕೆ ಮತ್ತೆ ಭೇಟಿ ನೀಡಿ ಪ್ರಜಾಪ್ರಭುತ್ವದ ಈ ಹಬ್ಬಕ್ಕೆ ಸಾಕ್ಷಿಯಾಗಬೇಕು’ ಎಂದು ಆಹ್ವಾನಿಸಿದರು.

‘2019ರ ಚುನಾವಣೆಯಲ್ಲಿ ದೊಡ್ಡ ಪ್ರಮಾಣದ ಜನಸಂಖ್ಯೆ ಹಕ್ಕು ಚಲಾಯಿಸಿತು. ಇದು, ದೇಶದ ಸಂಸದೀಯ ವ್ಯವಸ್ಥೆ ಮೇಲೆ ಜನರು ಇಟ್ಟಿರುವ ವಿಶ್ವಾಸದ ಪ್ರತೀಕ’ ಎಂದು ಪ್ರತಿಪಾದಿಸಿದರು.

‘ದೇಶದಲ್ಲಿ ಕಳೆದ 25 ವರ್ಷಗಳಿಂದ ವಿದ್ಯುನ್ಮಾನ ಮತಯಂತ್ರಗಳ ಬಳಕೆ ಆಗುತ್ತಿದೆ. ಮತ ಎಣಿಕೆ ಆರಂಭವಾದ ಕೆಲವೇ ಗಂಟೆಗಳಲ್ಲಿ ಫಲಿತಾಂಶ ಪ್ರಕಟಿಸುವುದು ಸಾಧ್ಯವಾಗಿದೆ’ ಎಂದರು.

‘ಭಾರತದಲ್ಲಿ ಈವರೆಗೆ 17 ಸಾರ್ವತ್ರಿಕ ಚುನಾವಣೆಗಳಾಗಿವೆ. ರಾಜ್ಯ ವಿಧಾನಸಭೆಗಳಿಗೆ 300ಕ್ಕೂ ಹೆಚ್ಚು ಬಾರಿ ಚುನಾವಣೆಗಳು ನಡೆದಿವೆ. ತಮ್ಮ ಪಕ್ಷ ಎರಡನೇ ಬಾರಿಗೆ ಅಧಿಕಾರಕ್ಕೇರಿದ 2019ರ ಚುನಾವಣೆಯು ವಿಶ್ವದಲ್ಲೇ ಬೃಹತ್ ಸ್ವರೂಪದ ಚುನಾವಣೆಯಾಗಿತ್ತು’ ಎಂದು ಉಲ್ಲೇಖಿಸಿದರು.

---

ಮಹಾರಾಷ್ಟ್ರ ಶಾಸಕರ ಅನರ್ಹತೆ ಅರ್ಜಿ ಇತ್ಯರ್ಥ ವಿಳಂಬ

# ಸ್ಪೀಕರ್‌ಗೆ ‘ಸುಪ್ರೀಂ’ ತರಾಟೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಅವರ ಬಣದ ಶಾಸಕರ ಅನರ್ಹತೆ ಅರ್ಜಿಯನ್ನು ಇತ್ಯರ್ಥಪಡಿಸುವಲ್ಲಿ ವಿಳಂಬ ಮಾಡುತ್ತಿರುವ ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್ ರಾಹುಲ್ ನರ್ವೇಕರ್ ಅವರನ್ನು ಸುಪ್ರೀಂ ಕೋರ್ಟ್ ಶುಕ್ರವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

‘ಅನರ್ಹತೆ ಪ್ರಕರಣವನ್ನು ಒಂದು ಪ್ರಹಸನವಾಗಿಸಬಾರದು. ಮುಂದಿನ ವಿಧಾನಸಭೆ ಚುನಾವಣೆ ವರಗೆ ಎಳೆದಾಡಿ, ಇಡೀ ಪ್ರಕ್ರಿಯೆಯು ವ್ಯರ್ಥವಾಗುವಂತೆ ಮಾಡಬಾರದು. ಅರ್ಜಿಯ ಇತ್ಯರ್ಥಕ್ಕೆ ಅಕ್ಟೋಬರ್ 17ರ ಒಳಗಾಗಿ ಸಮಯ ನಿಗದಿ ಮಾಡಿ ತಿಳಿಸಬೇಕು’ ಎಂದು ಸುಪ್ರೀಂ ಕೋರ್ಟ್ ತಾಕೀತು ಮಾಡಿತು.

‘ಸಂವಿಧಾನದ 10ನೇ ಪರಿಚ್ಛೇದದ ಪ್ರಕಾರ, ಸ್ಪೀಕರ್‌ಗೆ ನ್ಯಾಯಿಕ ಅಧಿಕಾರವಿದೆ. ಅವರು ನೀಡಿದ ತೀರ್ಪು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿಯೇ ಇರುತ್ತದೆ. ಆತ್ಮವಿಶ್ವಾಸ ಮೂಡುವಂತೆ ನಾವು ನಡೆದುಕೊಳ್ಳಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಹೇಳಿದೆ. ‘ಸ್ಪೀಕರ್ ಅವರು ವಿಚಾರಣೆಗೆ ವೇಳಾಪಟ್ಟಿ ನಿಗದಿ ಮಾಡುವಂತೆ ನೀವು ತಿಳಿಸಬೇಕು. ನಮ್ಮ ಆದೇಶ ಪಾಲನೆ ಆಗುತ್ತಿಲ್ಲ ಎಂಬ ಕಳವಳ ನಮ್ಮಲ್ಲಿ ಇದೆ’ ಎಂದು ಪೀಠವು ಮೆಹ್ತಾ ಅವರಿಗೆ ಹೇಳಿತು.

‘ಸಮಯದ ಬಗ್ಗೆ ನಮಗೆ ತೃಪ್ತಿಯಾಗದೇ ಹೋದರೆ, ಎರಡು ತಿಂಗಳೊಳಗೆ ನಿರ್ಧಾರ ಕೈಗೊಳ್ಳುವಂತೆ ಸೂಚಿಸಬೇಕಾಗುತ್ತದೆ. ಸಂವಿಧಾನದ ಆಶಯಕ್ಕೆ ವ್ಯತಿರಿಕ್ತವಾದ ನಿರ್ಧಾರಗಳನ್ನು ಕೈಗೊಂಡಾಗ ನ್ಯಾಯಾಲಯವು ಮ ಧ್ಯ ಪ್ರ ವೇ ಶಿ ಸ ಲೇ ಬೇ ಕಾ ಗು ತ್ತದೆ. ಈ ಅರ್ಜಿಯ ವಿಚಾರಣೆಯನ್ನು ಸೋಮವಾರ ಅಥವಾ ಮಂಗಳವಾರ ಮತ್ತೆ ನಡೆಸುತ್ತೇವೆ’ ಎಂದು ನ್ಯಾ. ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ಪೀಠ ತಿಳಿಸಿತು.

ಶಿಂದೆ ಮತ್ತು ಇತರ ಶಾಸಕರ ವಿರುದ್ಧದ ಅನರ್ಹತೆ ಅರ್ಜಿಗಳ ಇತ್ಯರ್ಥದ ವೇಳಾಪಟ್ಟಿಯನ್ನು ನಿಗದಿ ಮಾಡುವಂತೆ ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್‌ಗೆ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 18ರಂದು ಸೂಚಿಸಿತ್ತು.

### ಕಾಲಮಿತಿ ಕೋರಿದ ಪವಾರ್

**ಮುಂಬೈ (ಪಿಟಿಐ):** ಶಿವಸೇನಾ ಮತ್ತು ಎನ್‌ಸಿಪಿ ಶಾಸಕರ ಅನರ್ಹತೆ ಅರ್ಜಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಇತ್ಯರ್ಥಪಡಿಸಲು ಮಹಾರಾಷ್ಟ್ರ ವಿಧಾನಸಭಾ ಸ್ಪೀಕರ್ ರಾಹುಲ್ ನರ್ವೇಕರ್ ಅವರಿಗೆ ನಿರ್ದೇಶನ ನೀಡಬೇಕೆಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಶುಕ್ರವಾರ ಸುಪ್ರೀಂ ಕೋರ್ಟ್ ಅನ್ನು ಕೋರಿದ್ದಾರೆ.

‘ಮನವಿಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಸ್ಪೀಕರ್ ಅವರ ಕಡೆಯಿಂದ ವಿಳಂಬವಾಗಿದೆ. ಹೀಗಾಗಿ ಎನ್‌ಸಿಪಿ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ’ ಎಂದು ಮುಂಬೈನಲ್ಲಿ ಅವರು ಹೇಳಿದರು. ‘ಅನರ್ಹತೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕಾಲಮಿತಿಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕು. ವಿಳಂಬ ಮಾಡಬಾರದು ಎಂದು ನಿರ್ದೇಶನಗಳನ್ನು ನೀಡಬೇಕು. ಶಿವಸೇನಾ ಕೂಡ ಇದೇ ನಿಲುವು ಹೊಂದಿದೆ’ ಎಂದು ಅವರು ಹೇಳಿದರು.

**ಷೇರುಪೇಟೆ ವಹಿವಾಟು** 125

66,408 ಹಿಂದಿನ ಅಂತ್ಯ

66,283 ಇಂದಿನ ಅಂತ್ಯ

(66,400 / 66,200 / 66,000 / 65,800 / 65,600; 10:00 12:00 14:00 16:00)

**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 19,794 |
| ಇಂದಿನ ಅಂತ್ಯ | 19,751 |
| ▼ | 43 |
| ದಿನದ ಕನಿಷ್ಠ | 19,635 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹555 |
| 12 ಮೊಟ್ಟೆಗೆ | ₹72 |
| ಮೈಸೂರು | |
| 100 ಮೊಟ್ಟೆಗೆ | ₹562 |

**ಖಾದ್ಯ ತೈಲ ಮುಂಬೈ** (10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1540 (1550) |
| ಸೋಯಾ (ರಿಫೈನ್ಡ್) | ₹880 (867) |
| ಸೂರ್ಯಕಾಂತಿ (ರಿಫೈನ್ಡ್) | ₹875 (870) |
| ಪಾಮೋಲಿನ್ | ₹820 (810) |

**ವಿನಿಮಯ ದರ**

| | |
|---|---|
| $ ಡಾಲರ್ | 83.27 |
| £ ಪೌಂಡ್ | 101.61 |
| € ಯುರೊ | 87.73 |
| ¥ ಯೆನ್ (100ಕ್ಕೆ) | 56 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್‌-4 | ₹146 |
| ಆರ್‌ಎಸ್‌ಎಸ್‌-5 | ₹140 |
| ಗುಡ್ ಲಾಟ್ | ₹129 |

**ರಾಮನಗರ ರೇಷ್ಮೆಗೂಡು ಧಾರಣೆ**

| | |
|---|---|
| ಮಿಶ್ರತಳಿ (ಸಿ.ಬಿ) | ₹258-432 |
| ದ್ವಿತಳಿ (ಬಿ.ವಿ) | ₹341-617 |

**ಮುದ್ರೆಮನೆ ಕಾಫಿ** (50 ಕೆಜಿಗೆ)

| | |
|---|---|
| ಎಪಿ | ₹10500 |
| ಎಸಿ | ₹6075 |
| ಆರ್‌ಪಿ | ₹9500 |
| ಆರ್‌ಸಿ | ₹5960 |

## ತಾಳೆ ಎಣ್ಣೆ ಆಮದು ಶೇ 26ರಷ್ಟು ಇಳಿಕೆ

ಬೆಂಗಳೂರು/ನವದೆಹಲಿ (ರಾಯಿಟರ್ಸ್/ಪಿಟಿಐ): ಭಾರತವು ಸೆಪ್ಟೆಂಬರ್‌ನಲ್ಲಿ 8.34 ಲಕ್ಷ ಟನ್‌ನಷ್ಟು ತಾಳೆ ಎಣ್ಣೆ ಆಮದು ಮಾಡಿಕೊಂಡಿದೆ. ಆಗಸ್ಟ್‌ಗೆ ಹೋಲಿಸಿದರೆ ಶೇ 26ರಷ್ಟು ಇಳಿಕೆಯಾಗಿದೆ.

ಸೋಯಾ ಎಣ್ಣೆ ಆಮದು ಶೇ 0.1ರಷ್ಟು ಹೆಚ್ಚಾಗಿ 3.58 ಲಕ್ಷ ಟನ್‌ಗೆ ತಲುಪಿದೆ. ಸೂರ್ಯಕಾಂತಿ ಎಣ್ಣೆ ಶೇ 17.8ರಷ್ಟು ಕಡಿಮೆ ಆಗಿ 3 ಲಕ್ಷ ಟನ್‌ಗೆ ತಲುಪಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ತಿಳಿಸಿದೆ.

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹7800-8675 |
| ತಿಪಟೂರು | ₹7500-8800 |
| ತುರುವೇಕೆರೆ | ₹8600-8600 |

**ಮುಂಬೈ ಧಾರಣೆ**

**ಶೇಂಗಾ**

13-10-2023

| | |
|---|---|
| ಜಾವಾ 70/80(ಹೊಸ) | 12200-12300 |
| ಜಾವಾ 80/90(ಹೊಸ) | 12900-12000 |
| ದಪ್ಪ ಮಧ್ಯಪ್ರದೇಶ(ಹೊಸ) | 10500-10600 |
| ದಪ್ಪ ಗುಜರಾತ್(ಹೊಸ) | 11300-11400 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1550 (1560) |
| ಒಂದು ವಾರದ ಡೆಲಿವರಿ | 1545 (1555) |
| ಸೋಯಾ ಕಚ್ಚಾ | 840 (825) |
| ಪಾಮ್ ವಾರದ ಡೆಲಿವರಿ | 818 (808) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 805 (797) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ

58,150 (57,800)

ಬೆಳ್ಳಿ ಕೆ.ಜಿ 69,700 (69,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ‘ಲ್ಯಾಪ್‌ಟಾಪ್ ಆಮದು ಮೇಲೆ ಸರ್ಕಾರದ ನಿರ್ಬಂಧ ಇಲ್ಲ’



ನವದೆಹಲಿ (ರಾಯಿಟರ್ಸ್/ಪಿಟಿಐ): ‘ಲ್ಯಾಪ್‌ಟಾಪ್, ಕಂಪ್ಯೂಟರ್ ಆಮದು ಮೇಲೆ ಕೇಂದ್ರ ಸರ್ಕಾರವು ನಿರ್ಬಂಧಗಳನ್ನು ವಿಧಿಸುವುದಿಲ್ಲ. ಆದರೆ ಆಮದು ಮೇಲೆ ಕಣ್ಣಿಡಲಾಗುವುದು’ ಎಂದು ಕೇಂದ್ರ ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭಾರ್ತ್‌ವಾಲ್ ಅವರು ಶುಕ್ರವಾರ ತಿಳಿಸಿದ್ದಾರೆ.

ದೇಶಿ ತಯಾರಿಕೆಗೆ ಉತ್ತೇಜನ ನೀಡಲು ಲ್ಯಾಪ್‌ಟಾಪ್ ಆಮದು ಮೇಲೆ ನಿರ್ಬಂಧಗಳನ್ನು ವಿಧಿಸುವುದಾಗಿ ಕೇಂದ್ರ ಸರ್ಕಾರ ಈ ಹಿಂದೆ ಹೇಳಿತ್ತು. ನವೆಂಬರ್ 1ರಿಂದ ಆಮದು ಮಾಡಿಕೊಳ್ಳಲು ಸರ್ಕಾರದಿಂದ ಲೈಸೆನ್ಸ್ ಪಡೆದುಕೊಳ್ಳುವುದು ಅಗತ್ಯ ಎಂದು ತಿಳಿಸಿತ್ತು. ಸರ್ಕಾರದ ಕ್ರಮಕ್ಕೆ ಉದ್ಯಮ ವಲಯ ಮತ್ತು ಅಮೆರಿಕದಿಂದ ತೀವ್ರ ಟೀಕೆ ವ್ಯಕ್ತವಾಗಿದೆ. ಹೀಗಾಗಿ ವಾಣಿಜ್ಯ ಕಾರ್ಯದರ್ಶಿ ಈ ಹೇಳಿಕೆ ನೀಡಿದ್ದಾರೆ.

‘ಕೇಂದ್ರ ಸರ್ಕಾರವು ಆಮದುದಾರರ ಮೇಲೆ ನಿಗಾ ಇಡಲಷ್ಟೇ ಬಯಸುತ್ತಿದೆ. ಯಾವುದೇ ನಿರ್ಬಂಧಗಳನ್ನು ಹೇರುತ್ತಿಲ್ಲ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆಮದು ನಿರ್ವಹಣಾ ವ್ಯವಸ್ಥೆಯು ನವೆಂಬರ್ 1ರಿಂದ ಜಾರಿಗೆ ಬರಲಿದೆ ಎಂದು ವಿದೇಶಿ ವ್ಯಾಪಾರದ ಮಹಾನಿರ್ದೇಶಕ ಸಂತೋಷ್ ಕುಮಾರ್ ಸರಣಗಿ ಹೇಳಿದ್ದಾರೆ. ಉಕ್ಕು, ಕಲ್ಲಿದ್ದಲು ಮತ್ತು ಕಾಗದಕ್ಕೆ ಸಂಬಂಧಿಸಿದಂತೆ ಆಮದು ನಿರ್ವಹಣಾ ವ್ಯವಸ್ಥೆಯು ಈಗಾಗಲೇ ಇದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಬಂಟ್ವಾಳ** | |
| ಹಳತು | 46000-48500 |
| ಕೋಕ | 15000-27500 |
| **ಭದ್ರಾವತಿ** | |
| ರಾಶಿ | 40199-47001 |
| **ಚಿತ್ರದುರ್ಗ** | |
| ಅಪಿ | 44600-45000 |
| ಬೆಟ್ಟೆ | 35500-35900 |
| ಕೆಂಪುಗೋಟು | 29500-29900 |
| ರಾಶಿ | 44100-44500 |
| **ಹೊನ್ನಾವರ** | |
| ಹಳೆಚಾಲಿ | 37500-41000 |
| ಹೊಸಚಾಲಿ | 31000-34000 |
| **ಹೊಸನಗರ** | |
| ಬಿಳಿಗೋಟು | 12699-12699 |
| ಚಾಲಿ | 34399-36769 |
| ಕೆಂಪುಗೋಟು | 30699-35899 |
| ರಾಶಿ | 42399-48100 |
| **ಕಾರ್ಕಳ** | |
| ಹಳತು | 30000-48500 |
| **ಕುಮಟ** | |
| ಚಿಪ್ಪು | 31089-34509 |
| ಕೋಕ | 20109-32999 |
| ಫ್ಯಾಕ್ಟರಿ | 10569-25911 |
| ಹಳೆಚಾಲಿ | 39969-40869 |
| ಹೊಸಚಾಲಿ | 37369-40009 |
| **ಮಡಿಕೇರಿ** | |
| ಕಚ್ಚಾ | 42771-42771 |
| **ಪಾವಗಡ** | |
| ಕೆಂಪು | 35000-45000 |
| **ಪುತ್ತೂರು** | |
| ಹೊಸತು | 34000-43000 |
| **ಶಿವಮೊಗ್ಗ** | |
| ರಾಶಿ | 43669-47299 |
| **ಸಿದ್ದಾಪುರ** | |
| ಬಿಳಿಗೋಟು | 31809-35112 |
| ಚಾಲಿ | 37059-40109 |
| ಕೋಕ | 30019-33460 |
| ಕೆಂಪುಗೋಟು | 31112-33899 |
| ರಾಶಿ | 42509-47099 |
| ತಟ್ಟೆಬೆಟ್ಟೆ | 40109-45209 |
| **ಶಿರಸಿ** | |
| ಬೆಟ್ಟೆ | 37990-45699 |
| ಬಿಳಿಗೋಟು | 27899-35859 |
| ಚಾಲಿ | 37199-41769 |
| ಕೆಂಪುಗೋಟು | 31699-31699 |
| ರಾಶಿ | 45299-47109 |
| **ಯಲ್ಲಾಪುರ** | |
| ಅಪಿ | 56379-56379 |
| ಬಿಳಿಗೋಟು | 24899-35801 |
| ಚಾಲಿ | 36850-41099 |
| ಕೋಕ | 19319-28499 |
| ಕೆಂಪುಗೋಟು | 28199-36021 |
| ರಾಶಿ | 45011-53200 |
| ತಟ್ಟೆಬೆಟ್ಟೆ | 38169-44699 |

### ಮುಂಬರುವ ತಿಂಗಳುಗಳಲ್ಲಿ ರಫ್ತು ಸುಧಾರಿಸಲಿದೆ: ವಾಣಿಜ್ಯ ಕಾರ್ಯದರ್ಶಿ

# ಸೆಪ್ಟೆಂಬರ್‌ನಲ್ಲಿ ರಫ್ತು, ಆಮದು ಇಳಿಕೆ

ನವದೆಹಲಿ (ಪಿಟಿಐ): ದೇಶದ ರಫ್ತು ವಹಿವಾಟು ಸೆಪ್ಟೆಂಬರ್ ತಿಂಗಳಿನಲ್ಲಿ ಶೇ 2.6ರಷ್ಟು ಇಳಿಕೆ ಕಂಡು ₹ 2.86 ಲಕ್ಷ ಕೋಟಿಗೆ ತಲುಪಿದೆ. ವ್ಯಾಪಾರ ಕೊರತೆ ಅಂತರವು ₹1.60 ಲಕ್ಷ ಕೋಟಿಗೆ ತಗ್ಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಸರಕುಗಳ ದರ ಇಳಿಕೆ ಮತ್ತು ತೈಲ ಆಮದು ಪ್ರಮಾಣ ಇಳಿಕೆ ಕಂಡಿರುವುದರಿಂದ ಆಮದು ವಹಿವಾಟು ಸಹ ಸೆಪ್ಟೆಂಬರ್‌ನಲ್ಲಿ ಶೇ 15ರಷ್ಟು ಇಳಿಕೆ ಕಂಡಿದೆ. ಮೌಲ್ಯದ ಲೆಕ್ಕದಲ್ಲಿ ₹5.25 ಲಕ್ಷ ಕೋಟಿಯಷ್ಟು ಆಗಿದೆ.

**ಮುಖ್ಯಾಂಶಗಳು**

- ತೈಲ ಆಮದು ಶೇ 20ರಷ್ಟು ಇಳಿಕೆ
- ಚಿನ್ನದ ಆಮದು ಶೇ 7ರಷ್ಟು ಏರಿಕೆ

ಜಾಗತಿಕ ಸವಾಲುಗಳ ಹೊರತಾಗಿಯೂ ದೇಶದ ರಫ್ತು ವಹಿವಾಟು ಚೇತರಿಕೆ ಕಂಡುಕೊಳ್ಳುತ್ತಿದೆ ಎನ್ನುವುದನ್ನು ಸೆಪ್ಟೆಂಬರ್ ತಿಂಗಳ ಅಂಕಿ–ಅಂಶಗಳು ಸೂಚಿಸುತ್ತಿವೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಭಾರ್ತ್‌ವಾಲ್ ತಿಳಿಸಿದ್ದಾರೆ.



ಏಪ್ರಿಲ್, ಮೇ, ಜೂನ್ ಮತ್ತು ಜುಲೈನಲ್ಲಿ ಎರಡಂಕಿ ಮಟ್ಟದಲ್ಲಿ ರಫ್ತು ವಹಿವಾಟು ಇಳಿಕೆ ಕಂಡಿತ್ತು. ಆದರೆ ಸೆಪ್ಟೆಂಬರ್‌ನಲ್ಲಿ ಒಂದಂಕಿ ಮಟ್ಟಕ್ಕೆ ಬಂದಿದೆ. ಹೀಗಾಗಿ ಮುಂಬರುವ ತಿಂಗಳುಗಳಲ್ಲಿ ಪರಿಸ್ಥಿತಿಯು ಇನ್ನಷ್ಟು ಸುಧಾರಿಸುವ ವಿಶ್ವಾಸ ಇದೆ ಎಂದೂ ಅವರು ತಿಳಿಸಿದ್ದಾರೆ.

ಪ್ರಮುಖ 30 ವಲಯಗಳಿದ್ದು, ಅದರಲ್ಲಿ ಕಬ್ಬಿಣದ ಅದಿರು, ಹತ್ತಿ ಬಟ್ಟೆ, ಮಾಂಸ, ಡೈರಿ ಉತ್ಪನ್ನಗಳು, ಔಷಧ, ಎಂಜಿನಿಯರಿಂಗ್ ವಲಯಗಳು ಸೆಪ್ಟೆಂಬರ್‌ನಲ್ಲಿ ಸಕಾರಾತ್ಮಕ ಬೆಳವಣಿಗೆ ಕಂಡಿವೆ. ಪೆಟ್ರೋಲಿಯಂ ಉತ್ಪನ್ನಗಳು, ಜವಳಿ, ಎಲೆಕ್ಟ್ರಾನಿಕ್ ವಸ್ತುಗಳು, ರಾಸಾಯನಿಕ, ಹರಳು ಮತ್ತು ಚಿನ್ನಾಭರಣ, ಚರ್ಮ, ಟೀ ಮತ್ತು ಕಾಫಿ ವಲಯಗಳು ನಕಾರಾತ್ಮಕ ಬೆಳವಣಿಗೆ ಕಂಡಿವೆ.

ಏಪ್ರಿಲ್–ಸೆಪ್ಟೆಂಬರ್‌ನಲ್ಲಿ ರಫ್ತು ಶೇ 8.77ರಷ್ಟು ಇಳಿಕೆ ಕಂಡಿದ್ದು, ₹17.51 ಲಕ್ಷ ಕೋಟಿಗೆ ತಲುಪಿದೆ. ಆಮದು ವಹಿವಾಟು ಶೇ 12.23ರಷ್ಟು ಇಳಿಕೆ ಆಗಿದ್ದು, ಮೌಲ್ಯದ ಲೆಕ್ಕದಲ್ಲಿ ₹27.14 ಲಕ್ಷ ಕೋಟಿಯಷ್ಟು ಆಗಿದೆ. ಇದರಿಂದಾಗಿ ವ್ಯಾಪಾರ ಕೊರತೆ ಅಂತರವು ₹9.59 ಲಕ್ಷ ಕೋಟಿಗೆ ಇಳಿಕೆ ಕಂಡಿದೆ ಎಂದು ಸರ್ಕಾರ ತಿಳಿಸಿದೆ. ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಚಿನ್ನದ ಆಮದು ಶೇ 9.8ರಷ್ಟು ಮತ್ತು ತೈಲ ಆಮದು ಶೇ 22.81ರಷ್ಟು ಇಳಿಕೆ ಕಂಡಿದೆ.

**ಸೇವೆಗಳ ರಫ್ತು:** ಸೇವೆಗಳ ರಫ್ತು ವಹಿವಾಟು 2023ರ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ₹13.69 ಲಕ್ಷ ಕೋಟಿಯಷ್ಟು ಆಗಿರುವ ಅಂದಾಜು ಮಾಡಲಾಗಿದೆ. 2022ರ ಇದೇ ಅವಧಿಯಲ್ಲಿ ₹12.94 ಲಕ್ಷ ಕೋಟಿಯಷ್ಟು ಆಗಿತ್ತು ಎಂದು ಸರ್ಕಾರ ತಿಳಿಸಿದೆ.

## ಜೊಮಾಟೊ, ಮೆಕ್‌ಡೊನಾಲ್ಡ್‌ಗೆ ದಂಡ

ನವದೆಹಲಿ (ಪಿಟಿಐ): ಗ್ರಾಹಕರೊಬ್ಬರಿಗೆ ಸಸ್ಯಾಹಾರಕ್ಕೆ ಬದಲಿಗೆ ಮಾಂಸಾಹಾರ ನೀಡಿದ್ದಕ್ಕಾಗಿ ಜೋಧ್‌ಪುರದ ಜಿಲ್ಲಾ ಗ್ರಾಹಕ ವ್ಯಾಜ್ಯ ಪರಿಹಾರ ವೇದಿಕೆಯು ಜೊಮಾಟೊ ಮತ್ತು ಮೆಕ್‌ಡೊನಾಲ್ಡ್ ಕಂಪನಿಗಳಿಗೆ ಒಟ್ಟು ₹1 ಲಕ್ಷ ದಂಡ ವಿಧಿಸಿದೆ ಎಂದು ಜೊಮಾಟೊ ಶುಕ್ರವಾರ ಹೇಳಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವುದಾಗಿ ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಗ್ರಾಹಕ ಹಿತರಕ್ಷಣಾ ಕಾಯ್ದೆ 2019ರ ಉಲ್ಲಂಘನೆ ಮಾಡಿರುವ ಸಂಬಂಧ ಈ ದಂಡ ವಿಧಿಸಲಾಗಿದೆ. ದಾವೆಯ ವೆಚ್ಚವಾದ ₹5 ಸಾವಿರವನ್ನೂ ಕಟ್ಟುವಂತೆ ಕಂಪನಿಗಳಿಗೆ ಸೂಚನೆ ನೀಡಲಾಗಿದೆ. ಎರಡೂ ಕಂಪನಿಗಳು ಜಂಟಿಯಾಗಿ ದಂಡ ಮತ್ತು ವ್ಯಾಜ್ಯದ ವೆಚ್ಚವನ್ನು ಪಾವತಿಸಬೇಕಿದೆ.

ಗ್ರಾಹಕರು ಆರ್ಡರ್ ಮಾಡಿರುವ ಆಹಾರಕ್ಕೆ ಬದಲಾಗಿ ಬೇರೆ ಆಹಾರವನ್ನು ತಪ್ಪಾಗಿ ನೀಡಲಾಗಿದೆ ಎನ್ನುವುದು ಆರೋಪ. ಆದರೆ, ಜೊಮಾಟೊ ಕಂಪನಿಯು ರೆಸ್ಟೋರೆಂಟ್ ನೀಡುವ ಆಹಾರವನ್ನು ಸಂಬಂಧಪಟ್ಟ ಗ್ರಾಹಕರಿಗೆ ತಲುಪಿಸುವ ಕೆಲಸವನ್ನಷ್ಟೇ ಮಾಡುತ್ತದೆ. ಹೀಗಾಗಿ, ಸೇವೆಯಲ್ಲಿ ಯಾವುದೇ ರೀತಿಯ ಕೊರತೆ ಕಂಡುಬಂದರೆ, ಆರ್ಡರ್‌ನಲ್ಲಿ ಬದಲಾವಣೆ ಆದರೆ, ಆರ್ಡರ್ ನೀಡಿದ್ದಕ್ಕೆ ಬದಲಾಗಿ ಬೇರೆಯದನ್ನು ನೀಡಿದರೆ ಮತ್ತು ಗುಣಮಟ್ಟಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಆಹಾರವನ್ನು ನೀಡುವ ರೆಸ್ಟೋರೆಂಟ್ ಹೊಣೆಗಾರ ಆಗಲಿದೆ ಎಂದು ಜೊಮಾಟೊ ಕಂಪನಿಯು ತಿಳಿಸಿದೆ.

## ಇನ್ಫಿನಿಟಿ ಲರ್ನ್: ‘ವಿಐಎಸ್‌ಟಿಎ’ ತಂತ್ರಜ್ಞಾನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಚೈತನ್ಯ ಶೈಕ್ಷಣಿಕ ಸಂಸ್ಥೆಗಳು ನಡೆಸುತ್ತಿರುವ ಡಿಜಿಟಲ್ ಕಲಿಕಾ ವೇದಿಕೆ ‘ಇನ್ಫಿನಿಟಿ ಲರ್ನ್, ಕೃತಕ ಬುದ್ಧಿಮತ್ತೆ (ಎ.ಐ) ಆಧಾರಿತ ಕಲಿಕೆಗೆ ಅನುಕೂಲ ಆಗುವ ‘ವಿಐಎಸ್‌ಟಿಎ’ ತಂತ್ರಜ್ಞಾನ ಪರಿಚಯಿಸಿದೆ.

ವರ್ಚುವಲ್ ಇಂಟಲಿಜೆಂಟ್ ಸಿಸ್ಟಂ ಫಾರ್ ಟೇಲರ್ಡ್ ಅಕಾಡೆಮಿಕ್ಸ್ (ವಿಐಎಸ್‌ಟಿಎ) ತಂತ್ರಜ್ಞಾನವು ಶಿಕ್ಷಕರು, ವಿದ್ಯಾರ್ಥಿಗಳು ಎದುರಿಸುತ್ತಿರುವ ಸವಾಲನ್ನು ಎ.ಐ ಮೂಲಕ ಪರಿಹರಿಸಲು ಇದು ನೆರವಾಗಲಿದೆ ಎಂದು ತಿಳಿಸಿದೆ.


**ವಯೋಮಾನದ ಆಧಾರದಲ್ಲಿ ಕುಬೇರರು**

ಬೆಂಗಳೂರು: ₹1 ಸಾವಿರ ಕೋಟಿಗೂ ಅಧಿಕ ಸಂಪತ್ತು ಹೊಂದಿರುವ 1,319 ಕುಬೇರರು ಭಾರತದಲ್ಲಿ ಇದ್ದಾರೆ. ಇವರಲ್ಲಿ ಶೇ 85ರಷ್ಟು ಕುಬೇರರ ವಯಸ್ಸು 50ಕ್ಕಿಂತಲೂ ಹೆಚ್ಚಿಗೆ ಇದೆ. ಹುರೂನ್ ಇಂಡಿಯಾ ಸಿದ್ಧಪಡಿಸಿರುವ ‘360 ಒನ್ ವೆಲ್ತ್ ಹುರೂನ್ ಇಂಡಿಯಾ ರಿಚ್ ಲಿಸ್ಟ್ 2023’ರ ವರದಿಯಲ್ಲಿ ವಯಸ್ಸಿನ ಆಧಾರದ ಮೇಲೆ ಕುಬೇರರು ಎಷ್ಟು ಪ್ರಮಾಣದಲ್ಲಿದ್ದಾರೆ ಎಂಬ ಮಾಹಿತಿ ಇದೆ.




ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form







## ‘5 ವರ್ಷದ ಉದ್ಯೋಗ ಪತ್ರ ನೀಡಲು ನಿರ್ಧಾರ’

ವಾಷಿಂಗ್ಟನ್ (ಪಿಟಿಐ): ‘ಗ್ರೀನ್ ಕಾರ್ಡ್‌ನ ನಿರೀಕ್ಷೆಯಲ್ಲಿ ಇರುವವರು ಸೇರಿ ವಲಸಿಗಯೇತರ ಕೆಲ ವರ್ಗಗಳಲ್ಲಿ ಐದು ವರ್ಷ ಅವಧಿಗೆ ಉದ್ಯೋಗ ಮಾನ್ಯತಾಪತ್ರ (ಇಎಡಿ) ನೀಡಲಾಗುವುದು’ ಎಂದು ಅಮೆರಿಕ ಶುಕ್ರವಾರ ಪ್ರಕಟಿಸಿದೆ.

ಅಮೆರಿಕದ ಪೌರತ್ವ ಮತ್ತು ವಲಸಿಗ ಸೇವೆ ವಿಭಾಗ (ಯುಎಸ್‌ಸಿಐಎಸ್), ‘ಇಎಡಿ ಸಿಂಧುತ್ವವನ್ನು 5 ವರ್ಷಕ್ಕೆ ಹೆಚ್ಚಿಸಲಿದ್ದು, ಇದಕ್ಕಾಗಿ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ’ ಎಂದು ತಿಳಿಸಿದೆ. ಈ ಕ್ರಮದಿಂದ ಸಾವಿರಾರು ಭಾರತೀಯರಿಗೆ ಅನುಕೂಲವಾಗಲಿದೆ. ಆಶ್ರಯ ಪಡೆದಿರುವವರು, ತಡೆಹಿಡಿದಿರುವವರು, ಐಎನ್‌ಎ 245 ಅನ್ವಯ ಹೊಂದಾಣಿಕೆ ಸ್ಥಿತಿಯಲ್ಲಿ ಇರುವವರು, ಗಡಿಪಾರು ತಡೆಯಾಜ್ಞೆ, ರದ್ದತಿ ಸ್ಥಿತಿಯಲ್ಲಿ ಇರುವವರು ಅರ್ಜಿ ಸಲ್ಲಿಸಬೇಕಾದವರಲ್ಲಿ ಸೇರಿದ್ದಾರೆ ಎಂದು ತಿಳಿಸಿದೆ.

# ಮುರಳಿ, ಅಂಕಿತಾಗೆ ಚಿನ್ನದ ಪದಕ

### 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ರಾಜ್ಯದ ಆರ್ಯಗೆ ಲಾಂಗ್‌ಜಂಪ್ ಕಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುಜರಾತ್‌ನ ಮುರಳಿ ಗವಿತ್ ಮತ್ತು ರೈಲ್ವೇಸ್‌ನ ಅಂಕಿತಾ ಇಲ್ಲಿ ನಡೆಯುತ್ತಿರುವ 62ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 5 ಸಾವಿರ ಮೀ. ಓಟದಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಚಿನ್ನ ಗೆದ್ದುಕೊಂಡರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪುರುಷರ ವಿಭಾಗದ ಓಟವನ್ನು ಮುರಳಿ 14 ನಿ. 8.49 ಸೆ.ಗಳಲ್ಲಿ ಪೂರೈಸಿದರು. ಅಂಕಿತಾ ಅವರು ನಿಗದಿತ ದೂರ ಕ್ರಮಿಸಲು 16 ನಿ. 10.5 ಸೆ.ಗಳನ್ನು ತೆಗೆದುಕೊಂಡರು.

ಪುರುಷರ ವಿಭಾಗದಲ್ಲಿ ಆರು ಸ್ಪರ್ಧಿಗಳು ಅಗ್ರಸ್ಥಾನ ಪಡೆಯಲು ಪ್ರಯತ್ನಿಸದೇ ಜತೆಯಾಗಿ ಓಟ ಪೂರೈಸಿದ್ದು ಅಚ್ಚರಿಗೆ ಕಾರಣವಾಯಿತು. ಆರನೇ ಸ್ಥಾನ ಪಡೆದ ಸ್ಪರ್ಧಿ, ಅಗ್ರಸ್ಥಾನ ಪಡೆದ ಮುರಳಿ ಅವರಿಗಿಂತ ಕೇವಲ 0.25 ಸೆ.ಗಳಿಂದ ಹಿಂದೆ ಇದ್ದರು.

**ಆರ್ಯಗೆ ಕಂಚು:** ಪುರುಷರ ಲಾಂಗ್ ಜಂಪ್‌ನಲ್ಲಿ ಕರ್ನಾಟಕದ ಎಸ್.ಆರ್ಯ, 7.65 ಮೀ. ಸಾಧನೆಯೊಂದಿಗೆ ಕಂಚು ಗೆದ್ದುಕೊಂಡರು. ನಾಲ್ಕನೇ ಪ್ರಯತ್ನದಲ್ಲಿ ಈ ದೂರ ಕಂಡುಕೊಂಡರು. ತಮಿಳುನಾಡಿನ ಪಿ.ಡೇವಿಡ್ (7.78 ಮೀ.) ಮತ್ತು ಮಧ್ಯಪ್ರದೇಶದ ಆದಿತ್ಯ ಸಿಂಗ್ (7.73 ಮೀ.) ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಜಯಿಸಿದರು.



ಲಾಂಗ್‌ಜಂಪ್‌ನಲ್ಲಿ ಕಂಚು ಗೆದ್ದ ಕರ್ನಾಟಕದ ಎಸ್.ಆರ್ಯ –ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

**ಫೈನಲ್‌ಗೆ ಮನು:** ಸರ್ವಿಸಸ್ ತಂಡವನ್ನು ಪ್ರತಿನಿಧಿಸುತ್ತಿರುವ ಕರ್ನಾಟಕದ ಡಿ.ಪಿ. ಮನು, ಜಾವೆಲಿನ್ ಥ್ರೋನಲ್ಲಿ ಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ ಪ್ರಾಥಮಿಕ ಸುತ್ತಿನಲ್ಲಿ ಅವರು 80.97 ಮೀ. ಸಾಧನೆ ಮಾಡಿದರು.

ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಜಯಿಸಿದ್ದ ತಮಿಳುನಾಡಿನ ವಿದ್ಯಾ ರಾಮರಾಜ್ ಮಹಿಳೆಯರ 400 ಮೀ. ಹರ್ಡಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು. ಸರ್ವಿಸಸ್ ಮತ್ತು ರೈಲ್ವೇಸ್ ಅಥ್ಲೀಟ್‌ಗಳು ಕೂಟದ ಮೂರನೇ ದಿನವೂ ಪ್ರಾಬಲ್ಯ ಮೆರೆದರು.

**ಫಲಿತಾಂಶ: ಪುರುಷರ ವಿಭಾಗ: 5000 ಮೀ. ಓಟ:** ಮುರಳಿ ಗವಿತ್ (ಗುಜರಾತ್; ಕಾಲ: 14 ನಿ. 8.49 ಸೆ.)–1, ಗೌರವ್ ಮಾಥುರ್ (ಸರ್ವಿಸಸ್)–2, ಸಚ್ಚೇಲಾಲ್ ಪಟೇಲ್ (ಸರ್ವಿಸಸ್)–3; **4X400 ಮೀ. ರಿಲೆ:** ಸರ್ವಿಸಸ್ (ಕಾಲ: 3 ನಿ. 8.08 ಸೆ.)–1, ತಮಿಳುನಾಡು–2, ರಾಜಸ್ಥಾನ–3 **ಲಾಂಗ್‌ಜಂಪ್:** ಪಿ.ಡೇವಿಡ್ (ತಮಿಳುನಾಡು; ದೂರ: 7.78 ಮೀ.)–1, ಆದಿತ್ಯ ಸಿಂಗ್ (ಮಧ್ಯಪ್ರದೇಶ)–2, ಎಸ್.ಆರ್ಯ (ಕರ್ನಾಟಕ)–3; **ಹೈಜಂಪ್:** ಭಾರತಿ ವಿಶ್ವನಾಥನ್ (ಸರ್ವಿಸಸ್; ಎತ್ತರ: 2.18 ಮೀ.)–1, ಗುರುಜೀತ್ ಸಿಂಗ್ (ಪೊಲೀಸ್ ಸ್ಪೋರ್ಟ್ಸ್ ಕಂಟ್ರೋಲ್)–2, ಕೌಸ್ತುಭ್ ಜೈಸ್ವಾಲ್ (ಒಎನ್‌ಜಿಸಿ)–3; **ಹ್ಯಾಮರ್ ಥ್ರೋ:** ತರಣ್‌ವೀರ್ ಬೇನ್ಸ್ (ಸರ್ವಿಸಸ್; ದೂರ: 66.41 ಮೀ.)–1, ನೀರಜ್ ಕುಮಾರ್ (ಸರ್ವಿಸಸ್)–2, ಅಜಯ್ ಕುಮಾರ್ (ಹರಿಯಾಣ)–3; **ಶಾಟ್‌ಪಟ್:** ಸಾಹಿಬ್ ಸಿಂಗ್ (ಒಎನ್‌ಜಿಸಿ; ದೂರ: 18.96 ಮೀ.)–1, ಪಾರ್ಥ್ ಲಾಕ್ರ (ದೆಹಲಿ)–2, ಅಭಿಲಾಷ್ (ರೈಲ್ವೇಸ್)–3 **ಮಹಿಳೆಯರ ವಿಭಾಗ:** 5000 ಮೀ. ಓಟ: ಅಂಕಿತಾ (ರೈಲ್ವೇಸ್; ಕಾಲ: 16 ನಿ. 10.5 ಸೆ.)–1, ಸೀಮಾ (ಹಿಮಾಚಲ ಪ್ರದೇಶ)–2, ದೃಷ್ಟಿಬೆನ್ ಚೌಧರಿ (ಗುಜರಾತ್)–3 **4X400 ಮೀ. ರಿಲೆ:** ರೈಲ್ವೇಸ್ (ಕಾಲ: 3 ನಿ. 37.82 ಸೆ.)–1, ಪಂಜಾಬ್–2, ಹರಿಯಾಣ–3; **ಟ್ರಿಪಲ್ ಜಂಪ್:** ಮಲ್ಲಲ ಅನೂಷಾ (ಆಂಧ್ರಪ್ರದೇಶ; ದೂರ: 13.40 ಮೀ.)–1, ಭೈರವಿ ರಾಯ್ (ರೈಲ್ವೇಸ್)–2, ಶಾರ್ವರಿ ಪರುಲೇಕರ್ (ಮಹಾರಾಷ್ಟ್ರ)–3; **ಪೋಲ್‌ವಾಲ್ಟ್:** ಪವಿತ್ರಾ ವೆಂಕಟೇಶ್ (ರೈಲ್ವೇಸ್; ಎತ್ತರ: 4.05 ಮೀ.)–1, ಭರಣಿಕ ಇಳಂಗೋವನ್ (ರೈಲ್ವೇಸ್)–2, ಮರಿಯಾ ಜೈಸನ್ (ಕೇರಳ)–3; **ಡಿಸ್ಕಸ್ ಥ್ರೋ:** ನಿಧಿ (ರೈಲ್ವೇಸ್; ದೂರ: 52.86 ಮೀ.)–1, ನೀತಿಕಾ (ಉತ್ತರ ಪ್ರದೇಶ)–2, ಸಂದೀಪ್ ಕುಮಾರಿ (ರೈಲ್ವೇಸ್)–3

**ದಸರಾ ಕ್ರೀಡಾಕೂಟ • ಅಥ್ಲೆಟಿಕ್ಸ್: ಬೆಳಗಾವಿ, ಮೈಸೂರು ವಿಭಾಗ ಪಾರಮ್ಯ**

# ಮೋನಿಕಾ, ಪ್ರಸನ್ನಗೆ ಅಗ್ರಸ್ಥಾನ

• ಮೋಹನ್ ಕುಮಾರ ಸಿ.

ಮೈಸೂರು: ಬೆಳಗಾವಿ ವಿಭಾಗದ ಪ್ರಸನ್ನಕುಮಾರ್ ಹಾಗೂ ಬೆಂಗಳೂರು ಗ್ರಾಮಾಂತರ ವಿಭಾಗದ ಮೋನಿಕಾ ರುಕ್ಮಯ್ಯ ಗೌಡ ಅವರು ಇಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಸಿ.ಎಂ ಕಪ್ ಪ್ರತಿಭಾನ್ವೇಷಣಾ ದಸರಾ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ 200 ಮೀಟರ್ಸ್ ಓಟದಲ್ಲಿ ಅಗ್ರಸ್ಥಾನ ಪಡೆದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಪ್ರಸನ್ನಕುಮಾರ್ 22.08 ಸೆಕೆಂಡ್‌ಗಳಲ್ಲಿ ಗೆದ್ದರೆ, ನಂತರದ ಸ್ಥಾನವನ್ನು ಬೆಂಗಳೂರು ನಗರ ವಿಭಾಗದ ಈರಯ್ಯ ಹಿರೇಮಠ ಹಾಗೂ ಡಿ.ಸ್ಯಾಮ್ಯುಯೆಲ್ ಪಡೆದರು.

ಮಹಿಳಾ ವಿಭಾಗದಲ್ಲಿ ಮೋನಿಕಾ ರುಕ್ಮಯ್ಯ ಗೌಡ 26.21 ಸೆಕೆಂಡ್‌ಗಳಲ್ಲಿ ಗುರಿದಾಟಿ ಚಿನ್ನ ಗೆದ್ದರೆ, ಮೈಸೂರು ವಿಭಾಗದ ಎಚ್.ಆರ್.ನವಮಿ ದ್ವಿತೀಯ, ಬೆಂಗಳೂರು ಗ್ರಾಮಾಂತರದ ಶಿವಾನಿ ರೈ ಮೂರನೇ ಸ್ಥಾನ ಪಡೆದರು. ಎರಡನೇ ದಿನದ ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಬೆಳಗಾವಿ ಹಾಗೂ ಮೈಸೂರು ವಿಭಾಗದ ಕ್ರೀಡಾಪಟುಗಳು ಪ್ರಾಬಲ್ಯ ಮೆರೆದರು.

ಈಜು ವಿಭಾಗದಲ್ಲಿ ಎರಡನೇ ದಿನವೂ ಬೆಂಗಳೂರು ನಗರ ವಿಭಾಗದ ಸ್ಪರ್ಧಿಗಳು ಮೇಲುಗೈ ಸಾಧಿಸಿದರು. ಪುರುಷರ ವಿಭಾಗದ ಸ್ಪರ್ಧೆಗಳಲ್ಲಿ 4 ಚಿನ್ನ ಗೆದ್ದ ಬೆಂಗಳೂರು ಗ್ರಾಮಾಂತರ ವಿಭಾಗದ ಎಲ್.ಮಣಿಕಂಠ, ಮಹಿಳಾ ವಿಭಾಗದಲ್ಲಿ 4 ಚಿನ್ನ 1 ಬೆಳ್ಳಿ ಗೆದ್ದ ಬೆಂಗಳೂರು ನಗರ ವಿಭಾಗದ ವಿ.ಪ್ರೀತಾ 23 ಅಂಕಗಳೊಂದಿಗೆ ವೈಯಕ್ತಿಕ ಪ್ರಶಸ್ತಿ ಪಡೆದುಕೊಂಡರು.



110 ಮೀ. ಹರ್ಡಲ್ಸ್‌ನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ದಿಶಾಂತ್, ಮೈಸೂರು ವಿಭಾಗದ ಆಕಾಶ್, ಕೆ.ಹರೀಶ್ ಅವರ ಮಿಂಚಿನ ಓಟದ ದೃಶ್ಯ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ.ಟಿ.

**ಮುಖ್ಯಾಂಶಗಳು**

- ಈಜು: ಬೆಂಗಳೂರು ನಗರ ವಿಭಾಗಕ್ಕೆ ಅಗ್ರಸ್ಥಾನ
- ಮಣಿಕಂಠ, ಪ್ರೀತಾ ‘ಚಿನ್ನದ ಮೀನುಗಳು’
- 110 ಮೀ. ಹರ್ಡಲ್ಸ್‌ನಲ್ಲಿ ದಿಶಾಂತ್ ಮಿಂಚು

**ಅಥ್ಲೆಟಿಕ್ಸ್ 2ನೇ ದಿನದ ಫಲಿತಾಂಶಗಳು: ಪುರುಷರ ವಿಭಾಗ:** 5,000 ಮೀ. ಓಟ: ಗೋವಿಂದರಾಜ ಹಲಗಿ (ಬೆಳಗಾವಿ)–1, ಎಂ.ನಿತಿನ್ ಕುಮಾರ್ (ಮೈಸೂರು)–2, ಮಣಿಕಂಠ (ಮೈಸೂರು)–3, ಕಾಲ: 15ನಿ. 37.88ಸೆ; 110 ಮೀ. ಹರ್ಡಲ್ಸ್: ದಿಶಾಂತ್ (ಬೆಂಗಳೂರು ಗ್ರಾಮಾಂತರ)–1, ಆಕಾಶ್ (ಮೈಸೂರು)–2, ಕೆ.ಹರೀಶ್ (ಮೈಸೂರು)–3, ಕಾಲ: 16.01 ಸೆ.; ಟ್ರಿಪಲ್ ಜಂಪ್: ಜಾಫರ್‌ಖಾನ್ ಎಂ. ಸರವಾರ (ಬೆಳಗಾವಿ)–1, ಪಿ.ಆರ್. ದರ್ಶನ್ (ಮೈಸೂರು)–2, ಬಿ.ನವೀನ್ (ಬೆಂಗಳೂರು ನಗರ)–3, ದೂರ: 14.29 ಮೀ. ಶಾಟ್‌ಪಟ್: ಗಣೇಶ್ ನಾಗಪ್ಪ ಗೌಡ (ಮೈಸೂರು)–1, ರಾಹುಲ್ ಆರ್. ಸುವರ್ಣ–2, ಇ.ಹೇಮಂತ್ (ಬೆಂ.ಗ್ರಾ)–3, ದೂರ: 13.32 ಮೀ. **ಮಹಿಳೆಯರ ವಿಭಾಗ:** 3,000 ಮೀ. ಓಟ: ಕೆ.ಎಂ.ಅರ್ಚನಾ (ಬೆಂಗಳೂರು ನಗರ)–1, ಎನ್.ಎಸ್.ರೂಪಶ್ರೀ (ಮೈಸೂರು)–2, ಎಸ್.ಎಂ.ಸಾನಿಕಾ (ಬೆಂಗಳೂರು ಗ್ರಾಮಾಂತರ)–3, ಕಾಲ: , 10 ನಿ.10.43 ಸೆ.; ಲಾಂಗ್‌ಜಂಪ್: ಶ್ವೇತಾ ಪೂಜಾರಿ (ಮೈಸೂರು)–1, ಕೆ.ಎನ್. ಭೂಮಿಕಾ (ಬೆಂ.ಗ್ರಾ)–2, ಛಾರು ವೈಷ್ಣವ್ (ಬೆಂ.ನ)–3, ದೂರ: 5.33 ಮೀ.; ಶಾಟ್‌ಪಟ್: ನವ್ಯಾ ಕೆ.ಭಟ್ (ಬೆಳಗಾವಿ)–1, ಶಹಜಹನಿ (ಮೈಸೂರು)–2, ಗುಣವರ್ಧಿನಿ (ಕಲಬುರಗಿ)–3, ದೂರ: 10.62 ಮೀ.

**ಈಜು 2ನೇ ದಿನದ ಫಲಿತಾಂಶ: ಪುರುಷರ ವಿಭಾಗ:** 100 ಮೀ. ಫ್ರೀಸ್ಟೈಲ್: ಕೆ.ಕುಶಾಲ್ (ಬೆಂಗಳೂರು ನಗರ)–1. ಚಿಂತನ್ ಶೆಟ್ಟಿ (ಮೈಸೂರು)–2, ಇದಾಂತ್ ಚತುರ್ವೇದಿ (ಬೆಂ.ನ)–3, ಕಾಲ: 56.23 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ಬಿ.ಜತಿನ್ (ಬೆಂ.ನ.)–1, ಇದಾಂತ್ ಚತುರ್ವೇದಿ–2, ಸಾತ್ವಿಕ್ ನಾಯಕ್ (ಮೈಸೂರು)–3, ಕಾಲ:1 ನಿಮಿಷ 02.19 ಸೆ.; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಎಲ್.ಮಣಿಕಂಠ (ಬೆಂ.ಗ್ರಾ)–1, ಸುಯೋಗ್ ಗೌಡ (ಬೆಂ.ನ)–2, ಪ್ರಣವ್ (ಮೈಸೂರು)–3, ಕಾಲ: 2 ನಿ. 33.05 ಸೆ.; 200 ಮೀ. ಫ್ರೀಸ್ಟೈಲ್: ಎಲ್. ಮಣಿಕಂಠ–1, ಕೆ.ಕುಶಾಲ್ (ಬೆಂ.ನ)–2, ಸೂರ್ಯ–3; 4x100 ಮೀ ಫ್ರೀಸ್ಟೈಲ್: ಬೆಂಗಳೂರು ನಗರ–1, ಮೈಸೂರು–2, ಬೆಂಗಳೂರು ಗ್ರಾಮಾಂತರ–3, ಕಾಲ: 3 ನಿಮಿಷ 55.38 ಸೆ.

**ಮಹಿಳೆಯರ ವಿಭಾಗ:** 100 ಮೀ. ಫ್ರೀಸ್ಟೈಲ್: ವಿ.ಪ್ರೀತಾ (ಬೆಂ.ನ)–1, ಎಸ್. ಆರ್.ರಚನಾ (ಮೈಸೂರು)–2, ಪಿ.ವರ್ಷಾ (ಮೈಸೂರು)–3; 200 ಮೀ. ಬ್ರೆಸ್ಟ್‌ಸ್ಟ್ರೋಕ್: ಸಿ.ಎಂ.ಗಗನಾ (ಬೆಂ.ನ.)–1, ಧೃತಿ (ಬೆಂ.ನ)–2, ಚಿನ್ಮಯಿ (ಬೆಂ.ಗ್ರಾ)–3, ಕಾಲ: 2 ನಿ.33.05 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ವಿ.ಅದಿತಿ (ಬೆಂ.ನ)–1, ಜಾಹ್ನವಿ ಆರ್.ಶೆಟ್ಟಿ (ಬೆಂ.ನ)–2, ಎಂ.ಪೂರ್ವಿ (ಮೈಸೂರು)–3, ಕಾಲ: 1 ನಿ. 16.84 ಸೆ.; 200 ಮೀ. ಫ್ರೀಸ್ಟೈಲ್: ವಿ.ಪ್ರೀತಾ (ಬೆಂ.ನ.)–1, ವಿ.ಅದಿತಿ (ಬೆಂ.ನ)–2, ಎಸ್.ಆರ್.ರಚನಾ (ಮೈಸೂರು)–3, ಕಾಲ: 2 ನಿ.20.89 ಸೆ.; 4x100ಮೀ ಫ್ರೀಸ್ಟೈಲ್ ರಿಲೆ: ಬೆಂಗಳೂರು ನಗರ–1, ಬೆಂ.ಗ್ರಾ.–2, ಕಲಬುರಗಿ–3, ಕಾಲ: 4ನಿ. 50.44 ಸೆ.

ಪ್ರಜಾವಾಣಿ

## ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**Teachers/ Professors**

**ಶ್ರೀ ಮಂಜುನಾಥಸ್ವಾಮಿ ವಿದ್ಯಾ ಸಮಿತಿ**

ರಿ.ನಂ.ಎಸ್. 397/72-73. ಮರಳಕುಂಟೆ-562111, ಡಾಬಸ್‌ಪೇಟೆ ಮಾರ್ಗ, ನೆಲಮಂಗಲ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ.

**ನೇಮಕಾತಿ ಪ್ರಕಟಣೆ**

ಉಲ್ಲೇಖ: ಮಾನ್ಯ ನಿರ್ದೇಶಕರು (ಪ್ರೌಢಶಿಕ್ಷಣ) ಶಾಲಾ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರುರವರ ಅನುಮತಿ ಸಂ.ಸಿ8(ಗ)ಶಾ.ಶಿ.ಅ.ಖಾ.ಹು.ಭ ಅನು/82/2022-23/ಇ-956294 ದಿನಾಂಕ: 27.09.2023

ಸದರಿ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ **ಶ್ರೀ ಮಂಜುನಾಥ ಗ್ರಾಮಾಂತರ ಅನುದಾನಿತ ಪ್ರೌಢಶಾಲೆಯಲ್ಲಿ** ಖಾಲಿ **ಬೋಧಕ ಹುದ್ದೆಗೆ** ಅರ್ಹ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಯೋಮಿತಿ ಮತ್ತು ವೇತನವು ಸರ್ಕಾರಿ ಆದೇಶ ಮತ್ತು ಇಲಾಖೆ ನಿಯಮಾನುಸಾರ ವಾಗಿರುತ್ತದೆ.

ಪತ್ರದ ಆದೇಶ ಅನುಮತಿ ಸಂ.ಸಿ8(ಗ)ಶಾ.ಶಿ.ಅ.ಖಾ.ಹು.ಭಅನು/82/2022-23/ ಇ-956294 ದಿನಾಂಕ:27-09-2023. ಈ ಆದೇಶದಂತೆ ಸದರಿ ಜಾಹಿರಾತು ನೀಡಲಾಗಿದೆ.

| ಕ್ರ. ಸಂ. | ಶಾಲೆಯ ಹೆಸರು | ಅನುಮತಿಸಿದ ವಿಷಯ | ಖಾಲಿ ಹುದ್ದೆ ಸಂಖ್ಯೆ | ವಿದ್ಯಾರ್ಹತೆ | ಮೀಸಲಾತಿ |
|---|---|---|---|---|---|
| 01 | ಶ್ರೀ ಮಂಜುನಾಥ ಗ್ರಾಮಾಂತರ ಪ್ರೌಢಶಾಲೆ ಮರಳಕುಂಟೆ, ನೆಲಮಂಗಲ ತಾ. ಬೆಂಗಳೂರು ಗ್ರಾಮಾಂತರ ಜಿಲ್ಲೆ | ಕನ್ನಡ (ಸಹ ಶಿಕ್ಷಕರು) | 01 | ಬಿ.ಎ.ಬಿ.ಇಡಿ., ಎಂ.ಎ ಕನ್ನಡಕ್ಕೆ ಆದ್ಯತೆ (ಕನ್ನಡ ಐಚ್ಛಿಕ ಉತ್ತೀರ್ಣ) | ಬಿಂದು-01 ಪರಿಶಿಷ್ಟ ಜಾತಿ |

ನೇಮಕಾತಿ ವಿವರಗಳಲ್ಲಿ ಸರ್ಕಾರ ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಇರುವ ಅರ್ಹ ಅಭ್ಯರ್ಥಿಗಳು ಸ್ವವಿವರಗಳೊಂದಿಗೆ ತಮ್ಮ ಅಂಕಪಟ್ಟಿ ದಾಖಲೆಗಳ ಮೂಲ ಪ್ರತಿಗಳ ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ **ರೂ-1,000/-** ಡಿ.ಡಿ ಯನ್ನು **“ಕಾರ್ಯದರ್ಶಿಗಳು, ಶ್ರೀ ಮಂಜುನಾಥ ವಿದ್ಯಾ ಸಮಿತಿ”** ಹೆಸರಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಡೆದು ಮೂಲ ಡಿ.ಡಿ ಯನ್ನು ಲಗತ್ತಿಸಿ **‘ಮರಳಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಶ್ರೀ ಮಂಜುನಾಥ ವಿದ್ಯಾ ಸಮಿತಿ’** ರವರಿಗೆ ಸಲ್ಲಿಸಬೇಕು. ಹಾಗೆಯೇ ಇನ್ನೊಂದು ಅರ್ಜಿಯ ಪ್ರತಿಯನ್ನು **‘ಮಾನ್ಯ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಚೀರಸಂದ್ರ, ಚಪ್ಪರದಕಲ್ಲು, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ,’** ರವರಿಗೆ ಸಲ್ಲಿಸಬೇಕು. ಜಾಹಿರಾತು ನೀಡಿದ **21 ದಿನಗಳ ಒಳಗಾಗಿ** ಅರ್ಜಿಯನ್ನು ಸಲ್ಲಿಸತಕ್ಕದ್ದು. ತದನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸಂದರ್ಶನದ ದಿನಾಂಕವನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು. ಅರ್ಜಿಯೊಂದಿಗೆ ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ ನಮೂದಿಸಲು ಸೂಚಿಸಿದೆ. ಅಪೂರ್ಣ ಅರ್ಜಿಗಳನ್ನು ಮುನ್ಸೂಚನೆ ನೀಡದೆ ತಿರಸ್ಕರಿಸಲಾಗುವುದು. ಹಾಗೂ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ.

ಸ್ಥಳ: ಮರಳಕುಂಟೆ, ನೆಲಮಂಗಲ ತಾ|| ದಿನಾಂಕ:14.10.2023

ಕಾರ್ಯದರ್ಶಿಗಳು ಶ್ರೀ ಮಂಜುನಾಥ ವಿದ್ಯಾಸಮಿತಿ (ರಿ), ಬೆಂಗಳೂರು ಗ್ರಾಮಾಂತರ ಜಿಲ್ಲೆ.

**Multiple Vacancy**

REQUIRED SUPERVISOR, Telecaller & Field Executive For Bank_Loan Collection. Direct Recruitment to Company:- 7899040499, 9620206756.

**Domestic Helpers / Housekeeping**

NO FEE (labour contractor) ಬೇಕಾಗಿದ್ದಾರೆ. TATA Warehouse: Hoskote, Bangalore, Salary 18000/- , OT. 128 per/ hour work: Packing Loading helpers, 250 Nos Room &Food (Deduct) Ph 9844434996/ 9035240677 SSLC Pass/Fail. Male Female

**General**

ವಿನಾಯಕ ಎಂಟರ್‌ಪ್ರೈಸಸ್ ಬೆಂಗಳೂರಿನಲ್ಲಿ ಕೆಲಸ ಮಾಡಲೂ ಹೆಲ್ಪರ್ ಮತ್ತು ಆಪರೇಟರ್‌ಗಳು ಬೇಕಾಗಿದ್ದಾರೆ ಹೆಚ್ಚಿನಾ ಮಾಹಿತಿಗಿ ಸಂಪರ್ಕಿಸಿ. 9900577212, 9741078408.

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

**ವ್ಯಾಪಾರ**

**Business Offers**

**Finance**

EARN DAILY Rs. 1000 trading and Investment on your own account. Call 9967066300

**ಬಿಲ್ಡರ್ ಎಸೆನ್ಷಿಯಲ್**

**Water Proofing**

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

**ಭವಿಷ್ಯ**

**Astrology**

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

**ವೈಯಕ್ತಿಕ**

**Change of Name**

ನಾನು, ಮಾಲತಿ ಬಾಗೂರು ಶೇಷಾದ್ರಿ, 305, 4ನೇ ಅಡ್ಡರಸ್ತೆ, 4ನೇ ಮುಖ್ಯರಸ್ತೆ, ವಿದ್ಯಾಗಿರಿ ಬಡಾವಣೆ, ಬೆಂಗಳೂರು72 ವಿಳಾಸದಲ್ಲಿ ವಾಸವಗಿದ್ದೇನೆ. ನನ್ನ ಹೆಸರನ್ನು ಮಾಲತಿ.ಎಲ್ ಎಂದು ಬದಲಾಯಿಸಿದ್ದೇನೆ ಎಂದು 10/10/2023 ರಂದು ಬೆಂಗಳೂರಿನ ನೋಟರಿ ದೀಪಾ.ಎಂ ಅವರ ಮುಂದೆ ಅಫಿಡವಿಟ್ ಮೂಲಕ ತಿಳಿಸಲಾಗಿದೆ.

**ಪ್ರವಾಸ**

**Travel**

12 ದಿನಗಳ ನೇಪಾಳ, ಮುಕ್ತಿನಾಥಯಾತ್ರೆ. 10 ದಿನಗಳ ಗುಜರಾತ್. 12 ದಿನಗಳ ಮಧ್ಯಪ್ರದೇಶ. 8 ದಿನಗಳ ಕಾಶಿ,ನೈಮಿಶಾರಣ್ಯ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186, 080-41467722

★6.11.2023 3/9ದಿನಗಳು★ ಕಾಶಿಯಲ್ಲಿ ತಂಗುವುದು. 02.12.2023 11ದಿನಗಳು ಸಂಪೂರ್ಣ ರಾಜಸ್ಥಾನ ಪ್ರವಾಸ. 12.12.2023 10ದಿನಗಳು ಗುಜರಾತ್ ಪ್ರವಾಸ.ಆರ್.ಗಾಂಧಿ ಟೂರ್ಸ್.9902433500/ 9945445809

**Pilgrimage Tours**

**ಗುಜರಾತ್ ಪ್ರವಾಸ** 8ದಿನಗಳು 31/10/23. ನೇಪಾಳ ಪ್ರವಾಸ 7ದಿನಗಳು 27/10/23. ಕಾಶಿ ಪ್ರವಾಸ 7ದಿನಗಳು 26/10/23. ಸುವರ್ಣಯಾತ್ರ 9008381022, 9480843945

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಹಮದಾಬಾದ್‌ನಲ್ಲಿ ಹೈವೋಲ್ಟೇಜ್ ಪಂದ್ಯ ಇಂದು • ಭಾರತಕ್ಕೆ ಪಾಕಿಸ್ತಾನದ ಎದುರು ಅಜೇಯ ಓಟದ ತವಕ • ಗೆಲುವಿನ ನಿರೀಕ್ಷೆಯಲ್ಲಿ ಬಾಬರ್ ಪಡೆ

# ಸಪ್ತ ಜಯದಾಚೆ ಮತ್ತೊಂದು ಯಶಸ್ಸಿನ ತುಡಿತ

ಪ್ರಜಾವಾಣಿ ವಾರ್ತೆ

**ಅಹಮದಾಬಾದ್:** ಭಾರತ ತಂಡವು ಇಲ್ಲಿಯವರೆಗೆ ನಡೆದ ಏಕದಿನ ಕ್ರಿಕೆಟ್ ಮಾದರಿಯ ವಿಶ್ವಕಪ್ ಟೂರ್ನಿಗಳಲ್ಲಿ 'ಬದ್ಧ ಎದುರಾಳಿ' ಪಾಕಿಸ್ತಾನ ತಂಡದ ಎದುರು ಒಂದು ಬಾರಿಯೂ ಸೋತಿಲ್ಲ.

ಇಲ್ಲಿಯ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆಯಲಿರುವ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ಮತ್ತು ಪಾಕ್ ತಂಡಗಳು ಮುಖಾಮುಖಿಯಾಗುತ್ತಿವೆ. ಮತ್ತೊಂದು ಜಯದ ನಿರೀಕ್ಷೆಯಲ್ಲಿದೆ. ಕಳೆದ 31 ವರ್ಷಗಳಲ್ಲಿ ನಡೆದ ವಿಶ್ವಕಪ್ ಟೂರ್ನಿಗಳಲ್ಲಿ ಉಭಯ ತಂಡಗಳು ಏಳು ಬಾರಿ ಮುಖಾಮುಖಿಯಾಗಿವೆ. ಎಲ್ಲ ಸಲವೂ ಭಾರತವೇ ಜಯಿಸಿದೆ. ಎಂಟನೇ ಬಾರಿ ಗೆಲ್ಲುವುದೇ ಎಂಬ ಕುತೂಹಲ ಗರಿಗೆದರಿದೆ.

ಕಳೆದ ಎರಡು ತಿಂಗಳಲ್ಲಿ ಉಭಯ ತಂಡಗಳು ಮುಖಾಮುಖಿಯಾಗುತ್ತಿರುವುದು ಇದು ಮೂರನೇ ಬಾರಿ. ಏಷ್ಯಾ ಕಪ್ ಟೂರ್ನಿಯ ಗುಂಪು ಹಂತದಲ್ಲಿ ಮತ್ತು ಸೂಪರ್ ಫೋರ್ ನಲ್ಲಿ ಮತ್ತೊಮ್ಮೆ ಮುಖಾಮುಖಿಯಾಗಿದ್ದವು. ಗುಂಪು ಹಂತದ ಪಂದ್ಯ ಮಳೆಯ ಪಾಲಾಗಿತ್ತು. ನಾಲ್ಕರ ಘಟ್ಟದಲ್ಲಿ ಭಾರತ ಗೆದ್ದಿತ್ತು. ಈ ಪಂದ್ಯದಲ್ಲಿ ಆ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ಬಾಬರ್ ಆಜಂ ಬಳಗವಿದೆ.

**ಬೌಲರ್‌ಗಳ ಹಣಾಹಣಿ:** ಈ ಪಂದ್ಯವು ಉಭಯ ತಂಡಗಳ ಬೌಲರ್‌ಗಳ ನಡುವಣ ಹಣಾಹಣಿಯೆಂದೇ ಬಿಂಬಿತವಾಗಿದೆ. ಅದರಲ್ಲೂ ಗಾಯದಿಂದ ಸುದೀರ್ಘ ದೂರ ಉಳಿದು ಈಚೆಗಷ್ಟೇ ಅಂಗಳಕ್ಕೆ ಮರಳಿರುವ ಭಾರತದ ಜಸ್‌ಪ್ರೀತ್ ಬೂಮ್ರಾ ಮತ್ತು ಪಾಕ್ ತಂಡದ ಶಾಹೀನ್ ಅಫ್ರಿದಿ ಅವರ ನಡುವಣ ಪೈಪೋಟಿಗೆ ಈ ಪಂದ್ಯ ವೇದಿಕೆಯಾಗಲಿದೆ. ಪಾಕ್ ಬೌಲರ್ ಹ್ಯಾರಿಸ್ ರವೂಫ್‌ಗೆ ತಕ್ಕ ಪೈಪೋಟಿಯೊಡ್ಡಲು ಮೊಹಮ್ಮದ್ ಸಿರಾಜ್ ಸಮರ್ಥರಾಗಿದ್ದಾರೆ. ಪಾಕ್ ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ ಸಿರಾಜ್ ದುಬಾರಿಯಾಗಿದ್ದರು. ಇಲ್ಲಿ ಅವರು ತಮ್ಮ ಲಯ ಕಂಡುಕೊಳ್ಳುವ ಭರವಸೆ ಇದೆ.

ಆದರೆ ಸ್ಪಿನ್ ಬೌಲಿಂಗ್ ವಿಭಾಗದಲ್ಲಿ ಭಾರತದ ಸಾಮರ್ಥ್ಯ ಹೆಚ್ಚು. ಅನುಭವಿ ರವೀಂದ್ರ ಜಡೇಜ, ಕುಲದೀಪ್ ಯಾದವ್ ಮತ್ತು ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಆಡಿದರೆ ಮೂವರು ಸ್ಪಿನ್ನರ್ ಎದುರಿಸುವ ಸವಾಲು ಪಾಕ್ ತಂಡದ ಬ್ಯಾಟಿಂಗ್ ಪಡೆಗೆ ಸವಾಲು ಎದುರಾಗಬಹುದು. ಪಾಕ್ ತಂಡದ ಸ್ಪಿನ್ ಬೌಲರ್‌ಗಳಾದ ಇಫ್ತಿಕಾರ್ ಅಹಮದ್, ಮೊಹಮ್ಮದ್ ನವಾಜ್ ಮತ್ತು ಶಾದಾಬ್ ಖಾನ್ ಭಾರತದ ಸ್ಪಿನ್ನರ್‌ಗಳಷ್ಟು ಅನುಭವಿಗಳಲ್ಲ.

**ಬ್ಯಾಟಿಂಗ್ ಬಲಾಬಲ:** ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಸೊನ್ನೆ ಸುತ್ತಿದ್ದ ರೋಹಿತ್ ಶರ್ಮಾ ಅಫ್ಗನ್ ವಿರುದ್ಧ ಭರ್ಜರಿ ಶತಕ ಬಾರಿಸಿದ್ದರು. ಅವರೊಂದಿಗೆ 'ಇಶಾನ್ ಕಿಶನ್ ಕೂಡ ಉತ್ತಮ ಜೊತೆಯಾಟವಾಡಿದ್ದರು. ಕಳೆದೆರಡು ಪಂದ್ಯಗಳಲ್ಲಿ ವಿರಾಟ್ ಅರ್ಧ ಶತಕಗಳನ್ನು ಗಳಿಸಿದ್ದಾರೆ. ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ಹಾರ್ದಿಕ್ ಪಾಂಡ್ಯ ಅವರೂ ರನ್ ಬೇಟೆಯಾಡಲು ಸಮರ್ಥರಾಗಿದ್ದಾರೆ.

ಆದರೆ, ಪಾಕ್ ತಂಡದಲ್ಲಿ ನಾಯಕ ಬಾಬರ್ ಆಜಂ ಮತ್ತು ಅನುಭವಿ ಫಕರ್ ಜಮಾನ್ ಅವರಿಗೆ ಲಯ ಕಂಡುಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಬ್ದುಲ್ಲಾ ಶಫೀಕ್ ಮತ್ತು ಮೊಹಮ್ಮದ್ ರಿಜ್ವಾನ್ ಮಿಂಚುತ್ತಿದ್ದಾರೆ. ತಂಡವು ಎರಡೂ ಪಂದ್ಯಗಳಲ್ಲಿ ಜಯಿಸಲು ತಮ್ಮ ಬ್ಯಾಟಿಂಗ್ ಮೂಲಕ ಉತ್ತಮ ಕಾಣಿಕೆ ನೀಡಿದ್ದಾರೆ. ಇಬ್ಬರೂ ಶತಕ ದಾಖಲಿಸಿದ್ದಾರೆ. ರಿಜ್ವಾನ್ 2 ಪಂದ್ಯಗಳಿಂದ ಒಟ್ಟು 199 ರನ್ ಗಳಿಸಿದ್ದಾರೆ. ಇದೀಗ ಇವರ ಓಟಕ್ಕೆ ಕಡಿವಾಣ ಹಾಕುವ ಸವಾಲು ಆತಿಥೇಯ ಬೌಲರ್‌ಗಳ ಮುಂದಿದೆ.



ಪಾಕ್ ತಂಡದ ನಾಯಕ ಬಾಬರ್ ಆಜಂ –ಪಿಟಿಐ ಚಿತ್ರ



ಭಾರತ ತಂಡದ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

**ಬಲಾಬಲ (ಏಕದಿನ ಕ್ರಿಕೆಟ್)**

| ಪಂದ್ಯ | ಭಾರತ ಜಯ |
|---|---|
| 7 | 7 |

**ನಾಯಕರ ಸಾಧನೆ (ಏಕದಿನ)**

| * ರೋಹಿತ್ ಶರ್ಮಾ | | * ಬಾಬರ್ ಆಜಂ |
|---|---|---|
| 253 | ಪಂದ್ಯ | 110 |
| 10,243 | ರನ್ | 5,424 |
| 264 | ಶ್ರೇಷ್ಠ | 158 |
| 31 | ಶತಕ | 19 |
| 52 | ಅರ್ಧಶತಕ | 28 |
| 944 | ಬೌಂಡರಿ | 489 |
| 297 | ಸಿಕ್ಸರ್ | 56 |
| 90.96 | ಸ್ಟ್ರೈಕ್‌ರೇಟ್ | 88.88 |

**ಪಂದ್ಯ ಆರಂಭ: ಮಧ್ಯಾಹ್ನ 2**

**ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್**

**ತಂಡಗಳು**

**ಭಾರತ:** ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ವಿರಾಟ್ ಕೊಹ್ಲಿ, ಇಶಾನ್ ಕಿಶನ್, ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್, ರವೀಂದ್ರ ಜಡೇಜ, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಮೊಹಮ್ಮದ್ ಶಮಿ, ಆರ್. ಅಶ್ವಿನ್, ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್.

**ಪಾಕಿಸ್ತಾನ:** ಬಾಬರ್ ಆಜಂ (ನಾಯಕ), ಶಾದಾಬ್ ಖಾನ್, ಫಕರ್ ಜಮಾನ್, ಇಮಾಮ್ ಉಲ್ ಹಕ್, ಅಬ್ದುಲ್ ಶಫೀಕ್, ಮೊಹಮ್ಮದ್ ರಿಜ್ವಾನ್, ಸಾದ್ ಶಕೀಲ್, ಇಫ್ತಿಕಾರ್ ಅಹಮದ್, ಸಲ್ಮಾನ್ ಅಲಿ ಅಘಾ, ಮೊಹಮ್ಮದ್ ನವಾಜ್, ಉಸಾಮಾ ಮೀರ್, ಹ್ಯಾರಿಸ್ ರವೂಫ್, ಹಸನ್ ಅಲಿ, ಶಾಹೀನ್ ಆಫ್ರಿದಿ, ಮೊಹಮ್ಮದ್ ವಸೀಂ.

## ಪಿಚ್ ಹೇಗಿದೆ?

ಈ ಬಾರಿಯ ವಿಶ್ವಕಪ್ ಟೂರ್ನಿಯ ಉದ್ಘಾಟನೆ ಪಂದ್ಯವು ಇಲ್ಲಿಯೇ ನಡೆದಿತ್ತು. ಅದರಲ್ಲಿ ಇಂಗ್ಲೆಂಡ್ ವಿರುದ್ಧ ನ್ಯೂಜಿಲೆಂಡ್ ತಂಡ ಗೆದ್ದಿತ್ತು. ಕಿವೀಸ್ ಬಳಗದ ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಶತಕಗಳನ್ನು ಸಿಡಿಸಿದ್ದರು. ಇಬ್ಬರ ಜೊತೆಯಾಟದಲ್ಲಿ 273 ರನ್‌ಗಳು ಸೇರಿದ್ದವು. ಇಲ್ಲಿಯ ಪಿಚ್ ಬ್ಯಾಟಿಂಗ್ ಸ್ನೇಹಿ ಆಗಿರದಿದ್ದರೂ ಅವರಿಬ್ಬರು ಇಂಗ್ಲೆಂಡ್ ಬೌಲರ್‌ಗಳನ್ನು ಎದುರಿಸಿ ರನ್ ಗಳಿಸಿದ್ದರು. ಭಾರತ ತಂಡದ ಜಸ್‌ಪ್ರೀತ್ ಬೂಮ್ರಾ ಈ ಅಂಗಳದಲ್ಲಿ ಇದುವರೆಗೆ ಏಕದಿನ ಪಂದ್ಯ ಆಡಿಲ್ಲ. ಮೊಹಮ್ಮದ್ ಸಿರಾಜ್ ತಮ್ಮ ಲಯಕ್ಕೆ ಮರಳಿದರೆ ಪಾಕ್ ಬ್ಯಾಟರ್‌ಗಳಿಗೆ ತಲೆನೋವಾಗಬಹುದು. ಅದೇ ರೀತಿ ಪಾಕ್ ತಂಡದ ಶಾಹೀನ್ ಶಾ ಅಫ್ರಿದಿ, ಹ್ಯಾರಿಸ್ ರವೂಫ್ ಅವರಿಗೂ ಇಲ್ಲಿ ಉತ್ತಮ ನೆರವು ಸಿಕ್ಕರೆ ಅಚ್ಚರಿಯಿಲ್ಲ. ಮಧ್ಯಾಹ್ನದ ಬಿಸಿಲಿನಲ್ಲಿ (36 ಡಿಗ್ರಿ ಸೆಲ್ಸಿಯಸ್) ಟಾಸ್ ಗೆದ್ದ ತಂಡದ ನಿರ್ಣಯವೂ ಮಹತ್ವದ್ದಾಗಲಿದೆ. ಮಳೆ ಬರುವ ಸಾಧ್ಯತೆಯೂ ಇದೆ.

## ಕ್ರಿಕೆಟ್ ರಾತ್ರಿ!

ನವರಾತ್ರಿ ಆರಂಭದ ಮುನ್ನಾದಿನವೇ ಅಹಮದಾಬಾದಿನಲ್ಲಿ 'ಕ್ರಿಕೆಟ್ ರಾತ್ರಿ'ಯ ಸಂಭ್ರಮದ ಆಚರಣೆಗಾಗಿ ಕ್ರಿಕೆಟ್‌ಪ್ರೇಮಿಗಳು ಕಾತರದಿಂದ ಕಾದಿದ್ದಾರೆ. ದೇಶ, ವಿದೇಶಗಳಿಂದ ಸಾವಿರಾರು ರೂಪಾಯಿ ಖರ್ಚು ಮಾಡಿ ಪಂದ್ಯ ನೋಡಲೆಂದೇ ಇಲ್ಲಿಗೆ ಬಂದಿದ್ದಾರೆ. ಪಂದ್ಯ, ವಿಮಾನಯಾನದ ಟಿಕೆಟ್‌ಗಳು ಮತ್ತು ವಸತಿಗೃಹಗಳನ್ನು ಕಾದಿರಿಸಲು ಹರಸಾಹಸಪಟ್ಟಿದ್ದಾರೆ. ಅವರೆಲ್ಲರಿಗೂ ಕ್ರಿಕೆಟ್ ರಸದೌತಣ ನೀಡಲು ಉಭಯ ತಂಡಗಳ ಆಟಗಾರರು ಸಿದ್ಧರಾಗಿದ್ದಾರೆ.

ಈ ಬಾರಿ ವಿಶ್ವಕಪ್ ಟೂರ್ನಿಗೆ ಮೊದಲು ಪ್ರಕಟವಾದ ವೇಳಾಪಟ್ಟಿಯಲ್ಲಿ ಈ ಪಂದ್ಯವು ಅಕ್ಟೋಬರ್ 15ರಂದು ನಿಗದಿಯಾಗಿತ್ತು. ಆದರೆ, ನವರಾತ್ರಿ ಅಂಗವಾಗಿ ಒಂದು ದಿನ ಹಿಂದೂಡಲಾಯಿತು. ಗುಜರಾತ್‌ನಲ್ಲಿ ದಸರಾ ಹಬ್ಬವನ್ನು ಹತ್ತು ದಿನಗಳವರೆಗೆ ವಿಜೃಂಭಣೆಯಿಂದ ಆಚರಿಸುತ್ತಾರೆ. ಆದ್ದರಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸ್ಥಳೀಯ ಪೊಲೀಸ್ ಇಲಾಖೆಯ ಮನವಿಗೆ ಐಸಿಸಿ ಮತ್ತು ಬಿಸಿಸಿಐ ಪಂದ್ಯದ ದಿನಾಂಕ ಬದಲಾವಣೆಗೆ ಸಮ್ಮತಿಸಿದ್ದವು.

**ಬಲಾಬಲ (ಏಕದಿನ ಕ್ರಿಕೆಟ್)**

| | |
|---|---|
| ಪಂದ್ಯ | 134 |
| ಭಾರತ ಜಯ | 56 |
| ಪಾಕ್ ಜಯ | 73 |
| ಫಲಿತಾಂಶವಿಲ್ಲ | 5 |

## ವಿಶ್ವಕಪ್‌ನಲ್ಲಿ ಮುಖಾಮುಖಿ

ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ಮತ್ತು ಪಾಕಿಸ್ತಾನ ತಂಡಗಳು ಒಟ್ಟು ಏಳು ಬಾರಿ ಮುಖಾಮುಖಿಯಾಗಿದ್ದು, ಎಲ್ಲ ಪಂದ್ಯಗಳಲ್ಲೂ ಭಾರತ ಜಯ ಸಾಧಿಸಿದೆ.

**1992 (ಸಿಡ್ನಿ)**
- **ಭಾರತ:** 49 ಓವರುಗಳಲ್ಲಿ 7 ವಿಕೆಟ್‌ಗೆ **216** (ಸಚಿನ್ ತೆಂಡೂಲ್ಕರ್ ಔಟಾಗದೇ 54; ಮುಷ್ತಾಕ್ ಅಹ್ಮದ್ 59ಕ್ಕೆ3); **ಪಾಕಿಸ್ತಾನ:** 48.1 ಓವರುಗಳಲ್ಲಿ 173 (ಆಮೀರ್ ಸೊಹೈಲ್ 62). ಭಾರತಕ್ಕೆ **43** ರನ್ ಜಯ.

**1996 (ಬೆಂಗಳೂರು, ಕ್ವಾರ್ಟರ್‌ಫೈನಲ್)**
- **ಭಾರತ:** 50 ಓವರುಗಳಲ್ಲಿ 8 ವಿಕೆಟ್‌ಗೆ **287** (ನವಜೋತ್ ಸಿಧು 93); **ಪಾಕಿಸ್ತಾನ:** 49 ಓವರುಗಳಲ್ಲಿ 9 ವಿಕೆಟ್‌ಗೆ 248 (ನಿಧಾನಗತಿಯ ಓವರು ಮಾಡಿದ್ದಕ್ಕೆ1 ಓವರ್ ದಂಡ) (ಆಮೀರ್ ಸೊಹೈಲ್ 55; ವೆಂಕಟೇಶ ಪ್ರಸಾದ್ 45ಕ್ಕೆ3, ಅನಿಲ್ ಕುಂಬ್ಳೆ 48ಕ್ಕೆ3). ಭಾರತಕ್ಕೆ **39** ರನ್ ಜಯ

**1999 (ಮ್ಯಾಂಚೆಸ್ಟರ್)**
- **ಭಾರತ:** 50 ಓವರುಗಳಲ್ಲಿ 6 ವಿಕೆಟ್‌ಗೆ **227** (ರಾಹುಲ್ ದ್ರಾವಿಡ್ 61, ಮೊಹಮ್ಮದ್ ಅಜರುದ್ದೀನ್ 59); **ಪಾಕಿಸ್ತಾನ:** 45.3 ಓವರುಗಳಲ್ಲಿ 180 (ಜಾವಗಲ್ ಶ್ರೀನಾಥ್ 37ಕ್ಕೆ3, ವೆಂಕಟೇಶ ಪ್ರಸಾದ್ 27ಕ್ಕೆ5). ಭಾರತಕ್ಕೆ **47** ರನ್ ಜಯ.

**2003 (ಸೆಂಚುರಿಯನ್, ದಕ್ಷಿಣ ಆಫ್ರಿಕ)**
- **ಪಾಕಿಸ್ತಾನ:** 50 ಓವರುಗಳಲ್ಲಿ 7 ವಿಕೆಟ್‌ಗೆ **273** (ಸಯೀದ್ ಅನ್ವರ್ 101); **ಭಾರತ:** 45.4 ಓವರುಗಳಲ್ಲಿ 4 ವಿಕೆಟ್‌ಗೆ 276 (ಸಚಿನ್ ತೆಂಡೂಲ್ಕರ್ 98, ರಾಹುಲ್ ದ್ರಾವಿಡ್ ಔಟಾಗದೇ 44, ಯುವರಾಜ್ ಸಿಂಗ್ ಔಟಾಗದೇ 50). ಭಾರತಕ್ಕೆ **6** ವಿಕೆಟ್ ಜಯ

**2011 (ಮೊಹಾಲಿ, ಎರಡನೇ ಸೆಮಿಫೈನಲ್)**
- **ಭಾರತ:**50 ಓವರುಗಳಲ್ಲಿ 9 ವಿಕೆಟ್‌ಗೆ 260 (ಸಚಿನ್ ತೆಂಡೂಲ್ಕರ್ 85, ವಹಾಬ್ ರಿಯಾಜ್ 46ಕ್ಕೆ4); **ಪಾಕಿಸ್ತಾನ:** 49.5 ಓವರುಗಳಲ್ಲಿ 231 (ಮಿಸ್ಬಾ–ಉಲ್–ಹಕ್ 56). ಭಾರತಕ್ಕೆ 29 ರನ್ ಜಯ.

**2015 (ಆಡಿಲೇಡ್)**
- **ಭಾರತ:** 50 ಓವರುಗಳಲ್ಲಿ 7 ವಿಕೆಟ್‌ಗೆ **300** (ಶಿಖರ್ ಧವನ್ 73, ವಿರಾಟ್ ಕೊಹ್ಲಿ 107, ಸುರೇಶ್ ರೈನಾ 74; ಸೊಹೇಲ್ ಖಾನ್ 55ಕ್ಕೆ5); **ಪಾಕಿಸ್ತಾನ:** 47 ಓವರುಗಳಲ್ಲಿ 224 (ಮಿಸ್ಬಾ–ಉಲ್–ಹಕ್ 76; ಮೊಹಮ್ಮದ್ ಶಮಿ 35ಕ್ಕೆ4). ಭಾರತಕ್ಕೆ **76** ರನ್ ಜಯ.

**2019 (ಓಲ್ಡ್ ಟ್ರಾಫರ್ಡ್)**
- **ಭಾರತ:** 50 ಓವರ್‌ಗಳಲ್ಲಿ 5 ವಿಕೆಟ್‌ಗೆ 336 (ರೋಹಿತ್ ಶರ್ಮಾ **140**, ವಿರಾಟ್ ಕೊಹ್ಲಿ 77, ಕೆ.ಎಲ್. ರಾಹುಲ್ 57; ಮೊಹಮ್ಮದ್ ಅಮೀರ್ 47ಕ್ಕೆ3); **ಪಾಕಿಸ್ತಾನ:** 40 ಓವರುಗಳಲ್ಲಿ (302 ರನ್ ಗುರಿ) 6 ವಿಕೆಟ್‌ಗೆ 212 (ಫಕರ್ ಜಮಾನ್ 62). (ಡಕ್‌ವರ್ಥ್ ಲೂಯಿಸ್ ನಿಯಮದ ಅಡಿ ಭಾರತಕ್ಕೆ **89** ರನ್ ಜಯ)



ವಿರಾಟ್ ಕೊಹ್ಲಿ

# ಕಿವೀಸ್ ತಂಡಕ್ಕೆ ಹ್ಯಾಟ್ರಿಕ್ ಜಯ

## ಫರ್ಗ್ಯುಸನ್ ಅಮೋಘ ದಾಳಿ: ಕೇನ್, ಮಿಚೆಲ್ ಅರ್ಧಶತಕ, ಬಾಂಗ್ಲಾಗೆ ನಿರಾಶೆ

**ಚೆನ್ನೈ (ಪಿಟಿಐ):** ನ್ಯೂಜಿಲೆಂಡ್ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಗೆಲುವಿನ ಹ್ಯಾಟ್ರಿಕ್ ಸಾಧಿಸಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಲಾಕಿ ಫರ್ಗ್ಯುಸನ್ (49ಕ್ಕೆ3) ಅವರ ಅಮೋಘ ಬೌಲಿಂಗ್, ಕೇನ್ ವಿಲಿಯಮ್ಸನ್ ಮತ್ತು ಡೆರಿಲ್ ಮಿಚೆಲ್ ಅವರ ಅರ್ಧಶತಕಗಳ ಬಲದಿಂದ ಕಿವೀಸ್ ತಂಡವು 8 ವಿಕೆಟ್‌ಗಳಿಂದ ಬಾಂಗ್ಲಾದೇಶ ಎದುರು ಗೆದ್ದಿತು. ಇದರೊಂದಿಗೆ ತಂಡವು ಟೂರ್ನಿಯಲ್ಲಿ ಸತತ ಮೂರನೇ ಜಯ ಸಾಧಿಸಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅನುಭವಿ ಬೌಲರ್‌ಗಳಾದ ಟ್ರೆಂಟ್ ಬೌಲ್ಟ್ ಮತ್ತು ಲಾಕಿ ಫರ್ಗ್ಯುಸನ್ ಅವರು ಆರಂಭದಲ್ಲಿಯೇ ಯಶಸ್ಸು ಗಳಿಸಿದರು. ಇದರಿಂದಾಗಿ ಬಾಂಗ್ಲಾ ತಂಡವು 56 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಮುಷ್ಫಿಕುರ್ ರಹೀಂ (66; 75ಎ, 4X6, 6X2) ಮತ್ತು ನಾಯಕ ಶಕೀಬ್ ಅಲ್ ಹಸನ್ (40; 51ಎ, 4X3, 6X2) ಐದನೇ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 245 ರನ್ ಮೊತ್ತ ಗಳಿಸಿತು. ಬಾಂಗ್ಲಾ ತಂಡದ ಮೆಹಮುದುಲ್ಲಾ 49 ಎಸೆತಗಳಲ್ಲಿ 41 ರನ್ ಗಳಿಸಿದರು.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 43 ಎಸೆತಗಳು ಬಾಕಿ ಇದ್ದಾಗಲೇ 2 ವಿಕೆಟ್‌ಗಳಿಗೆ 248 ರನ್ ಗಳಿಸಿ ಗೆದ್ದಿತು.

ಕಿವೀಸ್ ಬಳಗದಲ್ಲಿರುವ ಬೆಂಗಳೂರು ಮೂಲದ ರಚಿನ್ ರವೀಂದ್ರ ಈ ಪಂದ್ಯದಲ್ಲಿ ಕೇವಲ 9 ರನ್ ಗಳಿಸಿ ಔಟಾದರು. ಆದರೆ ಅಮೋಘ ಲಯದಲ್ಲಿರುವ ಡೆವೊನ್ ಕಾನ್ವೆ (45; 59ಎ, 4X3) ಅವರೊಂದಿಗೆ ಸೇರಿದ ಕೇನ್ ವಿಲಿಯಮ್ಸನ್ (78; 107ಎ) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು.

**ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ**

| ದೇಶ | ಪಂದ್ಯ | ಗೆಲುವು | ಸೋಲು | ಟೈ | ಪಾಯಿಂಟ್ | ಎನ್‌ಆರ್‌ಆರ್ |
|---|---|---|---|---|---|---|
| ನ್ಯೂಜಿಲೆಂಡ್ | 3 | 3 | 0 | 0 | 6 | 1.604 |
| ದಕ್ಷಿಣ ಆಫ್ರಿಕಾ | 2 | 2 | 0 | 0 | 4 | 2.360 |
| ಭಾರತ | 2 | 2 | 0 | 0 | 4 | 1.500 |
| ಪಾಕಿಸ್ತಾನ | 2 | 2 | 0 | 0 | 4 | 0.927 |
| ಇಂಗ್ಲೆಂಡ್ | 2 | 1 | 1 | 0 | 2 | 0.553 |
| ಬಾಂಗ್ಲಾದೇಶ | 3 | 1 | 2 | 0 | 2 | -0.699 |
| ಶ್ರೀಲಂಕಾ | 2 | 0 | 2 | 0 | 0 | -1.161 |
| ನೆದರ್ಲೆಂಡ್ಸ್ | 2 | 0 | 2 | 0 | 0 | -1.438 |
| ಆಸ್ಟ್ರೇಲಿಯಾ | 2 | 0 | 2 | 0 | 0 | -1.846 |
| ಅಫ್ಗಾನಿಸ್ತಾನ | 2 | 0 | 2 | 0 | 0 | -1.907 |



ನ್ಯೂಜಿಲೆಂಡ್ ತಂಡದ ಲಾಕಿ ಫರ್ಗ್ಯುಸನ್

ಕಾನ್ವೆ ಔಟಾದ ನಂತರ ಕೇನ್ ಜೊತೆಗೆ ಸೇರಿದ ಡೆರಿಲ್ ಮಿಚೆಲ್ (ಔಟಾಗದೆ 89; 67ಎ, 4X6, 6X4) ಮೂರನೇ ವಿಕೆಟ್ ಜೊತೆಯಾಟದಲ್ಲಿ 108 ರನ್ ಸೇರಿಸಿದರು. ಆದರೆ ಕೇನ್ ವಿಲಿಯಮ್ಸನ್ ಗಾಯಗೊಂಡು ನಿವೃತ್ತಿ ಪಡೆದು ಮರಳಿದರು. ಮಿಚೆಲ್ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಕೇನ್ ಅವರು ಕಳೆದ ಐಪಿಎಲ್ ಸಂದರ್ಭದಲ್ಲಿ ಗಾಯಗೊಂಡಿದ್ದರು. ತದನಂತರ ಅವರು ದೀರ್ಘ ಕಾಲ ಕ್ರಿಕೆಟ್‌ನಿಂದ ದೂರವುಳಿದಿದ್ದರು. ವಿಶ್ವಕಪ್ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಅವರು ಆಡಿರಲಿಲ್ಲ. ಆದ್ದರಿಂದ ಟಾಮ್ ಲಥಾಮ್ ತಂಡವನ್ನು ಮುನ್ನಡೆಸಿದ್ದರು.

**ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ:** 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 245 (ಮೆಹದಿ ಹಸನ್ 30, ಶಕೀಬ್ ಅಲ್ ಹಸನ್ 40, ಮುಷ್ಫಿಕುರ್ ರಹೀಂ 66, ಮೆಹಮುದುಲ್ಲಾ ಔಟಾಗದೆ 41, ಟ್ರೆಂಟ್ ಬೌಲ್ಟ್ 45ಕ್ಕೆ2, ಮ್ಯಾಟ್ ಹೆನ್ರಿ 58ಕ್ಕೆ2, ಲಾಕಿ ಫರ್ಗ್ಯುಸನ್ 49ಕ್ಕೆ3) **ನ್ಯೂಜಿಲೆಂಡ್:** 42.5 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 248 (ಡೆವೊನ್ ಕಾನ್ವೆ 45, ಕೇನ್ ವಿಲಿಯಮ್ಸನ್ 78 (ನಿವೃತ್ತಿ), ಡೆರಿಲ್ ಮಿಚೆಲ್ ಔಟಾಗದೆ 89, ಗ್ಲೆನ್ ಫಿಲಿಪ್ಸ್ ಔಟಾಗದೆ 16, ಮುಸ್ತಫಿಜುರ್ ರೆಹಮಾನ್ 36ಕ್ಕೆ1, ಶಕೀಬ್ ಅಲ್ ಹಸನ್ 54ಕ್ಕೆ1).

**ಫಲಿತಾಂಶ:** ನ್ಯೂಜಿಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ ಹಾಗೂ ಎರಡು ಅಂಕ.



ನ್ಯೂಜಿಲೆಂಡ್ ತಂಡದ ಕೇನ್ ವಿಲಿಯಮ್ಸನ್ ಮತ್ತು ಡೆರಿಲ್ ಮಿಚೆಲ್ –ಪಿಟಿಐ ಚಿತ್ರ



ಶುಭಮನ್ ಗಿಲ್ –ಪಿಟಿಐ ಚಿತ್ರ

## ಗಿಲ್ ಶೇ 99ರಷ್ಟು ಲಭ್ಯ: ರೋಹಿತ್

**ಅಹಮದಾಬಾದ್ (ಪಿಟಿಐ):** ಡೆಂಗಿ ಜ್ವರದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ಭಾರತದ ಶುಭಮನ್ ಗಿಲ್ ಅವರು ಫಿಟ್ ಆಗಿದ್ದಾರೆ. ಪಾಕಿಸ್ತಾನ ಎದುರಿನ ಪಂದಕ್ಕೆ ಶೇ 99ರಷ್ಟು ಲಭ್ಯ ಇದ್ದಾರೆ ಎಂದು ನಾಯಕ ರೋಹಿತ್ ಶರ್ಮಾ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ರೋಹಿತ್, 'ಭಾರತ ಮತ್ತು ಪಾಕ್ ನಡುವಣ ಪಂದ್ಯಕ್ಕೆ ಅಂತಿಮ ಹನ್ನೊಂದರ ಬಳಗದ ಆಯ್ಕೆಗಾಗಿ ಅವರು ಲಭ್ಯರಿದ್ದಾರೆ' ಎಂದರು.

ಶುಕ್ರವಾರ ಗಿಲ್ ಅವರು ನೆಟ್ಸ್‌ನಲ್ಲಿ ಲವಲವಿಕೆಯಿಂದ ಅಭ್ಯಾಸ ಮಾಡಿದರು. ಬೌಲರ್‌ಗಳ ಎಸೆತಗಳನ್ನು ಎದುರಿಸಿದರು. ಮೊಹಮ್ಮದ್ ಶಮಿ, ಆರ್.ಅಶ್ವಿನ್ ಅವರ ಎಸೆತಗಳನ್ನು ಅಡಿದರು. ಸುಮಾರು 20 ನಿಮಿಷ ಥ್ರೋಡೌನ್ ಪರಿಣತರ ಎದುರು ಬ್ಯಾಟಿಂಗ್ ಅಭ್ಯಾಸ ಮಾಡಿದರು.

ಕೆಲವೇ ದಿನಗಳ ಹಿಂದಷ್ಟೇ ಅವರಿಗೆ ಡೆಂಗಿ ಇರುವುದು ಪತ್ತೆಯಾಗಿತ್ತು. ಅವರ ರಕ್ತದ ಪ್ಲೇಟ್‌ಲೆಟ್ ಸಂಖ್ಯೆಯು 70 ಸಾವಿರಕ್ಕೆ ಇಳಿದಿತ್ತು. ಚಿಕಿತ್ಸೆಗೆ ದಾಖಲಾಗಿದ್ದ ಅವರು ವಿಶ್ವಕಪ್ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಆಡಿರಲಿಲ್ಲ. ಆದರೆ ಮೊಟೇರಾ ಕ್ರೀಡಾಂಗಣದ ನೆಟ್ಸ್‌ನಲ್ಲಿ ತಾಲೀಮು ನಡೆಸಿದ ಅವರ ಹಾವಭಾವ ಮತ್ತು ಮುಖದಲ್ಲಿ ದಣಿವಿನ ಲವಲೇಶವೂ ಇರಲಿಲ್ಲ. ಕಳೆದ ಎರಡೂ ಪಂದ್ಯಗಳಲ್ಲಿ ಇನಿಂಗ್ಸ್ ಆರಂಭಿಸಿದ್ದ ಇಶಾನ್ ಕಿಶನ್ ಫೀಲ್ಡಿಂಗ್ ಅಭ್ಯಾಸ ನಡೆಸಿದರು. ಆದರೆ ನೆಟ್ಸ್‌ನಲ್ಲಿ ಬ್ಯಾಟ್ ಬೀಸಲಿಲ್ಲ.

ಒಲಿಂಪಿಕ್ಸ್‌ಗೆ ಬಾಕ್ಸಿಂಗ್: ನಿರ್ಧಾರ ತಡೆಹಿಡಿದ ಐಒಸಿ ಸಭೆ

# ಕ್ರಿಕೆಟ್ ಸೇರ್ಪಡೆಗೆ ಹಸಿರು ನಿಶಾನೆ

**ಮುಂಬೈ (ಪಿಟಿಐ):** ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯು ಬಾಕ್ಸಿಂಗ್ ಕ್ರೀಡೆಗೆ ಸಂಬಂಧಿಸಿ ಯಾವುದೇ ಸಂಸ್ಥೆಗೆ ಮಾನ್ಯತೆ ನೀಡಿಲ್ಲ. ಹೀಗಾಗಿ 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ಗೆ ಬಾಕ್ಸಿಂಗ್ ಸೇರ್ಪಡೆ ನಿರ್ಧಾರವನ್ನು ತಡೆಹಿಡಿಯಲಾಗಿದೆ ಎಂದು ಸಮಿತಿಯ ಕಾರ್ಯಕಾರಿ ಮಂಡಳಿ (ಇಬಿ) ಶುಕ್ರವಾರ ತಿಳಿಸಿದೆ.

ಮಾಡರ್ನ್ ಪೆಂಟಥ್ಲಾನ್ ಮತ್ತು ವೇಟ್‌ಲಿಫ್ಟಿಂಗ್ ಸೇರ್ಪಡೆಗೆ ಮಂಡಳಿಯು ಶಿಫಾರಸು ಮಾಡಿದೆ. ಮಂಡಳಿಯ ಎರಡು ದಿನಗಳ ಸಭೆ ಶುಕ್ರವಾರ ಮುಕ್ತಾಯಗೊಂಡಿತು.

ಈ ಸಭೆಯ ಬೆನ್ನಲ್ಲೇ ಅ. 15 ರಿಂದ 17ರವರೆಗೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ 141ನೇ ಅಧಿವೇಶನವೂ ಮುಂಬೈನಲ್ಲಿ ನಡೆಯಲಿದೆ. ಅಧಿವೇಶನವನ್ನು ಪ್ರಧಾನಿ ನರೇಂದ್ರ ಮೋದಿ ಅವರು 14ರ (ಶನಿವಾರ) ಸಂಜೆ ಉದ್ಘಾಟಿಸುವರು.

ಐಒಸಿಯ ಅಧಿವೇಶವು, ಕ್ರಿಕೆಟ್ (ಟಿ–20) ಜೊತೆಗೆ ಇತರ ನಾಲ್ಕು ಕ್ರೀಡೆಗಳನ್ನು– ಸ್ಕ್ವಾಷ್, ಫ್ಲ್ಯಾಗ್ ಫುಟ್‌ಬಾಲ್, ಲ್ಯಾಕ್ರೊಸಿ (ಸಿಕ್ಸಸ್) ಮತ್ತು ಬೇಸ್‌ಬಾಲ್/ಸಾಫ್ಟ್‌ಬಾಲ್– 2028ರ ಒಲಿಂಪಿಕ್ಸ್‌ಗೆ ಸೇರ್ಪಡೆ ಮಾಡುವ ಸಂಬಂಧ ನಿರ್ಧಾರಕ್ಕೆ ಬರಲಿದೆ. ಇ.ಬಿ. ಈಗಾಗಲೇ ಇದಕ್ಕೆ ಸಮ್ಮತಿ ನೀಡಿದೆ.

ಅಂತರರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ (ಐಬಿಎ)ಗೆ ನೀಡಿದ್ದ ಮಾನ್ಯತೆಯನ್ನು ಐಒಸಿ ಈಗಾಗಲೇ ಹಿಂಪಡೆದಿದ್ದು, ಪರ್ಯಾಯ ಸಂಸ್ಥೆಗೂ ಮನ್ನಣೆ ನೀಡಿಲ್ಲ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ವೇಟ್‌ಲಿಫ್ಟಿಂಗ್‌ನಲ್ಲಿ ವ್ಯಾಪಕ ಉದ್ದೀಪನ ಮದ್ದು ಪಿಡುಗು ಹಿನ್ನೆಲೆಯಲ್ಲಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳುವಂತೆ ಅಂತರರಾಷ್ಟ್ರೀಯ ವೇಟ್‌ಲಿಫ್ಟಿಂಗ್ ಫೆಡರೇಷನ್‌ಗೆ (ಐಡಬ್ಲ್ಯುಎಫ್) ಐಒಸಿ ಸೂಚಿಸಿತ್ತು. ಕ್ರಮ ಕೈಗೊಳ್ಳದಿದ್ದರೆ ಒಲಿಂಪಿಕ್ಸ್‌ನಿಂದ ಈ ಕ್ರೀಡೆಯನ್ನು ಕೈಬಿಡುವುದಾಗಿಯೂ ಎಚ್ಚರಿಕೆ ನೀಡಿತ್ತು. ಈಗ ಆ ನಿಟ್ಟಿನಲ್ಲಿ ಐಡಬ್ಲ್ಯುಎಫ್ ಮುಂದಾಗಿರುವ ಕಾರಣ ಈ ಕ್ರೀಡೆಯ ಸೇರ್ಪಡೆಗೆ ಮುಂದಾಗಿದೆ.

## ಕ್ರಿಕೆಟ್: ಅಲಸ್ಟೇರ್ ಕುಕ್ ನಿವೃತ್ತಿ

**ಲಂಡನ್ (ಪಿಟಿಐ):** ಇಂಗ್ಲೆಂಡ್ ತಂಡದ ಮಾಜಿ ನಾಯಕ ಅಲಸ್ಟೇರ್ ಕುಕ್ ಅವರು ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಶುಕ್ರವಾರ ನಿವೃತ್ತಿ ಪ್ರಕಟಿಸಿದ್ದಾರೆ. ಇದರೊಂದಿಗೆ ಎರಡು ದಶಕಗಳ ಕ್ರಿಕೆಟ್ ವೃತ್ತಿಜೀವನಕ್ಕೆ ತೆರೆಬಿದ್ದಿದೆ.

ಟೆಸ್ಟ್ ಮತ್ತು ಏಕದಿನ ಕ್ರಿಕೆಟ್‌ಗೆ 2018 ರಲ್ಲೇ 'ಗುಡ್‌ಬೈ' ಹೇಳಿದ್ದ ಅವರು ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ಎಸೆಕ್ಸ್ ತಂಡದ ಪರ ಆಟ ಮುಂದುವರಿಸಿದ್ದರು. ಹಾಲಿ ಋತುವಿನೊಂದಿಗೆ ಎಸೆಕ್ಸ್ ತಂಡದ ಜತೆಗಿನ ಅವರ ಒಪ್ಪಂದದ ಅವಧಿ ಕೊನೆಗೊಳ್ಳಲಿದ್ದು, ಒಪ್ಪಂದವನ್ನು ನವೀಕರಿಸದಿರಲು ನಿರ್ಧರಿಸಿದ್ದಾರೆ.

'ಕ್ರಿಕೆಟ್ ವೃತ್ತಿಜೀವನ ಕೊನೆಗೊಳಿಸಲು ಇದು ಸೂಕ್ತ ಸಮಯ. ಒಬ್ಬ ಆಟಗಾರನಾಗಿ ಪ್ರತಿ ಬಾರಿಯೂ ನನ್ನಿಂದ ಸಾಧ್ಯವಿರುವ ಶ್ರೇಷ್ಠ ಪ್ರದರ್ಶನ ನೀಡಿದ್ದೇನೆ. ಹೊಸ ಪೀಳಿಗೆಯ ಆಟಗಾರರಿಗೆ ಅವಕಾಶ ಮಾಡಿ ಕೊಡುವುದಕ್ಕಾಗಿ ವಿರಮಿಸುತ್ತಿದ್ದೇನೆ' ಎಂದು ಕುಕ್ ಹೇಳಿದ್ದಾರೆ.



ಅಲಸ್ಟೇರ್ ಕುಕ್

ಕುಕ್ ಅವರು 161 ಟೆಸ್ಟ್ ಪಂದ್ಯಗಳಿಂದ 12,472 ರನ್‌ಗಳನ್ನು ಕಲೆಹಾಕಿದ್ದಾರೆ. ಟೆಸ್ಟ್‌ನಲ್ಲಿ ಇಂಗ್ಲೆಂಡ್ ಪರ ಅತ್ಯಧಿಕ ಶತಕ (33) ಗಳಿಸಿದ ದಾಖಲೆ ಅವರ ಹೆಸರಲ್ಲಿದೆ. 59 ಟೆಸ್ಟ್‌ಗಳಲ್ಲಿ ತಂಡವನ್ನು ಮುನ್ನಡೆಸಿದ್ದರು. ಅವರು 92 ಏಕದಿನ ಪಂದ್ಯಗಳನ್ನು ಆಡಿದ್ದು, ಐದು ಶತಕ ಗಳಿಸಿದ್ದಾರೆ.

## ಮೆರ್ಡೆಕಾ ಕಪ್ ಫುಟ್‌ಬಾಲ್: ಮಲೇಷ್ಯಾಕ್ಕೆ ಮಣಿದ ಭಾರತ

**ಕ್ವಾಲಾಲಂಪುರ (ಪಿಟಿಐ):** ಮಲೇಷ್ಯಾ ಎದುರು 2–4 ಗೋಲುಗಳಿಂದ ಸೋತ ಭಾರತ ತಂಡ, ಮೆರ್ಡೆಕಾ ಕಪ್ ಫುಟ್‌ಬಾಲ್ ಟೂರ್ನಿಯಿಂದ ಹೊರಬಿತ್ತು.

ಶುಕ್ರವಾರ ನಡೆದ ಪಂದ್ಯದ ಏಳನೇ ನಿಮಿಷದಲ್ಲಿ ಡಿಯೊನ್ ಕೂಲ್ಸ್ ಅವರು ಮಲೇಷ್ಯಾಕ್ಕೆ ಮುನ್ನಡೆ ತಂದಿತ್ತರೆ, ನೊರೆಮ್ ಮಹೇಶ್ ಸಿಂಗ್ 13ನೇ ನಿಮಿಷದಲ್ಲಿ ಗೋಲು ಗಳಿಸಿ ಪಂದ್ಯವನ್ನು ಸಮಸ್ಥಿತಿಗೆ ತಂದರು.

20ನೇ ನಿಮಿಷದಲ್ಲಿ ಮಲೇಷ್ಯಾ ತಂಡಕ್ಕೆ ಲಭಿಸಿದ ಪೆನಾಲ್ಟಿಯನ್ನು ಆರಿಫ್ ಅಮೀನ್ ಗೋಲಾಗಿ ಪರಿವರ್ತಿಸಿದರು. ವಿರಾಮಕ್ಕೆ ನಾಲ್ಕು ನಿಮಿಷಗಳಿರುವಾಗ ಫೈಸಲ್ ಹಲೀಮ್ ಆತಿಥೇಯರ ಮುನ್ನಡೆಯನ್ನು 3–1ಕ್ಕೆ ಹೆಚ್ಚಿಸಿದರು.

ನಾಯಕ ಸುನಿಲ್ ಚೆಟ್ರಿ 52ನೇ ನಿಮಿಷದಲ್ಲಿ ಗೋಲು ಗಳಿಸಿ ಹಿನ್ನಡೆಯನ್ನು 2–3ಕ್ಕೆ ತಗ್ಗಿಸಿದರು. 57ನೇ ನಿಮಿಷದಲ್ಲಿ ಲಾಲ್‌ಲಿಯಾನ್‌ಜುವಾಲ ಚಾಂಗ್ಟೆ ಗೋಲು ಗಳಿಸಿದರೂ, ರೆಫರಿ ಅದನ್ನು ಮಾನ್ಯ ಮಾಡಲಿಲ್ಲ. ಚೆಂಡು ಗೋಲು ಲೈನ್ ದಾಟಿದ ಬಳಿಕ, ಡಿಯೊನ್ ಹೊರಕ್ಕಟ್ಟಿದ್ದರು. ರೀಪ್ಲೇನಲ್ಲೂ ಅದು ಸ್ಪಷ್ಟವಾಗಿತ್ತು. ಭಾರತ ತಂಡದ ಕೋಚ್ ಇಗೊರ್ ಸ್ಟಿಮ್ಯಾಚ್ ಮತ್ತು ಆಟಗಾರರು ಪ್ರತಿಭಟಿಸಿದರೂ ರೆಫರಿ ತಮ್ಮ ನಿರ್ಧಾರ ಬದಲಿಸಲಿಲ್ಲ.

61ನೇ ನಿಮಿಷದಲ್ಲಿ ಕೊರ್ಬಿನ್ ಆಂಗ್ ಅವರು ಗೋಲು ಗಳಿಸಿ ಮಲೇಷ್ಯಾ ತಂಡದ ಗೆಲುವನ್ನು ಖಚಿತಪಡಿಸಿಕೊಂಡರು. ನಾಲ್ಕು ರಾಷ್ಟ್ರಗಳು ಪಾಲ್ಗೊಂಡಿದ್ದ ಟೂರ್ನಿಯಿಂದ ಪ್ಯಾಲೆಸ್ಟೀನ್ ಹಿಂದೆ ಸರಿದಿದೆ. ಅ.17 ರಂದು ನಡೆಯುವ ಫೈನಲ್‌ನಲ್ಲಿ ಮಲೇಷ್ಯಾ ಮತ್ತು ತಜಿಕಿಸ್ತಾನ ಎದುರಾಗಲಿವೆ.

**ಸಂಕ್ಷಿಪ್ತ ಸುದ್ದಿ**

## ವಿಶ್ವ ಕೆಡೆಟ್ ಚೆಸ್: ಹಿಂದೆಸರಿದ ಭಾರತ

**ಚೆನ್ನೈ (ಪಿಟಿಐ):** ಈಜಿಪ್ಟ್‌ನ ಶರ್ಮ್–ಎಲ್ ಶೇಖ್‌ನಲ್ಲಿ ಅಕ್ಟೋಬರ್ 14 ರಿಂದ 23ರವರೆಗೆ ನಡೆಯಲಿರುವ ವಿಶ್ವ ಕೆಡೆಟ್ ಚೆಸ್ ಚಾಂಪಿಯನ್‌ಷಿಪ್‌ನಿಂದ ಭಾರತ ಹಿಂದೆಸರಿದಿದೆ. ಇಸ್ರೇಲ್–ಹಮಾಸ್ ನಡುವೆ ಸಂಘರ್ಷದ ಹಿನ್ನೆಲೆಯಲ್ಲಿ ಆಟಗಾರರು ಮತ್ತು ಅಧಿಕಾರಿಗಳ ಸುರಕ್ಷತೆಯ ದೃಷ್ಟಿಯಿಂದ ಭಾರತ ಈ ನಿರ್ಧಾರಕ್ಕೆ ಬಂದಿದೆ.

ಭಾರತದಿಂದ 39 ಆಟಗಾರರು (ಅಧಿಕಾರಿಗಳು, ಕೋಚ್‌ಗಳು ಸೇರಿ ಒಟ್ಟು 80 ಮಂದಿ) ಈ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಬೇಕಿತ್ತು. ಈ ಕೂಟ ನಡೆಯುತ್ತಿರುವ ಜಾಗ, ಇಸ್ರೇಲ್ ಗಡಿಯಿಂದ 400 ಕಿ.ಮೀ. ದೂರದಲ್ಲಿದೆ. ಒಟ್ಟು ಮೂರು ವಿಭಾಗಗಳಲ್ಲಿ 12, 10 ಮತ್ತು ಎಂಟು ವರ್ಷದೊಳಗಿನವರ ವಿಭಾಗಗಳಲ್ಲಿ ಈ ಕೂಟ ನಡೆಯಬೇಕಿತ್ತು.

ಗಾಜಾದಲ್ಲಿ ಯುದ್ಧದ ವಾತಾವರಣ ನೆಲೆಸಿರುವ ಕಾರಣ ಈ ಟೂರ್ನಿಯನ್ನು ಮುಂದೂಡುವಂತೆಯೂ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್), ವಿಶ್ವ ಚೆಸ್ ಸಂಸ್ಥೆಗೆ (ಫಿಡೆ) ವಿನಂತಿ ಮಾಡಿದೆ.

## ಎಂಇಜಿ ಜಯಭೇರಿ

**ಬೆಂಗಳೂರು:** ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಶುಕ್ರವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 8–0 ಯಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ಎಂಇಜಿ ತಂಡದ ಶೇಖ್ ಮುಜೀಬ್ ಹ್ಯಾಟ್ರಿಕ್ ಗೋಲು ಗಳಿಸಿದರೆ, ಶರತ್ ನಾರಾಯಣನ್, ಇಮ್ನಾಕುಮ್ ತೆಮ್ಸು ತಲಾ ಎರಡು ಬಾರಿ ಚೆಂಡನ್ನು ಗುರಿ ಸೇರಿಸಿದರು. ವಿ. ಪ್ರತಾಬ್ ಒಂದು ಗೋಲು ತಂದಿತ್ತರು. ಮತ್ತೊಂದು ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು 1–0 ಯಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

## ಮಹಿಳಾ ಕ್ರಿಕೆಟ್: ರಾಜ್ಯ ತಂಡಕ್ಕೆ ವೇದಾ ಸಾರಥ್ಯ

ಪ್ರಜಾವಾಣಿ ವಾರ್ತೆ

